

ಲೇ: — “ಆತ್ಮಾರಾಮ”

—ಸಂಸಾರದಲ್ಲಿಯ **ಸಾರವೇ** ಆಗಿರುವ ಹೆಂಗಸಿನ ಕುರಿತು ಆತ್ಮಾರಾಮರು ಇಷ್ಟೊಂದು ಪರಿಶ್ರಮ ಪೂರ್ವಕವಾಗಿ ವಿಷಯ ಸಂಗ್ರಹ ಮಾಡಿ ಗ್ರಂಥರಚಿಸಿರುವುದು ಸರ್ವರ ಮೆಚ್ಚುಕೆಗೂ, ತಕ್ಕುದ್ದಾಗಿದೆ.

ಈ ಗ್ರಂಥಕರ್ತರ ಶೈಲಿಯಲ್ಲಿಯೂ ವಿಷಯ ಮಂಡನದಲ್ಲಿಯೂ ಸತ್ವಪ್ರಧಾನವಾದ ದಿವ್ಯೋಪದೇಶವು ಸ್ಪಷ್ಟವಾಗಿರುವುದು.

—ಗಣಪತರಾವ ಪಾಂಡೇಶ್ವರ

(ಮುನ್ನುಡಿಯಿಂದ)

ತಿರುಳ್ಗನ್ನಡಂ ಗೆಲ್ಗೆ

ಕುಸುಮ ೬

ಗರತಿ

ಕವಿಕೋಕಿಲ ಪಾಂಡೇಶ್ವರರ
ಮುನ್ನುಡಿಯೊಂದಿಗೆ.

ಮುಖ್ಯ ಪುಟ, ೧೮೧. ಸಖ್ಯ ಪುಟ, ೨೨. ಒಟ್ಟು ೨೦೩ ಪುಟಗಳು.

ಬೆಲೆ:—
ಎರಡು ರೂಪಾಯಿ, ನಾಲ್ಕು ಆಣೆ

ಮುದ್ರಕ :-
ಜಿ. ಆರ್. ಪಂಡಿತ
ಕೇಳಕರ ಪ್ರೆಸ್, ಧಾರವಾಡ.

* * * *

ಮೊದಲನೇ ಮುದ್ರಣ
೨೦೦೦ ಪ್ರತಿಗಳು

* * * *

೧೯೫೧

* * * *

ಲೇಖಕ ಮತ್ತು ಪ್ರಕಾಶಕ :-
"ಆತ್ಮಾರಾಮ" (ಅಮ್ಮನಳ್ಳಿ)
ಸದ್ಗುರು ಸೇವಾ ಸಾಹಿತ್ಯಮಾಲೆ,
ಪರಮಾನಂದಮಠ; ಶೀಗೇಹಳ್ಳಿ–ಶಿರಸಿ.

ಕಾಮಾತ್ಮಾಕಾಮಾತ್ಮಕಾಮಂ ಶಮಕುಸುಮಕರಂ ಪೂರ್ಣಿಮಾಯೋಗವಂತಂ |

ಭೂಮಾ ಭೂಮಾವಿಮೋಲಂ ಗಲಿತಕಲಿಮಲಂ ಮಂದಭಾಗ್ಯಾ ಽ ತಿದೂರಂ |



ವಿದ್ಯಾ ಽ ವಿದ್ಯಾಸ್ವರೂಪಾ ಽ ಕ್ಷರ ಪರಮ ಮಹಾ ತತ್ತ್ವ ನಿಷ್ಠಾ ಕುಮಾರಂ |

ವಂದೇ ಽ ಹಂತಂ ಮಹಂತಂ ಸತತ ಮಹಿಹಿತಂ ಶ್ರೀಧರಾನಂದ ಭಿಕ್ಷುಂ ||

ಭಗವಾನ್ ಪರಮಹಂಸ ಪರಿವ್ರಾಜಕಾಚಾರ್ಯ

ಶ್ರೀಧರ ಸ್ವಾಮಿಗಳು

(ಸೀಗೇಹಳ್ಳಿ–ಶಿರಸಿ)

ಮುನ್ನುಡಿ

ಪ್ರಸ್ತುತ ಪುಸ್ತಕದ ಕರ್ತೃಗಳಾದ "ಆತ್ಮಾರಾಮ"ರ ಹಿಂದಿನ ಒಂದೆರಡು ಕೃತಿಗಳಿಗೆ ನಾನು ಮುನ್ನುಡಿ ಆಡಿದ್ದೇನೆ. ಮತ್ತೆ, ಇಂದಿನದಕ್ಕೂ ನನ್ನ ನಲ್ಮೆಯ ನುಡಿಯೇ ಮೊದಲಾಗಬೇಕೆಂದು ಅವರು ಬಹು ಪ್ರೀತಿಯಿಂದ ಆಶಿಸಿದ್ದಾರೆ. ಪ್ರೀತಿಯ ಮಾತಿನ ಹೆಚ್ಚುಕಡಿಮೆಯನ್ನು ಗಣನೆಗೆ ತಂದುಕೊಳ್ಳದೆ, ಓದುಗರು ಈ ಹೊತ್ತಗೆಯ ಹುರುಳನ್ನಷ್ಟೇ ಸವಿಯಬೇಕು.

'ಸ್ತ್ರೀ' ವಿಷಯ ಗ್ರಂಥಗಳು ಕನ್ನಡದಲ್ಲಿ ತೀರವಿರಳ, ಇಲ್ಲವೆಂದರೂ ಸಲ್ಲುವಷ್ಟುವಿರಳ. "**ಸಾರಮನಂಗ ಜಂಗಮ ಲತಾ ಲಲಿತಾಂಗಿಯರಿಂದ ಮಲ್ತೆ ಸಂಸಾರಂ!**" (ಅರ್ಥ:— ಮನ್ಮಥನ ನಡೆವಳ್ಳಿಯಂತಿರುವ ಕೋಮಲಾಂಗಿಯರಿಂದಲೇ ಅಲ್ಲವೆ ಸಂಸಾರವು ಸಾರವತ್ತಾಗಿ ತೋರುವುದು?) ಎಂಬುದಾಗಿ ನಮ್ಮ ಆದಿಪಂಪಕವಿ ರಸಾತ್ಮಕ ವಾಕ್ಯವನ್ನಾಡಿದ್ದಾನೆ. (ಪಂ. ಭಾರತ ಆ. ೧-೧೧೪.) ಸಂಸಾರದಲ್ಲಿಯ **ಸಾರವೇ** ಆಗಿರುವ ಹೆಂಗಸಿನ ಕುರಿತು ಆತ್ಮಾರಾಮರು ಇಷ್ಟೊಂದು ಪರಿಶ್ರಮ ಪೂರ್ವಕವಾಗಿ ವಿಷಯ ಸಂಗ್ರಹ ಮಾಡಿ ಗ್ರಂಥ ರಚಿಸಿರುವುದು ಸರ್ವರ ಮೆಚ್ಚುಕೆಗೂ ತಕ್ಕುದಾಗಿದೆ.

ಸ್ತ್ರೀತ್ವವು ಚತುರ್ಮುಖವಾಗಿದೆ. ತಾಯಿ, ತಂಗಿ, ಪತ್ನಿ, ಪುತ್ರಿ. ಈ ನಾಲ್ಕುಮಾರ್ಗಗಳಿಂದಲೂ ಸ್ತ್ರೀತ್ವವು ಪುರುಷನಿಗೆ **ಪುರುಷಾರ್ಥ** ಸಾಧಕವಾಗಿದೆ. "ಒಲಿದರೆ ನಾರಿ, ಮುನಿದರೆ ಮಾರಿ" ಎಂಬ ಗಾದೆಯಂತೆ, ಸ್ತ್ರೀಯು ಪುರುಷನಿಗೆ ಪೂರಕಳಾಗಲೂ ಬಹುದು, ಮಾರಕಳಾಗಲೂ ಬಹುದು; ಸಾಧಕಳಾಗಲೂ ಬಹುದು, ಬಾಧಕಳಾಗಲೂ ಬಹುದು. ಸ್ತ್ರೀ ಇಲ್ಲದೆ ಸೃಷ್ಟಿಇಲ್ಲ. ಪಾರ್ವತೀ ಪರಮೇಶ್ವರ, ಲಕ್ಷ್ಮೀನಾರಾಯಣ, ವಾಣೀಬ್ರಹ್ಮ

ಹೀಗೆ ತ್ರಿಮೂರ್ತಿಗಳೂ ಸ್ತ್ರೀ ಸಹಿತರಾಗಿಯೇ ಸೃಷ್ಟಿ ಧರ್ಮಚಕ್ರದ ಚಾಲನೆಗೆ ಕೈಹಾಕಿರುವರೆಂದು ಪುರಾಣಗಳು ಸಾರುತ್ತಿವೆ.

ಅರ್ಧೋವಾ ಏಷ ಆತ್ಮನೋ ಯತ್ಪತ್ನೀ (ಶ್ರುತಿ)

(ಪುರುಷನ ಆತ್ಮದ ಅರ್ಧಭಾಗವೇ ಪತ್ನೀ)

ಅಗ್ನಿತತ್ವವೇ ಪ್ರಧಾನವಾಗುಳ್ಳವರಾದ ವೈದಿಕ ಆರ್ಯರು ಗೃಹಸ್ಥಧರ್ಮ" ಗೃಹ್ಯಾಗ್ನಿಗಳ ವೇದಿಕೆಯನ್ನಿಟ್ಟುಕೊಂಡೇ ಸರ್ವ ಕರ್ಮಗಳನ್ನೂ "ಯಜ್ಞಿ, ಸಿದರು. ಸರ್ವೇಂದ್ರಿಯಗಳ ಹಿತಮಿತ ಸುಖಸಹಿತವಾದ ಶತಮಾನವನ್ನು ಬದುಕುವಂಬುದೇ ಆರ್ಯಪುರೋಹಿತರ ಆಶೀರ್ವಚನ. ಸ್ತ್ರೀಯಸ್ಥಾನಗೃಹಾಧಿ ದೇವತೆಯ ಸ್ಥಾನ;ಆ ಸ್ಥಾನವು ಭ್ರಷ್ಟವಾದಲ್ಲಿ'ಸ್ತ್ರೀಷುದುಷ್ಟಾಸುವಾರ್ಷ್ಣೇಯ ಜಾಯತೆ ವರ್ಣಸಂಕರಃ" (ಭ. ಗೀ.) ಪುರುಷನ ಸುಖಸೌಭಾಗ್ಯದ ತೇಜೋ ಜ್ಯೋತಿಯು ಕಂದಿದಂತೆ, ನಂದಿದಂತೆ; ನರಕದ ಕಗ್ಗತ್ತಲೆ ಕವಿದಂತೆ. ಆದ್ದರಿಂದ ಸ್ತ್ರೀಯ ಸ್ಥಾನಮಾನ ರಕ್ಷಣೆಗಾಗಿ ಪುರುಷನು ತನ್ನ ಪ್ರಾಣವನ್ನಾ ದರೂ ಕೊಡುವನು. ರಾಮಾಯಣ, ಮಹಾಭಾರತದ ಮಹಾಯುದ್ಧಗಳಿಗೆಲ್ಲ ಸ್ತ್ರೀಮಾನ ರಕ್ಷಣೆಯೇ ಮೂಲಕಾರಣವಾಗಿದೆ.

ಸ್ಮೃತ್ಯುಕ್ತ ಧರ್ಮ

ಸ್ತ್ರೀಯನ್ನು ಕುರಿತು ವಿವೇಚಿಸುವಲ್ಲಿ ದೇಶಕಾಲ ಪರಿಸ್ಥಿತಿಗಳ ಪರ್ಯಾಲೋಚನೆಯು ಅನಿವಾರ್ಯವಾಗುವುದು. ಹಿಂದಣ ಸ್ಮೃತ್ಯುಕ್ತ ವಿಧಿನಿಷೇಧಗಳನ್ನು ಕಾಯಾ ವಾಚಾ ಮನಸಾ ಪಾಲಿಸಲು ಕೃತನಿಶ್ಚಯ ರಾದವರು ಅವಶ್ಯವಾಗಿ ಪಾಲಿಸಬೇಕು. ಅವರನ್ನು ದೇಶಕಾಲ ಪರಿಸ್ಥಿತಿಯು ಬಾಧಿಸಲಾರದು*Where there is a will there is a way* ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆ ಎಂಬ ಆಂಗ್ಲ ಗಾದೆಯಾದರೂ ಇದನ್ನೇ ಸೂಚಿಸುತ್ತಿದೆ. ಗಿರಿಸರಿದರಣ್ಯ ಪ್ರಸ್ತರಗಳಲ್ಲಿ ಕೃಷಿ ಗೋರಕ್ಷಣ ವೃತ್ತಿಯಿಂದ

ದೇವದ್ವಿಜಾರಾಧಕರಾಗಿಯೂ, ಯಜನ ಯಾಜನಾದಿಷಟ್ಕರ್ಮ ನಿರತ ರಾಗಿಯೂ ಆಧುನಿಕ ಸುಖ ಸೌಕರ್ಯಗಳ ಬಗ್ಗೆ **ಯದೃಚ್ಛಾ ಲಾಭಸಂತುಷ್ಟಿ** ದೃಷ್ಟಿಯುಳ್ಳವರಾಗಿಯೂ, ಆಶ್ರಮೋಚಿತ ಹಾಗೂ ವರ್ಣೋಚಿತ ಕರ್ಮ ಗಳನ್ನು ಅನುಷ್ಠಿಸಲಿಕ್ಕೆ ಇಂದಿಗೂ ಸಾಧ್ಯ ಉಂಟು. ಆದರೆ, ಇಂದಿನ ಕೀರ್ತಿ ಧನ ಮಾನ ಸ್ಥಾನಗಳನ್ನು **ಚಾಪಲಿಸುತ್ತ** ಹಿಂದಿನದನ್ನು ಇಂದಿನದ ರೊಡನೆ **ಸಮನ್ವಯಿಸಿ** ಕೊಳ್ಳುವುದು ಪೂರ್ಣ ಫಲಕಾರಿಯಾಗದು. ಹಾಗೆ ಸಮನ್ವಯಿಸುವ ಇಚ್ಛೆ ಉಳ್ಳವರಿಗೆ ಗಾಂಧೀ ಮಹಾತ್ಮರ ಜೀವನವೇ ಮಾರ್ಗದರ್ಶಕವಾಗಿದೆ. ಅವರು ತೋರಿಸಿ ಕೊಟ್ಟ ದಾರಿ **ಜನತಾ ಸಾಮಾ ನ್ಯಕ್ಕೆ** ಕಾಲೋಚಿತವಾಗಿರುವುದಲ್ಲದೆ, ನವ ಮನ್ವಂತರವನ್ನು ಬಯಸುವವರ ತ್ರಿಕರಣ ಪೂರ್ವಕವಾದ ಆನುಷ್ಠಾನಕ್ಕೆ ಅರ್ಹವಾಗಿದೆ.

ಸ್ಮೃತಿಗಳಲ್ಲಿ ಮನುಸ್ಮೃತಿಯು ಸರ್ವಾದರಣೀಯವಾಗಿದೆಯಷ್ಟೆ. **ಯದ್ವೈಕಿಂಚ ಮನುರವದತ್ ತದ್ ಭೇಷಜಂ** || (ಮನು ಏನನ್ನುವನೋ ಅದೇ ಔಷಧ) (ಕಾಠಕ ಸಂ. X ೧–೫ ಮೈತ್ರಾಯಣೀಯ ಸಂ. I ೧–೫ ತೈತ್ತಿರೀಯ ಸಂ. ೨-೨-೧೦. ತಾಂಡ್ಯಬ್ರಾಹ್ಮಣ $XIII, XVI$) ಎಂಬುದಾಗಿ ಶ್ರುತ್ಯುಕ್ತಿಗಳುಂಟು. ಶ್ರುತ್ಯರ್ಥವನ್ನೇ ಸ್ಮೃತಿಗಳು (ತಾಯನ್ನು ಕರು ಹಿಂಬಾಲಿಸುವಂತೆ) ಅನುಸರಿಸುವುವಷ್ಟೆ. ಮನುವಿನ ಮೇಲ್ಮೆಯನ್ನು ಸೂಚಿಸುವ ಈ ಉಕ್ತಿಯನ್ನು ಆಚಾರ್ಯತ್ರಯವು ಬ್ರಹ್ಮಸೂತ್ರಭಾಷ್ಯ (ಅಧ್ಯಾಯ ೨, ಪಾದ ೧) ದಲ್ಲಿ ಉಲ್ಲೇಖಿಸಿದ್ದುಂಟು. ಅದೇ ಮೇರೆಗೆ ಮನುಸ್ಮೃತಿಯ ಶ್ಲೋಕಗಳು ರಾಮಾಯಣ ಭಾರತ ಗ್ರಂಥಗಳಲ್ಲಿ ಉದ್ಧೃತ ಗೊಂಡುದೂ ಉಂಟು. ಹೀಗೆ, ಅತ್ಯಂತ ಪ್ರಾಚೀನ ಕಾಲದಿಂದಲೂ ಸಾಮಾಜಿಕ ಧಾರ್ಮಿಕ ಆಚಾರ ವಿಚಾರಗಳಿಗೆ ಮನುಸ್ಮೃತಿಯು ಪರಮೋಚ್ಚ ಪ್ರಮಾಣ ಗ್ರಂಥವೆಂದು ಪರಿಗ್ರಹೀತವಾಗಿ ಬಂದಿರುವುದಾದರೂ, ತಮಗೆ ಬೇಕಾದಲ್ಲಿ ಮಾತ್ರವೇ ಏತದ್ಧರ್ಮ ಸೂತ್ರಗಳನ್ನು **ಏಕದೇಶೀಯ** ವಾಗಿ

ಅನ್ವಯಿಸಿಕೊಳ್ಳುತ್ತ, ಬೇಡಾದಲ್ಲಿ ಪೂರ್ಣ ವರ್ಜಿಸಿ ಧರ್ಮಕಾರುಣ್ಯವನ್ನು ಕೊಲೆಗೈಯುವುದು ಕಂಡು ಬರುತ್ತಿದೆ! ಉದಾ:—

ಬ್ರಾಹ್ಮಣಸ್ಯ ತಪೋಜ್ಞಾನಂ, ತಪಃ ಕ್ಷತ್ರಸ್ಯ ರಕ್ಷಣಂ।
ವೈಶ್ಯಸ್ಯತು ತಪೋವಾರ್ತಾ, ತಪಃ ಶೂದ್ರಸ್ಯ ಸೇವನಂ॥
(ಮನು XI ೨೩೬)

ಅದ್ರೋಹೇಣೈವ ಭೂತಾನಾಂ ಅಲ್ಪದ್ರೋಹೇಣವಾ ಪುನಃ।
ಯಾವೃತ್ತಿ ಸ್ತಾಂ ಸಮಾಸ್ಥಾಯ ವಿಪ್ರೋ ಜೀವೇದನಾಪದಿ॥
(ಮನು XI ೨೩೮)

ಇವೇಮೊದಲಾದ ಮನೂಕ್ತಿಗಳು ಇಂದು ಸ್ಮೃತ್ಯುಕ್ತ ಧರ್ಮದ ಬೊಬ್ಬಾಟಮಾಡುವವರಿಂದ ಅಲಕ್ಷಿಸಲ್ಪಡುತ್ತಿರುವುದು ಹೆಜ್ಜೆಹೆಜ್ಜೆಗೂ ಎಲ್ಲ ವರ್ಣೀಯರಲ್ಲಿಯೂ ಕಂಡುಬರುತ್ತಿದೆ. ಇಂತಹ ಪರಿಸ್ಥಿತಿ ಜರಗುವದನ್ನು ಪರಿಭಾವಿಸಿಯೇ ಎಂಬಂತೆ, ಭೀಷ್ಮರು ಶಾಂತಿಪರ್ವದಲ್ಲಿ,

**"ಸವಿವಧರ್ಮಃ ಸೋ ಧರ್ಮಸ್ತಂತಂಪ್ರತಿ ನರಂ ಭವೇತ್।
ಪಾತ್ರಕರ್ಮ ವಿಶೇಷೇಣ ದೇಶಕಾಲಾವ ವೇಕ್ಷ್ಯಚ॥
ಅನ್ಯೋಧರ್ಮಃ ಸಮಸ್ಥಸ್ಯ ವಿಷಮಸ್ಥಸ್ಯಚಾಪರಃ।
ಪ್ರತಿಷ್ಠಿತೋ ದೇಶಕಾಲೇ ಧರ್ಮೋಹ್ಯವಸ್ಥಿತಃ ಸ್ಮೃತಃ॥**

ಪಾತ್ರ, ಕರ್ಮ, ದೇಶ, ಕಾಲ ಪ್ರಭಾವಿತತ್ವವನ್ನೆತ್ತಿ ಹಿಡಿದಿರುವರೆನ್ನಬಹುದು.

ಆದ್ದರಿಂದ, ಸ್ಮೃತ್ಯುಕ್ತ ವಿಧಿನಿಷೇಧಗಳನ್ನು ಇಂದಿನ ಬಹುಜನ ಸಮಾಜಕ್ಕೆ ಅನ್ವಯಿಸ ಹೋದಲ್ಲಿ, ನೂರಕ್ಕೆ ತೊಂಬತ್ತಕ್ಕಿಂತಲೂ ಹೆಚ್ಚುಜನ ತೇರ್ಗಡೆ ಯಾಗುವದು ದುಸ್ತರವಾದೀತು.

ಪತ್ನಿಯು **ಪತಿವ್ರತೆಯಾ**ಗಿರುವಂತೆ, ಪತಿಯು **ಸತೀವ್ರತ**ನಾಗಿರಬೇಕೆಂದೂ, ವಿಧವೆಗೆ ಪುನರ್ವಿವಾಹವು ನಿಷೇಧವಾಗಿರುವಂತೆ ವಿಧುರನಿಗೂ ಮರುಮದುವೆ ಇರಬಾರದೆಂದೂ ನಿರ್ದೇಶಿಸುವ, ಸ್ತ್ರೀಸ್ವಾತಂತ್ರ್ಯ ಮತ್ತು ಸ್ತ್ರೀ–ಪುರುಷ ಸಮಾನತೆ ಮೊದಲಾದ ಇಂಗಿತಗಳು

ಮುನ್ನುಡಿ

ಈಡೇರುತ್ತಿರುವ ಈಗಿನ ದಿನಗಳಲ್ಲಿ— ಅಪಥ್ಯಾನುಸಂಧಾನವೇ ಹೆಚ್ಚಿರುವಲ್ಲಿ ಔಷಧದ ಅಮೋಘತ್ವವು ಪರಿಣಾಮಕಾರಿಯಾಗದಂತೆ; ಶ್ರೀ" ಆತ್ಮಾರಾಮರು ಬೋಧಿಸಿರುವ ಗರತಿಯ ಧರ್ಮವು ಎಷ್ಟರಮಟ್ಟಿಗೆ ಲೋಕಪ್ರಿಯವಾದೀತೆಂಬುದು ಅನೂಹ್ಯವೇಸರಿ. ನಿರ್ಮದೆಯಾಗಿರುವುದೇ ಸತಿಗೆ ಸದಾಚಾರವು. ಭಾಸಕವಿಯು ತನ್ನ **"ಅವಿಮಾರಕ"**ದಲ್ಲಿ ಮದಾಲಸೆಯಾದ ಹೆಂಗಸಿಂದ ತವರ್ಮನೆ ಮತ್ತು ಗಂಡನಮನೆ ಎರಡೂ ಹೇಗೆ ಹಾಳಾಗುವುದೆಂಬುದನ್ನು ಬಣ್ಣಿಸುತ್ತ, **("ಕುಲದ್ವಯಂ ಹಂತಿ ಮದೇನ ನಾರೀ! ಕೂಲದ್ವಯಂ ಕ್ಷುಬ್ಧ ಜಲಾ ನದೀವ")** ನೆರೆಬಂದ ನೀರಿನಿಂದ ನದಿಯು ಎರಡೂ ದಡಗಳು ಕೊರೆದು ಹೋಗುವಂತೆ, ಮದಭರಿತಳಾದ ನಾರಿಯಿಂದ ಉಭಯ ಕುಲಗಳೂ ಕಳಂಕಿತವಾಗುವವು ಎಂದಿರುವುದನ್ನಿಲ್ಲಿ ಸೂಚಿಸುವೆನು. **ಕ್ರಿಯಾಣಾಂ ಖಲು ಧರ್ಮ್ಯಾಣಾಂ ಸತ್ಪತ್ನ್ಯೋ ಮೂಲಕಾರಣಂ॥** (ಕು. ಸಂಭವ ಸ೬.—೧೩)

(ಪತಿಯ ಸರ್ವಧರ್ಮ ಕಾರ್ಯಗಳಿಗೂ ಸತ್ಪತ್ನಿಯೇ ಮೂಲಕಾರಣಳು).

ಸದಾಚಾರವೇ ಧರ್ಮವೃಕ್ಷದ ತಾಯಿಬೇರು. ಆ ಬೇರಿಗೆ ಇಂತಹ ಸದ್ಬೋಧನೆಗಳ ಶುದ್ಧಸಲಿಲವನ್ನೆರೆಯುವುದು ಎಂದೆಂದಿಗೂ ಪುಣ್ಯಕರವಾದ ಕರ್ಮವೇ ಸರಿ. ಸಚ್ಚರಿತ್ರರೂ ಸತ್ಯಪರಾಕ್ರಮಿಗಳೂ ಆಗಿದ್ದ ಆದರ್ಶ ನಾರೀಮಣಿಯರ ಜೀವಿತ ವೃತಾಂತಗಳನ್ನು ಗ್ರಂಥಕರ್ತೃಗಳು ಸುಲಭ ಶೈಲಿಯಲ್ಲಿ ಇಲ್ಲಿ ಕೊಟ್ಟಿರುವುದೂ ಪುಸ್ತಕದ ಪ್ರಭೆಯನ್ನು ಹೆಚ್ಚಿಸುವಂತಿದೆ.

ಈ ಗ್ರಂಥಕರ್ತರ ಶೈಲಿಯಲ್ಲಿಯೂ, ವಿಷಯ ಮಂಡನದಲ್ಲಿಯೂ ಸತ್ವಪ್ರಧಾನವಾದ ದಿವ್ಯೋಪದೇಶವು ಸ್ಪಷ್ಟವಾಗಿರುವುದು ಕನ್ನಡಿಗ ಸರ್ವಸಜ್ಜನರೂ ಈ ಕೃತಿಯನ್ನು ಆತ್ಮಾನಂದದಿಂದ ಪರಿಗ್ರಹಿಸಿ, ಪಠಿಸಿ, ಪುಣ್ಯಾಂತರಂಗವನ್ನು ಪಡೆಯಲೆಂದು ಹಾರೈಸುವೆನು.

ಹುಬ್ಬಳ್ಳಿ
೧೨—೧೦—೫೧

ಇತಿ ವಿದ್ವಜ್ಜನ ವಿಧೇಯ
ಗಣಪತರಾವ್ ಪಾಂಡೇಶ್ವರ

ಅಭಿಪ್ರಾಯ

ಶ್ರೀ ಆತ್ಮಾರಾಮರು ತಾವು ಬರೆದ "**ಗರತಿ**" ಪುಸ್ತಕದ ಹಸ್ತ ಪ್ರತಿಯನ್ನು ಓದಲು ಕೊಟ್ಟಾಗ—ಅದನ್ನು ಪೂರ್ಣವಾಗಿ ಓದಿದ ನಾನು ಇದನ್ನು ಆಗತ್ಯವಾಗಿ ಪ್ರಕಟಿಸಿರಿ, ಎಂದು ಒತ್ತಾಯಿಸಿದೆ. ಕೆಲವೇ ದಿನಗಳಲ್ಲಿ ಮುನ್ನುಡಿ ಬರೆದು ಕೊಡಬೇಕೆಂದು ಇವರ ಪತ್ರ ಬಂದಿತು. ಇವರ ಪುಸ್ತಕಕ್ಕೆ ಬೇರೊಬ್ಬರ ಮುನ್ನುಡಿಯ ಅವಶ್ಯಕತೆಯೇನೂ ಇಲ್ಲ. ಆದರಲ್ಲಿ ಮುನ್ನುಡಿಬರೆಯುವ ಅರ್ಹತೆ ನನ್ನಲ್ಲಿ ಇಲ್ಲದೇ ಇದ್ದರೂ ನನ್ನದೇ ಒತ್ತಾಯದ—ತಪ್ಪಿಗಾಗಿ—ಇವರ ಒತ್ತಾಯವನ್ನು ನಿರಾಕರಿಸಲಾರದೇ ಮುನ್ನುಡಿಯ ಹೆಸರಿನಲ್ಲಿ ಕೆಲವು ಮಾತು ಮಾತ್ರ ಇಲ್ಲಿ ಬರೆಯುತ್ತಿದ್ದೇನೆ.

ನಮ್ಮ ನಾಡಿನಲ್ಲಿ ಸ್ತ್ರೀಜೀವನದ ಮಟ್ಟ—ಸಾಕಷ್ಟು ಸುಧಾರಿಸದೇ ಅದ ಹಿಂದುಳಿದಿದೆ. **"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ"** ಎಂಬ ಮಾನ ಸಾರ್ಥ ಕತೆಯಿಂದು ಆಗಿಲ್ಲ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಅತ್ಯಂತ ಪವಿತ್ರ ಸ್ಥಾನವಿದೆ. ಉಜ್ವಲವಾದು ಭವಿತವ್ಯವೂ ಇದೆ.

ಪ್ರಪಂಚ ಪ್ರಕೃತಿ—ಪುರುಷರ ವಿಲಾಸಜನ್ಯಸೃಷ್ಟಿ. ಈ ಸೃಷ್ಟಿಯ ವಿಕಾಸವಾದರೂ ಅವರ ವೈಶಾಲವಾದ ನಿಷ್ಕಲ್ಮಷವಾದ ದೃಷ್ಟಿಯನ್ನೇ ಅವಲಂಬಿಸಿದೆ. ಜೀವನವೆಂಬ ರಥಕ್ಕೆ ಪ್ರಕೃತಿ—ಪುರುಷರೇ ಚಕ್ರ. ಒಂದೇ ಚಕ್ರದಿಂದ ರಥವು ಹೇಗೆ ಸಂಚರಿಸಲಾರದೋ ಅಂತೇ ಜೀವನ ಸುಗಮ—ಆಗಬೇಕಾದರೆ ಹೊರಬೆಳಕು ಬೆಳಗಬೇಕಾದರೆ—ಆದು ಸುಖ ಜೀವನದ ಸತ್ವವಾಗಬೇಕಾದರೆ—ಅವು ಪ್ರಕೃತಿ—ಪುರುಷರ ತಾಪಸದಿಂದ ಅವರ ಕ್ರಿಯಾ ಶಕ್ತಿಯಿಂದ.

ನಮ್ಮ ಜೀವನರಂಗದಲ್ಲಿಂದು ಮಹಿಳೆಯರು ಚಿತ್ರಿಸಬೇಕಾದ ಚಿತ್ರಗಳು ಒಂದಲ್ಲ–ಎರಡಲ್ಲ–ಹೆಜ್ಜೆ ಹೆಜ್ಜೆಗೂ ಅವರ ವಿವೇಕದ–ಧೀರೋದಾತ್ತ ಸ್ವಭಾವದ ಕರ್ತವ್ಯನಿಷ್ಠೆ ಇವೆಲ್ಲ ಬೇಕಾಗಿವೆ. ಇವೆಲ್ಲ ಕಾರ್ಯರಂಗದಲ್ಲಿ ಸಜೀವಿಯೂ ನಿರೂಪುಗೊಂಡಾಗಲೇ ಪ್ರಪಂಚ ಸ್ವರ್ಗಪ್ರಪಂಚವಾಗ ಬಲ್ಲದು.

ಇಂದಲ್ಲ ನಿನ್ನೆಯಲ್ಲ ಯುಗ ಯುಗಾಂತರಗಳಿಂದಲೂ ಮಹಿಳೆಯರು ದೇಶ ಸೇವೆಯಲ್ಲಿ ಹಿಂದುಳಿದಿಲ್ಲ. ಅವರು ಮಾಡಿದ ತೋರಿಸಿದ–ಸೇವೆ–ಸಹಾಯ–ಸಾಹಸ ಅಷ್ಟಿಷ್ಟಲ್ಲ. ಸಾವು–ನೋವುಗಳಿಗೆ ಅಂಜಿ ಹಿಂದೆ ಕೂಡ್ರುವ ಸಂಕುಚಿತ ಸ್ವಭಾವ ಅವರೆಲ್ಲಿಲ್ಲ. ತಾಳ್ಮೆ–ಕರ್ತವ್ಯದಕ್ಷತೆಗಳು ಎರಕ ಹೊಯ್ದ ಸುಂದರ ಭವ್ಯಚಿತ್ರ–ಅವರ ಹೃದಯ.

ಉಪನಿಷತ್ಕಾಲದ ಮೈತ್ರೇಯೀ–ಗಾರ್ಗಿಯರು–ಧನಕನಕಗಳನ್ನೆಲ್ಲಾ ನಿರಾಕರಿಸಿ–-ಯಾಜ್ಞವಲ್ಕ್ಯರಿಂದ ಅತಿ ರಹಸ್ಯಮಯವಾದ ಪರಮಾತ್ಮ ತತ್ವವನ್ನು ಹೊರಗೆಡಹಿದ್ದಾರೆ ಪೌರಾಣಿಕ ಕಾಲದ ಸಾವಿತ್ರಿ–ಅರುಂಧತಿಯರು–-ತಮ್ಮ ಸಾಧನೆ–ನಿಷ್ಠೆ ಪಾತಿವ್ರತ್ಯ ಪ್ರಭಾವದಿಂದ ಮೃತ್ಯುವಿನೊಡನೆ ಹೆದರದೇ—ಬೆದರದೇ ಹೋರಾಡಿ ತಮ್ಮ ಪಾವಿತ್ರ್ಯತೆಯನ್ನು ಅಖಂಡವಾಗಿ ಇರಿಸುವ ಸಾಧನೆ–-ವಿಧಾನಗಳನ್ನು ತೋರಿಸಿ ಕೊಟ್ಟಿದ್ದಾರೆ. ಐತಿಹಾಸಿಕ ಕಾಲದ ರಾಣೀ ಚೆನ್ನಮ್ಮಾಜೀ—ಪದ್ಮಿನೀ—ಓಬವ್ವಾ—ಮುಂತಾದವರ ಸಾಹಸವಾದರೂ ಕಡಿಮೆಯಾದದ್ದಲ್ಲ. ಇಂದಿನವರಾದ—ಕಸ್ತೂರಬಾ, ಪಂ. ವಿಜಯಲಕ್ಷ್ಮಿ–-ಮುಂತಾದವರ ದೇಶಸೇವೆ ಲೋಕೋತ್ತರವಾದದ್ದು. ಅಸಾಮಾನ್ಯವಾದದ್ದು. ಇವು ಎಂದಿಗೂ ಮರೆಯ ತಕ್ಕದ್ದಲ್ಲ. ಅಜರಾಮರವಾಗಿ ಇರುವ ಆದರ್ಶ ತತ್ವಗಳು.

ಆದರೆ ಇಷ್ಟರಿಂದಲೆ—ಅವರಿಂದಲೆ ಮಹಿಳೆಯರು ತಮ್ಮ ಕಾರ್ಯ ಪೂರ್ತಿಯಾಯಿತೆಂದು ತಿಳಿದುಕೊಳ್ಳುವ ಸಂತೋಷದ ಕಾಲವಿನ್ನೂ ಬಂದಿಲ್ಲ.

ಅಭಿಪ್ರಾಯ

ಜೀವನದ ಹಲವಾರು ಕಾರ್ಯ ಕಲಾಪಗಳು—ಗಡುಚಾದ ಎಷ್ಟೋ ಸಮಸ್ಯೆಗಳು ಮಹಿಳೆಯರನ್ನೇ ಇದಿರು ನೋಡುತ್ತಿವೆ. ಇವುಗಳನ್ನೆಲ್ಲಾ ಮಹಿಳೆಯರು ಸಲ್ಲಿಸಬೇಕಾದ ಸೇವೆ ಸಲ್ಲಿಸಿದ ಹೊರತು ಜೀವನರಂಗ ಸುಗಮವಾಗುವಂತಿಲ್ಲ. ಅದು ವಿಶಾಲವಾಗುವಂತೆಯೂ ಇಲ್ಲ.

ಶಿಶು ಪೋಷಣೆ—ಆಹಾರ—ಮಕ್ಕಳ ವಿದ್ಯಾಭ್ಯಾಸ ಸಾಮಾಜಿಕ—ರಾಜಕೀಯ—ಇತ್ಯಾದಿಗಳಲ್ಲೆಲ್ಲಾ ಮಹಿಳೆಯರು ಹೆಚ್ಚು ಆಸ್ಥೆವಹಿಸ ಬೇಕಾಗಿದೆ. ಶ್ರೀ ಆತ್ಮಾರಾಮರು—ಇಂಥ ಸುಶಿಕ್ಷಿತ **ಗರತಿ** ಜೀವನದ ಬೆಳವಣಿಗೆಯಾಗಬೇಕೆಂತಲೂ ವೇಶ್ಯಾವೃತ್ತಿ ನೀಗಬೇಕೆಂತಲೂ—ಸಾಹಸ ಪಟ್ಟು ಗರತಿ ಜೀವನಕ್ಕೆಬೇಕಾದ ವಿಚಾರಗಳನ್ನೆಲ್ಲಾ ಇಲ್ಲಿ ಕಲೆಹಾಕಿದ್ದಾರೆ—ಮಹಿಳೆಯರ ಸಂಸ್ಕೃತಿ—ಸ್ಥಾನ—ಮಾನ—ಇವೆಲ್ಲ ಎಷ್ಟು, ಹಿರಿದು ಮಾಡ ಬೇಕಾದ ಕರ್ತವ್ಯ ಎಷ್ಟು? ಪವಿತ್ರವಾದ ಸಭ್ಯತೆಯಿಂದ ಸಮಾಜದ ಹಿತವನ್ನೂ—ವೈಯುಕ್ತಿಕ ಕಲ್ಯಾಣವನ್ನೂ ಸಾಧಿಸುವ—ಸಾಧನ—ವಿಧಾನ ಗಳನ್ನು ಹಿತ—ಮಿತವಾಗಿ ರೂಪಿಸಿದ್ದಾರೆ. ನಮ್ಮಲ್ಲಿಯ ಅಕ್ಕತಂಗಿಯರು—ಮುಂದೆ ಬಂದು ಇದರ ಪ್ರಯೋಜನ ಅಗತ್ಯ ಪಡೆದುಕೊಳ್ಳಬೇಕಾಗಿದೆ.

ಸಾಹಿತ್ಯ ಸೇವೆಯೇ ಸದ್ಗುರು ಸೇವೆಯೆಂದು ಸೇವಾದೀಕ್ಷೆ ಕೈಕೊಂಡಿ ರುವ ಶ್ರೀ ಆತ್ಮಾರಾಮರ ಈ ಘನವಾದ ಉದ್ಯಮ ತುಂಬಾ ಯಶಪ್ರದ ವಾಗಲಿ! ಜನ ಮೆಚ್ಚಿಗೆ ಸಂಪಾದಿಸಿ ಜನತೆಯ ಪ್ರೋತ್ಸಾಹಕ್ಕೆ ಪಾತ್ರ ವಾಗಲಿ—ಎಂದು ಹಾರೈಸುವೆ.

ಶಾಲಿವಾಹನ ೧೮೭೩ ದಶರಾ
"ಸಾಧನ ಮಂದಿರ"

ಕನ್ನಡ ಸೇವಕ
ವಿಶ್ವೇಶ್ವರ ಶರ್ಮಾ, ತದ್ದಲಸೆ.

ಕವಿಹೃದಯ

ಎಲ್ಲ ಬಲ್ಲವರಿಲ್ಲ ! । ಬಲ್ಲವರು ಬಹಳಿಲ್ಲ ! ।
ಬಲ್ಲಿದರು ಇದ್ದು–ಬಲವಿಲ್ಲ ! ಸಾಹಿತ್ಯ–।
ವೆಲ್ಲರಿಗೂ ಇಲ್ಲ ! ।

ಲೋಕಕ್ಕೆ ಉಪಮಾನವಾಗಿರುವ ಸರ್ವಜ್ಞನ ಈ ಉದ್ಗಾರವನ್ನನುಲಕ್ಷಿಸಿದ ನಾನು ತಲೆನಾಚಿದೆ. ಏಕೇ ? ಅಕ್ಷರ ಶತ್ರುವಾದ ನಾನೊಬ್ಬ ಕವಿ, ಸಾಹಿತಿ, ಬರೆಹಗಾರ ಎನುವ ಹೆಮ್ಮೆಯ ಶಿಖರವನ್ನಡರಿ, ನನ್ನ ಹೃದಯದ ಆಳವನ್ನರಿಯದೆ ಹಾಗೇ ಒಡಲೊಳಗಿಳಿದು ಅಳೆಯ ತೊಡಗಿದೆ. ಮಾಪು ಮುಂದರಿದ ಹಾಗೆಲ್ಲ ಒಂದೊಂದು ಬಗೆಯ ಸ್ವಾದುವಾದ ವಿಚಾರರಸವು ಸಿಗಹತ್ತಿತು. ಅವುಗಳಲ್ಲಿ ಮೊದಲಿನದಾಗಿ ದೊರೆತದ್ದೆಂದರೆ ಃ— ಕಲಿತವರ ಗಿಣೀಪಾಠಕ್ಕಿಂತಲು, ಕಲೆತು ಅರಿತವರ ಅನುಭವ ಮೇಲೆನುವುದು. ಇದಕ್ಕೆ ಕಾಲಿದಾಸ, ಕನಕ ಮೊದಲಾದವರು ಮಾದರಿಯಾಗಿಯೂ ಸಿಕ್ಕರು. ಏನೇ ಇರಲಿ; ಸದ್ಗುರುವಿಗೆ ಇದೊಂದು ವಾಙ್ಮಯಸೇವೆಯೆಂದು,ಮತ್ತೊಂದು ಕಡೆಗೆ ಕಂಡೆ ಹಾಗೇ ಮುಂದೆ.ಸಾಗಲು;

ಆಮ್ರಾಶ್ಚ ಸಿಕ್ತಾ ಪಿತರಶ್ಚ ತೃಪ್ತಾಃ

“ ಮಾವಿನ ಮರಕ್ಕೆ ನೀರೆರೆದಂತಾಯಿತು. ಪಿತೃಗಳಿಗೆ ತರ್ಪಣ ಕೊಟ್ಟಂತಾಯಿತು. ”

ಎನುವ ಗಾದೆಯನ್ನು ಇನ್ನೊಂದೆಡೆಯಲ್ಲಿ ನೋಡಿದೆ ! ಆವಾಗ; “ನಾನುಗೈದ ಸೇವಾಪ್ರಸಾದವನ್ನು ನಾನೊಬ್ಬನೆ ಸ್ವೀಕರಿಸುವುದರ ಬದಲು ಜನಸಮ್ಮರ್ಧದಲ್ಲಿ ಹಂಚಿದರೆ, ಆತನ ಕರುಣೆಗೆ ಅವರೂ ಪಾತ್ರರಾಗಿ ಎಲ್ಲವರೂ ಉದ್ಧಾರವಾಗುವರಲ್ಲವೆ? ” ಅಂದುಕೊಂಡೆ. ಆಗಂತು ಮತ್ತು ಮತ್ತು ಸುರಿದುಣ್ಣಲುಪಕ್ರಮಿಸಿದೆ ! ಅಂತೆಯೆ ಹಂಚುತಲೂ ಬಂದೆ.

ಸ್ತ್ರೀ ಸಮಾಜ ಹಿತಾಕಾಂಕ್ಷೆಯಿಂದ ಈ ಮೊದಲು ಪದ್ಯರೂಪದಿಂದ ಆ ಭಗವಂತನ ಸ್ತುತಿಪಾಠವಾಗಿ ಪರಿಮಳ ಮಕರಂದಯುಕ್ತ ಕುಸುಮ ವನ್ನರ್ಪಿಸಿದ್ದಲ್ಲದೆ ಪುರುಷ ಸಮಾಜಕ್ಕೂ ಮೂರು–ನಾಲ್ಕು ಬಗೆಯ ಸುಮವ ಸಲ್ಲಿಸಾಯಿತು.

ಹೀಗೆ ರಸಾನ್ನವನ್ನುಂಡುಂಡು ತೆಕ್ಕುತ್ತ, ಜನಸಮುದ್ರಕ್ಕೆ ಎರೆಯು ತ್ತಿರುವಾಗ ಈ **ಗರತಿ** ಎನುವುದು, ನಮ್ಮ ಗ್ರಂಥಮಾಲೆಯಲ್ಲಿ ಆರನೆಯದಿದು. ಈವಾಗ ಗದ್ಯರೂಪದಿಂದ ಇದನ್ನು ಮಾತೃ ವರ್ಗದಲ್ಲಿ ಹೇಗೆ ಅರ್ಪಿಸಿದೆನೊ ಹಾಗೇ ಪಿತೃವರ್ಗದಲ್ಲೂ ಇನ್ನುಮುಂದೆ ಅರ್ಪಿಸಲಾಗುವದು. ಆದರೆ........! ಗದ್ಯ ಪ್ರಪಂಚದಲ್ಲಿ ನನ್ನ ಲೆಕ್ಕನಿಕೆಯು ಇದೇ ಹೊಸದಾಗಿ ಹೊರಟಿದೆ! ಅಂದಮೇಲೆ ಅದು ಅಡ್ಡ–ತಿಡ್ಡ ಹೋದರು ನನ್ನ ವಾಚಕವೃಂದವು ಅಸಡ್ಡೆ ಮಾಡಬಲ್ಲರೇ? ಸುಳ್ಳು ಸುಳ್ಳು.

ಇದುವರೆಗೆ ಚಿತ್ತವಲ್ಲಿಯಲ್ಲಿ ಎಂಟೊಂಬತ್ತು ಹೂ ಮಾಲೆಗಳು ಹೊರ ಹೊಮ್ಮಿ ಅರಳಿ ಪರಿಮಳಿಸಿತಾದರು, ಹೇಳಲಾಗದ ಅಡತಳಿಯ ಮೂಲಕ ಮಾಲೆಯಲ್ಲಿ ಹಿಂದು–ಮುಂದಾಗಿ ಹೆಣೆದರು, ಸೊಟ್ಟಪಟ್ಟ ಮಾತ್ರ ಗೈಯಲಿಲ್ಲ ಇದೇ ಆನಂದ. ಹೇಗೂ ಇದ್ದರು ಗುರುಪ್ರಸಾದವಿದು. ಅಂದಾಗ ಆರಿಂದಲು ಆವ ಬಗೆಯ ಪ್ರಶ್ನೆಯು ಬರುವಂತಿಲ್ಲವೆನುವುದೆ ಆತ್ಮೀಯ ವಿಶ್ವಾಸ. ಇರಲಿ.

ನನ್ನ ಬಂಧು–ಭಗಿನಿಯರೆ! ಜೀವ––ಜಂತುಗಳ ಶಾಂತಿಸದನದಲ್ಲಿ ರಕ್ಷಿಸಲು ಕೋಲುಗುದುರೆಯಾಗಿ ಕರೆದೊಯ್ಯುವುದಾವುದೊ ಅದಕ್ಕೇ **ಶಾಸ್ತ್ರ** ಎಂಬ ಹೆಸರು. ಇದು ಮಾನವರಲ್ಲಿ ನಾಲ್ಕು ಬಗೆಯಿಂದ ವಿಭಜಿಸಿದ್ದು, ಒಬ್ಬರಿಗೊಬ್ಬರು ಅಸಹಕಾರ ತಪ್ಪಿ ನಡೆಯಲು ಸುಲಭ ಮಾರ್ಗದರ್ಶಿ ಯಾಗಿರುವುದು. ಆ ಮಾರ್ಗಕ್ಕೇನೆ ಸನಾತನಿಗಳು ವರ್ಣಾಶ್ರಮವೆಂದು ಕರೆದಿರುವರು. ವರ್ಣ–ಆಶ್ರಮ–ಧರ್ಮದಿಂದ ಜನತೆಯು ಸಹಕಾರಕ್ಕೆ ಸಾನುಕೂಲವೆಂತೆಂದರೆ........ಬ್ರಾಹ್ಮಣನಾದವನು ಸ್ವಾರ್ಥತ್ಯಜಿಸಿ ಅಲ್ಲವೆ

ಹಿಡತದಲ್ಲಿಟ್ಟು ಶಾಸ್ತ್ರಿಯಾಚರಣೆಯ ನಡೆಸುವಲ್ಲಿಯೂ ಕ್ಷತ್ರಿಯ ಅಥವಾ ರಾಜ್ಯವನ್ನಾಳುವ ಪ್ರಭುಗಳು ಮಹತ್ವಾಕಾಂಕ್ಷೆಯಿರದೆ ರಾಜಕಾರಣವ ಯಥಾವತ್ತಾಗಿ ನಡೆಸುವದರಲ್ಲಿಯೂ ವೈಶ್ಯವೃತ್ತಿಯವರು ಲಾಭಬಡಕರಾಗದೆ ಶಾಸ್ತ್ರದಲ್ಲಿ*ತಮಗೆ ಎಡೆಕೊಟ್ಟಂತೆ ಪರಿಚರ್ಯ ನಿಯಮಕ್ಕನುಸರಿಸಿಯೂ — ಇದ್ದಲ್ಲಿ ಜಗತ್ತಿನ ಹಿತ ಸಾಧಿಸುವುದು. ಚಾತುವರ್ಣೇತರರು—ತಮ್ಮ ತಮ್ಮ ಆನುವಂಶಿಕವಾಗಿ ಬಂದ ಸುಕರ್ತವ್ಯವನ್ನು ಕೊನೆಗಾಣಿಸಲು ಬದ್ಧರಾಗಿರುವುದು. ಹೀಗೆ ಸರ್ವರು ಸಾಗುವಲ್ಲಿ ಪರಸ್ಪರರಲ್ಲಿ ಸಹಕಾರ—ಸೌಕರ್ಯಾದಿಸಿಕ್ಕು ಭೌತಿಕಜೀವನವ ಹಗುರವಾಗಿ ಸಾಗಿಸಲಾಗುವುದು! ಕೊಲೆ—ಸುಲಿಗೆ ಮುಂತಾದ ದುಷ್ಕೃತ್ಯಕ್ಕೆ ಆಸ್ಪದಸಿಗದು ! ಆರೋಗ್ಯ ದೃಷ್ಟಿಯಿಂದ ನೋಡಿದರು, ಯಥಾಯೋಗ್ಯ ಶಾಸ್ತ್ರಾಚರಣೆಯಿಂದ ಅಂಗ ಸೌಷ್ಠವವೂ ಕೆಡುವಂತಿಲ್ಲ. ಉದಾಹರಣೆಗಾಗಿ ಇಲ್ಲಿ ಒಂದೆರಡನ್ನು ತೋರುವ !

ಭಸ್ಮಧಾರಣವನ್ನು ಶಾಸ್ತ್ರದಲ್ಲಿ ಎತ್ತಿದ್ದೇಕೆಂದರೆ, ದೇಹದಲ್ಲಿ ವಾತದ ಉದ್ರೇಕವಾಗಬಾರದೆಂದು. ಮೈತುಂಬ ಬೂದಿ ಬಳಕೊಂಡಲ್ಲಿ ಶೀತದ ಬಾಧೆ ತಗಲದೆನುವುದು ಅನುಭವಸಿದ್ಧವಾತು ಹುಣ್ಣು—ಹುಗಳುಗಳಾದರೆ ಅವು ಹಣ್ಣಾದಮೇಲೆ ಹಿಚುಕಿ ಸ್ವಲ್ಪ ಸ್ವಲ್ಪ ಭಸ್ಮಹಾಕುತ ಬಂದರೆ ನೆತ್ತರುವನ್ನೆಲ್ಲ ಹೀರಿ ವಾಶಿಮಾಡುವುದದು. ಇನ್ನೂ ಎಷ್ಟೋ ಪ್ರಯೋಜನ ಕಾರಕವಾಗಿದೆ. ಭಸ್ಮ, ತುಳಸಿಯಿಂದ ಹವೆ ಶುದ್ಧವಾಗುವುದಿಷ್ಟೆಅಲ್ಲ ; ಅದರ ಸೇವನೆಯಿಂದ ಅಂಗದೊಳಗೆ ಉದ್ರೇಕಗೊಂಡ ಮಲೇರಿಯಾ ಸಂಬಂಧಿ ರೋಗಗಳನ್ನೂ ತಳ್ಳಿ ಬಿಡುವುದು. ಇನ್ನೂ ಎಷ್ಟೊ ಬಗೆಯ ಉಪಯೋಗ ತುಳಸಿಯಿಂದಾಗುವುದು. ಇನ್ನೂ ಎಷ್ಟೊ ಬಗೆಯ ಲಾಭವು. ಶಾಸ್ತ್ರಾಚರಣೆಯಿಂದಾಗುವುದು! ಅಷ್ಟೆ ಏನು? ಶಾಸ್ತ್ರದಲ್ಲಿ ಹೇಳಿದಂತೆ ನಡಕೊಳ್ಳುವುದರಲ್ಲಿ ಪಾರ್ಥಿವ ಶರೀರದ ಪೋಷಣೆಯೂ ಲಿಂಗಶರೀರವನ್ನು ಪರಮಾತ್ಮ ವಸ್ತುವಿನಲ್ಲಿ ಲೀನಗೊಳಿಸುವ ಸಾಧನೆಯೂ ಆಗುವದು ಅದರಿಂದಲೇ ನಮ್ಮ ಸ್ನಾನ—ಪಾನಾದಿ ಸಕಲ ವ್ಯವಹಾರದಲ್ಲಿ ಹೆಜ್ಜೆ ಹೆಜ್ಜೆಗೆ ಶಾಸ್ತ್ರವು

(ಇದೇ ಪುಟದ ೪ನೆ ಪಂಕ್ತಿಯು ತಿದ್ದು ಪಡಿ)

* ಶಾಸ್ತ್ರದಲ್ಲಿ ಎತ್ತಿದಂತೆ ನಿಯಮಬದ್ಧ ವ್ಯವಹಾರ ನಡೆಸುವಲ್ಲಿಯೂ ಶುದ್ರರಾದವರು ಶಾಸ್ತ್ರದಲ್ಲಿ

ಒಂದೊಂದು ಶಾಸನವನ್ನು ಹಾಕಿದೆ. ದೇಶ—ಕಾಲ ಭೇದವನ್ನೂ ಅದೇ ಶಾಸ್ತ್ರವೇ ಹೇಳಿದೆ. ಶಾಸ್ತ್ರದಲ್ಲಿ ಹೇಳಿದಂತೆ ನಡೆಯುವಲ್ಲಿ ಎಷ್ಟಕ್ಕೂ ಅಹಿತ ವಿಲ್ಲೆಂದು ಹೊಣೆಗಾರಿಕೆಯಿಂದ ಹೇಳಬಯಸುವೆನು ; ಇಂದಿನ ಭಾರತವು ನೆಲೆಗೊಳಿಸಿದ ಸ್ವರಾಜ್ಯವನ್ನು ಸ್ಥಿರಪಡಿಸುವ ಪ್ರಯತ್ನದ ಗುರಿಯಾದರು ಆವುದು ? ಇದು ರಾಮರಾಜ್ಯವಾಗಬೇಕೆಂದಲ್ಲವೆ ಸುಖದ ನೆಲೆವೀಡಾಗ ಬೇಕೆಂದಲ್ಲವೆ ? ಹಾಗಿರುವ ಭೋಗಸಾಧನೆಗಾದರು ಶಾಸ್ತ್ರಾಚರಣೆಯೆ ಹೆದ್ದಾರಿ. ಇದನ್ನೆ ಹೇಳಹೊರಟ ಆ ಮನುಮಹಾರಾಯನು

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಮಂ ಪಶ್ಯನ್ ಆತ್ಮಯಾಜಿ ಸ್ವರಾಜ್ಯಾಮಧಿಗಚ್ಛತಿ ॥

ಮನು: ೧೨/೯೧

" ಸರ್ವ ಪ್ರಾಣಿಗಳಲ್ಲಿ ತನ್ನನ್ನೂ ತನ್ನಲ್ಲಿ ಸರ್ವ ಪ್ರಾಣಿಗಳನ್ನೂ ಭಾವಿಸಿ, ಜೀವಾಣುಗಳಲ್ಲೆಲ್ಲ ಸಮತಾವಾದವನ್ನು ಮೂರ್ತಸ್ವರೂಪವಾಗಿ ಚಿತ್ರಿಸಿದಲ್ಲಿ ಸರ್ವವು ತಾನೆ ಆಗಿ, ಸ್ವತಂತ್ರ ಸ್ವರಾಜ್ಯ ಭೋಗಿಯಾಗುವನು. "

ಹೀಗೆ ಹೇಳಿದ ಆ ಮನುವಿನ ವಾಕ್ಯವೇ ಭಗವದ್ವಾಕ್ಯವೆನುವುದನ್ನು ಎಲ್ಲವರು ಒಕ್ಕೊರಲಿನಿಂದ ಒಪ್ಪಿಕೊಳ್ಳಬೇಕಾಗುವುದು. ಹಾಗಿರುವ ಆವ ನಿಂದಲೆ ರಚಿತವಾದ ಜಾತಿ, ಕ್ರಿಯೆ, ಮೊದಲಾದ ಕಲ್ಪನೆಗಳ ನಿಯಮ ಬದ್ಧ ಶಾಸ್ತ್ರದ ತಿರುಳರಿಯದೆ ಅದನ್ನು ವಿಸರ್ಜಿಸಿ ಅಥವಾ ವ್ಯತ್ಯಸ್ಥಗೈದು ಕ್ಷೇಮಕ್ಕಾಗಿ ಗಾಣದ ಎತ್ತಿನಂತೆ ದುಡಿದರು ಗಾಯವಾಗದು. ಇದು ಪುಂ ಸ್ತ್ರೀ ಸಮಾಜಕ್ಕೇ ಅನ್ವಯಿಸಿದ್ದುದು.

ಪ್ರ. :— ಮಾನವರೂ ಮಾನವೇತರ ಪ್ರಾಣಿಗಳೂ ಆ ಪರಮಾತ್ಮನ ಮಕ್ಕಳಾಗಿರಲು, ಒಂದೇ ತಂದೆಯ ಮಕ್ಕಳಾದ ನಾವು ; ಮನುಷ್ಯ—ಪಶು ಕ್ರಿಮಿ—ಕೀಟಗಳೆಂಬ ಭೇದದಿಂದ ವರ್ಗವನ್ನು ವಿಂಗಡಿಸಿ ಜಾತಿಕಲ್ಪನೆ ಮಾಡಬಹುದಲ್ಲದೆ, ಸನಾತನಿಗಳು ಅವರಲ್ಲಿ ಗುರುತ್ವವುಳ್ಳವರು,

ಮಾನವರಲ್ಲಿ ಸಜಾತೀಯ ವಿಜಾತೀಯವೆಂದು ಅಧಿಕಾರವಾಣಿಯಿಂದ ವಿಭಜಿಸಿದುದು ಈಗಿನ ಕಾಲಕ್ಕೆ ಒಪ್ಪುವ ಮಾತೆ ?"

ಉ. :— ಈ ಪೂರ್ವಪಕ್ಷೀಯರ ಪ್ರಶ್ನೆಗೆ ಉತ್ತರ ಕೊಡುವುದೆಂದರೆ ದುಃಸಾಧ್ಯ ಆದರು ವಿಚಾರಿಸುವಲ್ಲಿ ; **ಜರಾಯುಜ, ಅಂಡಜ, ಸ್ವೇದಜ, ಉದ್ಭಿಜಗಳೆಂದು ಆ ದೇವರ ಸೃಷ್ಟಿಯಲ್ಲಿ ಈ ನಾಲ್ಕು ಪ್ರಕಾರವಾಗಿ** ವಿಭಾಗಿಸಲ್ಪಟ್ಟಿವೆ ಎನುವುದರಲ್ಲಿ ಸರ್ವಾನುಮತವಿದೆ. ಹಾಗಿರುವ ಮೊದಲನೆಯದಾದ ಜರಾಯುಜ ಪ್ರಾಣಿಗಳಲ್ಲಿ ದ್ವಿಪಾದವುಳ್ಳ ಮಾನವರೂ ಚತುಃಪಾದವುಳ್ಳ ಪಶುಗಳು ಬಂದಿರಲು ಇವೆರಡೂ ಸಜಾತೀಯ ವಾಗಬಹುದೆ? ಹಾಗೇನಾದರು ಆಗುವದೆಂದರೆ ? ಆ ಪೂರ್ವಪಕ್ಷಿಗಳ ಈ ಪ್ರಶ್ನವು ಅಸಮಂಜಸವಲ್ಲದು. ಅಸಮಾಧಾನಕರವಾಗದು. ಇಷ್ಟೇ ಏಕೆ ?

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ-ಕರ್ಮ ವಿಭಾಗಶಃ |

‹‹ ಆದಿಯಲ್ಲಿ ಸತ್ವ—ರಜ—ತಮ—ಮಿಶ್ರವೆಂದು ನಾಲ್ಕು ಗುಣವನ್ನು ನಿರ್ಮಾಣಮಾಡಿ ಆ ನಾಲ್ಕರಿಂದಲೂ ಸೇರಿದ ಜರಾಯುಜಾದಿ ನಾಲ್ಕುವಿಧಪ್ರಾಣಿಗಳ ಸೃಜಿಸಿದ ನಾನು ; ಜರಾಯುಜರಲ್ಲಿಯ ಮನುಷ್ಯಪ್ರಾಣಿಗಾಗಿ ಈ ನಾಲ್ಕು ಗುಣ ಧರ್ಮದಂತೆ ನಾಲ್ಕು ಬಗೆಯ ಕರ್ಮಗಳನ್ನು ಕಲ್ಪಿಸಿ, ಒಂದೊಂದು ಕರ್ಮಾಧಿ ಕಾರದಲ್ಲಿ ಒಂದೊಂದು ವರ್ಣವೆಂದು ಹೀಗೆ ನಾಲ್ಕು ವರ್ಣಗಳನ್ನೂ ವಿಭಜಿಸಿದೆನು ;

ದೇವನು ಹೀಗೆ ಹೇಳುವುದರಲ್ಲಿ, ಗುಣ—ಕರ್ಮಗಳಂತೆ ಜಾತಿ ವಿಭಜನೆಯ ಅಧಿಕಾರವನ್ನು ಮಾನವನಿಗೆ ಕೊಟ್ಟಂತಾಯಿತೆ ? ಇಲ್ಲ ! **'ಮಯಾ ಸೃಷ್ಟಂ'** ಎಂದಿರುವನು. ಎಷ್ಟೋ ಸಮಾಜವು ಮಾರ್ಮಿ ಕಾರ್ಥವನ್ನು ಶೋಧಿಸದೆ, ಬರೇ ಅಕ್ಷರಾರ್ಥವನ್ನೇ ಗ್ರಹಿಸುತ್ತ ಆತನ ಅಧಿಕಾರದಲ್ಲಿಯು ಕೈಹಾಕಿ ಜಾತಿಕಲ್ಪನೆಗೆ ಆಸ್ಪದ ತಂದುಕೊಂಡಿದ್ದು ಆವಹಿತವುಣಲಿಕೆಂದೋ ಅವರೇ ಬಲ್ಲರು.

ಒಟ್ಟಿನಲ್ಲಿ ಆ ಭಗವಂತನ ವಾಕ್ಯಕ್ಕೆ ನಾವು ಗೆರೆಯನ್ನು ಹೊಡೆದು ಕೊಂಡು ಅಜೀರ್ಣವಾಗುವಷ್ಟು ಕಷ್ಟ ಭೋಗಿಗಳಾಗಿಯು, ನಮ್ಮ ನಮ್ಮ ಅಸಹ್ಯಪದ್ಧತಿ ಕಂಡುಹಿಡಿದು ತಿದ್ದಿಕೊಳ್ಳಲಾರದೆಯು ಕಾಲವನ್ನಿದಿರು ಗೊಳ್ಳುವುದರಲ್ಲಿ ಸ್ವಾರಸ್ಯ ಸಿಗಲಾರದು ! ಅಷ್ಟೆ ಏಕೆ ?

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೆ ಕಾಮರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ ॥

"ಆವನು ಶಾಸ್ತ್ರದ ಶುಭಗೆರೆಯನ್ನು ದಾಟಿ ಸ್ವಚ್ಛಂದನಾಗಿ ವರ್ತಿಸುವನೊ ಅವನು ಸಿದ್ಧಿಯನ್ನಾಗಲಿ ಸುಖವನ್ನಾಗಲಿ ಪಡೆಯುವುದಿಲ್ಲ."

ಎಂದು ಅದೇ ಗೀತೆಯು ಹೇಳುತಿರುವುದು. ಮನುವಿನ ಮಾತಾಗಲಿ. ಗೀತಾವಾಕ್ಯವಾಗಲಿ ನರಿಯ ಔತಣವಲ್ಲ. ಭೌತಿಕವಾಗಿ ವಿಚಾರಿಸಹೋದರು, ಆವಕಾಲದಲೆ ಇರಲಿ ಚೂತವೃಕ್ಷದಲ್ಲಿ ನಿಂಬಫಲವು ಫಲಿಸಲಾರದು. ಪ್ರೀತಿ ಇದ್ದಲ್ಲಿ ಕಲಹ ಬರಲಾರದು. ಜಾತರಿಗೆ ಮೃತ್ಯುವು ತಪ್ಪಲಾರದು. ಅಂತೆಯೆ ಧರ್ಮತರುವಿನಲ್ಲಿ ಅಶುಭ ಫಲ ಫಲಿಸಲಾರದು ! ಆಧುನಿಕ ನಡತೆಯೇ ಧರ್ಮ ಅಲ್ಲವೆ ಶಾಸ್ತ್ರ ವಿಹಿತವೆಂದಾಗುವಲ್ಲಿ ಈವಾಗ ಕುದುರಿದ ವ್ಯವಸಾಯದಲ್ಲಿ ಜನತೆಗೆ ಉಣಲು ದವಸ–ಧಾನ್ಯಗಳ ಬರಗಾಲ, ಬಟ್ಟೆ—ಬರೆಗಳ ಅರಗಾಲ, ಹಣದ ಅಭಾವ, ಅಕಾಲದ ಮಳೆಗಾಲವೆ ಮೊದಲಾಗಿ ಕಷ್ಟದಫಲಗಳು ಬಾಯಿಗೆ ಬರುತಿದ್ದವೆ ? ಇಲ್ಲ !!!

ಆವಕಾಲದಲ್ಲು ಧರ್ಮ–ಶಾಸ್ತ್ರಬಿಟ್ಟು ರಾಜಕಾರಣವಿಲ್ಲೆನುವುದು ಸರ್ವ ಸಾಮಾನ್ಯರಿಗು ಗೊತ್ತಿರಬಹುದು. ವರ್ತಮಾನಕಾಲವು ವರ್ಣ ವೈಷಮ್ಯಾದಿ ಹೀನವೃತ್ತಿಯನು ಎತ್ತಿ ಹಿಡಿದಿದೆ ; ಅಂತಹ ಕ್ರಾಂತಿಯ ತಳ್ಳಲು ಪ್ರಯತ್ನಿಸುವುದರ ಬದಲು ಆಸ್ಪದಕೊಡುತ್ತಿದೆ, ಈ ನವಯುಗದ ಸಮಾಜ. ಈ ಸೂತ್ರವನ್ನು ನೋಡಿದರೆ ವಿಚಿತ್ರವೆನಿಸುವುದು ! ಎದ್ದ ಎತ್ತಿನ ಬಾಲ ಹಿಡಿಯಲು ಹುದ್ದೇದಾರರೂ ಸಿದ್ಧರಾದರೆಂದ ಮೇಲೆ ಬಿದ್ದ

ಸಮಾಜವೇ ಹಿನ್ನೆಡೆಯಲ್ಲಿರುತ್ತ ಆದರಲ್ಲೂ ನಮ್ಮನಾಡ ಹೆಂಗಳೆಯರಂತು ಅಕ್ಷರಸುಗಂಧದ ಸೌಭಣ್ಣರಸುವುದರಲ್ಲಿ ಮುನ್ನಡಿಯನ್ನಿಟ್ಟವರೆ ಅಧಿಕ. ಅಂಥವರಿಗೂ ಹಗುರವಾಗುವಷ್ಟು ಸುಲಭ ಶೈಲಿಯಲ್ಲಿ ವಿಷಯಗಳನ್ನು ಮಂಡಿಸಿ ಒಂದಿಷ್ಟು ಅಳಲಸೇವೆ ಸಲ್ಲಿಸ ಹೊರಟ ನನ್ನ ಲೆಕ್ಕನಿಕೆಯು ಸಂಗ್ರಹಿಸುತ ಬಂದ ಈ ಹೊತ್ತಿಗೆಯೆಂದರೆ ; ಗದ್ಯಪ್ರಪಂಚದಲ್ಲಿ ಹೆಜ್ಜೆಯನ್ನಿಟ್ಟದ್ದು ಇದೇ ಮೊದಲು. ಹಾಗಿರುವಾಗ ಗುಣ–ದೋಷಗಳೆಷ್ಟೂ ಇರಬಹುದು; ಅದನ್ನು ಕಂಡುಂಡವರು ಹಂಸಕ್ಷೀರ ನ್ಯಾಯೇನ ಮನ್ನಣೆಯಿತ್ತು ಯೋಗ್ಯ ಅಪವಾದಾರ್ಹ ವಿಷಯಗಳಿಗೆ ತಕ್ಕಾದ ಸೂಚನೆಯನ್ನಿತ್ತರೆ ಪುನರ್ಮುದ್ರಣದಲ್ಲಿ ಪರಿಹಾರಕೊಡಲಾಗುವುದು.

ಈವಾಗಂತೂ **"ಶ್ರೀ. ಗಣಪತರಾವ್, ಪಾಂಡೇಶ್ವರ"** ಇವರಿಂದ ಪರಿಶೋಧಗೈಸಿ, ಅವರ ಸಲಹೆ—ಸೂಚನೆಗಳನ್ನು ಮನ್ನಿಸಿ ಅಚ್ಚು ಹಾಕಿಸಲಾಗಿದೆ. ಅಚ್ಚು ಹಾಕಿಸುವಾಗ ನನ್ನ ದೃಷ್ಟಿದೋಷಪರವಾಗಿ ಸಂಚಯವಾದ ನ್ಯೂನಾತಿರಿಕ್ತಗಳಿಗೆ ಸುಜ್ಞವಾಚಕರಲ್ಲಿ ಕ್ಷಮಾಯಾಚನೆಗೈದು, **ಸಂಸ್ಕಾರಪತ್ರ** ವನ್ನೂ ಪುಸ್ತಕದ ಕೊನೆಯಲ್ಲಿ ಕೊಡಲಾಗಿದೆ. ವಾಚಾಳಿಗರು ಅದನ್ನು ನೋಡಿಕೊಳ್ಳುವಿರಾಗಿ ಹೇಳಬಯಸುತ್ತೇನೆ. ಪ್ರಿಂಟಿನ ಕಾಲದಲ್ಲಿ **"ಶ್ರೇಯಾಂಸಿ ಬಹುವಿಘ್ನಾನಿ"** ಎನುವಂತೆ ಹಿಡಿಸಲಾರದಷ್ಟು ಕಂಟಕಗಳೊದಗಿದ್ದು, ಅದನ್ನೂ ಶ್ರೀಗುರುಲೀಲೆಯಲ್ಲೇ **"ಶ್ರೀ ಗೋವಿಂದ ಕೃಷ್ಣ ಕೇಳಕರ, ಧಾರವಾಡ"** ಇವರ ಗುರುತರ ಸಹಾಯ ಸೌಲಭ್ಯದಿಂದಾಗಿಯೂ ಇನ್ನೂ ಕೆಲವು ಮಿತ್ರರ ಸಾನುಕೂಲವೊದಗಿಯೂ ಈ ಪುಸ್ತಕವನ್ನು ನನ್ನ ತಾಯಿ—ತಂಗಿಯರುಗಳ ಕೈಗನ್ನಡಿಯನ್ನಾಗಿ ಮಾಡಲಾಯಿತಾದ್ದರಿಂದ ಕನ್ನಡ ಮಹಿಳಾಸಮಾಜವು ಇವರೆಲ್ಲವರ ಮತ್ತು ಮುನ್ನುಡಿಕಾರರ,ಅಭಿಪ್ರಾಯವನ್ನಿತ್ತವರ ಮಹೋಪಕಾರಗಳನ್ನು ಚಿರಸ್ಮರಿಸದಿರಲಾರದೆಂದೇ ನನ್ನ ಅಂತರಂಗದ ಆಶೆ; ನಂಬುಗೆ.

ಕೃತಿಕಾರ

ಎತ್ತಿನ ಗತಿ ಏನು ? ಧರ್ಮವೆಂದರೆ ಒಳ್ಳೆಯನಡತೆ. ಅದರ ಪೋಷಕವಾದುದು ಶಾಸ್ತ್ರ, ಹೀಗಿರಲು ಧರ್ಮ-ಶಾಸ್ತ್ರಗಳ ಮಧ್ಯಾಂತರಗಳು ಓದುಗರಿಗೆ ತಾನೆ ತಿಳಿಯದಿರದು.

ಒಟ್ಟಾರೆ ಹೇಳುವುದೆಂದರೆ ; ಮನುಷ್ಯನಿಗೆ ಸಾಧ್ಯ ಅಸಾಧ್ಯವಾದುದು ಇನ್ನಾವ ಪ್ರಾಣಿಗು ಸಾಧ್ಯವಿಲ್ಲ. ಸಕಲ ಸೌಕರ್ಯದಿಂದ ಕೂಡಿದ ಇಂಥ ಶ್ರೇಷ್ಠ ಜನ್ಮಪಡೆದ, ಪ್ರಜಾರಾಜ್ಯ ಕಟ್ಟಲಿಚ್ಛಿಸಿ ಮುಂದರಿಯುತಿದ್ದ ಎಲ್ಲ ಮತ-ಪಂಥವಾದಿಗಳು, ಇಲ್ಲಿಯವರೆಗೆ ಸ್ವಲ್ಪದರಲ್ಲೇ ಬಹಳವಾಗಿ ಹೇಳಿದ ಇವನ್ನೆಲ್ಲ ಗಮನಿಸಿ ಅದ್ರ-ಛಿದ್ರವಾದ ಮನಸ್ಸನ್ನು ಏಕೀಭವಿಸಿ ನಡಕೊಂಡಲ್ಲಿ ; ರಾಷ್ಟ್ರಕ್ಕಂಟಿಕೊಂಡ ದಾಸ್ಯಪಾಶವನ್ನು ಹೊಡೆದೋಡಿಸಿದಂತೆ,ಸ್ವಾತಂತ್ರ್ಯದ ಅಡಿಗಲ್ಲಮೇಲೆ ಔನ್ನತಿಯ ಸ್ವರಾಜ್ಯ ಕಟ್ಟಡವನ್ನು ಭದ್ರೀಕರಿಸಿ ಚಿರಕಾಲ ಆಳಿ--ಅನುಭೋಗಿಸಲಾಗುವದು !!!

ಹೆಣ್ಣಿಂದ ಇಹವುಂಟು, ಹೆಣ್ಣಿಂದ ಪರವುಂಟು :
ಹೆಣ್ಣಿಂದ ಸಕಲಪದವುಂಟು ಮುನಿದರೆ ,
ಹೆಣ್ಣಿಂದ ಮರಣ !!!

ಎನುವ ಸರ್ವಜ್ಞನ ವಚನ ಸುಳ್ಳಾಗುವದೆ? ಅದು ಸುಳ್ಳಾಗುವುದಾದರೆ ಆತ ಸರ್ವಜ್ಞ ನೆನಿಸಿಕೊಳಲಾರ.

ಸರ್ವಜ್ಞ ನೆಂಬುವನು । ಗರ್ವದಿಂದಾದವನೆ ? ।
ಸರ್ವ ರೊಳಗೊಂದೊಂದು-ನುಡಿಗಲಿತು ವಿದ್ಯೆಯಾ,
ಪರ್ವತವೆ ಆದ !!!

ಹೀಗೆ ಎತ್ತಿದ ಬಾಯಿಗೇ ಹೊರಟ ಆತನ ವಾಣಿಯಿದು. ಹಾಗಿರುವ ಸರ್ವಜ್ಞನ ಹೇಳಿಕೆಯಲ್ಲಿ ನಾರಿಯರೇ ಸರ್ವಕಾರಣರೆಂದಿದ್ದು, ಅಂತಹ

ಸೂಚೀ ಪತ್ರ

ಭಾಗ ೨.

|| ಶ್ರೀ ಗುರುವೇ ನಮಃ||

ಗರತಿ

ಭಾರ್ಯಾ ಮೂಲಂ ಗೃಹಸ್ಥಸ್ಯ ।
ಭಾರ್ಯಾ ಮೂಲಂ ಸುಖಸ್ಯಚ ।
ಭಾರ್ಯಾ ಧರ್ಮ ಫಲಾವಾಪ್ತ್ಯೈ ।
ಭಾರ್ಯಾ ಸಂತಾನ ವೃದ್ಧಯೇ||

ನಾರೀ ಶಬ್ದೋತ್ಪತ್ತಿ

ಪ್ರತಿಯೊಂದು ಶಬ್ದಕ್ಕೆ ಆ ಶಬ್ದದ ಇತಿಹಾಸವಿದೆ. ಮತ್ತು ಸ್ವತಂತ್ರ ಅಸ್ತಿತ್ವವಿದೆ. ಆವುದೆ ಶಬ್ದವಿದ್ದರು ಅದು ವಾಚ್ಯ ಸ್ವರೂಪದ ಸಂಕೇತವನ್ನೂ ಮಾಡುತ್ತದೆ. ಹಾಗಿದುನ ಶಬ್ದಾರ್ಥವು ಆಆ ಸಮಯದಲ್ಲಿ ಸಂಕುಚಿತ ಮತ್ತು ವಿಸ್ತಾರವಸ್ನು ಹೊಂದುತ್ತದೆ. ಅಷ್ಟೆಅಲ್ಲ; ಒಮ್ಮೊಮ್ಮೆ ತನ್ನ ಮೂಲ ಅರ್ಥದಿಂದ ಬಹಳ ದೂರವೂ ಹೋಗುತ್ತದೆ. ಆದರೆ.... ಈ ಪರಿವರ್ತನೆಗಳಿಂದ ಮೂಲ ಅರ್ಥದ ವಿಶೇಷತೆಯು ನಷ್ಟವಾಗುವದಿಲ್ಲ. 'ನಾರಿ.' ಈ ಶಬ್ದದ ಅರ್ಥ ಬೋಧಕವುಸಹ ನಾರಿಯ ಸ್ವರೂಪದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ.

ಕವಿಗಳ ದೃಷ್ಟಿಯಲ್ಲಿ, ನಾರಿಯು, ಮಾಯೆಯಲ್ಲಿ ದುರ್ಬೋಧಳೂ, ಪ್ರಕೃತಿಯಲ್ಲಿ ಬಹುರೂಪಳೂ ಸ್ವಭಾವಿಕತೆಯಲ್ಲಿ ಸರಲಳೂ ಇರುತ್ತಾಳೆ. ಈ ಭಿನ್ನವಿಭಿನ್ನತೆಯಿಂದ ಇವಳು ರಹಸ್ಯಮಯಳೆಂದು ಹೇಳಿಸಿಕೊಳ್ಳುತ್ತಾಳೆ. ಹೀಗಿರುವ ವಿಕಾಸದೊಡನೆ ಮಾನವ ಸಂಸ್ಕೃತಿಯನ್ನು ನೋಡಿದಾಗ ನಮಗೆ ಹಿಗನ್ನಿಸುತ್ತದೆ; ನಾರಿಯ ಸಂಗಡ ಮನುಷ್ಯನ ಶಾರೀರಿಕ ರಾಗಾತ್ಮಕ ಮತ್ತು ಧಾರ್ಮಿಕ ಸಮ್ಮಂಧವಾದ ಕಾರಣವುಸಹ, ನಾರಿಯ ಸ್ವರೂಪವಾಗಲು ನೆಪವಾಗುವವು. ಇಷ್ಟೆಅಲ್ಲ; ಅವುಗಳ ಸೂಚಕ ಶಬ್ದಗಳ ಪ್ರತ್ಯೇಕ ಸೃಷ್ಟಿಯಾದವು. ಬರಬರುತ್ತ ಈ ಭೇದಪ್ರಭೇದಗಳು ಭಾವಿಕತೆಯಿಂದ ಅತಿ ರಂಜಿತವಾಗಿ, ಶಬ್ದವ್ಯುತ್ಪತ್ತಿಯ ಸಹಾಯದಿಂದ ನಾರಿಯ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೂ ಕಠಿನವಾಗುವಷ್ಟು ಬೆಳೆದಿವೆ. !

ನಾರೀ ಶಬ್ದೋತ್ಪತ್ತಿ

ಜಲಕಣದಲ್ಲಿ ಸಂಪೂರ್ಣ ಸೂರ್ಯಮಂಡಲವು ಹೇಗೆ ಪ್ರತಿಬಿಂಬಿತವಾಗುತ್ತಿದೆಯೋ, ಹಾಗೇನೇ ಆ ಸಚ್ಚಿದಾನಂದ ವಸ್ತುವಿನಿಂದ ಉದಯಿಸಿದ ಪ್ರಣವ (ಓಂ, ಎನುವ ಅಕ್ಷರ) ದಿಂದ ಸಂಪೂರ್ಣ ಸೃಷ್ಟಿಯಾಗಿದ್ದು, ಅದರಲ್ಲಿಯ ಪ್ರಾಮುಖ್ಯ ನಾರೀ ವಾಚಕವು ಸಹ, ಅದರ ಜಾತಿ, ಗುಣ, ಕ್ರಿಯೆಗಳು ಒಡೆದು ಕಾಣಿಸುತ್ತಿದೆ.

'ಇದರಿಂದಾಗಿ ನಾರೀಶಬ್ದದ ಕೆಲವು ಪರಿಯಾಯ ವಾಚೀಶಬ್ದದ ವ್ಯುತ್ಪತ್ತಿಯ ಸಹಾಯುಗೊಂಡು, ನಾರಿಯ ಕೆಲವು ಸಾಮಾನ್ಯ ಮತ್ತು ವಿಶೇಷ ಸ್ವರೂಪದಮೇಲೆ ಪ್ರಕಾಶ ಬೀಳುವಂಥವನ್ನು ಈ ಪುಸ್ತಕದಲ್ಲಿ ತೋರಿಸಿದೆ.

ಮೇನಾ (ವೈದಿಕ):– ಋಗ್ವೇದದಲ್ಲಿ ಮೇನಾ ಶಬ್ದವು ನಾರೀ ಅರ್ಥ ಸೂಚಕ ಶಬ್ದವಾಗಿರುತ್ತದೆ. ಮಹರ್ಷಿ ಯಾಸ್ಕನ ಅಭಿಪ್ರಾಯದಂತೆ ಈ ಶಬ್ದದ ವ್ಯುತ್ಪತ್ತಿ ಹೇಗೆಂದರೆ :—**ಮಾನಯಂತಿ ಎನಾಃ** (ಪುರುಷಾ;) (ನಿರುಕ್ತ ೩ | ೨೧ | ೨) ಪುರುಷನು ಇವರನ್ನು ಆದರಿಸುವದರಿಂದ ಸ್ತ್ರೀಯರಿಗೆ ಮೇನಾ ಎಂಬ ಹೆಸರು ಬಂತು. ಲೌಕಿಕ ಸಂಸ್ಕೃತದಲ್ಲಿ ಮೇನಾ ಶಬ್ದವು ಮಾನ್ಯ ಆಗಿದೆ. ಮೇನಾ - ಮಾನಾ - ಮಾನ್ಯಾ. ಸಂಸ್ಕೃತದಲ್ಲಿ ಮೇನಾ ಶಬ್ದವು ವ್ಯಕ್ತಿವಾಚಕ ಸಂಜ್ಞೆಯ ರೂಪದಲ್ಲಿ ಸಿಗುತ್ತದೆ. ಉದಹರಣೆಗಾಗಿ ಹೇಳುವುದಾದರೆ, ಪಾರ್ವತಿಯ ತಾಯಿಯ ಹೆಸರು ಮೇನಾ.

ಗ್ನಾಃ (ವೈದಿಕ):— ಗ್ನಾಃ ಶಬ್ದವೂ ಋಗ್ವೇದದಲ್ಲಿ ನಾರೀ ಅರ್ಥಬೋಧಕ ಶಬ್ದವಾಗಿರುತ್ತದೆ. ಋಗ್ವೇದದಲ್ಲಿ ಹೆಚ್ಚಾಗಿ ಈ ಶಬ್ದಗಳು ದೇವಪತ್ನಿಗಳ ಸಲುವಾಗಿಯೇ ಬಂದಿದೆ. ಆದರೆ........ಬ್ರಾಹ್ಮಣ ಗ್ರಂಥಗಳಲ್ಲಿ ಸಾಮಾನ್ಯವಾಗಿ, ಸ್ತ್ರೀಯರ ಸಲುವಾಗಿ ಉಪಯೋಗಿಸಲ್ಪಟ್ಟಿವೆ. ಯಾಸ್ಕನು ಇದರ ಅರ್ಥ ಮಾಡಿದ್ದೇನಂದರೆ :- ಗ್ನಾ ಗಚ್ಛತಿ ಯೇನಾ; (ನಿರುಕ್ತ ೧ | ೨೧ | ೨) ದುರ್ಗಾಚಾರ್ಯರು ಇದರ ಭಾವವನ್ನು ಸ್ಪಷ್ಟಪಡಿಸುತ್ತ ಹೇಳಿರುವುದೇನಂದರೆ; ಪುರುಷನು ಸಂಸರ್ಗದಿಚ್ಛೆಯಿಂದ ಸ್ತ್ರೀಯ ಬಳಿಗೆ ಹೋಗುತ್ತಾನೆ, ರಮಿಸುತ್ತಾನೆ. ಇದರಿಂದಲೆ ಸ್ತ್ರೀಯಳಿಗೆ ಗ್ನಾ ಎಂಬ

ಹೆಸರು ಬಂತು. ಸಂಸ್ಕೃತದಲ್ಲಿ ಗ್ನಾ ಎಂಬ ಶಬ್ದದ ಬಳಿಕೆಯು ಸಿಗುವದಿಲ್ಲ. ಆದರೂ 'ಗಮ್ನ್ಯಾ' ಶಬ್ದವು, ಇದೇ ಗ್ನಾ ಶಬ್ದದ ವಿಕಸಿತ ರೂಪವಾಗಿರುತ್ತದೆ. ಗ್ನಾ–ಗಮ್ನಾ–ಗಮ್ನ್ಯಾ. ಇವು 'ಗಂ' ಧಾತುವಿನಿಂದ ಆಗಿವೆ. ಅವಸ್ಥೆಗಳಲ್ಲಿ ಘೇನಾ ಅಥವಾ ಗೆನಾ ಶಬ್ದವು ಸ್ತ್ರೀಯರಿಗೆ ಪ್ರಯುಕ್ತವಾಗಿದೆ. ಇದು ಗ್ನಾ ಶಬ್ದದ ಪರಿವರ್ತನ ಶಬ್ದವೆ ಆಗಿದೆ." ಜರ್ಮನ್ ಭಾಷೆಯ ಸ್ತ್ರೀ ಅರ್ಥವಾಚಕ 'ಗುನೆ' ಶಬ್ದವುಸಹ ಗ್ನಾದಿಂದಲೇ ಹುಟ್ಟಿದೆ. ಗ್ರೀಕದ 'ಗಾಮಸ್' (ವಿವಾಹ) ಶಬ್ದದಲ್ಲಿಯು 'ಗಾ'ದ ಗಂಧವಿದೆ.

'ಸ್ತ್ರೀ' :— ನಾರಿಗೆ ಎಲ್ಲಕ್ಕು ಹೆಚ್ಚಿನ ಪ್ರಚಲಿತವಾದ ಶಬ್ದವು 'ಸ್ತ್ರೀ' ಇರುತ್ತದೆ. ವೈದಿಕ ಸಾಹಿತ್ಯದಲ್ಲಿ ಇದು ಪ್ರಸಿದ್ಧವಾಗಿರುತ್ತದೆ. ಪ್ರಾಕೃತಯುಗಗಳಲ್ಲಿ ಇದು ಸಜೀವವಾಗಿದ್ದು ಇದರ ಅಖಂಡ ಪರಂಪರೆಯು, ಈ ಹೊತ್ತಿಗೆ ಭಾರತದ ಎಲ್ಲಭಾಷೆಗಳಲ್ಲು ಸುರಕ್ಷಿತವಾಗಿದೆ. 'ಸ್ತ್ರೀ' ಶಬ್ದವು 'ಸ್ತ್ಯೈ' ಧಾತುವಿನಿಂದ ಆಗಿದೆ. ಯಾಸ್ಕನ ಮತದಂತೆ 'ಸ್ತ್ಯೈ' ಇದರ ಅರ್ಥವು ಲಜ್ಜೆಯಿಂದ ಮುಸುಕಿಕೊಂಡಿರುವುದೆಂದು ಆಗುತ್ತದೆ. ಸ್ತ್ರೀಗೆ ಸ್ತ್ರೀಯಂತ ಹೆಸರು ಬರಲು ಕಾರಣವೇನಂದರೆ; ಅವಳು ಲಜ್ಜೆಪಡುವಳು. **"ಸ್ತ್ರಿಯಃ ಸ್ತ್ಯಾಯತೆ ಅಪತ್ರಪಣ ಕರ್ಮಣಃ"** (ನಿರುಕ್ತ ೩ | ೨೧ | ೨) ದುರ್ಗಾಚಾರ್ಯರು ಇದರ ಟೀಕಾಮಾಡುತ್ತ ಬರೆದದ್ದೇನಂದರೆ :– "ಲಜ್ಜಾರ್ಥಸ್ಯ ಲಜ್ಜಂತೇತಿ ಪಿತಾಃ" ಅರ್ಥಾತ್; ನಾರಿಯ ಸ್ತ್ರೀ ಸಂಜ್ಞೆಯು, ಅವಳು ಲಜ್ಜಾಶೀಲಳಾಗಿರುವುದರಿಂದಲೆ ಬಂದಿದೆ. ಆ ಪರಂತು ಪಾಣಿನಿಯ ಧಾತು ಪಾಠದಲ್ಲಿ ಸ್ತ್ಯೈ ಶಬ್ದದ ಅರ್ಥವು 'ಲಜ್ಜೆ ಪಡುವಳು.' ಎಂತ ಸಿಗುವದಿಲ್ಲ. ಧಾತುಪಾಠದ ಅನುಸಾರ ಸ್ತ್ಯೈ ಇದರ ಅರ್ಥವು ಶಬ್ದಮಾಡುವದು ಎಂತಲು ಒಟ್ಟುಗೂಡಿಸುವದೆಂತಲು ಆಗುವದು. "ಸ್ತ್ಯೈಶಬ್ದ ಸಘಾತಯೋಃ" (ಧಾ. ಪಾ. ೧ | ೯೩೫) ಈ ಧಾತುಪಾಠದ ಆಧಾರದಮೇಲೆ, ನಾರಿಯ ಸ್ತ್ರೀನಾಮವು ಅವಳು ಹರಟೆ ಹೊಡೆಯುವ ಸ್ವಭಾವದ ಕಾರಣದಿಂದಲೆ ಬಂದಿರುತ್ತದೆಂತ ಹೇಳಬಹುದು. ವಾಡಿಕೆಯಂತೆ ಹೇಳುವುದಾದರೆ,

ಸ್ತ್ರೀಯರು ಪುರುಷರಿಗಿಂತ ಅಧಿಕವಾಗಿ ಮಾತಾಡುವವರಿರುತ್ತಾರೆ. ಆದರೆ ಆವ ಆಚಾರ್ಯರೂ ಈ ವ್ಯಾಖ್ಯೆಯನ್ನು ಎಲ್ಲು ಪ್ರಯೋಗಿಸಿರುವುದಿಲ್ಲ. ಪತಂಜಲಿಯು ಎಂಟು ಅಧ್ಯಾಯಗಳುಳ್ಳ 'ಸ್ತ್ರೀಯಾಂ' ಸೂತ್ರದ ಭಾಷ್ಯ ಬರೆಯುವಾಗ 'ಸ್ತ್ರೀ' ಶಬ್ದದಮೇಲೆ ಎಷ್ಟೋರೀತಿಯಿಂದ ಮುಂದಿನ ವಿಚಾರ ಮಾಡಿದ್ದಾನೆ. ಲೋಕದಲ್ಲಿ, ಕೆಲವು ಶಾರೀರಕ ಚಿನ್ಹೆಗಳನ್ನು ನೋಡಿ ಸ್ತ್ರೀಯೆಂದು ಕರೆಯುತ್ತಾರೆ. ಆ ಚಿನ್ಹೆಗಳು ಆವವೆಂದರೆ, ಸ್ತನ ಕೇಶ ಈವೊದಲಾದವು. **"ಸ್ತನ ಕೇಶವತಿ ಸ್ತ್ರೀ ಸ್ಯಾಲ್ಲೋಮೇಶಃ ಪುರುಷಃ ಸ್ಮೃತಃ**(ಪಾ೪ ೯ | ೧ | ೩ ಪರಮಂ ಭಾಷ್ಯ)ಇದು ಸ್ಥೂಲರೂಪದ ಸೂಚಕವಿರುತ್ತದೆ. ಪತಂಜಲಿಯು ಇದರ ಉಪೇಕ್ಷೆಯನ್ನು ಮಾಡಿ 'ಸ್ತ್ಯೈ' ಧಾತುವನ್ನೇ ಸಪ್ರಮಾಣವಾಗಿಟ್ಟುಕೊಂಡಿದ್ದಾನೆ. ಅವನ ಮತದಂತೆ ಹೇಳುವದೆಂದರೆ "ನಾರಿಯು ಗರ್ಭವತಿಯಾಗುತ್ತಾಳೆ, ಅದರಿಂದಲೇ ಅವಳಿಗೆ ಸ್ತ್ರೀಯೆಂದು ಹೇಳುತ್ತಾರೆ." ಕ್ಷೀರಸ್ವಾಮಿಯು ಇದೇ ಅರ್ಥವನ್ನು ಹೇಳುತ್ತಾನೆ. ಪತಂಜಲಿಯು ಮಾಡಿದ ಸ್ತ್ರೀ ಶಬ್ದದ ವ್ಯುತ್ಪತ್ತಿಯ ಬಗ್ಗೆ ಮತ್ತೊಂದು ವ್ಯಾಖ್ಯೆ ಯೇನಂದರೆ,**"ಶಬ್ದ ಸ್ಪರ್ಶ ರೂಪ ರಸ ಗಂಧಾನಾಂ ಗುಣಾನಾಂ ಸ್ತ್ಯಾನಂ ಸ್ತ್ರೀ"** "ಶಬ್ದ ಸ್ಪರ್ಶ ರೂಪ ರಸ ಗಂಧ ಇವೆಲ್ಲವುಗಳ ಮಿಶ್ರಣವೆ ಸ್ತ್ರೀ. ಸುರೇಶಜೀ ತ್ರಿಪಾಠಿಯವರ ಮತದಂತೆ ಸ್ತ್ಯಾನದ ಖಂಡಿತ ಅರ್ಥವು, ಸಮುಚ್ಚಯ ಅಥವಾ ಸಂಗಾತ ಎನುವುದೆ ಯೋಗ್ಯವಾಗಿದೆ. ಇದು ಸ್ತ್ಯೈ ಧಾತುವಿನ ಮೂಲ ಅರ್ಥಕ್ಕನುಸಾರವಾಗಿಯೆ ಇದೆ. ಇಲ್ಲಿ ನೆನಪಿಡತಕ್ಕ ಮಾತೇನಂದರೆ, ಶಬ್ದ ಸ್ಪರ್ಶಾದಿಗಳ ಸಮ್ಮಿಲನವೆ ಸ್ತ್ರೀಯು. ಇದಕ್ಕೆ ಪತಂಜಲಿಯ ಸ್ವಯಂ ಕಲ್ಪನೆಗಳಷ್ಟೆ ಮಾತ್ರವಲ್ಲ, ಅದಕ್ಕು ನೂರಾರು ವರ್ಷಗಳ ಹಿಂದಿನ ಯಾಸ್ಕನೂ ಇದೇ ಅಭಿಪ್ರಾಯವನ್ನು ಯಾಕ್ತಪಡಿಸಿದ್ದಾನೆ. (ಋಗ್ವೇದ ೧ | ೧೬ | ೧೬)ರ, ಟಿಪ್ಪಣಿ ಮಾಡುತ್ತ ಯಾಸ್ಕನು ಬರದಿದ್ದೇನಂದರೆ **"ಸ್ತ್ರೀಯಃ ಏವ ಏತಾಃ ಶಬ್ದ ಶ್ಪರ್ಶರೂಪ ರಸಗಂಧ ಹಾರಿಣ್ಯಃ"** ನೀ. ಅ. ೧೪(೩೦|೧೦) ಇದರಮೇಲಿಂದ ಪತಂಜಲಿಯಾಗಲಿ ಯಾಸ್ಕನಾಗಲಿ, ಸ್ತ್ರೀಯು ಹೇಗೆ

ಶಬ್ದಸ್ಪರ್ಶಾದಿಗಳನ್ನು ಹರಣಮಾಡುತ್ತಾಳೆನುವುದನ್ನು ಚನ್ನಾಗಿ ವಿವೇಚನೆ ಮಾಡಿದ್ದಾರೆ. ಶಬ್ದಸ್ಪರ್ಶಾದಿಗಳು ಜ್ಞಾನೇಂದ್ರಿಯಗಳ ವಿಷಯಗಳಾಗಿವೆ. ಕೇವಲ ಒಬ್ಬ ಸ್ತ್ರೀಯಳಿಂದ ಪುರುಷರ ಜ್ಞಾನೇಂದ್ರಿಯಗಳ ಎಲ್ಲ ತರದ ತೃಪ್ತಿಯಾಗುತ್ತದೆ. ಇದೇ ಕಾರಣಗಳಿಂದಲೆ ಅವರು ಸ್ತ್ರೀಶಬ್ದದ ಅಧಿಷ್ಠಾನವನ್ನು ಒಪ್ಪಿಕೊಂಡಿದ್ದಾರೆಂದು ನಾವು ನಂಬಬಹುದು. ಸ್ತ್ರೀ ಶಬ್ದ, ಸ್ತ್ರೀ ಸ್ಪರ್ಶ ಸ್ತ್ರೀರೂಪ, ಸ್ತ್ರೀರಸ, ಸ್ತ್ರೀ ಗಂಧ, ಇವು ಬೇರೆಯಾಗಿ ಮತ್ತು ಕೂಡಿಕೊಂಡೇ ಈ ಜಗತ್ತಿನಲ್ಲಿ ಪಾನ ರೂಪದಿಂದ ಆಕರ್ಷಕವಾದದ್ದಿರುವುದೆಂಬುದು ಸರ್ವ ವಿದಿತವಾದದ್ದಿರುತ್ತದೆ. ಈ ಕಾರಣಗಳಿಂದಲೆ ಆಚಾರ್ಯರುಗಳು ಶಬ್ದ ಸ್ಪರ್ಶಾದಿಗಳ ಸಂಘರ್ಷಣೆಯಲ್ಲಿ ಸ್ತ್ರೀತ್ವದ ರೂಪವನ್ನು ಕಂಡದ್ದರಲ್ಲಿ ಆಶ್ಚರ್ಯಪಡತಕ್ಕ ಸಂಗತಿಯೇನೂ ಇರುವದಿಲ್ಲ. ಇದೇ ಕಾರಣದಿಂದಲೆ 'ಸಾಧು ಮಹಾತ್ಮರುಗಳು' ವಿಷಯಗಳಿಂದ ದೂರವಿರುವುದೆಂದು ಹೇಳುವುದರ 'ಗುಟ್ಟು' ಸ್ತ್ರೀಯಿಂದ ದೂರವಿರಬೇಕೆಂದ ಹಾಗೆ ಎಂದು ತಿಳಿಯುತ್ತದೆ.

'ಯೋಷಾ' ಎಂಬುದೂ ಪ್ರಾಚೀನ ಕಾಲದ ಸ್ತ್ರೀವಾಚಕ ಶಬ್ದವಿರುತ್ತದೆ. 'ಯು'-- ಒಟ್ಟುಗೂಡಿಸು ಎಂಬುದರಿಂದಾಗಿರುತ್ತದೆ. ದುರ್ಗಾಚಾರ್ಯನ ಮತದಂತೆ. "ಯೋಷಾ" ಇದರ ಅರ್ಥವು, ಸ್ತ್ರೀಯು ತನ್ನನ್ನು ಪುರುಷನ ಕಡೆಗೆ ಎಳೆಯುತ್ತಾಳೆ. "ಯೋಷಾಯೇತೇಃ ಮಿಶ್ರಣಾರ್ಥಸ್ಯ ಸಾ ಹಿ ಮಿಶ್ರಯತಿ ಆತ್ಮಾನಂ ಪುರುಷೇಣ ನಾಕಮ್" (ನಿ. ೩|೧೫|೧) ಯೋಷಣಾ ಮತ್ತು ಯೋಷಿತ್ ಈ ಎರಡೂ ಶಬ್ದಗಳು ಸ್ತ್ರೀ ವಾಚಕ ಶಬ್ದಗಳಿದ್ದು ಯೋಷಾದ ಮೂಲಭಾವವನ್ನೇ ವ್ಯಕ್ತಗೊಳಿಸುತ್ತವೆ. ಯೋಷಾ ಜಾರಸ್ಯ ಚಕ್ಷಪಾ ವಿಭಾತೆ (ಋಗ್ವೇದ ೧|೯೮|೧೧) ಹೇಗೆ ಪ್ರೇಮಿಯ ದೃಷ್ಟಿಯಲ್ಲಿ ಪ್ರೇಮಿಕೆಯು ಸುಂದರಳಾಗಿ ತೋರುತ್ತಾಳೊ ಹಾಗೆ ಲೌಕಿಕ ಸಂಸ್ಕೃತದಲ್ಲಿ ಯೋಷಿ ಶಬ್ದ ಬಳಿಕೆಯು ಅಧಿಕವಾಗಿರುತ್ತದೆ.

ಋಗ್ವೇದದಲ್ಲಿ ನಾರೀಶಬ್ದವು ಸಿಕ್ಕುವುದಿಲ್ಲ. ಆದರೆ .... ಯಜ್ಞದ

ಅರ್ಥದಲ್ಲಿ । ನಾರ್ಯಃ, ಈ ಶಬ್ದದ ಪ್ರಯೋಗವು ಕಂಡು ಬರುತ್ತದೆ. ನಾರೀ ಶಬ್ದವು ನೃ ಅಥವಾ ನರ ಎಂಬುದರಿಂದ ಆಗಿದೆ. "ನೃ+ ಜ+ ಗೀನ– ನಾರೀಃ, ನರ+ ಙ್ಗೀಷ– ನಾರೀ." ಪತಂಜಲಿಯು ಈ ಎರಡೂ ಉತ್ಪತ್ತಿಗಳನ್ನು ಸರಿಯೆಂದು ಒಪ್ಪಿಕೊಳ್ಳುತ್ತಾನೆ. ಯಾಸ್ಕನು 'ನರ' ಶಬ್ದವನ್ನು ನೃತ– ಕುಣಿಯುವುದು ಶಬ್ದದಿಂದ ಅರ್ಥಮಾಡಿರುತ್ತಾನೆ. "**ನರಾಃ ಮನುಷ್ಯಾಃ ನೃತ್ಯತಿ ಕರ್ಮಸು** (ನಿರುಕ್ತ ೫|೧|೩) ಕೆಲಸ ಮಾಡುವ ಸಮಯದಲ್ಲಿ ಮನುಷ್ಯನು ಕೈ, ಕಾಲುಗಳನ್ನು ಕುಣಿಸಾಡುತ್ತಾನೆ. ಇದಕ್ಕಾಗಿಯೆ ಅವನಿಗೆ 'ನರ" ಎಂತಾ ಕರೆಯುತ್ತಾರೆ. ಆದರೆ, ಋಗ್ವೇದದಲ್ಲಿ "ನೃ" ಪ್ರಯೋಗವನ್ನು ವೀರತ್ವದ ಪ್ರಯೋಗಕ್ಕೆ ಮತ್ತು ದಾನ ಕೊಡುವುದು, ನೇತೃತ್ವವಹಿಸುವದು, ಮುಂತಾದ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟದೆ. ಸ್ತ್ರೀಯರಿಗೆ ನಾರೀ ಎಂಬ ಹೆಸರೂ ಇವೇ ವಿಶೇಷಣಗಳ ಆಧಾರದ ಮೇಲೆಯೇ ಬಿದ್ದಿರಬಹುದು, ಸಾಯಣನ ಮತದಂತೆ 'ನಾರಿ'ಯ ಭಾವಾರ್ಥವು, ನರಗಳ ಉಪಕಾರಕ ಅಥವಾ ಶತ್ರುರಹಿತ ಎಂತ ಆಗುತ್ತದೆ. "ನ ಅರಿಃ ನಾರಿಃ (ಸಾಯಣ ತೈ. ಅ. ೪|೨|೧)

'**ವಾಮಾ**':- ಸ್ತ್ರೀ ವಾಮಾ ಇರುತ್ತಾಳೆ. ಏಕಂದರೆ ಅವಳು ಸೌಂದರ್ಯವನ್ನು ಹರೆಡುತ್ತಾಳೆ. "ವಯತಿ ಸೌಂದರ್ಯಂ." ಸ್ತ್ರೀಯಳು ವಾಮಾ ಇರುತ್ತಾಳೆ. ಏಕಂದರೆ ಅವಳು ಪ್ರತಿಕೂಲವಾದ ಮಾತನ್ನು ಹೇಳುತ್ತಾಳೆ. ಹೇಗೆಂದರೆ, ಹ್ವಾ, ಅನುವುದರ ವ್ಯತಿರಿಕ್ತ, ಹೆಚ್ಚಾಗಿ 'ಇಲ್ಲ' ಎನ್ನುತ್ತಾಳೆ.

ಅಬಲಾ:- ಈ ಶಬ್ದದ ಅರ್ಥವು, ನಾರಿಯು ಶಾರೀರಕ ಬಲದ ಮೇಲಿಂದಲೆ ಮಾಡಿದ್ದಿರಬಹುದು. ಸ್ತ್ರೀಯಳಿಗೆ ಪುರುಷನ ಸಾಮರ್ಥ್ಯ ಇರುವುದಿಲ್ಲ. ಆದರೆಮಾತ್ರ, ಅವಳ ಮಾನಸಿಕಶಕ್ತಿಯು ಚಂಚಲವೆಂದೂ ಅದನ್ನು ವಶಪಡಸಿಕೊಳ್ಳುವುದು ಅಸಾಧ್ಯವೆಂದೂ ಋಷಿಗಳು ಸಹ ಹೇಳುತ್ತಾರೆ. 'ಸ್ತ್ರೀಯಾ ಅಶಾಸ್ಯಂ ಮನಃ' (ಋಗ್ವೇದ ೮|೩೩|೧೭)

'ಸುಂದರಿ' — ಸು+ಉಂದ+ ಅರ+ಙೀಷ್ – ಸುಂದರಿ. ಆರೆ ಇರಲಿ ಪುರುಷನು ಅವಳನ್ನು ನೋಡಿದಾಕ್ಷಣವೆ ಅವನ ಮನವು ಮೆತ್ತಗಾಗಿ ಬಿಡುವುದು. ಚಿತ್ತವು ನೀರಾಗಿ ಹೋಗುವುದು. ಅಥವಾ 'ಸುಷ್ಟು ನಂದಯತಿ ಇತಿ ನೈರುಕ್ತಾಃ (ಕ್ಷೀರಸ್ವಾಮಿ, ಅಮರ. ೩|೧|೫೨) ಸ್ತ್ರೀಯು ಪುರುಷನನ್ನು ಒಳ್ಳೇ ಪ್ರಸನ್ನ ಗೊಳಿಸುತ್ತಾಳೆ. ಅದರಿಂದಲೇ 'ಸುಂದರಾ' ಅನ್ನಿಸಿಕೊಂಡಿರುವಳು. ವಸ್ತುತಃ ಸುಂದರಿ ಶಬ್ಧವು ಋಗ್ವೇದದಲ್ಲಿ 'ಸೂನರೀ' ಶಬ್ದದ ಪ್ರಕಾಶರೂಪು ಆಗಿದೆ. ಋಗ್ವೇದವಲ್ಲಿ ಬಾಣನ ಮಗಳಾದ ಉಷೆ ಎನ್ನುವವಳಿಗಾಗಿ ಸೂನರೀ ಶಬ್ದವನ್ನು ಪ್ರಯೋಗಿಸಿರುವರು. ಶೋಭಾಶಾಲೀ – ಸುಂದರಿ.

"ಆ ಘಾ ಯೋಷೆವ ಸೂನ ಯುರ್ಷಾ ಯಾತಿ ಪ್ರಭುಂಜತೀ" (ಋಗ್ವೇದ ೧|೪೮|೫)

ಅರ್ಥಾತ್, ಪ್ರಸನ್ನತಾಯುಕ್ತ 'ಉಷಾ' ಇವಳು ರಕ್ಕಸನ ಮಗಳಾದರು ಸುಂದರಿ ಆಗಿದ್ದಳು.

'ಲಲನಾ' :- ಈ ಶಬ್ದವು ಸ್ತ್ರೀಯಳ ಮಾನಸಿಕ ಭಾವ ಸೂಚಕವಾಗಿರುತ್ತದೆ. ಲಲ – ಇಚ್ಛಾ, ಇಚ್ಛೆಯು ಅಧಿಕವಾಗಿರುವದರಿಂದ ಲಲನಾ.

'ಮಾನಿನಿ' :- ಸ್ತ್ರೀಯಳಿಗೆ ಅಧಿಕವಾಗಿ ಅಭಿಮಾನವಿರುವದು. ಅದರಿಂದ ಈ ಶಬ್ದವು ಪ್ರಯೋಗಿಕವಾಗಿದೆ.

'ಮಹಿಲಾ' :- ಮಹ್ ಇದರ ಅರ್ಥವು ಪೂಜ್ಯ ಎಂದೆನುವುದು. ಪೂಜ್ಯಳಿರುವದರಿಂದ ಮಹಿಲಾ ಶಬ್ದವನ್ನು ಸ್ತ್ರೀಗೆ ಉಪಯೋಗಿಸಿದೆ.

'ದುಹಿತ':- ದೂರೇಹಿತ - ದುಹಿತ. ಅರ್ಥಾತ್; ದೂರದಲಿದ್ದರು ಹಡೆದವರಿಗೆ ಹಿತ ಬಯಸುವವಳು ದುಹಿತ. ದೂರೆಅಹಿತ – ದರ್ಹಿತ ದೂರದಲ್ಲಿದ್ದರು ಹೆತ್ತವರಿಗೆ ಅಹಿತ, ಅಪಯಶಸ್ಸುಗಳನ್ನು ತರುವಳು. ದುರ್ಹಿತ.

'ಜಾಯಾ.' ಹೆಂಗಸಿಗೆ ಪತ್ನಿ ಸಂಬೋಧಕವಾದ ಹೆಸರಿದು. ಪುರುಷನು ಅವಳಲ್ಲಿ ಪುತ್ರರೂಪದಿಂದ ಹುಟ್ಟುವದರಿಂದ ಜಾಯಾ ಶಬ್ದವು ಸ್ತ್ರೀಯಳಿಗೆ ಬಂದಿದೆ.

'ಮಾತಾ.' ಸ್ತ್ರೀಯಳಿಗೆ ಮಾತಾ ಎನುವುದು, ಆದರಣೀಯ ಅಂದರೆ ಪ್ರೀತಿಗೆ ಪಾತ್ರಳೆಂದರ್ಥವು.

ಈ ಬಗೆಯ ಹಲವಾರು ಶಬ್ದಗಳು ಸ್ತ್ರೀ ವಾಚಕವಾಗಿರುವವು. ಅವೆಲ್ಲವೂ ಹೆಂಗಳೆಯರ ಶಾರೀರಿಕ ಮಾನಸಿಕ ಗುಣ ಶಕ್ತಿ ಸೌಂದರ್ಯಾದಿಗಳನ್ನು ಅವಲಂಬಿಸಿ ಉತ್ಪನ್ನವಾದ ಶಬ್ದಗಳಾಗಿರುತ್ತವೆ.

ನಾರೀತ್ವದ ಆದರ್ಶದಲ್ಲಿ, ಪೂರ್ವ; ಪಶ್ಚಿಮ ಅಭಿಪ್ರಾಯ.

ನಾರೀತ್ವದ ಬಗ್ಗೆ ಭಾರತೀಯ ಆದರ್ಶ ಮತ್ತು ಪಾಶ್ಚಾತ್ಯ ಆದರ್ಶಗಳ ತುಲನೆ ಮಾಡುವಾಗ, ನಮಗೆ ಎರಡು ದೊಡ್ಡ ಮಹಾಕಾವ್ಯಗಳಿಂದ ಸಾಕಷ್ಟು ಆಧಾರಗಳು ಸಿಗುತ್ತವೆ. ಆ ಮಹಾಕಾವ್ಯಗಳೆಂದರೆ, ಒಂದು ವಾಲ್ಮೀಕಿರಾಮಾಯಣ ಎರಡನೆಯದು ಹೋಮರನ 'ಇಲಿಯದ' ಎಂಬುದು. ಈ ಎರಡೂ ಮಹಾಕಾವ್ಯಗಳ ಕಥಾವಸ್ತುಗಳಲ್ಲಿ ಅದ್ಭುತ ಸಾಮ್ಯ ಇದೆ. (ಸಮ್ಮಂಧ ಇದೆ.) ಹೇಗೆ ರಾಮನ ಹೆಂಡತಿಯಾದ ಸೀತೆಯನ್ನು ರಾವಣನು ಕದ್ದೊಯ್ಯುವನೊ ಹಾಗೆಯೇ ಮೆನೆಲಾಸನ ಪತ್ನಿ 'ಹೆಲೇನ' ಳನ್ನು 'ಪೆರಿಸ'ನು ಅಪಹರಿಸಿಕೊಂಡು ಒಯ್ಯುವನು. ಹೇಗೆ ರಾಮನು ರಾವಣನನ್ನು ಯುದ್ಧದಲ್ಲಿ ಕೆಡಹಿ ಸೀತಾದೇವಿಯ ಉದ್ಧಾರ ಮಾಡುತ್ತಾನೊ ಹಾಗೆಯೆ ಮೆನೆಲಾಸನು ಪೆರಿಸನನ್ನು ಸೋಲಿಸಿ ಹೇಲೇನಳ ಉದ್ಧಾರ ಮಾಡುತ್ತಾನೆ. ಈ ಎರಡೂ ಕಥಾವಸ್ತುಗಳಲ್ಲಿ ಇಷ್ಟು

ಸಮ್ಮಂಧ ವಿದ್ದರು, ವಾಲ್ಮೀಕಿ ಮತ್ತು ಹೋಮರರು ಪ್ರದರ್ಶಿಸಿದ ನಾರಿತ್ವದ ಆದರ್ಶಗಳಲ್ಲಿ ಆಕಾಶ ಪಾತಾಳದಷ್ಟು ಅಂತರವಿದೆ. ಹೆಲೇನಳು ಪೆರಿಸನಿಂದ ಅಪಹರಿಸಲ್ಪಟ್ಟನಂತರ ಆಕೆಯು ಅವನ (ಪೆರಿಸನ) ಪತ್ನಿಯಾಗಿ ಬಾಳುವಳು. ಆದರೆ! .... ಮುಂದೆ ಮೆನೆಲಾಸನು ಆಕೆಯುನ್ನು ಬಿಡಿಸಿ ತಂದಮೇಲೆ ಮೊದಲಿನಂತೆಯೆ ಮೆನೆಲಾಸನ ಪತ್ನಿಯಾಗಿ ಉಳಿಯುವಳು. ಮಹಾಕವಿಯಾದ ಹೋಮರನಿಗೆ—ಸ್ತ್ರೀಗೆ ಪತಿಭಕ್ತಿಯೆಂಬುದೂ ಒಂದು ಆದರ್ಶವಿದೆ ಎಂಬುದು ಕಲ್ಪನೆಸಹ ಇರುವದಿಲ್ಲ. ನಿಜವಾಗಿ ಹೇಳುವದಾದರೆ ಪಾಶ್ಚಾತ್ಯ ಭಾಷೆಯಲ್ಲಿ ಪತಿವ್ರತಾ "ಮತ್ತು ಪಾತಿವ್ರತ್ಯ" ಶಬ್ದಗಳಿಂದ ವ್ಯಕ್ತವಾಗುವ ಅರ್ಥವುಳ್ಳ ಶಬ್ದಗಳೆ ಸಿಗುವದಿಲ್ಲ. ಈಸಿದ್ಧಾಂತವು ನಮ್ಮ ಭಾರತೀಯ ಋಷಿಗಳಿಂದಲೇ ಆಗಿರುತ್ತದೆ. ಆ ಸಿದ್ಧಾಂತವೆಂದರೆ '**ಪತಿಭಕ್ತಿಯೆ ಸ್ತ್ರೀಯರಿಗೆ ಪರಮೋಚ್ಚ ಆದರ್ಶವು.**' ಅವಳಿಗೆ ಬೇರೆ ಧಾರ್ಮಿಕ ವಿಧಿ—ವಿಧಾನಗಳ ಅವಶ್ಯಕತೆಯಿಲ್ಲ. ಅವಳಿಗೆ ವಿದ್ಯೆಕಲಿಯುವ ಅವಶ್ಯಕತೆಯಾಗಲಿ, ಲಲಿತ ಕಲಾ ಪ್ರವೀಣಳಾಗುವ ಅವಶ್ಯಕತೆಯಾಗಲಿ ಇರುವದಿಲ್ಲ. ಅವಳು ಅನನ್ಯವಾದ ಪತಿಭಕ್ತಿಯನ್ನು ಸಾಧಿಸಿಕೊಂಡಳೆಂದರೆ, ಪಿತೃಭಕ್ತಿಯು ಪುತ್ರನ ಅತ್ಯುಚ್ಚ ಧರ್ಮವೆಂತೊ ಅಂತೆಯೆ ಅವಳ ಜೀವನವು ಸಫಲವಾಗುತ್ತದೆ. ಅದರಿಂದಲೆ ಅವಳು ಪೂರ್ಣತೆಯನ್ನು ಹೊಂದುತ್ತಾಳೆ. ಈ ಗುಣದಿಂದ ಅವಳಿಗೆ ಐಹಿಕ ಸುಖವಂತು ಸಿಕ್ಕೇಸಿಕ್ಕುತ್ತದೆ. ಅಲ್ಲದೆ ಆಧ್ಯಾತ್ಮಿಕ ಉನ್ನತಿ ಸಹ ಆಗುತ್ತದೆ. ಶಿಷ್ಯನಿಗೆ ಗುರುಭಕ್ತಿಯು ಎಲ್ಲಕ್ಕಿಂತ ಹೆಚ್ಚಿನ ಧರ್ಮವು. ಅವನಿಗೆ ಜ್ಞಾನಸಾಧನೆಗೆ ಇದೇ ಸರ್ವೋತ್ತಮವಾದ ಮಾರ್ಗವಾಗಿದೆ. ಅಂತೆಯೆ ಸ್ತ್ರೀಯಳಿಗೆ ಪತಿಭಕ್ತಿಯೆ ಹೆಚ್ಚಿನ ಧರ್ಮವಾಗಿದೆ. ಪತಿಭಕ್ತಿಯಿಂದ ಅವಳಿಗೆ ಜೀವನದಲ್ಲಿ ಮತ್ತು ಮರಣೋತ್ತರ ಜೀವನದಲ್ಲಿಸಹಿತ ಸುಖದೊರೆಯುತ್ತದೆ.

ಈ ವಿಷಯದ ಬಗ್ಗೆ ಹೋಮರನ ವಿಚಾರದಂತೆ ಹೇಳುವುದಾದರೆ; ಭಾರತೇತರ ದೇಶಗಳಲ್ಲಿ ಈ ಮುಂದೆ ಬರಲಿರುವ ವಿಚಾರದ ಪ್ರಚಾರ

ವಿದೆ. ಅದಾವುದೆಂದರೆ :— "ಸ್ತ್ರೀಯು" ಕೇವಲ ಕಾಮ ಭೋಗದ ವಸ್ತುವಾಗಿರುತ್ತಾಳೆ. ಏಕೆಂದರೆ, ಅವಳು ಶರೀರದಿಂದ ಅಬಲೆ ಯಾಗಿರುತ್ತಾಳೆ. ಆದ್ದರಿಂದ ಯಾರು ಬೇಕಾದವರು ಅವಳನ್ನು ಬಲಾತ್ಕರಿಸಿ ಆಕೆಯನ್ನು ತಮ್ಮ ವಶಪಡಿಸಿಕೊಂಡರೆಂದರೆ ಆಕೆಯು ಅವರಲ್ಲಿ ಆತ್ಮಾರ್ಪಣೆ ಮಾಡಬೇಕಾಗುತ್ತದೆ. ಅವಳಿಗೆ ತನ್ನ ಇಚ್ಛೆಯಾಗಲಿ ಕರ್ತವ್ಯ ಭಾವನೆಯ ಪ್ರಶ್ನೆಯಾಗಲಿ ಏಳುವಂತೆಯೇ ಇಲ್ಲ." ಹಿಂದೂ ಶಾಸ್ತ್ರದಂತೆ ಸ್ತ್ರೀ ಜಾತಿಯ ವಿಚಾರವು ಇದಕ್ಕೆ ಪೂರ್ಣ ಭಿನ್ನವಾಗಿದೆ. ಮನು ಹೇಳುವುದೆಂದರೆ;— "ಸಂತಾನಕ್ಕೆ ಜನ್ಮದಾಯಕ ಸ್ತ್ರೀ ಜಾತಿಯು ಬಲು ಭಾಗ್ಯಶಾಲಿ ಇರುತ್ತದೆ. ಅವರು ಮನೆಗೆ ಜ್ಯೋತಿಯಂತೆ ಇರುತ್ತಾರೆ. ವಸ್ತ್ರಾದಿ ಭೂಷಣಗಳಿಂದ ಅವರನ್ನು ಆದರ ಮಾಡುತ್ತಿರಬೇಕು. ಸ್ತ್ರಿ ಮತ್ತು ಶ್ರೀ ಯಲ್ಲಿ ಆವ ಭೇದವು ಇರುವುದಿಲ್ಲ." ಅದೇ ಮನವು ತಿರುಗಿ ಹೇಳುವುದೆಂದರೆ:— "ಹೆಚ್ಚಿನ ಕಲ್ಯಾಣವನ್ನು ಬಯಸುವ, ತಂದೆ, ಅಣ್ಣ, ಪತಿ, ಮೈದುನ ಮೊದಲಾದವರು ವಸ್ತ್ರಾಭರಣಾದಿ ಭೂಷಣಗಳಿಂದ ಸ್ತ್ರೀಯರನ್ನು ಅಲಂಕರಿಸಬೇಕು. ಸ್ತ್ರೀಯರನ್ನು ಸತ್ಕರಿಸುವ ಕುಲವನ್ನು ನೋಡಿದ ದೇವತೆಗಳೂ ಪ್ರಸನ್ನರಾಗುತ್ತಾರೆ. ಆವ ಕುಲದಲ್ಲಿ ಸ್ತ್ರೀಯರ ಅನಾದರಣೆ ಆಗುತ್ತದೆಯೊ ಅಲ್ಲಿಯ ಎಲ್ಲ ಧರ್ಮ-ಕರ್ಮಗಳೂ ನಿಷ್ಫಲವಾಗುತ್ತದೆ. ಆವ ಕುಲದಲ್ಲಿಯ ಸ್ತ್ರೀಯರು ಶೋಕ ಗ್ರಸ್ಥ ರಾಗುತ್ತಾರೆಯೊ ಆ ಕುಲವು ಶೀಘ್ರವೆ ನಷ್ಟವಾಗುತ್ತದೆ. ಎಲ್ಲಿ ಹೆಂಗಳೆಯರು ಸಂತೋಷದಿಂದ ಇರುತ್ತಾರೆಯೊ ಆ ಕುಲವು ವೃದ್ಧಿ ಹೊಂದುತ್ತಲೆ ಇರುತ್ತದೆ." (ಮನು: ೩|೫೫-೫೭) ಈ ಬಗ್ಗೆ 'ನೀತ್ಸೆ' ಎಂಬವನ ಅಭಿಪ್ರಾಯವೆಂದರೆ :— "ಮನುಸ್ಮೃತಿಯನ್ನು ಬಿಟ್ಟು ಸ್ತ್ರೀಯರ ಬಗ್ಗೆ ಇಷ್ಟು ಹೆಚ್ಚಿನ ಮಮತಾಪೂರ್ಣ ದಯಾಪೂರ್ಣ ಉದ್ಗಾರವನ್ನು ತೆಗೆದಂತಹ ಬೇರೊಂದು ಪುಸ್ತಕವನ್ನು ನಾನು ನೋಡಿಲ್ಲ."

ಪ್ರಜನಾರ್ಥ ಮಹಾಭಾಗಾಃ ಪೂಜಾರ್ಹಾ ಗ್ರಹದೀಪ್ತಯಃ
ಸ್ತ್ರೀಯಃ ಶ್ರೀಯಶ್ಚ ಲೋಕೇಷು ನ ವಿಶೇಷೋಸ್ತಿ ಕಶ್ಚನ||

(ಮನು. ೯|೨೬)

ಪ್ರಾಚೀನ ಕಾಲದ ಬಿಳಿಯ ಜಡೆಯನ್ನು ಧರಿಸಿದ ಋಷಿ ಮುನಿಗಳು ಹೆಂಗಸರ ಮೇಲೆ ಎಂದೂ **ಅತಿಕ್ರಮವಾಗದ ರೀತಿ ಯಲ್ಲಿ ಸನ್ಮಾನಪೂರ್ವಕವಾದ ಮಾರ್ಗದರ್ಶನವನ್ನು ಮಾಡಿ ದ್ದಾರೆ.** ಕೆಲವು ಜನರ ಹೇಳಿಕೆಯಂತೆ "ಭಗವಾನ್ ಶ್ರೀರಾಮಚಂದ್ರನು ಆದರ್ಶ ಪುರುಷನಾದ ಕಾರಣದಿಂದಲೆ ಶ್ರೀ ಸೀತಾದೇವಿಯು ಅವನಲ್ಲಿ ಅಷ್ಟು ಪತಿ ಭಕ್ತಿಯನ್ನು ಇಟ್ಟಿದ್ದಳು."

ಯಾರೇ ಇರಲಿ, ಪತಿಯು ಚರಿತ್ರಹೀನನಾದರೂ ಅವನ ಬಗ್ಗೆ ಪತ್ನಿಯು ಮಂದಭಕ್ತಿಯನ್ನು ಇಟ್ಟುಕೊಳ್ಳಲಾಗದು. ವಾಲ್ಮೀಕಿರಾಮಾ ಯಣದಲ್ಲಿ ನಾವು ನೋಡಿದರೆ, ದಂಡಕಾರಣ್ಯದಲ್ಲಿ ಭಗವಾನ್ ಶ್ರೀರಾಮ ಸೀತಾ ಮತ್ತು ಲಕ್ಷ್ಮಣರು ಅತ್ರಿಮುನಿಯಲ್ಲಿ ಅತಿಥಿಗಳಾಗಿ ಇದ್ದಾಗ ಅತ್ರಿಪತ್ನಿಯಾದ ಅನುಸೂಯಾದೇವಿಯು ಸೀತೆಯ ಹತ್ತಿರ ಹೇಳಿದ್ದೇ ನೆಂದರೆ, "ಸೀತೆ! ನೀನು ಬಹಳ ಒಳ್ಳೆ ಕೆಲಸವನ್ನು ಮಾಡಿದೆ. ಏನೆಂದರೆ, ಪತಿ ಧರ್ಮವನ್ನು ಅನುಸರಿಸುವ ನಿಮಿತ್ತವಾಗಿ ರಾಜಮಹಲಿನ ಭೋಗ-ಭಾಗ್ಯವನ್ನು ತಿರಸ್ಕರಿಸಿರುವೆ! ಅದು ಏಕೆಂದರೆ :— ದುಷ್ಟಸ್ವಭಾವವೂ ಸ್ವೇಚ್ಛಾಚಾರವೂ ಆದ ಪತಿಯನ್ನಾದರು, ಸಾಧ್ವಿಯಾದವಳು, ಪರಮೇ ಶ್ವರನ ರೂಪದಲ್ಲೆ ನೋಡುವಳು. ಅರ್ಥಾತ್; ಪತಿಯು ಎಂಥವನೆ ಇದ್ದರು, **ಅವನನ್ನು ಪರಮೇಶ್ವರನೆಂದು ಭಾವಿಸಿ ಭಕ್ತಿಯಿಂದ ನಡಕೊಳ್ಳುವ ನಾರಿಯು ಪೂರ್ಣತ್ವವನ್ನು ಹೊಂದುವಳು. ಅವ ಳೇ ನಾರಿಯು.** ಅವಳೇ ದೇವಿಯು. ಅವಳಿಗೆ **ನಮಸ್ಕಾರ ಮಾಡು ವವರಿಗು ಉನ್ನತಿಯುಂಟು!** ಪತಿಯು ಶ್ರೇಷ್ಠ ಗುಣ ಸಂಪನ್ನನಾದರೆ, ಪತ್ನಿಯು ಅವನ ಸೇವೆಯನ್ನು ಚನ್ನಾಗಿ ಮಾಡಿ, ತನ್ನ ಉನ್ನತಿಯನ್ನು ಒದಗಿಸಿಕೊಳ್ಳಬೇಕೆಂಬುವುದಲ್ಲ. ಅಂಥವನ ಸೇವೆಯಿಂದ ತಾನೆ ಅವನತಿ ಯಿಂದ ಹೊರಗಾಗುವಳು. ಹಾಗೆಂದು ಆ ಪತಿಸೇವೆಯು ಅನಾವಶ್ಯಕ ವೆಂಬರ್ಥವೂ ಅಲ್ಲ.

ಯಾರೇ ಆಗಲಿ, ಸ್ವತಂತ್ರ ಸತ್ತಾಧಾರಿ ಆಗುವ ಬದಲು, ಪತಿಯು ಆಧೀನದಲ್ಲಿದ್ದರೆ, ಅವನನ್ನು ಹೆಚ್ಚು ವಶಪಡಿಸಿಕೊಳ್ಳಲಾಗುವುದು. ವಿವಾಹಿತ ಜೀವನದಲ್ಲಿ ಸುಖ—ಶಾಂತಿ ಸಾಧಿಸುವ ಮುಖ್ಯವಾದ ಮಾತೆಂದರೆ :— ಒಬ್ಬನು ಹೇಳಬೇಕು, ಮತ್ತೊಬ್ಬನು ಕೇಳಬೇಕು. ಪತಿಯು ಪತ್ನಿಯ ಆದೇಶವನ್ನು ಕೇಳುವುದು ಇಂದಿನ ಜಗತ್ತಿನಲ್ಲಿ ಎಷ್ಟೋ ಉಂಟು. ಇದರ ಬದಲು ಪತ್ನಿಯು ಪತಿಯ ಆಜ್ಞೆಯನ್ನು ಶಿರಸಾ ವಹಿಸುವುದೇ ಸರ್ವತೋಮುಖ ಹಿತವು. ನೈಸರ್ಗಿಕವು. ಇಸಾಯಿ' ಮತವನ್ನು ಒಪ್ಪುವಂಥ ಜಾತೀಯ ವಿವಾಹಗಳಲ್ಲಿಸಹ ಪತ್ನಿಯೇ ಪತಿಯ ಆದೇಶವನ್ನು ಒಪ್ಪುವ ವಚನ ಕೊಡುತ್ತಾಳೆ. ಅಷ್ಟೆ ಅಲ್ಲ, ದಿನಾಲು ಸತಿಯು ಪತಿಯನ್ನು ಪೂಜೆಮಾಡಬೇಕು, ಪತಿಯು ಮೃತಪಟ್ಟನೆಂದರೆ ಪುನರ್ವಿವಾಹದ ಕಲ್ಪನೆಯನ್ನು ಮಾಡಬಾರದು. ಈ ಭಾವನೆಯು ಸಿದ್ಧಾಂತಿಕ ನಿಷ್ಕರ್ಷದ ತನಕ ಸಹ ಮುಟ್ಟಲು 'ಇಸ್ಲಾಮಿ' ಮತವು ಶಕ್ತವಾಗಲಿಲ್ಲ ಹೇಳುವದರಲ್ಲಿ ವಿರೋಧವಾಗಿ ಕಂಡರು, ಸತ್ಯವಾದ ಮಾತೆಂದರೆ; ಹಿಂದೂ ಪರಿವಾರದಲ್ಲಿ, ಎಲ್ಲ ಸ್ತ್ರೀಯಳು ಪತಿಗೆ ಸಂಪೂರ್ಣ ಅಧಿನಗಳಾಗಿರುತ್ತಾಳೆ. ಅಲ್ಲಿ ಅವಳದೇ ಸಂಪೂರ್ಣ ಅಧಿಕಾರವಾಗಿರುತ್ತದೆ. ಪತಿಯದಲ್ಲ.

ಬಂಗಾಲದ ಪ್ರಸಿದ್ಧ ಲೇಖಕರಾದ ಬಂಕಿಮಚಂದ್ರ ಚಟರ್ಜಿಯವರ ಅಭಿಪ್ರಾಯವೇನಂದರೆ :— "ಪರಮಾತ್ಮನು ನಿರಾಕಾರನು, ಅಮಿತನು ಆದ್ದರಿಂದ ಜನಸಾಮಾನ್ಯರಿಗೆ ಅವನು ಗೋಚರಿಸತಕ್ಕವನಲ್ಲ. ಆದ್ದರಿಂದಲೆ ಪೂಜೆಮಾಡಲು ಯೋಗ್ಯವಾದ ಆವುದಾದರೊಂದು ಮೂರ್ತಿರೂಪದ ಅವಶ್ಯಕತೆ ಉಂಟಾಯಿತು. ಹಾಗಿರಲು, ಸತಿಗೆ ಎಲ್ಲಕ್ಕೂ ಹೆಚ್ಚಿನ ಸ್ವಭಾವಾನುಕೂಲ ಪೂಜಾವಸ್ತುವೆಂದರೆ ಅವಳ ಪತಿಯೇ ಎಂಬುದನ್ನು ತಿಳಿದುಕೊಳ್ಳಲು ಹಿಂದೂ ಋಷಿಗಳ ಬುದ್ಧಿಯು ಸಮರ್ಥವಾದುದಕ್ಕೆ ಅವರು ನಿಜವಾಗಿಯು ಪ್ರಶಂಸಾರ್ಹರು! ಸತಿಯು ಪತಿಯನ್ನು ಪರಮೇಶ್ವರನಂತೆ ತಿಳಿದು ಪೂಜಿಸಬೇಕೆಂದು ಋಷಿಗಳ ವಚನಸಾರವು ಇದೆ."

ರಾಮಾಯಣದ ಎರಡು ಶ್ಲೋಕಗಳನ್ನು ಇಲ್ಲಿ ಉದ್ಗರಿಸಲು ಆನಂದವಾಗುತ್ತದೆ. ಆ ಶ್ಲೋಕವೆಂದರೆ, ರಾಮನ ವನವಾಸ ಸಮಯದಲ್ಲಿಯು ಸೀತಾದೇವಿಯ ಉದ್ಗಾರ ವಿರುತ್ತದೆ.

ನಾ ತಂತ್ರೀ ವಿದ್ಯತೇ ವೀಣಾ ನಾ ಚಕ್ರೋ ವಿದ್ಯತೇ ರಥಃ। ನಾ ಪತಿಃ ಸುಖಮೇದೇತ ಯಾ ಸ್ಯಾದಪಿ ಶತಾತ್ಮಜಾ॥ (ಅಯೋಧ್ಯಾ ಕಾಂಡ ೩೯।೨೯)

“ಹೇಗೆ ತಂತಿಯ ಹೊರತು ವೀಣೆಯು ವ್ಯರ್ಥವೊ, ಹೇಗೆ ಚಕ್ರದ ಹೊರತು ರಥವು ನಿರುಪಯುಕ್ತವಾದುದೋ, ಅದರಂತೆಯೇ ಸ್ತ್ರೀಗೆ ನೂರು ಜನ ಪುತ್ರರಿದ್ದರೂ ಪತಿಯ ಹೊರತು ಸುಖವು ದುಸ್ತರವಾದದೇ ಸರಿ.”

ಮಿತಂ ದದಾತಿ ಹಿ ಪಿತಾ ಮಿತಂ ಭ್ರಾತಾ ಮಿತಂ ಸುತಃ॥ ಅಮಿತಸ್ಯ ತು ದಾತಾರಂ ಭರ್ತಾರಂ ಕಾ ನ ಪೂಜಯೇತ್॥ (ಅಯೋಧ್ಯಾ ಕಾಂಡ ೩೯।೩೦)

“ತಂದೆ ಅಣ್ಣ ತಮ್ಮ ಮಕ್ಕಳು ಕೊಡುವ ದಾನವು ಮರ್ಯಾದಿತ (ಇಷ್ಟೇ ಎನುವ ಗಡಿ) ಇರುತ್ತದೆ. ಪತಿಯಾದರೋ!, ಸತಿಗಾಗಿ ಮಿತವಿಲ್ಲದಷ್ಟು ದಾನ ಕೊಡುತ್ತಾನೆ. ಅಂಥವನ ಪೂಜೆಯನ್ನು ಯಾರುಮಾಡಲಿಕ್ಕಿಲ್ಲ! ?

ನೈಸರ್ಗಿಕ ನಾರಿ

ಗಂಡು ಮತ್ತು ಹೆಣ್ಣುಗಳಲ್ಲಿ ನಿಕಟ ಸಂಬಂಧವಿದೆ. ಜಗತ್ತಿನಲ್ಲಿ ಬ್ರಹ್ಮನ ಸೃಷ್ಟಿಯಿಂದ ಉತ್ಪತ್ತಿಯಾಗಿರುವ ಗೋವು ವೃಷಭ ಆನೆ ಅಶ್ವ ಕೋಣ ಸಿಂಹ ವ್ಯಾಘ್ರ ವರಾಹ ಕರಡಿ ಫಾರಿವಾಳ ಕಾಗೆ ಗುಬ್ಬಿ ಕೀಟ ಕ್ರಿಮಿ ಪತಂಗ ಮನುಷ್ಯ ಈ ಮೊದಲಾದ ಜೀವ ರಾಶಿಗಳ ಜನನಿಯು. ಆಯಾಯ ಜಾತಿಯು ಸ್ತ್ರೀ ವಾಚಕವಾದ ದೇಹ

ದಿಂದಲೇ ಉಂಟಾಗುತ್ತದೆ. ಈಶ್ವರನು ಹೆಂಗಸಿನ ದೇಹದ ತಯಾರಿಕೆ ಯಲ್ಲಿ ಅಂತಹ ಒಂದು ವಿಶೇಷವಾದ ಆಕಾರವನ್ನಿಟ್ಟು ಅದು ಆವರೀತಿ ಸೂಕ್ಷ್ಮದೃಷ್ಟಿಯಿಂದ ನೋಡಿದರು ಸಹ ಅಂಗ ಪ್ರತ್ಯಂಗಗಳಲ್ಲಿ ಅಂಶ ರೂಪದಿಂದ ಭಿನ್ನ ಭಿನ್ನವಾಗಿಟ್ಟಿರುವನು. ಪ್ರಕೃತಿಯ ಕ್ರಿಯೆಯಿದು. ಸಾದಾ ರಣ ಜನತೆಯು ಈ ಮಾತನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ.

ಧರ್ಮ-ಶಾಸ್ತ್ರಗಳ ಪರವಾಗಿ ಬಹು ಅರ್ಥಗರ್ಭಿತವಾದ ಒಂದೆ ರಡು ಮಾತನ್ನು ಇಲ್ಲಿ ಹೇಳಬಯಸುತ್ತೇನೆ.

"ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಮ್"

''ಧರ್ಮ ತತ್ವದ ರಹಸ್ಯವನ್ನು ಪ್ರಕಟಿಸುವುದು ಅಸಾಧಾರಣವಾದ ಮಾತಾಗಿದೆ. ಅದು ಸಮಾಧಿ ಗಮ್ಯ (ದೃಷ್ಟಿಯಿಂದ ತಿಳಕೊಳ್ಳುವ್ರ ಪಾಗಿದೆ. ಅದರಿಂದಲೇ 'ಧರ್ಮ-ಶಾಸ್ತ್ರಗಳಲ್ಲಿ ಹೇಳಿದಂತೆ ನಡಕೊಳ್ಳಬೇಕು, ಎಂದು ಸನಾತನಿಗಳಲ್ಲು ಹಿರಿಯರಾದವರು ಬೋಧಿಸಿರುವರು. ಅವರು ಹೇಳಿದ ಗೂಢವಾದ ಈ ಮಾತಿನ ಅರ್ಥವನ್ನು ನಡಕೊಂಡೇ ತಿಳಕೊ ಳ್ಳಬೇಕು. ಯಾವ ದೇಶದಲ್ಲೆ ಆಗಲಿ, ಯಾವ ಜಾತಿ–ಮತ–ಪಾಂಥಿಗ ರಲ್ಲೆ ಆಗಲಿ; ಸಮಾಜ ವ್ಯವಸ್ಥಾ, ಆರ್ಥಿಕ ವ್ಯವಸ್ಥಾ ಧರ್ಮ ವ್ಯವಸ್ಥಾ, ಶಾಸನ ವ್ಯವಸ್ಥಾ, ವೈಯಕ್ತಿಕ ವ್ಯವಸ್ಥಾ ಮೊದಲಾದ ವ್ಯವಸ್ಥೆಗಳಲ್ಲಿ ಒಂದೇ ಒಂದಾದ ಶ್ರುತಿ—ಸ್ಮೃತಿಗಳಿಂದಲೆ ಆಗಬೇಕಾದದ್ದು. ಅದಾಗಲೆ ಹೆಚ್ಚಿನ ಸ್ಥಾನ—ಮಾನಗಳನ್ನು ಪಡೆಯುವುದು.

ಈ ಬಗೆಯ ಗುಟ್ಟನ್ನು ಕೆಲವರು ಅರಿತು, ಕೆಲವರು ಅರಿಯದೆ ಕೆಟ್ಟುಹೋಗುವರು. ಅಧುನಿಕ ಸ್ತ್ರೀ ಪುರುಷರಂತು; ಸಗೋತ್ರವಿವಾಹ; ಅಸವರ್ಣವಿವಾಹ, ವಿಧವಾವಿವಾಹ, ಸ್ವಚ್ಛಂದ ವಿಹಾರಾದಿ ಪಾಶ್ಚಾತ್ಯ, ಧರ್ಮ ಪಾಲನೆಯಲ್ಲಿ ಮುಳುಗಿದ್ದು, ಕಲ್ಯಾಣ ಕಾರಕವಾದ ಸತೀತ್ವ ವನ್ನೂ ಪುರುಷತ್ವವನ್ನೂ ಘಾತಮಾಡಿಕೊಂಡರೆನಲು ಪಶ್ಚಾತ್ತಾಪವಾಗು ವುದು. !!!

ಯಾವ ಪ್ರಾಣಿಗಳಲ್ಲಿ ಆಗಲಿ ನಾರೀ ಜನ್ಮವೆಂದರೆ ಕಷ್ಟತಮ. ಪ್ರಸವ ಕಾಲವಂತು ಮರಣದ ಎಷ್ಟೋಪಟ್ಟು ಹೆಚ್ಚು ಕಷ್ಟಮಯ! ಇಂತಹ ಎಲ್ಲ ಬಗೆಯ ಕಷ್ಟ ನಿವಾರಣೆಗಾಗಿಯೆ ಧರ್ಮ-ಶಾಸ್ತ್ರಗಳು ಪಾತಿವ್ರತ್ಯ ಪಾಲನವನ್ನು ಬೋಧಿಸುತ್ತಿರುವುದು. ಹಾಗಿರುವ ಪಾತಿವ್ರತ್ಯವನ್ನು ಯಾರು ರಕ್ಷಿಸುವರೋ ಅವರಲ್ಲಿ ಕಾಮವಾಸನೆಯು ಬಹುಬಗ್ಗೆಯಾಗಿ ಬಾಧಿಸದಿರಲಾರದು. ಆ ವಾಸನಾ ಪ್ರಾಬಲ್ಯದಿಂದ ಮರಣಕಾಲದಲ್ಲು ಅದೇ ಭಾವನೆಯಲ್ಲಿ ಜನ್ಮ ತ್ಯಾಗವಾಗಿ, ಮರುಜನ್ಮವಾದರು ದುಃಸಹನೆಯು ಕಾಮವಾಸನೆಯಿಂದಲೆ ಬರುವುದು. ಅಷ್ಟೆಅಲ್ಲ, ಪಶುವೊದಲಾದ ತಿರ್ಯಗ್ಯೋನಿಯು ಬರುವದೂ ಉಂಟು.

ನರ-ನಾರಿಯರಲ್ಲಿ ಭೇದ.

ಗೃಹಸ್ಥ ಜೀವನದ ಜೀವನವನ್ನು ಸಾಗಿಸಬೇಕಾದರೆ ಬಹು ತ್ರಾಸದಾಯಕವು. ಒಮ್ಮೊಮ್ಮೆ ಅತಿ ಆಪತ್ತಿಗೀಡಾಗಲೂ ಬೇಕಾಗುವುದು. ಒಮ್ಮೆ ಇತಿ ಸಂಪತ್ತನ್ನೂ ಭೋಗಿಸಲಾಗುವುದು. ವ್ಯವಹಾರಿಕ ದೃಷ್ಟಿಯಿಂದ ನೋಡುತ್ತ ಹೋದ ಹಾಗೆ ನರ-ನಾರಿಯರ ಸಹನೆ ಶಾಂತಿ ದುಡಿಮೆ ಅಧಿಕಾರ ಬುದ್ಧಿ ಮೊದಲಾದ ಪ್ರತಿ ಸ್ಥಾನ-ಮಾನಗಳಲ್ಲೂ ನಾರಿಯಳೇ ಮೇಲೆನಿಸುವಳು. ಅದರಿಂದಲೇ ಗೃಹೇಶ್ವರಿ ಎನ್ನುವುದು.

ಸ್ತ್ರೀ-- ಪುರುಷ ಇವರೊಳಗಿನ ಭೇದವನ್ನು ನೋಡಲಾಗಿ ಪುರುಷನು ಏಕರೂಪಿ, ಪ್ರಕೃತಿಯು ಬಹುರೂಪಿ. ಪುರುಷನು ಸ್ವತಂತ್ರ, ಪ್ರಕೃತಿಯು ಅವನ ಆಶ್ರಿತಳು. ಪುರುಷ ಚೇತನಿ, ಪ್ರಕೃತಿ ಜಡ ಪುರುಷ ಪ್ರೇರಕ, ಪ್ರಕೃತಿ ನಿಯೋಜ್ಯ. ಹೀಗಿರುವ ಪ್ರಕೃತಿ- ಪುರುಷ ಸಂಯೋಗದಿಂದಲೆ ಜಗತ್ತಿನ ಉತ್ಪತ್ತಿ. ಸ್ತ್ರೀಯಳಿಗು ಪುರುಷನಿಗು ನಿಕಟ

ಸಮ್ಮಂಧವಿದೆ ಎನುವುದು, ಸ್ತ್ರೀಶಬ್ದಾರ್ಥವನ್ನೂ ಪುರುಷ ಶಬ್ದಾರ್ಥವನ್ನೂ ತಿಳಿದಾಗಲೆ ಗೊತ್ತಾಗುವುದು. ಭಗವಂತನು ತನ್ನ ಗೀತೆಯಲ್ಲಿ ಹೇಳಿದ್ದೇನೆಂದರೆ, "ತ್ರಿಗುಣಾತ್ಮಕವಾದ ನನ್ನ ಪ್ರಕೃತಿಯಲ್ಲಿ ಸಮಸ್ತ ಭೂತಗಳ ಯೋನಿಯಿರುವುದು. ಅವುಗಳಲೆಲ್ಲಾ ನಾನು ತಂದೆಯಾಗಿ ಬೀಜವನ್ನು ಬಿತ್ತುತ್ತೇನೆ. ಮಾತೃಶಕ್ತಿ ಮತ್ತು ಪಿತೃಶಕ್ತಿ ಇವೆರಡೂ ಪುಂ, ಸ್ತ್ರೀ ವಾಚಕದಲ್ಲೆ ಆಗಿವೆ. ಈ ಎರಡರ ಯೋಗದಿಂದಲೆ ಈ ಸೃಷ್ಟಿಯು ಆಗುತ್ತ ಬಂದಿದೆ."

ಗರ್ಭಧಾರಣ ಸಮಯದಿಂದಲಂತು ಸ್ತ್ರೀ ಮತ್ತು ಪುರುಷನ ವಿಕಾಸದ ರೀತಿಯು ಬೇರೆ ಬೇರೆ ಆಗುತ್ತದೆ. ಅವರಲ್ಲಿ ಆಹಾರ ವಿಹಾರದ ಪರಿಣಾಮವೂ ಬೇರೆ ಬೇರೆ ಇರುತ್ತದೆ. ಗಂಡಸು ಮತ್ತು ಹೆಂಗಸಿನ ದೇಹ ರಚನೆಯೂ ಶರೀರದ ಕ್ರಿಯೆಯೂ ಅದರಂತೆಯೆ ಮನೋವ್ಯಾಪಾರದಲ್ಲಿ ಸಹ ಯಾವ ಅಂತರವಿದೆಯೋ ಅವರ ವ್ಯವಹಾರ ವಿಹಾರದಲ್ಲು ಅದೇ ಅಂತರ ಇದೆ. ಪುರುಷನ ಅಭಿಮಾನ ಕ್ಕಿಂತಲು ಸ್ತ್ರೀಯಳ ಅಹಂಕಾರವು ಹೆಚ್ಚಿರುತ್ತದೆ. ಸ್ತ್ರೀಯಳ ವಾಸಸ್ಥಾನವು ಪರಿಶುದ್ಧ ಮತ್ತು ಪ್ರಶಸ್ತ ವಿರುತ್ತದೆ. ಪುರುಷನ ಉದ್ಯೋಗಗಳು ವಿಶೇಷವಾಗಿ ಕ್ರಿಯಾಶೀಲವಾಗಿರುತ್ತದೆ, ಸ್ತ್ರೀಯಳದು ಅವಿಶೇಷವಾಗಿರುತ್ತದೆ. ನಾರಿಯಳ ಧಾರಣಾ ಶಕ್ತಿ ಹಾಗೇನೆ ಸಣ್ಣ ಸಣ್ಣ ಮಾತನ್ನಾದರೂ ರಕ್ಷಿಸುವುದು, ಆಳವಾಗಿರುತ್ತದೆ.

ಭಗವಾನ್ ಮನುವು, ನಾರಿಯರ ಸತ್ಕಾರದಿಂದ ಮಹಾಪುಣ್ಯವನ್ನೂ ಅಸತ್ಕಾರದಿಂದ ಮಹಾ ಪಾಪವನ್ನೂ ಹೇಳಿರುವನು. ಯಾಕಂದರೆ

ರುದ್ರೋ ನರೋ ಉಮಾ ನಾರೀ ತಸ್ಮೈ ತಸ್ಮೈ ನಮೋ ನಮಃ

"ನರ ರೂಪದಿಂದಿರುವ ರುದ್ರನಿಗು, ನಾರೀ ರೂಪದಿಂದಿರುವ ರುದ್ರಾಣಿಗು ನಮಸ್ಕಾರವು," ಎಂದು ರುದ್ರ ಹೃದಯೋಪನಿಷತ್ತಿನಲ್ಲಿದೆ. ಅಂದಾಗ

ರಮಣಿಯರೆಲ್ಲ ಉಮಾ ಅಂಶವೆಂದು ತಿಳಿದು ಅವರನ್ನು ತಿರಸ್ಕರಿಸ ಲಾಗದು. ಸ್ತ್ರೀ ಯಿಂದಲೆ ಧರ್ಮ ಅರ್ಥ ಕಾಮ ಈ ಮೂರೂಸಿದ್ಧಿಯಾಗು ವುದು. ಅದರಿಂದಲೆ ತ್ರಿವರ್ಗಸಾಧಕಗಳೆಂದು ಹೆಸರು. ವಿವಾಹಕಾಲದಲ್ಲಿ ಅದರಂತೆಯೇ ಪ್ರತಿಜ್ಞೆ ಮಾಡಿಸುವರು. ಅವಳೇ ಮನೆಗೆ ಯಜಮಾನತಿ ಯಾಗಿರುವುದರಿಂದ **'ಗೃಹಿಣಿ'** ಎನ್ನುವ ಹೆಸರು ಬಂದಿದೆ.

ಪೂರೈಸುವುದು, ವಿದ್ಯಾಭ್ಯಾಸ, ಮದುವೆ, ಮುಂಜಿ, ಮೊದಲಾದವು ಗಳ ನಿರ್ವಾಹಕತೆಯಲ್ಲಿ ಎಷ್ಟೆಷ್ಟು ಕಷ್ಟವಾದರು ದಕ್ಷತೆ ವಹಿಸಿ ಕೊನೆ ಗಾಣಿಸುವಳು. ಅದೇ ಅಷ್ಟೇ ಮಕ್ಕಳಿದ್ದು ಅಷ್ಟೆ ಕೆಲಸವನ್ನು ಓರ್ವ ವಿಧುರ (ಹೆಂಡತಿ ಸತ್ತವ)ನಿಂದ ನಡೆಸಲು ಅಸಾಧ್ಯವು. ಅಷ್ಟೇ ಅಲ್ಲ, ಅಂತಹ ದುರ್ದೆಸೆಯ ಸಮಯದಲ್ಲಿ ಆತನು ಮನೆ—ಮಾರುಗಳನ್ನು ಬಿಟ್ಟು ಮಕ್ಕಳು ಮರಿಗಳನ್ನು ಪರಾಧೀನ ಪಡಿಸಿ, ಭೈರಾಗಿಯೆ ಆಗಿ, ಕಾಡು—ನಾಡೆನ್ನದೆ ತಿರುಗುತ್ತ ತಿರಿದುಣ್ಣುವವರ ಅಲ್ಲವೆ; ಇನ್ಯಾವ ಬಗೆಯಿಂದಲಾದರು ಜೀವಿ ಸುವಂಥವರ ಉದಹರಣೆಗಳು, ಓದುಗರಿಗು ಎಷ್ಟೊ ಸಿಗಬಹುದು.

ಗಂಡನಕಿಂತಲು ಹೆಂಡತಿಗೆ ಪುತ್ರಪ್ರೇಮವು ಹೆಚ್ಚಿರುವುದು. ಅದ ರಿಂದಲೆ ಕೆಲವು ಸಮಯ ಗಂಡನು ಆಜ್ಞಾಪಿಸುವ ಯಾವ ಕೆಲಸವನ್ನಾ ದರು ಬದಿಗಿಟ್ಟು, ಕಂದನ ಸೇವೆಯನ್ನು ಮಾಡಿ ಬಿಡುವಳು. ಇದರಿಂದ ಪಾತಿವ್ರತ್ಯಕ್ಕೆ ಭಂಗಬರಲಾರದು. **ಪತಿಯ ಆತ್ಮವೆ ಪುತ್ರರೂಪದಿಂದ ಉದಿಸುವುದೆಂದು ಇರುವುದರಿಂದ ಮಕ್ಕಳ ಸೇವೆಯಾದರೂ ಪತಿ ಸೇವೆಯೇ ಆಗುವುದು.** ಹೀಗೆ ಪತಿ—ಸುತರ ಸೇವೆಯು ಸತಿಯಳಿಗೆ ಅಭಿನ್ನವಾದದ್ದು.

ಒಟ್ಟಿನಲ್ಲಿ, ನಾರಿಯು ಶಾರೀರಿಕರಚನೆಯಲ್ಲಿ ಆಂತರಿಕ ರಚನೆಯು, ವಿಶೇಷತಃ ವಿರುವುದು. ಅದೇ ಪ್ರಕಾರ ಬಾಹ್ಯರಚನೆಯೂ ವಿವಿಧವೂ ವೈವಿಧ್ಯವೂ ವೈಶೇಷಿಕವೂ ಇರುವುದು. ಹಾಗಿರುವ ನಾರೀ ತತ್ವವನ್ನು ಅರಿದುಕೊಳ್ಳಲಾರದೆ; ಎಂಥ ಹೆಣ್ಣೇ ಇರಲಿ; ತಿನ್ನೋದು, ಉಣೋದು, ಕುಸಂಗ, ಪತಿವಿರಹ, ಸ್ವೇಚ್ಛಾಚಾರ, ಪರಗೃಹ ನಿವಾಸಾದಿ

ಕ್ರಿಯೆಗಳಲ್ಲಿ ಮಗ್ನಳಾದಳೆಂದರೆ, ಅಂಥವಳು ಪದಭ್ರಷ್ಟಳಾಗುವುದರಲ್ಲಿ ಏನಾಶ್ಚರ್ಯವಿಲ್ಲ ! ಪೇಶನೇಬಲ್ ಪಾಶ್ಚಿಮಾತ್ಯ ಸ್ತ್ರಿಯೋರ್ವಳು, ತನ್ನ ಹೊಟ್ಟೆಯ ಮಗುವು ಕೆಮ್ಮಿನಿಂದ ಪೀಡಿತವಾಗಿರುವಾಗ, ರಾತ್ರಿಯಲ್ಲಿ ಆಕೆಯ ಸುಖನಿದ್ರೆಗೆ ತೊಂದರೆಯಾಗುತಿತ್ತು.

ಅದನ್ನು ಸಹಿಸಲಾರದೆ ಅವಳು ಆ ಮಗುವನ್ನು ಕೊಂದುಬಿಟ್ಟಳೆಂದು ಒಂದು ಪತ್ರಿಕೆಯು ಪಶ್ಚಾತ್ತಾಪ ಪಡುತ್ತಿತ್ತು!

ತಾಯ್ತನದ ಇಂಥ ವಿನಾಶವನ್ನು ಕೇಳಿದಾಗ ಹೆಂಗಸರಿಗೆ ಸರಿಯಾದ ಶಿಕ್ಷಣವಿಲ್ಲದಿರುವುವೇ ಅಂಥ ಅನರ್ಥಕ್ಕೆ ಕಾರಣವೆಂದೂ ಇದರಲ್ಲಿ ಹೆಣ್ಣು ಮಕ್ಕಳ ಚಿಕ್ಕಂದಿನಲ್ಲಿ; ಪಾಲಕರ ಅಜಾಗ್ರತೆಯನ್ನು ಅನುಲಕ್ಷಿಸಿದಾಗ ಯಾರಿಗಾದರೂ ಒಡಲು ಬೇಯದಿರಲಾರದು!! ವ್ಯಾಕುಲವು ಸಂಘಟಿಸದಿರಲಾರದು!

ನಾರಿಯರ ಶಿಕ್ಷಣದ ಸಭ್ಯತೆ, ಸತ್ಯತೆ, ಸ್ವಚ್ಛತೆ ಸಹನಶೀಲತೆ, ಶಾಂತಿ ಸೌಜನ್ಯ ಸಂಯಮ ಇವನ್ನೆಲ್ಲ ಮೈಗೂಡಿಸಿಕೊಳ್ಳುವುದಿರಬೇಕು ಇಲ್ಲದಿದ್ದರೆ, ಸ್ತ್ರೀಯರ ಮಾತೃತ್ವದ, ಸತೀತ್ವದ ಆದರ್ಶವು ನಿಲ್ಲಲಾರದು. ಒಂದು ವೇಳೆ ನಾರಿಯು ತನ್ನ ಸ್ವಾಭಾವಿಕವಾದ ತ್ಯಾಗದ ಆದರ್ಶತೆಯನ್ನು ಮರೆತಳೆಂದರೆ; ಅವಳ ಸ್ನೇಹಮಯೀ ಮಾತಾ, ಪ್ರೇಮಮಯೀ ಸತೀ, ತ್ಯಾಗಮಯೀ ದೇವೀ ಎನ್ನುವ ಗೌರವದ ಬಿರುದಾವಳಿಗಳು ಕಳೆದು ಹೋಗುವವು.

ನೆನಪಿನಲ್ಲಿಡತಕ್ಕ ಮಾತು :— ಬಿಳೀಜನರ ಭಾಷೆಯನ್ನು ಅಭ್ಯಸಿಸಲು ಹೊರಟು ಬಿ, ಎ, ಎಂ, ಎ ವರೆಗೆ ಕಲಿತರು ಪಂಡಿತಳಾಗುವದಿಲ್ಲ. ಇಷ್ಟೆ ಅಲ್ಲ; ಅವಳಲ್ಲಿ ಯಾವ ದಿವ್ಯಗುಣವೂ ಬರುವುದಿಲ್ಲ. ಅದರಲ್ಲಾಗುವ ಲಾಭವೆಂದರೆ; ವಿದೇಶಿಯರ ಪದ್ಧತಿಯಂತೆ ನಡೆಯುವದರಲ್ಲಿ ಶಾರೀರಕ ಆಪತ್ತುಗಳು ಒದಗುವದಿಲ್ಲ. ಹಾಗಿದ್ದರೂ ಆ ಸಂಸ್ಕೃತಿಯ ಫಲಶ್ರುತಿಯನ್ನು ಹೇಳುವದಾದರೆ :— ಸಾಮಾಜಿಕದ ನೈತಿಕ ಮತ್ತು ಧಾರ್ಮಿಕ ದೃಷ್ಟಿಯ ಯಥೇಷ್ಟ ಹಾನಿಯಾಗದಿರದು. ಇದೆಲ್ಲ ನೋಡಿದಾಗ ವಿದ್ಯಾಭ್ಯಾಸವೇ ಅಪ್ರಯೋಜಕವೆನಿಸುವದು.

ಮಾತೆಯರೆ! ಮಹಾಭಾರತಕಾಲದ ದ್ರೌಪದಿಯೂ ದೊಡ್ಡ ವಿದ್ವತ್ ಸ್ತ್ರೀಯಾಗಿದ್ದಳು. ಅವಳು ರಾಜ್ಯವಾಳುವಷ್ಟು ಶಕ್ತಿವಂತ ಸ್ತ್ರೀಯಾಗಿದ್ದಳು. ಭಾರತ ಯುದ್ಧದ ಕಾಲಕ್ಕೆ ಸಮಯೋಚಿತ ಆಲೋಚನೆಯನ್ನು ಮಾಡುತ್ತಿರುವ ಪತಿಗಳಿಗೆ ಆಗಾಗ ಸಭೆಗೆ ಬಂದು ಸೂಚನೆಯನ್ನೂ ಕೊಡುತ್ತಿದ್ದಳು. ಪರಂತು ತಾರತಮ್ಯಕ್ಕನುಸರಿಸಿ ವ್ಯವಹರಿಸುವುದರಿಂದ ಸದ್ಗುಣಿಯೆನಿಸಿಕೊಂಡೆ ಇದ್ದಳು. ಅಂದರೆ, ಗರತಿಯಾಗಿದ್ದಳು. ಅದರಂತೆ, ಕೃತಯುಗದ ಅಹಲ್ಯಾದೇವಿಯು, ಪಂಡಿತಳೂ ಧರ್ಮಶೀಲಳೂ ಆಗಿದ್ದು ಜನಹಿತವನ್ನು ಸಾಧಿಸುತ್ತಲಿದ್ದಳು. ಇಂದಿನ ನಾರಿಯರಾದರೂ ಆ ಬಗೆಯ ಶಿಕ್ಷಣ ಹೊಂದಬೇಕು. ಅದೇ ಸುಶಿಕ್ಷಣವು. ಹಾಗಿರುವುದರಿಂದ ಇಂದಿನ ಜಗತ್ತಿನಲ್ಲಿ ಸ್ತ್ರೀ ಶಿಕ್ಷಣವು ಆಮೂಲಾಗ್ರ ಪರಿವರ್ತನೆ ಆಗಬೇಕು. ಹೀಗೆ ಶಿಕ್ಷಣ ಹೊಂದುವುದರಿಂದ ಮಹಿಳೆಯರಿಗೆ ಸ್ವರೂಪಜ್ಞಾನವೂ ಆಗಿ, ದೈಹಿಕ ಸುಖವನ್ನೂ ದೈವಿಕ ಸುಖವನ್ನೂ ಸಾಮೂಹಿಕ ಹಿತವನ್ನೂ ಭೋಗಿಸಲು ಅಧಿಕಾರಿಗಳಾಗುವರು !

ಸಹ ಶಿಕ್ಷಾ

ಬಹುತೇಕ ಎಲ್ಲ ಧಾರ್ಮಿಕವಿದ್ವಾಂಸರು ಮತ್ತು ಮಹಾನುಭಾವರು ಅಭಿಪ್ರಾಯ ಪಡುವುದೆಂದರೆ :— ವರ್ತಮಾನಕಾಲವು ಸ್ತ್ರೀಯರಿಗೆ ಧರ್ಮಹೀನವಾಗಿರುವುದು. ಶಿಕ್ಷಣದಲ್ಲಿ ಪ್ರತಿಕೂಲವಾಗಿರುವುದು. ಅಲ್ಪಸ್ವಲ್ಪ ಅನುಕೂಲವಾಗಿದ್ದರೂ ನರ-ನಾರಿಯರು ಒತ್ತಟ್ಟಿನಿಂದ ಕಲಿಯುವುದರಲ್ಲಿ ಅನರ್ಥವುಂಟಾಗುವುದು! ಹೇಗೆಂದರೆ :- ಈ ಸಹಶಿಕ್ಷಣದಲ್ಲಿ ಆಗುವ ಪರಿಣಾಮವು ಕೆಟ್ಟತರದ್ದು. ಇದನ್ನು ಈಗಿನಕಾಲದಲ್ಲಂತು ಬಲು ಸುಲಭವಾಗಿಯೆ ಪ್ರತ್ಯಕ್ಷ ನೋಡಲಾಗುವುದು ! ನೋಡಿ, ಹೆಣ್ಣು-ಗಂಡುಮಕ್ಕಳು ಒಕ್ಕಟ್ಟನಿಂದ ಶಿಕ್ಷಣಹೊಂದುತ್ತಿರುವಾಗ ಅವರೊಳಗೆ ಮೊದಮೊದಲು ಪ್ರೇಮವೂ ಆಮೇಲೆ ಮೋಹವೂ ಬಲಿಯು

ತ್ತಿದ್ದು, ಅದೇಮಾರ್ಗವಾಗಿ ಹೋಗುತ್ತ ಆ ವಾಸನೆಯು ಆಗ್ರಹಪಡಿಸುವುದು.

ಬಲ್ಲಾದವರು ಈ ಬಗೆಯ ಯಾವ ವಿಷಯವನ್ನು ಅವನತಿಯೆಂದು ತಿಳಿಯುತ್ತಾರೊ ಅದೇ ವಿಷಯವನ್ನು ಇಂದಿನ ಭಾರತಪುತ್ರ-ಪುತ್ರಿಯರು ಉನ್ನತಿಯೆಂದಾಗಲಿ, ಮಾನ್ಯತೆಯೆಂದಾಗಲಿ ಗೌರವಿಸುತ್ತಿರುವರು. ಇದಕ್ಕೆ ಕಾರಣವೆಂದರೆ; ಪರದೇಶಿಗರ ಸಹವಾಸವು ಎಷ್ಟೋಕಾಲದವರೆಗೆ ನಮ್ಮಲ್ಲಿ ಉಂಟಾಗಿದ್ದು ಅವರಲ್ಲಿರುವ ಗುಣ-ಧರ್ಮಗಳು ನಮ್ಮ ಹೃದಯದಲ್ಲಿ ತಾಂಡವವಾಡುವದು. ಹೀಗಿರುವಾಗ ಸನಾತನೀಯ ಆರ್ಯರು ಹಾಕಿಕೊಟ್ಟ ಸಂಪ್ರದಾಯವಿರುದ್ಧ ಸ್ವಯಂ ಅಗ್ರೇಸರರಾಗಿರಲು ಅಂತಯೆ ಎರಡನೆಯವರಿಗೆ ಆ ಮಾರ್ಗವಾಗಿಯೆ ಒಯ್ಯಲು ಪ್ರಯತ್ನಿಸುವುದರಲ್ಲಿ ಏನುದೊಡ್ಡಿತು ?

ಈಗ ಸಮಾನ ಶಿಕ್ಷಣದ ಕುರಿತು ಸ್ವಲ್ಪ ವಿಚಾರಿಸವ! :- ವಿದ್ಯೆಯು ಮಾನವನ ಹೃದಯ ಭಾಂಡಾರದಲ್ಲಿ ಅಡಗಿರುವ, ಬೆಲೆಗಟ್ಟಲಾರದ ಧನವಾಗಿರುತ್ತದೆ. ಈ ಧನವನ್ನು ಬಳಕೆಯಲ್ಲಿ ತಂದುಕೊಂಡರೆ; ಜೀವನದ ಪವಿತ್ರತೆಯನ್ನೂ ಸರಳತೆಯನ್ನೂ ಸಾರ್ಥಕತೆಯನ್ನೂ ಅಭ್ಯುದಯಗೊಳಿಸುವುದು! ಆದರೆ....ಪುರುಷ ಮತ್ತು ಸ್ತ್ರೀಯರಲ್ಲಿರುವ ಶಕ್ತಿಯು ಒಂದಾಗಿರುವುದೆ? ಪುರುಷ ಮತ್ತು ಸ್ತ್ರೀಯರ ಶಕ್ತಿವಿಕಾಸದ ಕ್ಷೇತ್ರವು ಒಂದಾಗಿರುವುದೇ? ಸ್ತ್ರೀಯರಿಗೆ ಎಲ್ಲ ವಿಷಯಗಳಲ್ಲಿಯು ಶಿಕ್ಷಣ ಸ್ವೀಕರಿಸುವ ಅವಶ್ಯಕತೆಯಿದೆಯೆ? ಇವುಗಳನೆಲ್ಲ ಆಳವಾಗಿ ವಿಚಾರಿಸುವುದಾದರೆ ಯೋಗ್ಯವಾದ ಉತ್ತರವು ಈ ಕೆಳಗಿನಂತೆ ಸಿಗುತ್ತದೆ.

ಸ್ತ್ರೀ-ಪುರುಷರಿಬ್ಬರ ಶರೀರ ರಚನೆಯಲ್ಲಿ ಭೇಧವಿದೆ. ಅವರಿಬ್ಬರ ಹೃದಯದಲ್ಲಿ ಭೇಧವಿದೆ. ಇಬ್ಬರ ಕ್ರಿಯಾಕ್ಷೇತ್ರದಲ್ಲು ಭಿನ್ನ ಭಿನ್ನವಿರುತ್ತದೆ. ಈವಾಗ ಈ ಪರಿಯ ಭೇದವನ್ನು ಮನಸ್ಸಿನಲ್ಲಿ ತಿಳಿದು ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕು.

ಸ್ತ್ರೀಯರಲ್ಲಿ ಸ್ವಾಭಾವಿಕಗುಣವು ಬಹುಬಗೆಯಾಗಿರುವುದು. ವಯಾ ಮನುಷ್ಯನು ಶ್ರೇಷ್ಠನೆನಿಸಿರುವನೋ ಅವನು ಮಾರ್ಗತಪ್ಪಿ ನಡೆದಾಗ ಅಷ್ಟೇ ಅಧಿಕೃತಹಾನಿಗೀಡಾಗುವನು. ಅದರಿಂದ, ಉನ್ನತಿಯನ್ನು ಬಯಸುವ ನಾರಿಯು; ತ್ಯಾಗ, ಸರಳತಾ, ತಪ, ಸೇವಾ ಈ ಮೊದಲಾದ ಅನೇಕ ಆದರ್ಶಗುಣಯುತಳಾಗಿರಬೇಕು. ಸ್ತ್ರೀ-ಪುರುಷರ ಶರೀರರಚನೆಯಲ್ಲಿ, ಒಬ್ಬರಿಗೊಬ್ಬರು ಆಕರ್ಷಿಸುವ ಒಂದುಬಗೆಯ ವಿಲಕ್ಷಣ ಶಕ್ತಿಯುಂಟೆನುವುದು ಪ್ರಸಿದ್ಧವಿದೆ. ಹಾಗಿರಲು, ಪ್ರತಿನಿತ್ಯವು ಇಬ್ಬರೂ ಸಮೀಪಿಸಿರುವುದರಲ್ಲಿ ಆತ್ಮಸಂಯಮವು ಅಸಂಭವನೀಯವು. ಪ್ರಾಚೀನಕಾಲದಲ್ಲಿ ತಪೋವನದ ವಾತಾವರಣದೊಳಗೆ ವಾಸಿಸತಕ್ಕ ಜೈಮಿನಿ, ಸೌಭರಿ, ಪರಾಶರ ಮೊದಲಾದ ಮಹರ್ಷಿಗಳಂತೆಯೆ ಅರ್ವಾಚೀನಕಾಲದ ನ್ಯೂಟನ್ ಮಿಲ್ಟನ್‌ರಂಥ ವಿವೇಕ ಪುರುಷರೂ ವರ್ತಮಾನಕಾಲದ ಎಷ್ಟೊ ದೊಡ್ಡ ದೊಡ್ಡ ಸಾಧಕರೂಸಹ ಯಾವಾಗ ಸಂಸರ್ಗದೋಷದಿಂದ ತಪ್ಪಿ ಇಂದ್ರಿಯ ಸಂಯಮ ಮಾಡಲು ಹೇಗೆ ಶಕ್ತರಾಗಲಿಲ್ಲವೊ! ಆವಾಗ; ವಿಲಾಸಭವನವೆನಿಸಿದ ಸಿನೇಮಾ ನಾಟಕಗಳಿಗೆ ಹೋಗುವವರು, ಗೌರವಕ್ಕಾಗಿ ಉದ್ದ ಉದ್ದ ಉಪನ್ಯಾಸ ಮಾಡುವವರು, ತನು ಮನ ವಾಣಿಗಳನ್ನು ಶೃಂಗಾರರಸದಲ್ಲಿ ಮುಳುಗಿಸುವವರು, ಭೋಗಲೋಭದಿಂದ ವಿದ್ಯಾರ್ಜನೆಗಾಗಿ ಆಧುನಿಕ ವಿದ್ಯಾಕ್ಷೇತ್ರವೆನಿಸಿದ ಕಾಲೇಜು ಮೊದಲಾದವುಗಳಲ್ಲಿ ಓದುವವರು, ಯಥೇಚ್ಛ ಆಚರಣೆಯ ಕೇಂದ್ರಸಾಧನವಾದ ಛತ್ರಾದಿಗಳಲ್ಲಿ ವಾಸಿಸುವವರೇ ಮೊದಲಾದ ವಿಲಾಸಮೂರ್ತಿಗಳೆನಿಸಿದ ಯುವಕ-ಯುವತಿಯರು ಶುಕದೇವನಂತೆ ಇಂದ್ರಿಯಸಂಯಮದ ಆಶೆ ಮಾಡವದೆಂದರೆ; ತಿಳಿದು ತಿಳಿದೂ ತನಗೆ ತಾನೇ ದುಃಖಕೊಡುವವರಾಗುತ್ತಾರೆ, ಹಾಗಾದರೆ ಏನಮಾಡಬರುವುದು!

ಇಂದಿನ ಜಗತ್ತಿನಲ್ಲಿ ದಿಗ್ಗಜವಿದ್ವಾನರುಸಹ ಯುರೋಪದ ಉದಾಹರಣೆಕೊಟ್ಟು, ಸಹಶಿಕ್ಷಣದ ಅಂದರೆ, ಹುಡುಗ–ಹುಡುಗೆಯರು ಒಂದೇ ಶಿಕ್ಷಣಶಿಬಿರದಲ್ಲಿ ಶಿಕ್ಷಣ ಹೊಂದುವದರ ಸಮರ್ಥನೆ ಮಾಡುತ್ತಿರುವರು!

ಎಷ್ಟೋ ಮಂದಿಗಳು, ಸಂಸ್ಕೃತ ನಾಟಕಾದಿಗಳ ಆಧಾರಗಳನ್ನು ಎತ್ತಿ ಹಿಡಿದು ಪ್ರಾಚೀನಕಾಲದ ಗುರುಕುಲವಾಸದಲ್ಲಿ ಸಹಶಿಕ್ಷಣದ ಸಿದ್ಧತೆ ಮಾಡಿ ಬೋಧಿಸುತ್ತಾರೆ. ಹಾಗಾದರೆ ಅವರು ಇನ್ನೊಂದನ್ನು ತಿಳಿದು ಕೊಳ್ಳಬೇಕಿತ್ತು. ಅದಾವುದೆಂದರೆ :—

ಪ್ರಾಚೀನ ಗ್ರಂಥಗಳಲ್ಲಿ ಎಲ್ಲೆಲ್ಲೂ ಕನ್ಯೆಯರಾಗಲೀ ಸ್ತ್ರೀಯರಾಗಲಿ ಋಷ್ಯಾಶ್ರಮವನ್ನು ಸೇರಿ ಪುರುಷರ ಸಹವಾಸದಲ್ಲಿ ವಿದ್ಯಾಭ್ಯಾಸ ಮಾಡಿ ರುವುದು ಪ್ರಮಾಣವಾಗಿ ಸಿಗಲಾರದು. ಇನ್ನೆಲ್ಲಾದರು ಕಂಡುಬಂದಲ್ಲಿ ಅಣ್ಣ—ತಂಗಿಯರಂತೆ ವರ್ತಿಸಿ ಬ್ರಹ್ಮಚರ್ಯವನ್ನು ಆದರ್ಶವಾಗಿ ಪಾಲಿಸಿ ಕಠೋರ ನಿಯಮಪಾಲನೆ ಮಾಡಬೇಕಿತ್ತು. ಮಾತುಗಳಲ್ಲು ವರ್ತನ ದಲ್ಲು ಸಂಯಮವಿತ್ತು. ಸಂಯಮವೆಂದರೆ ಬಿಗಿಹಿಡಿಯುವುದು. ಈ ಕಾಲ ದಂತೆ ಕಾಲೇಜು ಹೋಟೇಲು ಮೊದಲಾದ ಸ್ಥಳಗಳಲ್ಲು ಸ್ತ್ರೀ ಪುರುಷರು ಕಾಮತೃಪ್ತಿಯನ್ನು ಹೊಂದವ ಸಾಧನವು ಅಲಭ್ಯವು. ಇನ್ನು; ಕಚ— ದೇವಯಾನಿಯ ಇತಿಹಾಸದ ಅನುಸಾರವನ್ನು ಮಾದರಿಗಾಗಿ ನೆನಿಸಿ ಕೊಂಡರೂ ಈಗಿನ ಕಾಲದ ಸಹ ಶಿಕ್ಷಣದ ಮಾದರಿಯಾಗದು.

೧೦ ನೇ ಶತಮಾನದಿಂದಂತು ಬರ ಬರುತ್ತ ಈ ಬಗೆಯಾದ ಸನ್ನಿ ವೇಶನಗಳು ಬಹು ಭಯಾನಕವಾಗಿಯೇ ಜರುಗುತ್ತಿವೆ! ಒಮ್ಮೊಮ್ಮೆ ಅವಿ ಶ್ವಾಸವಾಗುವಂಥ ವಾರ್ತೆಯೂ ಕಿವಿಯಮೇಲೆ ಬೀಳುತ್ತಿದೆ. ಆದರೆ.... ಅದು ಸತ್ಯವೆಂದೂ ಈ ಕೆಳಗಿನ ವಿಷಯದಿಂದ ಆಗುತ್ತದೆ.

ನಾನು ಧಾರವಾಡದಲ್ಲಿದ್ದಾಗ, ನನ್ನ ಸ್ನೇಹಿತರಾದ ಓರ್ವ ಪ್ರೋಫೇ ಸರರ ಗೃಹಕ್ಕೆ ಒಮ್ಮೆಹೋದಾಗ ಅವರು ಮಾತಾಡುತ್ತಾಡುತ್ತ ಇದೇ ವಿಷಯವಾಗಿ ಹೇಳಿದ್ದೆಂದರೆ ;— "ಈ ಊರ ಕಾಲೇಜದಲ್ಲಿ ಸೇರಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಯುಗಳು ಒಂದು ದಿನ ಸಾಯಂಕಾಲ ಕಾಲೇಜು ಬಿಟ್ಟ ಬಳಿಕ ದಿನದಂತೆ ಮನೆಗೆ ಬಾರದೆ, ಆಟದ ಬಯಲೆಡೆಗೆ ಆಡುತ್ತ-

ಓಡುತ್ತ ಮನಬಂದಂತೆ ಇರುವಷ್ಟಕ್ಕೆ ಕತ್ತಲೆಯಾಗಿರಲು ಬೇಸಿಗೆಯ ಕಾಲ, ತಂಪಾದ ಬೆಳದಿಂಗಳು ಎಲ್ಲೆಲ್ಲೂ ಬಿದ್ದಿತ್ತು. ಮಾರುತನು ಹೂವಿನ ತೋಟದೊಳಗೆ ಹಾದು ಅಲ್ಲಿಯ ದಿವ್ಯತಮ ಮಧುಗಂಧಗಳನ್ನು ಆ ಮೈದಾನ ದಲ್ಲೆಲ್ಲೂ ಸಿಂಪಡಿಸುತ್ತಿದ್ದನು. ಹೀಗಿರುವಾಗ ಆ ಮಕ್ಕಳೂ ವಿನೋದ ಲಾಲಸೆಯಲ್ಲಿ ಇನ್ನೂ ಉತ್ಸುಕರಾಗಿರುವುದರಿಂದ ತಮ್ಮ ಮನಸ್ಸು ಮನೆಯ ಕಡೆಗೆ ತಿರುಗಿಸದೆ ಇದ್ದರು. ಅತ್ತ ಆ ಮಕ್ಕಳ ಪಾಲಕರು ದಿನದಂತೆ ಮಕ್ಕಳು ಬಾರದಿರುವದನ್ನು ನೋಡಿ ಸಿನೇಮಾ, ನಾಟಕಗಳಿಗೆ ಹೋಗಿರಬಹುದೆನ್ನುವ ಊಹಾ–ಪೋಹೆಗೆ ಕಟ್ಟುಬಿದ್ದು ೧೦–೧೧ ಗಂಟೆಯೂ ಮೀರಿರಲು ಮನೆ ಯಿಂದ ಹೊರಟು ತಮ್ಮ ತಮ್ಮ ಹುಡುಗರನ್ನು ಆರಿಸುತ್ತ ಮಧ್ಯದಾರಿಯಲ್ಲಿ ಅವರೆಲ್ಲರೂ ಒಟ್ಟಾದರು. ವಿಷಯ ವಿಮರ್ಶೆಯಲ್ಲಿ ಎಲ್ಲವರ ಉದ್ದೇಶವೂ ಒಂದೆಯಾಗಿ, ಸಿನೇಮಾ ಕ್ಲಬ್ಬ ಮೊದಲಾದ ಗೃಹಗಳನ್ನು ಸಂದರ್ಶಿಸಿ ಆ ಮಕ್ಕಳಿರುವ ಬೈಲಿಗೆ ತಲ್ಪಿದ್ದರು. ಆ ಮೈದಾನದೊಳಗೂ ಅರಸುತ್ತ ಅಂತು ಆ ವಿದ್ಯಾರ್ಥಿ—ವಿದ್ಯಾರ್ಥಿನಿಯರು ಕಾಮೋದ್ದೀಪಕ ಹೃದಯದ ಉದ್ವೇಗೆ ವನ್ನು ತಣಿಸಿಕೊಳ್ಳಲು ತಾರುಣ್ಯದ ಸಾಹಸವನ್ನು ಮೆರೆಸುತಿರುವದನ್ನೂ ದೂರದಿಂದಲೇ ಕಣ್ಮುಟ್ಟ ಕಂಡರು! ಪಶ್ಚಾತ್ತಾಪಗೊಂಡರು!! ಶಿವ ಶಿವಾ ಎಂದರು!!! ಹಾಗೇ ಮುಂದು ಮುಂದೆ ಬಂದರು. ಹೀಗೆ ಬಂದ ಜನರ ಸುಳಿವು ಆ ಸುರಥ ವಿದ್ಯಾಭ್ಯಾಸಿಗಳಿಗೆ ಆಯಿತೋ ಏನೋ ಒಟ್ಟೆ ನಲ್ಲಿ ಜೋಡಿಗಳೆಲ್ಲ ಗಡಬಡಸಿ ಎದ್ದು ನಿಂರರು. ಪಾಲಕರಿಗೆ ಹುಳಿ ಮೋರೆಯಿಂದ ಮುಂಬರಿದು ಭೆಟ್ಟಿಯಿತ್ತರು. ತಮ್ಮ ತಮ್ಮೊಳಗಿರುವ ಸ್ನೇಹ ಭಾವವನ್ನು ಪಾಲಕರಿಗೆ ಸೂಚಿಸಿದರು. ಅಂತಯೇ ಮಾರನೇ ದಿವ ಸವೇ ಆ ಜೋಡಣಿಗಳ ಆಶೆಯು ಜೀವನದ ಕೈಗೊಂಬೆಯೇ ಆಯಿತು! ಹೀಗಿರುವ ಆ ದೃಶ್ಯದಲ್ಲಿ ದೊಡ್ಡ ದೊಡ್ಡ ಸಾಹುಕಾರರ ಮಕ್ಕಳೂ ದೊಡ್ಡ ದೊಡ್ಡ ಪ್ರೊಪೇಸರರ ಮಕ್ಕಳೂ ಇದ್ದರು” ಎಂದು ಹೇಳಿದರು.

ಹೀಗೆ ಹೇಳಿದ ನನ್ನ ಮಿತ್ರರ ಮಾತು ನನಗೆ ಹೀಗನ್ನಿಸಿತು, ವಿದ್ಯಾನಿಲಯ ಸೇರಿದ ಮಕ್ಕಳ ಸ್ಥಿತಿಯೇ ಹೀಗಾದಾಗ, ಅಸಂಸ್ಕೃತ

ರಾಗಿ, ಸ್ವೇಚ್ಛೆಗಳಾಗಿದ್ದವರ ಗತಿ ಏನಾಗಬಹುದು? ಆಲೋಚಿಸಿದರೆ ಹೃದಯವು ನಡುಗುತ್ತದೆ!! ಮೊಟ್ಟಮೊದಲು ವಿದೇಶಗಳ ಇಂಥವೆಷ್ಟೋ ಬಗೆಯ ವಾರ್ತೆಗಳನ್ನು ಪತ್ರಿಕೆಗಳು ಕಿವಿ—ಕಣ್ಣುಗಳವರೆಗೂ ತರುತಿದ್ದವು. ಈವಾಗ ಸತಿಶಿರೋಮಣಿಯಾದ ನಮ್ಮ ಭಾರತಮಾತೆಯ ಮಕ್ಕಳೂ ಪುಣ್ಯ ತಾಯಿಯ ಒಡಲಿಗೆ ಈ ಬಗೆಯದಾಗಿಯೂ ದುಃಖವನ್ನೊಡ್ಡಿದರೆಂದಮೇಲೆ, ಇದನ್ನೆಲ್ಲ ತಡೆಗಟ್ಟುವ ಶಕ್ತಿ ಯುಕ್ತಿ ಪ್ರಯತ್ನಗಳ ಪರವಾಗಿ ಆಳವಾಗಿಯೂ ವಿಚಾರ ಮಾಡಿ, ನಮ್ಮ ಜನತಾ ಸರಕಾರವು, ಭಾರತದ ಬಾಳಿನ ವೃಕ್ಷಕ್ಕೆ ಸರಿಯಾದ ವಿದ್ಯಾಜಲವನ್ನೆರಚಿ ಸತ್ಯ ಶಾಂತಿ ಸುಖದ ಫಲರೂಪವಾದ ಅನ್ನವನ್ನು ನೀಡಲು ಮುಂದೆ ಬರಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ.

ವರ್ತಮಾನ ಸ್ತ್ರೀಶಿಕ್ಷಣದ ಪರಿವರ್ತನೆಯ ಅವಶ್ಯಕತೆ.

ಈ ದೃಷ್ಟಿಯಿಂದ ಭಾರತವರ್ಷವು ಭಾಗ್ಯಶಾಲಿಯೆಂದು ಹೇಳಬಹುದು! ಪ್ರತಿನಿತ್ಯವೂ ಆಬಾಲವೃದ್ಧರ ದೃಷ್ಟಿಯು ಆ ಮಾರ್ಗವಾಗಿಯೆ ಎಳೆಯಲ್ಪಡುತ್ತದೆ! ಆದರೆ........ಯಾವವಿಷಯಕ್ಕೆ ಯಾರ ಅಭಿಪ್ರಾಯವು ಶ್ರೇಷ್ಠವೆಂಬದನ್ನು ತಿಳಿದುಕೊಳ್ಳಲಿಲ್ಲ. ದಾರೀತಪ್ಪಿದವನಂತೆ ಸಿಕ್ಕ ಸಿಕ್ಕವರ ಮತಾನುಸಾರ ನಡೆಯುತಿರುವುದು. ಆ ಕಾರಣದಿಂದ ಶಿಕ್ಷಣಯುಗವಾಗಿದ್ದ ಈ ನವಯುಗದಲ್ಲಿ ಸ್ತ್ರೀ–ಪುರುಷರೆಲ್ಲವರಿಗು ತಮ್ಮ ಕರ್ತವ್ಯದ ನೆನಪಿಲ್ಲ. ಯುವತಿ–ಯುವಕರೆಲ್ಲ ಪರಾನುಕರಣದಲ್ಲಿ ಪರಾಯಣರಾದರು.

ಅದರಿಂದಲೇ **ಜಗತ್ತಿನ ಸಾರ್ವಜನಿಕ ಉಪಯೋಗಕ್ಕೆ ಮಾತಿನಿಂದಲೇ ಅಲ್ಲದೆ ಕೃತಿಯಿಂದ ಅನರ್ಹರಾಗಿರುವರು, ಏನಾದರು ಅಲ್ಪ-ಸ್ವಲ್ಪ ಉಪಯೋಗವಾಗಿದ್ದರು, ಪಟ್ಟಣಗಳಿಗೆ.**

ಸೃಷ್ಟಿಯನ್ನು ರಚಿಸಿರುವ ಬ್ರಹ್ಮನು ಸಾಮಾನ್ಯನಲ್ಲ! ಆತನು ಸ್ತ್ರೀ ಪುರುಷರ ಗಾಡಿಯನ್ನು ನಡೆಸುವುದಕಾಗಿ ಭಿನ್ನ ಭಿನ್ನ ರೂಪದಿಂದ ಮಹತ್ವ ಪೂರ್ಣವಾದ ಭೇದವನ್ನು ಮಾಡಿದನು. ಅವರವರ ಪ್ರಕೃತಿಯನ್ನು ಬೇರೆ ಬೇರೆ ರೂಪದಲ್ಲಿಟ್ಟನು. ಇದನ್ನು ಈ ಹಿಂದೆ ಹಲವೆಡೆ ಹೇಳಲಾಗಿದೆ. ಹೀಗಿರಲು, ಸ್ತ್ರೀ-ಪುರುಷರಿಬ್ಬರಿಗು ಒಂದೇ ಶಿಕ್ಷಣವು ಹೇಗೆ ಸಮಂಜಸವು ?

ಈವಾಗ ಹೆಂಗಸರು ಗಂಡಸರಿಗಿಂತ ಮುಂದಾಳೆಂದು ತೋರಿಸಿಕ್ಕೊಳ್ಳಲು ಸಿದ್ಧರಾಗಿದ್ದಾರೆ. ಇದು ಪಾಶ್ಚಾತ್ಯಶಿಕ್ಷಣದ ಸ್ವಭಾವವು. ಇದರಲ್ಲಿ ಕಾಣುವುದೆಂದರೆ, ಹೊರಗಿನಿಂದ ಭಾರತೀಯರೆಂದು ಭಾಸವಾದರು, ಮನಸ್ಸಿನಿಂದ ವಿದೇಶಿಯರಾಗಿಯೇ ಮಾಡಿಕೊಂಡಿದ್ದಾರೆ. ಇದು ಶರೀರ ರಕ್ತದಲ್ಲೇ ಮಿಶ್ರವಾಗಿ ಬಿಟ್ಟಿದೆ !

ಸಾವಿರಾರು ನವಯುವಕರು 'ಎಮ್ಮೆ' ಮೊದಲಾದ ಪದವೀಧರರಾಗಿ, ನೌಕರಿಗೆ ಸ್ಥಳವಿಲ್ಲವೆಂದು ಆಫಿಸಿನಿಂದ ಬರೆದು ಬಂದರು ಇತರರು ಪರಾವಲಂಬಿಗಳಾಗಲು ಅಪೇಕ್ಷಿಸುತ್ತಾರೆ. ಅಂದಮೇಲೆ ಇವರಿಗೆ ತಮ್ಮ ತಮ್ಮ ಜೀವನವನ್ನು ಸ್ವತಂತ್ರವಾಗಿ ಸಾಗಿಸುವ ಶಕ್ತಿಯು ನಷ್ಟವಾಗಿದೆಯೆನುವುದು ಇದರಿಂದಲೆ ತಿಳಿದು ಬರುವುದು. ಒಂದೊಮ್ಮೆ ನೌಕರಿ ಸಿಕ್ಕರೆ, ಮನೆಯಲ್ಲಿರತಕ್ಕ ತನ್ನ ಹೆಂಡತಿಯ ಮಾತೃಭಾಷಾಶೈಲಿಯ ಮಾತು, ಪಾಶ್ಚಾತ್ಯಶಿಕ್ಷಣದ ಈತನ ಶೈಲಿಗೆ ಕರ್ಣಕಠೋರವಾಗಿ ಪರಿಣಮಿಸುವುದು. ಮೂರ್ತಿಮತ್ತಾಗಿ ದೇವತೆಯಂತಿರುವ ತನ್ನ ಪತ್ನಿಯು ತಿರಸ್ಕಾರಕ್ಕೆ ಪಾತ್ರಳಾಗಿರುವಳು. ಇದಕ್ಕನುರಿತ ಎಷ್ಟೋ ಸ್ತ್ರೀಯರು ಪತಿಯ ಮನ ದೊಲವಿಗೆಂದೂ ಆ ಸಂಸ್ಕಾರವನ್ನು ಕೈಗೊಳ್ಳುವರು.

ಪಾಶ್ಚಾತ್ಯಶಿಕ್ಷಣ ಹೊಂದಿದ ರಸಿಕಯುವಕ—ಯುವತಿಯರು ಪರಸ್ಪರ ಕೈ ಜೋಡಿಸಿ ಕ್ಲಬ್ಬುಗಳಲ್ಲಿ ಫಲಹಾರ ಮಾಡುವಿಕೆಯನ್ನು ನೋಡಿ ಉಳಿದವರಿಗು ನಾಚಿಕೆಯಾಗಿ ಆಂಗ್ಲಭಾಷಾ ಆ ಪದ್ಧತಿ ಶಿಕ್ಷಣದಲ್ಲಿ

ಪ್ರವೇಶಗೊಂಡರು. ಅದರಿಂದಲೆ ಕಾಲೇಜುಗಳಲ್ಲಿ ಮಳೆಗರದಂತೆ ವಿದ್ಯಾರ್ಥಿ—ವಿದ್ಯಾರ್ಥಿನಿಯರ ಆಗಮನವಾಗುತಿರುವುದು.

ಪಾಶ್ಚಾತ್ಯ ವಿದ್ಯೆಪದ್ಧತಿಗಳನ್ನು ಮೈಗೂಡಿಸಿಕೊಳ್ಳಹತ್ತಿದಾಗ; ಮಾಂಸ ಭಕ್ಷಣ, ಸುರಾಪಾನ, ಪರಸ್ತ್ರೀ ಪರಪುರುಷಗಮನ ಮುಂತಾದವುಗಳ ಅಭ್ಯಾಸವೂ ಸ್ವಾಭಾವಿಕವಾಗಿ ಆಗಲೇಬೇಕಾಯಿತು. ಮನೆಯಲ್ಲಿ ಉತ್ತಮವಾದ ಪೇಯ-ತಿನಿಸುಗಳಿದ್ದರೂ ಕ್ಲಬ್ಬುಗಳಲ್ಲಿಗಯ ತಿಂಡಿ-ತೀರ್ಥಕ್ಕಾಗಿಯೂ ಇತರ ಮನೋರಂಜನ ಕಾರ್ಯಕ್ಕಾಗಿಯೂ ನರ-ನಾರಿಯರು ಹಾತುರಿಯುರು! ಆ ಅಭ್ಯಾಸ ಮಾಡಿದ ಜನರ ಕೃತಿಗಳು ಇಂದಿಗೂ ಹಾಗೆಯೇ ಇದೆ! ಅವರ ಸಂಸರ್ಗಿಗಳೂಸಹ ಸಿದ್ದಿಯ ಹೊರತಾಗಿ ಪ್ಯಾಶನ್ನಿನ ಸ್ವಾಧೀನದಲ್ಲಿರುವರು. ಇದು ಹಡೆದವರ ದೋಷವಲ್ಲ. ಅಲ್ಲದೆಯೂ ಇಲ್ಲ. ಜಗತ್ತಿನ ಈ ದೃಷ್ಟಿಯಿಂದ ತಪ್ಪಿ ಅಲ್ಪಸಂಖ್ಯಾಕರೇ ಪ್ರಾಚೀನ ಪದ್ಧತಿಯನ್ನನುಸರಿಸಿರುವರು. ಅದರಿಂದಲೇ ಸತಿಸಾವಿತ್ರಿ, ಸತ್ಯಹರಿಶ್ಚಂದ್ರ ಮೊದಲಾದವರ ಹೆಸರು ಅವಶೇಷವಾಗಿರುವವು!

ಇನ್ನೊಂದೆಂದರೆ :— ಹೆಣ್ಣುಹುಡುಗಿಯರು ಪುಸ್ತಕದ ಹುಳಗಳಾಗಿ ತಮ್ಮ ಸಂಪೂರ್ಣ ಪ್ರೌಢಾವಸ್ಥೆಯವರೆಗೂ ವಿದ್ಯಾಭ್ಯಾಸದಲ್ಲಿ ಕಳೆಯಲಪೇಕ್ಷಿಸಿ, ಕಾದಂಬರಿ ಮೊದಲಾದ ಪುಸ್ತಕಪಠನದಿಂದಲು, ಕುಸಂಗಿಗಳ ಸಹವಾಸದಿಂದಲು ಕಾಮುಕಿಂಕರರಾಗಿ, ವಿವಾಹಪೂರ್ವತಯಾರಿಯಲ್ಲೆ ಅಲ್ಲದ-ಸಲ್ಲದ ರೋಗಗಳಿಗೆ ಬಲಿಬಿದ್ದು, ಲಗ್ನವಾದನಂತರ ಪತಿಯನ್ನೂ ಆ ರೋಗಕ್ಕೆ ಆಹುತಿಕೊಟ್ಟು ಒಂದೆರಡು ರೋಗಿಷ್ಟ ಮಕ್ಕಳನ್ನು ಹಡೆದು ಅಲ್ಲವೆ ಹಡೆಯದೆ ದೇಹತ್ಯಾಗಮಾಡುವುದೇ ಪಾಶ್ಚಾತ್ಯವಿದ್ಯೆಯ ನಿಲುಮೆಯಾಯಿತು.

ಸಂಸಾರದಲ್ಲಿ ಬಹುಭಾಗದ ಒಜ್ಜೆಯು ಸ್ತ್ರೀಯರಮೇಲಿರುವುದು. ಅವರು ಮಾತೃದೇವಿ ಎನ್ನುವ ಗೌರವ ಧರಿಸಬೇಕಾಗುವದು. ಗೃಹಿಣೀ ಪದವೂ ಅವರಿಗೇ ಸಲ್ಲುವುದು. ಮಾತೆಯೆಂಬ ಶಬ್ದವು

ವರ್ಣನಾತೀತವಾದದ್ದು. ಜಗತ್ತಿನ ಎಲ್ಲ ಕಾರ್ಯದ ಶಿಕ್ಷಕಿಯೂ ಅವರೇ ಇರುವರು. ಅದರ ಬಗ್ಗೆ ಈಗನ ಪಾಶ್ಚಾತ್ಯ ಪದ್ಧತಿಯ ವಿದ್ಯಾಭ್ಯಾಸವು ಏನೂ ಜ್ಞಾನವನ್ನು ಕೊಡಲಾರದು.

ಸ್ತ್ರೀಯಲ್ಲಿ ಪ್ರಾಧಾನ್ಯವಾಗಿ ಗೃಹವಿಜ್ಞಾನ ಮುಖ್ಯವಾದದ್ದು. ನಂತರ ಹೊರಗಿನ ವ್ಯವಹಾರ ಜ್ಞಾನವು ಸ್ತ್ರೀ ಮಟ್ಟಕ್ಕೆ ಎಷ್ಟು ಬೇಕೋ ಅಷ್ಟು. ಶಿಶುಪಾಲನೆ ಮೊದಲಾದ ಶಿಕ್ಷಣದಿಂದ ದೇಶದ ಹಿತವಿದೆ. ಭಾರತ ರಾಮಾಯಣಾದಿಗಳನ್ನು ಓದಿ ತತ್ವವನ್ನರಿತು, ಅದರಂತೆ ನಡಕೊಳ್ಳಲು ಅಭ್ಯಸಿಸಬೇಕು. ಸಿನೇಮಾಮಂದಿರದ ಪ್ರವೇಶ, ಸಹಶಿಕ್ಷಾ ಮೊದಲಾದವುಗಳು ಕಟ್ಟಾಗಬೇಕು. ಸಂತಾನಾರ್ಥ ಉಪಯುಕ್ತಸಮಯ ಮಾತ್ರವಲ್ಲದೆ ಉಳಿದ ದಿವಸವೆಲ್ಲ ಬ್ರಹ್ಮಚರ್ಯಪಾಲನೆಯಾಗಬೇಕು. ಶಾಸ್ತ್ರ ವಿರುದ್ಧ ವಯಸ್ಸಿನ ವಿವಾಹ ಕಾಲವನ್ನು ಬೆಳೆಸಬಾರದು. ಈ ಮೊದಲಾದ ಶಿಕ್ಷಣವು ಪಸರಿಸಿ ನಮ್ಮ ಭಾರತದ ತಾಯಂದಿರ ಕಳೆದುಹೋದ ಗೌರವವನ್ನು ತುಂಬಕೊಡಲಿ! ಎಂಬುವದಿಷ್ಟೇ ನಮ್ಮ ಕೋರಿಕೆ.

ಲಜ್ಜೆಯೇ ಸ್ತ್ರೀಯರ ಆಭರಣ

ಅಸಂತುಷ್ಟಾ ದ್ವಿಜಾನಷ್ಟಾಃ ಸಂತುಷ್ಟಾ ಏವ ಪಾರ್ಥಿವಾಃ ।
ಸಲಜ್ಜಾ ಗಣಿಕಾ ನಷ್ಟಾ ಲಜ್ಜಾಹೀನಾಃ ಕುಲಸ್ತ್ರಿಯಃ ॥

"ಸಂತೋಷಹೀನ ಬ್ರಾಹ್ಮಣರು, ಸಂತೋಷಪೂರ್ಣ ರಾಜರು, ಲಜ್ಜಾಯುಕ್ತ ಸೂಳೆಯರು; ಮತ್ತು ಲಜ್ಜಾಹೀನ ಗರತಿಯರು ನಿಶ್ಚಿತವಾಗಿ ನಾಶ ಹೊಂದುವರು.

ಇಂದಿನ ಜಗತ್ತಿನಲ್ಲಿ ನಾರಿಯರಿಗೆ ಇದೊಂದು ಜೇಲಖಾನೆಯಾಗಿರುತ್ತದೆ. ಬಹುತೇಕ ಎಲ್ಲ ಬಗೆಯಿಂದಲೂ

ಹಾನಿಕರವೆಂದು ತೋರುತ್ತದೆ. ಏಕಂದರೆ ಇಂದಿನ ಹೆಂಗಳೆಯರು ಸ್ತ್ರೀಯೋಚಿತಲಜ್ಜೆಯನ್ನು ತೊರೆದು, ಪುರುಷರ ಸಂಗಡ ನಿರಂಕುಶ ರೂಪದಿಂದ ಓಡಾಟ ನಲಿದಾಟ ಪಕ್ಷಗಾರಿಕೆಯಲ್ಲಿ ಹಂಬಲ-ಬೆಂಬಲ, ಪರಪುರುಷರಿಗೆ ಅರ್ತಿಯ ಭೆಟ್ಟಿ ಇಷ್ಟೆ ಏಕೆ? ಹೊರಗಿನ ಗಂಡಸರೊಂದಿಗೆ ಆಟಪಾಟಗಳಲ್ಲಿ ಸಹ ಭಾಗವಹಿಸುವದುಂಟು. ಅವರೊಂದಿಗೆ ತಿಂದುಣ್ಣುವುದು; ನೃತ್ಯ-ಗೀತಾದಿ ರಂಗಗಳಲ್ಲಿ ಭಾಗಿಗಳಾಗುವುದು. ವಸ್ತುಸ್ಥಿತಿಯನ್ನು ವಿಚಾರಿಸಿದಾಗ; ನಾರಿಯರಲ್ಲಿರುವ ಸಕಲ ಬೆಲೆಯುಳ್ಳ ಆದರಣೀಯ ಸಂಪತ್ತೆಂದರೇ ಅವರ ಸತೀತ್ವದ ಮರ್ಯಾದೆ. ಅದನ್ನು ರಕ್ಷಿಸುವುದೇ ಅವರ ಎಲ್ಲಬಗೆಯ ಉಚ್ಚಜೀವನದ ಧ್ಯೇಯವಾಗಿದೆ. ಆದ್ದರಿಂದ ಯಾವ ನಾರಿಯೇ ಆಗಲಿ, ತನ್ನ ಪಾತಿವ್ರತ್ಯವನ್ನು ಪಾಲಿಸಬೇಕೆಂದಿದ್ದಾಗ **ಗೃಹರಾಣಿ**ಯಾಗಿರಬೇಕು. ಸ್ತ್ರೀ ಜಾತಿಯ ಪರವಾಗಿ ಈ ಬಗೆಗೆ ಸಹಾನುಭೂತಿಯನ್ನು ಯಾರು ತೋರುವದಿಲ್ಲವೋ, ಸಹಾಯಕನಲ್ಲವೋ ಅವರು ಆ ತತ್ವದ ತಿಳಿವಳಿಕೆಯಿಲ್ಲದವರಷ್ಟೆ ಅಲ್ಲ, ಅಂತಹ ವಿರುದ್ಧ ನಡತೆಯಿಂದಾಗಿ ಜೀರ್ಣಿಸಿಕೊಳ್ಳಲಾರದ ಪಾಪದ ಸಂಕಲೆಗೆ ಸಿಕ್ಕು ಬೀಳುವರು.

ಸ್ತ್ರೀಯರಿಗೆ ಲಜ್ಜೆಯಷ್ಟು ಭೂಷಣವು ಬೇರೊಂದಿಲ್ಲ. ಪುರುಷನಿಗೆ ಪುರುಷತ್ವದ ಭಾವನೆಯಿರುವಂತೆ ಸ್ತ್ರೀಯಳಿಗೆ ಪ್ರಕೃತಿ ಅರ್ಥಾತ್, "**ದೇವಿ**"ಯ ಭಾವವು ಪ್ರಾಧಾನ್ಯವಾಗಿ ಸ್ವಾಭಾವಿಕತೆಯಲ್ಲಿರಲೇಬೇಕು. ಲಜ್ಜೆಯು ದೇವೀ ಭಾವದ್ದಾಗಿದೆ. ಆ ನೈಸರ್ಗಿಕ ಭಾವದಿಂದಲೆ ನಾರಿಯಳಿಗೆ ಲಜ್ಜೆಯು ನಿಸರ್ಗವಾದುದು. ಆಹಾರ, ನಿದ್ರೆ, ಮೈಥುನಾದಿಗಳಿಗಾಗಿಯೇ ಜೀವಿಸಬೇಕೆಂದಿದ್ದರೆ, ಪಶು ಪಕ್ಷಿಗಳಾಗಿಯೂ ಜೀವಿಸಬಹುದು. ಸ್ತ್ರೀಯಾಗಲೀ ಪುರುಷನಾಗಲೀ ಹೃದಯ ತೈಲಿಯಲ್ಲಿ ವಿವೇಕವೆನ್ನುವ ದ್ರವ್ಯವಿರುವುದರಿಂದಲೇ ಇವರಿಗೆ ಮನುಷ್ಯಪ್ರಾಣಿ ಎನ್ನುವುದು. ಅಂತಹ ದ್ರವ್ಯವನ್ನು

ಬಳಸಿ ಬೆಳೆಸಿಕೊಂಡಾಗಲೆ ಆವಾಗ ಅಲ್ಲಿ ಮನುಷ್ಯತ್ವವು ಶೋಭಿಸುವುದು. ಒಟ್ಟಾರೆ; ಮೇಲೆ ಹೇಳಿದ ವ್ಯವಹಾರದಲ್ಲೂ ಹಿತ-ಮಿತವಾಗಿರಬೇಕೆಂದರ್ಥವು.

ನಾರಿಯ ಶೊಭಾಭರಣವಾಗಿರುವ ಲಜ್ಜಾಪರಿತ್ಯಾಗದಲ್ಲಿ ಗೌರವದ, ಸತೀತ್ವದ, ಮನೋಸ್ವಾಸ್ಥ್ಯದ, ದೇವೀಭಾವದ, ಅಂತೆಯೆ ಸುಸ್ವಭಾವಿಕತೆಯ ಹಾನಿಯಾಗದಿರದು. ವೇದವಾದರು ಅದನ್ನೇ ಬೋಧಿಸುವುದು.

ಯೋ ವಾಂ ಯಜ್ಞೇ ಭಿರಾವೃತೊ ऽ ಧಿ ವಸ್ತ್ರಾ ವಧೂರಿವ
(ಋಗ್ವೇದ ೮ | ೪-೨೬)

"ಪುರುಷನು ಯಜ್ಞ-ಯಾಗಾದಿಗಳಿಂದ ಕೀರ್ತಿಭೂಷಣ ಹೊಂದುವಂತೆ, ನಾರಿಯು ವಸ್ತ್ರಛಾದನದಿಂದ ಕೀರ್ತಿ ಭೂಷಣಹೊಂದುವಳು"

ಈ ಮೇಲ್ಕಂಡ ಆಧಾರದ ಅತಿರಿಕ್ತವನ್ನು ಅನ್ಯಸ್ಥಳಗಳಲ್ಲಿ ಅಂದರೆ, ಭಾರತ ರಾಮಾಯಣಾದಿ ಗ್ರಂಥಗಳಲ್ಲಿ ನೋಡಿಕೊಳ್ಳಬಹುದು.

ಸೀತಾ ಸಾವಿತ್ರಿ ದಮಯಂತಿ ಮೊದಲಾದ ಸತಿಯರು ಮನೆಯಿಂದ ಹೊರಗೆಹೋದ ಚಾರಿತ್ರಕಗಳು ಸಿಗುತ್ತವೆ. ಆದರೆ........ಅವು ವಿಶೇಷ ಪರಿಸ್ಥಿತಿಯಲ್ಲಿ. ಹಿಂದೂಶಾಸ್ತ್ರವು ಮಹಿಳೆಯರಿಗೆ ಹೊರಗೆಹೋಗಲು ಅಪ್ಪಣೆ ಕೊಟ್ಟಿರುವುದು.

ಹೆಂಗಸರ ಗೌರವವು, ಲಜ್ಜಾ ಮತ್ತು ಶೀಲಗಳಿಂದಲೆ ಪೋಷಣೆಯೆನುವುದರಬಗ್ಗೆ, ಸ್ವಲ್ಪ ದೂರದರ್ಶಿಗಳಿಂದ ಅಗದೀ ದೈಹಿಕ ಸುಖವೇ ಸುಖವೆನ್ನುವ ಪಾಶ್ಚಾತ್ಯ ದೇಶಿಗರಪೈಕಿ ವಿದ್ವಾಂಸರ ಅಂಬೋಣವನ್ನು ತುಸು ವಿಚಾರಿಸುವ!

"ಹೆಣ್ಣಿನ ಕೀರ್ತಿಯು ಸ್ಫಟಿಕ, ದರ್ಪಣಗಳ ಸದೃಶವಿರುವುದು. ಉಜ್ವಲಪ್ರಕಾಶದಿಂದ ಜಾಜ್ವಲ್ಯವಾಗಿದ್ದು ಸ್ಫಟಿಕವು "ದೂಸರೆ" ಅಂದರೆ

ಬೂದಿಯಿಂದ ಮಲಿನವಾಗುವಂತೆ; ಕೆಟ್ಟಗುಣವುಳ್ಳವರ ಶ್ವಾಸತಗಲಿದರು ಸಹ, ನಾರಿಯಳ ಗುಣ-ಕೀರ್ತಿಗಳು ಮಲಿನವಾಗುವುದು."

(ಸರವಾಂಟೀಸ್)

"ನಾರಿಯು ಒಂದು ಸುಗಂಧ ಪುಷ್ಪದಂತಿರುವಳು. ಅವಳು ತನ್ನ ಮನೆಯಲ್ಲಿ ತನ್ನ ಸೌಗಂಧವನ್ನು ಪರಿಮಳಿಸುವಳು.

(ಲೇಮೋನಿಸ್)

"ವಿಶೇಷ ವಾಸನೆಯುಳ್ಳ ಹೂವು ಎಂಥವರನ್ನೂ ಮೋಹಗೊಳಿಸುವುದು" ಇದು, ಕಾಲೀದಾಸನಿಗೆ ಸಮಾನ ಕವಿಶ್ರೇಷ್ಠನೆಂದು ಹೊಗಳಿಕೆಯ ಹಾರ ಹೊತ್ತ **ವರಡ್ಸವರ್ತ** ಎನ್ನುವವನ ಹೇಳಿಕೆ.

ಇನ್ನೂ ಎಷ್ಟೋ ವಿದೇಶೀ ದೊಡ್ಡ ದೊಡ್ಡ ವಿದ್ವಾಂಸರೂ ಸಹ ಸ್ತ್ರೀ ಪರವಾಗಿ ಹೀಗೆ ಅಭಿಪ್ರಾಯ ಪಡುವರೆಂದಮೇಲೆ ನಾರೀಸ್ಥಾನದ ಮಹತ್ವವು ಎಷ್ಟರದೆಂದು ಓದುಗರೇ ಊಹಿಸಿರಿ.

ಸ್ತ್ರೀಯರೆಂದರೆ ಪುರುಷನ ಬರೀ ವಿಲಾಸಿನಿ ಮಾತ್ರವಲ್ಲ. ಸಂಪೂರ್ಣ ಗೃಹಸ್ಥ ಧರ್ಮದ ಸಹಭಾಗಿಯು. ಅವಳ ಶರೀರವು ಕಾಮಚೇಷ್ಟೆಯ ಯಂತ್ರವಲ್ಲ. ಜಗದಂಬೆಯ ವಿಗ್ರಹವೆಂದು ಭಾವಿಸಿ ಪೂಜಿಸಲು ಯೋಗ್ಯಳು. ಕನ್ಯೆ ಮತ್ತು ಪತಿ ಪುತ್ರರಿಂದ ಕೂಡಿರುವ ಸತಿಯಳು ವಂದನಾರ್ಹಳು. ಹಿಂದೂ ಶಾಸ್ತ್ರಾನುಸಾರ ಗೌರಿ, ಲಕ್ಷ್ಮಿ ಮುಂತಾದ ದೇವತೆಗಳನ್ನು; ಕುಮಾರಿಗಳಲ್ಲು, ಸುವಾಸಿನಿಯರಲ್ಲು ಪೂಜಿಸುವ ಪದ್ಧತಿಯುಂಟು. ಹಾಗೆ ವಿಶ್ವಾಸಯುಕ್ತ ಪೂಜಿಸುವವನ ದುಃಖ-ದಾರಿದ್ರ್ಯಾದಿ ಸಂಕಟ-ಕಂಟಕಗಳು ನಾಶವಾಗುವವಲ್ಲದೆ ಧನ-ಧರ್ಮ ಆಯುಷ್ಯ ಮತ್ತು ಬಲವೃದ್ಧಿಯಾಗುವವೆಂದು ಶಾಸ್ತ್ರ ಪ್ರಮಾಣವಿರುವದು.

ಒಟ್ಟಾರೆ: ಸತೀತ್ವದ ಧರ್ಮರಕ್ಷಣೆಗೆ ಲಜ್ಜೆಯು ಒಂದು ಸಹಾಯಕ ಸಂಪತ್ತು. ಹೆಂಗಸರು ನಿರ್ಲಜ್ಜರಾಗಿ ನಿಃಸಂಕೋಚದಿಂದ ಪುರುಷರೊಡನೆ

ವ್ಯವಹರಿಸುವುದರಲ್ಲಿ ಪಾವಿತ್ಯ ಪಾತಿವ್ರತ್ಯದ ಹಿತ-ಮಿತ ತಪ್ಪಿ ಸಾವಿರಾರು ಪುರುಷರ ವಿಕೃತ ದೃಷ್ಟಿಯ ಬೇಟೆಯ ಮೃಗವೂ ಆಗಿ, ಸಮಾಜದ ದೂಷಣೆಗೆ ಪಾತ್ರವಾಗುವಳೆಂದು ದೇವೀ ಭಾಗವತದ ಒಂದು ಕತೆಯಿದೆ.

ಶಶಿಕಲಾ ನಾಮದ ಕನ್ಯೆಯು ಸ್ವಯಂವರಕಾಲವನ್ನು ಅಲ್ಲಗಳೆದಳು. ಏಕೆಂದರೆ, ಅಲ್ಲಿಸೇರಿದ ಅನೇಕ ರಾಜಪುತ್ರರ ಕಾಮದೃಷ್ಟಿಗೆ ಬಲಿಯಾಗಿ ಪಾತಿವ್ರತ್ಯದ ಆಘಾತವಾಗುವುದೆಂದು.

ಇದರಲ್ಲಿ ವೈಜ್ಞಾನಿಕ ದೃಷ್ಟಿರಹಸ್ಯವೂ ಇದೆ. ಅದಾವುದೆಂದರೆ; "ಯಾವನಾರಿಯು ಪುರುಷನ ಕಾಮದೃಷ್ಟಿಗೆ ತೋರಿಸಿಕೊಳ್ಳುವಳೋ ಮತ್ತು ಯಾವನಮೇಲೆ ತನ್ನ ದೃಷ್ಟಿ ಕೆಡಹುವಳೊ ಈ ಪ್ರಕಾರವಾಗಿ ಅನ್ಯೋನ್ಯ ನೇತ್ರಸಂಬಂಧವು ಸಮ್ಮಂಧಿಸುವುದು." ಆದ್ದರಿಂದ ಮರ್ಯಾದಾಶೀಲನಾರಿಯು ಪುರುಷನ ಸುಳಿವಾದಾಗಲೆಲ್ಲ ತಲೆಯನ್ನು ಬಾಗಿಸಿಯೇ ಇರುವಳು.

"ಕ್ಷೌಳುನೀರು ಕುಡಿಯಲು ಸಾಕಷ್ಟು ತಣ್ಣಗಾಗಿರುವುದು, ಹಾಗೆಂದು ರುಚಿಇರದು ಮತ್ತು ದಾಹವನ್ನೂ ಹಿಂಗಿಸದು. ಅಂತೆಯೆ ಪತಿವ್ರತೆ ಅಲ್ಲದವಳೂ ಅತಿಲಜ್ಜಾಯುಕ್ತಳಾಗಿರುವಳು. ಪುರುಷರನ್ನು ಕಂಡಾಗಲೆಲ್ಲ ತಲೆಬೊಗ್ಗಿಸಿಯೂ ಇರುವಳು. ಹಾಗಿರಲು, ತಲೆಬಾಗಿ ನಡಕೊಳ್ಳುವ ಮಾತ್ರದಿಂದಲೇ ಪಾತಿವ್ರತ್ಯದ ಪೂರ್ಣತಾಲಕ್ಷಣವೆಂದು ತಿಳಿಯ ಕೂಡದು."

(ಪಂಚತಂತ್ರ)

ಸ್ತ್ರೀ-ಪುರುಷರ ದೇಹದಲ್ಲಿರುವ ಶಕ್ತಿಯು ಸೌಧಾಮಿನಿ (ವಿದ್ಯುತ್) ಪ್ರವಾಹದಂತೆ ಯಾವಾಗಲು ಪ್ರವಹಿಸುತಲಿರುವುದು. ಅದು ತನ್ನ ಪ್ರತಿಬಿಂಬ ರೂಪವನ್ನು ಪ್ರವೇಶಿಸಲು ಯಾವಾಗಲೂ ಇಚ್ಛಿಸುತಿರುವುದು. ಆದ್ದರಿಂದ ಸ್ತ್ರೀ ಸಮಾಜದಲ್ಲಿ ಪುರುಷರ ಪ್ರವೇಶವಾಗಲಿ, ದೃಷ್ಟಿಯಾಗಲಿ,

ಪುರುಷಸಮಾಜದಲ್ಲಿ ಸ್ತ್ರೀಯರ ಪ್ರವೇಶವಾಗಲಿ ದೃಷ್ಟಿಯಾಗಲಿ ನಿಷಿದ್ಧಿಸಲ್ಪಟ್ಟಿದೆ. ಆದರಿಂದಲೇ ಪುರಾತನರು, ಸಬಲಕಾರಣವಿಲ್ಲದೆ ಪುರ-ಪಟ್ಟಣಗಳಲ್ಲಿ ನಾರಿಯರು ಪ್ರವೇಶಿಸಲಾಗದೆಂದು ಹೇಳಿರುವರು.

ನಾಶ್ನೀಯಾತ್ ಭಾರ್ಯಯಾ ಸಾರ್ಧಂ ನೈನಾಮೀಕ್ಷೇತ ಚಾಶ್ನತೀಮ್ ॥

"ಸ್ತ್ರೀ-ಪುರುಷರು ಒಟ್ಟಾಗಿ ಊಟಮಾಡಬಾರದು. ಸ್ತ್ರೀಯಳು ಉಣ್ಣುವುದನ್ನೂ ಸ್ನಾನ-ಪಾನಮಾಡುವುದನ್ನೂ ಪುರುಷನು ನೋಡಲಾಗದು." ಇದೆಲ್ಲವನ್ನೂ ತಿಳಿದು ಪುರುಷರು ಸ್ತ್ರೀಯರ ಲಜ್ಜಾಪೋಷಣೆಗೆ ಸಹಾಯಕರಾಗುವುದು. ನಾರಿಯರು ತಮ್ಮ ಆಭರಣ-ಅಲಂಕಾರಪ್ರಾಯವಾದ ಲಜ್ಜೆಯನ್ನು ಪಾತಿವ್ರತ್ಯಕ್ಕೆ ತಕ್ಕಂತೆ ಕಾದುಕೊಂಡು ಅಚ್ಚಳಿಯದಹಾಗೆ ಪತಿವ್ರತಾಧರ್ಮವನ್ನು ನೆಲೆಗೊಳಿಸಲಿ!!!

ನಾರಿಯು ನಡತೆ

ಅಕ್ಕರೆಯ ಅಕ್ಕ ತಂಗಿಯರೆ, ನಿಮ್ಮ ನಿಮ್ಮ ನಿತ್ಯ ನಡತೆಯಲ್ಲಿ ನಿರ್ದೋಷಿಗಳಾಗಿ ನಡಕೊಳ್ಳುವವೇ ಹುಟ್ಟಿಮೊದಲಿನ ಪರಿಪಾಠವನ್ನಾಗಿ ಕಲಿತುಕೊಳ್ಳಿರಿ!! ಹರೆಯದ ಹೊಸ್ತಿಲದಲ್ಲಿ ಹೆಜ್ಜೆಯನ್ನಿಡುತ್ತಿರುವ ಮೊದಲಿನಿಂದಲೇ ಅಭ್ಯಾಸಿಸಿರಿ! ಶಾಸ್ತ್ರಗಾರನ ಶಾಸನವು ಸುಖಕರವಾದದ್ದು. ಅದರಂತೆ ನಡಕೊಂಡೆ ಅಲ್ಲವೆ? ಅರುಂಧತಿ, ಸಾವಿತ್ರಿ ಶ್ಯಾಮಳೆ ಮೊದಲಾದವರ ಜನ್ಮವು ಯಾವುದೋ ಕಾಲದಲ್ಲಿ ಆದರೂ ಅವರನ್ನು ಆಚಂದ್ರಾರ್ಕವಾಗಿ ಜನಜನಿತದಲ್ಲೆಲ್ಲ ಕೊಂಡಾಡುತಿರುವುದು. ಆದುದರಿಂದ ಅವರ ನಡತೆ,

ಅಂದರೆ ಆ ಶಾಸ್ತ್ರಕಾರನ ಹೇಳಿಕೆಯನ್ನು ಇಲ್ಲಿ ಕೆಲಮಟ್ಟಿಗೆ ತಿಳಿಸುವೆನು. ಹೊಸ್ತಿಲದಲ್ಲಿ ನಿಲ್ಲಬಾರದು, ಸುಳ್ಳುಗಳನ್ನು ಹೇಳಬಾರದು. ಬಹು ನಗುವು ಸಲ್ಲದು. ಬೀಸುವ ಕುಟ್ಟುವ ಕಲ್ಲಿನ ಮೇಲೂ ಕಸಬರಿಗೆಯ ಮೇಲೂ ಕೂಡ್ರಬಾರದು. ಒನಿಕೆಯನ್ನು ತುಳಿಯಬಾರದು. ದಾಟಬಾರದು. ಯಾರೇ ಇರಲಿ ಪರಂಪರಾಗತವಾಗಿ ಬಂದ ಪಾತಿವ್ರತ್ಯಧರ್ಮದ ಹೊರಗೆ ಕಾಲನ್ನಿಟ್ಟರೆ, ಅವಳು ತನ್ನ ಕುಲಮರ್ಯಾದೆ, ಜಾತಿಧರ್ಮಗಳನ್ನು ಕಳೆದಂತಾಗುವುದು. ಗೋಸ್ವಾಮಿ ತುಲಸೀದಾಸ ಮುಂತಾದವರ ಹೇಳಿಕೆಯ ಸಾರಾಂಶವೆಂದರೆ :— “ ಸಾಹಸ, ಚಪಲತಾ, ಅನೃತ, ಮಾಯಾ, ಭಯ, ಅವಿವೇಕ, ಅಶೌಚ ಮತ್ತು ದಯಾಹೀನತೆ ಇವುಗಳಲ್ಲಿ ಹಿಂಜಗ್ಗದಿರುವ ಜಾತಿಯೆಂದರೇ ಹೆಂಗಸರ ಜಾತಿ ಆಗಿದೆ. ಇದರ ವಿರುದ್ಧವಾಗಿ ಯಾವಳು ನಡಕೊಳ್ಳುವಳೊ, ಅವಳು ಪರಂಪರೆಯಿಂದ ಬಂದ ಕುಲಮರ್ಯಾದೆಯನ್ನು ಕಾದುಕೊಂಡವಳಾಗುವಳು. ”

ಪರಪುರುಷಾಭಿಲಾಷೆಯನು ಸ್ವಪ್ನದಲ್ಲೂ ಸಹ ಉದಯಿಸಕೊಡದೆ ತನ್ನ ಲಜ್ಜಾಶೀಲತೆಯನ್ನು ಸಮುಚಿತವಾಗಿ ಕಾದುಕೊಂಡುಬರುವ ನಾರೀರತ್ನದ ಕೈಹಿಡಿದ ಪುರುಷನು, ಘನಘೋರಪಾಪಿ ಆದರೂ ನರಕಭಾಗಿ ಆಗದೆ ಸ್ವರ್ಗೀಯಸುಖವನ್ನು ಐಹಿಕದಲ್ಲುಣುತಿದ್ದು ಅಂತಿಮದಲ್ಲಿ ಮೋಕ್ಷಭಾಜನನಾಗುವನು ಎನ್ನುವದಿದು ನಿಃಸಂದೇಹವಾಕ್ಯವು.

ಕವಿಗಳ ಮೇಲ್ಪಂಕ್ತಿಯಲ್ಲಿರುವ ಕಾಲೀದಾಸ, ಭಾರವಿ, ದಂಡಿ, ಮಾಘ, ಈ ನಾಲ್ವರಲ್ಲಿ ಒಬ್ಬನಾದ **ದಂಡಿ** ಎಂಬುವವನು ಬರೆದ **ದಶಕುಮಾರ ಚರಿತೆ** ಎಂಬ ಕಾವ್ಯದಲ್ಲಿ, ಮಹಿಳೆಯರ ಹುಟ್ಟುಗುಣದ ಬಗ್ಗೆ ಒಂದು ಕಥೆ ಇದೆ. ಅದಾವುದೆಂದರೆ :— ಒಬ್ಬ ಪ್ರಸಿದ್ಧವ್ಯಕ್ತಿಯು ಬೇಟೆಯಲ್ಲಿ ಕೌತೂಹಲವುಳ್ಳವನಾಗಿ, ಒಂದು ದಿನ ಅಡವಿಗೆ ತೆರಳಿ ಬೇಟೆಯಾಡಿ ದಣಿವಿನಿಂದಲು ದಾಹದಿಂದಲು ನೀರನ್ನರಸಿ ಬಂದು ಒಂದು ಕೆರೆಯನ್ನು ಕಂಡನು. ಅಲ್ಲಿ ನೀರನ್ನೀಂಟಲು ಎತ್ನಿಸುವ ಸಮಯ ಒಬ್ಬ

ಬ್ರಹ್ಮರಾಕ್ಷಸನು ಬಂದು ಆತನ ಕಾಲನ್ನು ಹಿಡಿದನು. ಆ ಸಮಯ ಈ ವ್ಯಕ್ತಿಯು ತಪ್ಪಿಸಿಕೊಳ್ಳಲು ಗೈದ ಪ್ರಯತ್ನಗಳೆಲ್ಲ ನಿಷ್ಪ್ರಯೋಜಕ ವಾಯಿತು. ಆಗ ಆ ದೈತ್ಯನು "ಓ(ಮಾನವ! ನಾನು ಕೇಳುವ ಪ್ರಶ್ನೆ ಗಳಿಗೆ ತಕ್ಕುದ ಉತ್ತರವನ್ನಿತ್ತರೆ ನಿನ್ನನು ಬಿಡುವೆನು" ಎಂದನು. ಆತನು ಸಮ್ಮತಿಸಲು "ಕಿಂ ಕ್ರೂರಂ." ಎಂದು ಆ ಅಸುರನು ಪ್ರಶ್ನೆಯಿಟ್ಟನು. ಆತನು "ಸ್ತ್ರೀ ಹೃದಯಂ." ಎಂದು ಉತ್ತರಿಸಿದನು. ಅದು ಹೇಗೆಂದು ಪುನಃ ಕೇಳಲು, ಆ ವ್ಯಕ್ತಿಯು ವಿವರಿಸಲಾರಂಭಿಸಿದನು.

ಒಂದು ಊರಲ್ಲಿ ನಾಲ್ವರು ಅಣ್ಣ–ತಮ್ಮಂದಿರು ದಾಂಪತ್ಯಯುಕ್ತ ರಾಗಿದ್ದರು. ಒಂದು ಸಮಯ ಆ ಊರಲ್ಲಿ ಬರಗಾಲದ ಬೇಗೆಯಿಂದ ಮನುಷ್ಯನು ಮನುಷ್ಯನನ್ನೆ ಕೊಚ್ಚಿತಿನ್ನುವ ವೇಳೆ ಬಂದಿತು. ಈ ದಂಪತಿ ಗಳಲ್ಲಿ ಮೂರು ಜೊತೆಯು ಕಲಾಸಾಗಿ ಆ ಕಿರಿಯ ಜೋಡಿಮಾತ್ರ ಉಳಿಯಿತು. ಮಾರನೆದಿನ ಅವರ ಪಾಳಿ ಬಂದಿರಲು ಮೊದಲನೆಯ ದಿವಸ ಆತನ ಚತುರೆಯಾದ ಹೆಂಡತಿಯಜಾಣ್ಮೆಯಿಂದಾಗಿ ಇಬ್ಬರೂ ಪಲಾಯನ ಸೂಕ್ತವ ಓದಿದರು. ಹೀಗೆ ಅವರು ಎಷ್ಟೊದೂರ ಹೋಗು ವಷ್ಟಕ್ಕೆ ದಾರಿಯಲ್ಲಿ ಒಬ್ಬ ಕುಂಟನು ಬಿದ್ದದ್ದು ಕಂಡುಬಂತು. ಕಳ್ಳ ರಿಂದ ಆತನ ಎರಡೂ ಕಾಲುಗಳು ಕಡಿಯಾಗಿರುವ ಸಮಾಚಾರವನ್ನು ತಿಳಿದ ಅವರು ದಯೆಯಿಂದ ಅಲ್ಲೇ ಕೆಲ–ಬಲದಲ್ಲಿರುವ ಹಣ್ಣು–ಹಂಪಲ ಗಳನ್ನು ಸಂಚಯಿಸಿ ಎಲ್ಲರೂ ಸೇರಿ ತಿಂದು ತೃಪ್ತರಾದರು. ಅದರಂತೆ ಎಷ್ಟೋ ದಿವಸ ನಡೆದಿತು.

ಹೀಗಾಗುತಾಗುತ್ತ ಈ ಹೆಂಗುಸಿಗೆ ಆ ಕುಂಟನಲ್ಲಿ ಪ್ರೇಮ ಬಲಿ ಯಿತು. ಆದರೆ ಆತನು ಮಾತ್ರ **ಅನ್ನವನ್ನು ಕೊಟ್ಟ ಅವರು ಮಾತಾ ಪಿತರೆಂದೇ ಇದ್ದುದರಿಂದ** ಈಕೆಯ ಇಚ್ಛೆಯನ್ನು ತಿರಸ್ಕರಿಸಿದನು. ಹಾಗಾದರೂ ಆಕೆಯು ಹಟವನ್ನು ಹಿಡಿದು, ತನ್ನ ಪತಿಯನ್ನು ಒಂದು ಹಾಳು ಭಾವಿಯಲ್ಲಿ ನೂಕಿ, ಆ ಅಂಗಹೀನನನ್ನು ಬಲಾತ್ಕರಿಸಿ ಹೊತ್ತು

ತಿಳ

ಕೊಂಡು ಹೊರಟು ಅಲ್ಲಿಂದ ದೂರವಿರುವ ಒಂದು ರಾಜಧಾನಿಯನ್ನು ಸೇರಿದಳು. ಅಲ್ಲಿ ಒಂದು ಬೀದಿಯಲ್ಲಿ ಕುಳಿತು, ಆತನು ತನ್ನ ಗಂಡನೆಂಬ ಸೋಗು ಹಾಕಿ, ಯಾಚನಾವೃತ್ತಿಯಲ್ಲಿ ಇಬ್ಬರ ಜೀವನವನ್ನೂ ಸಾಗಿ ಸುತಿದ್ದಳು. ಆತನನ್ನು ಹೆಗಲಲ್ಲಿ ಹೊತ್ತು ತಿರಿದುಣ್ಣುವ ಈಕೆಯನ್ನು ನೋಡಿದವರೆಲ್ಲ "ಮಹಾಪತಿವ್ರತೆ" ಎಂದು ಆಡಿಕೊಳ್ಳುತಿದ್ದರು. ಈ ಶ್ಲಾಘನೆಯು ಅವರಾಡಿ ಇವರಾಡಿ ಆ ಊರ ಅರಸನ ಕಿವಿಯಮೇಲೂ ಬಿದ್ದಿತು. ಅವನು ಇವಳ ದರ್ಶನಕ್ಕೆ ಬರಹತ್ತಿದ. ಒಬ್ಬಾರೆ; ಕಾಣಿಕೆಯು ಹಣವು ಮೂಟೆಗಟ್ಟಲೆ ಆಗಹತ್ತಿತು. ಆ ಹಣಗಳಿಂದ ಅರಮನೆಗೆ ಸದೃಶ ವಾದ ಗೃಹವೂ ನಿರ್ಮಾಣವಾಯಿತು. ಆ ಅರಮನೆಯ ದ್ವಾರಕ್ಕೆ ಬಿಚ್ಚುಗತ್ತಿಯ ಪಹರೆಯೂ ಮಹಾರಾಜನಿಂದ ದೊರೆಯಿತು. ಅಂತು ಈ ಪತಿವ್ರತೆಯು ಊರಲ್ಲೆಲ್ಲ ಹೆಸರುವಾಸಿಯಾದಳು ಎನಲು ಇನ್ನು ಅಡ್ಡಿ ಉಂಟೆ?!

ಮಹಾರಾಜನಿಗೆ ಪ್ರಥಮ ದರ್ಶನವಿತ್ತಾಗಲೇ "ತನ್ನ ಗಂಡನ ಕಾಲು ಕಡಿದವನು ಓರ್ವ ತುಡುಗನೆಂದೂ, ಆತನ ಪರಿಚಯ ಉಂಟೆಂದೂ, ಆತನು ಸಿಕ್ಕಾಗ ಅರಸನಿಗೆ ತಿಳಿಸುವೆನೆಂದೂ" ಹೇಳಿದ್ದಳು.

ಅತ್ತ ಬಾವಿಯಲ್ಲಿ ಬಿದ್ದವನು ಹಾಗೇ ಜೀವಿಸಿದ್ದು, ದಾರೀಕಾರ ರಿಂದ ಹೊರಕ್ಕೆ ಬಂದಿದ್ದು, ಹೊಟ್ಟೆಯಪಾಡಿಗಾಗಿ ಅಲ್ಲಲ್ಲಿ ಅಲೆಯುತ್ತ ಕೆಲವುಕಾಲಕ್ಕೆ ಅದೇ ಪಟ್ಟಣಕ್ಕೆ ತಲ್ಪಿದನು. ಅಲ್ಲಿ ನಡೆದ ವಾರ್ತೆ ಯನ್ನುಕೇಳಿ 'ತಾನೂ ಆ ಮಹಾತ್ಮಳ ದರ್ಶನಕ್ಕೆಂದು' ಹೋದನು. ಬಂದು ದರ್ಶನವನ್ನೂ ತಕ್ಕೊಂಡನು. ಆಕೆಗೆ ತನ್ನ ನಿಜವಾದ ಗಂಡನಗುರುತಿಲ್ಲವೆ?! ಇದ್ದೇಇದೆ. ಆಗಿಂದಾಗ ತನ್ನ ಮೊದಲಿನ ಸಂಕೇತದಂತೆ ಅರಸನಿಗೆ ಹೇಳಿ ಕಳುಹಿದಳು ಮತ್ತು ಈತನನ್ನು ಗಲ್ಲಿಗೇರಿಸಬೇಕೆಂದು, ತನ್ನ ಕೈಗೊಂಬೆ ಯಂತಿದ್ದ ರಾಜನಿಗೆ ತಿಳಿಸಹೇಳಿದಳು. ಅಂತೆಯೇ ನೆರವೇರಿತು. ಪಾಶೀ ಶಿಕ್ಷೆಯ ಸಮಯ ಪದ್ಧತಿಯಂತೆ "ನಿನ್ನಿಚ್ಛೆಯೇನಿದೆ" ಎಂದು ನ್ಯಾಯಾ

ಧೀಶನು ಕೇಳಲು, ಆತನು "ನನ್ನ ಅಪರಾಧವನ್ನು ಆ ಕುಂಟನ ಬಾಯಿಯಿಂದ ಒಮ್ಮೆ ಕೇಳಿಕೊಳ್ಳಬೇಕೆನುವುದೇ ತನ್ನಿಚ್ಛೆ" ಅಂದನು. ಈ ಸಮಯ ಧರ್ಮ-ಕರ್ಮ ಸಂಯೋಗದಿಂದ ಆ ದಾಂಭಿಕಪತಿವ್ರತೆಯು ಎತ್ತಲೋ ಹೋಗಿದ್ದಳು.

ಒಟ್ಟನಲ್ಲಿ; ರಾಜಾಜ್ಞೆಯಂತೆ ವಾಹನದಲ್ಲಾದರೂ ಬರಬೇಕಾಯಿತು, ಆ ಕುಂಟಗೆ. ವಸ್ತುಸ್ಥಿತಿಯನ್ನು ಬಿಚ್ಚಿ ಬಯಲಿಗಿಡಲೂ ಬೇಕಾಯಿತು, ಆ ಕುಂಟಗೆ. ಆವಾಗ ಅದೇ ಶೂಲದ ಮಣೆಯು ಪ್ರಾಪ್ತವಾಯಿತು. ಈ ತುಂಟಗೆ.

ಹೀಗಿರುವ ಈ ಕತೆಯು ಸತಿಯರ ವಿಷಯದಲ್ಲಿ ಸಾಕಷ್ಟು ಪುಷ್ಟಿಯಾಗಿರುವುದಿಲ್ಲವೆ?

ಹಾಗಿರುವಾಗ, ಭಗಿನಿಯರೆ! ನಿಮ್ಮ ಸುಧಾರಣೆಯನ್ನು ಸರಿಪಡಿಸಿಕೊಳ್ಳಿರಿ! ಭಾಗ್ಯದೇವತೆಯು ಬಾಗಿಲ ತೆರೆಯುವುದು. ಮಾನವೀ ಧರ್ಮವೆಂದರೆ; ಸತ್ಯ ಕ್ಷಮಾ ಅಕ್ರೋಧ ಶೌಚ (ತನ್ನ ಒಳಗೂ ಹೊರಗು ಶುದ್ಧವಾಗಿರುವಿಕೆ)ಆರ್ಜನ (ಇಹ-ಪರಸುಖಸಂಪಾದನೆಇಷ್ಟೆಅಲ್ಲ; ಮೋಕ್ಷದ ಗಳಿಕೆ. ಭೃತ್ಯಭರಣ (ತನ್ನನು ಹೊಂದಿರುವವರನ್ನು ಸಲಹುವುದು.) ಪ್ರಜನ (ಧರ್ಮಪತ್ನಿಯಲ್ಲಿ ಸಂತತಿ ಬೆಳೆಸುವುದು. ಸತಿಯು ಧರ್ಮಪತಿ, ಯಲ್ಲಿ ಸಂತತಿಬೆಳೆಸುವುದು.) ಅದ್ರೋಹ (ಸಕಲಪ್ರಾಣಿಗಲ್ಲು ಕರುಣ ವಿಡುವುದು.) ಸಂವಿಭಾಗ (ಧರ್ಮ ಮಾಡುವುದರಲ್ಲಿಯೂ ದ್ರವ್ಯಗಳಿಸುವುದರಲ್ಲಿಯೂ ಶಬ್ದ ಸ್ಪರ್ಶ ರೂಪು ರಸ ಗಂಧಗಳೆಂಬ ಪಂಚವಿಷಯಗಳ ಭೋಗಗಳಲ್ಲಿಯೂ ಒಂದೆ ಸಮವಿರುವುದು.) ಹೀಗೆ ಒಂಬತ್ತು.

ಅಂಗಾಲಂಕಾರ

ಮಾತೆಯರೆ! ಶಾಸ್ತ್ರಕಾರರು ನಿಮ್ಮ ಅಂಗಾಲಂಕಾರಕ್ಕೂ ಆರೋಗ್ಯತೆಯನ್ನು ಕಾದುಕೊಳ್ಳುವ ವಿವಿಧಸಾಮುಗ್ರಿಗಳನ್ನು ಕಲ್ಪಿಸಿ ಕೊಟ್ಟಿರುವರು. ಸ್ನಾನ ವಿಲೇಪನ, (ಅರಿಷಣ ಹಚ್ಚಿಕೊಳ್ಳುವದು.) ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ, (ಕಾಡಿಗೆ,) ಮಕರಪತ್ರ,(ಪಾದ ದಲ್ಲಿ ಮೊಸಳೆಯ ಆಕಾರದಲ್ಲಿ ಬರಕೊಳ್ಳುವರೇಖೆ.) ಕೆಯ್ಯೂರ (ಬೈತಲೆಯ ಆಭರಣ) ಮಣಿಭೂಷಣ, ಅಂಗುಲೀಯಕ, (ಉಂಗುರ) ಕಾಂಚಿಧಾಮ, (ಟೊಂಕದ ಆಭರಣ.) ನೂಪುರ, (ಕಾಲಕಡಗ.) ಅಲಕ್ತ ರಸ, (ಲಾಕ್ಷಾರಸ. ಅರಗಿನ ರಸ)

ಮೊದಲಾದ ಹದಿನಾರು ಅಲಂಕಾರಗಳು ಸತಿತನ ಕೊಡುವುದಾಗಿದೆ. ಈ ಅಲಂಕಾರ ವಸ್ತುಗಳಲ್ಲಿ ಆಧುನಿಕ ಪದ್ಧತಿ ಯಂತೆ ಸ್ನೋ, ಪಾವುಡರು, ಮುಂತಾದ ಹೆಸರಿನಿಂದ ಕೆಲಕೆಲವು ಬದ ಲಾವಣೆಯಾಗಿವೆ. ಆಧುನಿಕ ವಸ್ತುಗಳಲ್ಲಾದರು ಸರ್ವತ್ರ ಹಿತ-ಮಿತ ಅನಿಷಿದ್ಧವಿರುವ ವಸ್ತುಗಳು ಗ್ರಾಹ್ಯವು. ಹಾಗೆಂದು ಚೈನಿ (ದುಂದ ಗಾರಿಕೆ)ಗೆ ಎಡೆಕೊಡಬಾರದು. ಪತಿಯ ಸಂತೋಷಕ್ಕಾಗಿ ಅಂಗಾ ಲಂಕಾರ. ಹೆರವರ ಸಂತೋಷಕ್ಕಲ್ಲ. ಗೊಲ್ಲುಗಿತ್ತಿಯರಾಗಬೇಡಿರಿ ! ಮುತ್ತೈದೆಗೆ ಮೂಗಿನಲ್ಲಿ ಮೂಗುತಿ, ನೆಸಲಲ್ಲಿ ತಿಲಕ, ಕೊರಳಲ್ಲಿ ಕಂಠ ಸೂತ್ರ, ಕಿವಿಯಲ್ಲಿ ಓಲೆ, ಕಾಲಲ್ಲಿ ಉಂಗುರ, ಕರದಲ್ಲಿ ಕಂಕಣ ಇವಿಷ್ಟೂ ಸೌಭಾಗ್ಯವಸ್ತುಗಳು. ಆಧುನಿಕ ಪದ್ಧತಿಗೆ ಎರವಾದ ಈವಾಗಿನ ಎಷ್ಟೋ ಹೆಣ್ಣುಮಕ್ಕಳು ಇವೆಲ್ಲಕ್ಕೂ ತಿಲತರ್ಪಣಕೊಟ್ಟಿರುವರು. ಹಾಗೆಂದು ಪ್ರಾಚೀನರ ಹೆಳಲು ಹಾಕುವುದರಲ್ಲಿ; ಬಿಡಿಮುಡಿ ಎಳಲ್ಮುಡಿ, ಸೋಲ್ಮುಡಿ

ಸಡಿಲ್ಮುಡಿ, ಬಿಳಲ್ಮುಡಿ, ಪೂಮುಡಿ, ಈ ಏಳುಬಗೆಯ ಮುಡಿಕಟ್ಟು ವುದನ್ನು ಕಲಿತಿರುವರು. ಇನ್ನೂ ಎಷ್ಟೋಬಗೆಯ ಅಲಂಕಾರಗಳಲ್ಲಿ ಸುಧಾರಿಸಿಕೊಂಡಿರುವರು. ಈಗೆ; ಹಳೆಯದರಲ್ಲಿ ದುಂದುಗಾರಿಕೆಗೆ (ಚೈನಿಗೆ) ಬೇಕಷ್ಟನ್ನು ಆರಿಸಿಕೊಂಡು, ಉಳಿದುದನ್ನು ದೂರಮಾಡಿರುವ ಇಂಥ ಹೆಣ್ಣುಮಕ್ಕಳ ಗೊತ್ತು-ಗುರಿಯು ಏನೆಂಬುದೇ ಗೊತ್ತಾಗದು!

ಹೀಗಾಗಿ; ಪ್ರಾಚೀನರ ವೃತ್ತಿಕ್ಷೇತ್ರದಲ್ಲಿ ಗೆಲುವಿನ ಬೀಡಾಗಿದ್ದ ಈ ಭಾರತವು, ಇಂದಿಗೆ ಗೆದ್ದಲಿನ ಗೂಡಾಯಿತು! ಯಾವಕಾಲಕ್ಕು ಯಾ ಪ್ರದಾಗುವುದಕ್ಕೂ ಹೆಮ್ಮಕ್ಕಳೇ ಕಾರಣರು.

ಹೆಣ್ಣುಮಕ್ಕಳೆ! ಇಲ್ಲಿಯವರೆಗಂತು ಆದದ್ದು ಆಯಿತು. ಇನ್ನಾದರು ನೀವೂ ತಿದ್ದುಪಡಿಯಾಗಿ ಭಾವೀಪೀಳಿಗೆಗೆ ನಿರೂಪಿಸುವ ವಿಷಯ, ನಿರ್ವಹಿಸುವ ಕಾರ್ಯದಲ್ಲಿ ಸುಧಾರಿಸಿರಿ!

ನಾರೀ ಉನ್ನತಿ

ಭಾರತೀಯ ನಾರಿಯರ ಸಮಸ್ಯೆಯು ವಿಕಟ (ವ್ಯತ್ಯಾಸ ಸಮಸ್ಯೆಯಾಗಿದೆ. ಹಾಗಾದರೆ!....ವೇದವೇ ಮೊದಲ್ಗೊಂಡು ಎಲ್ಲಾ ಧರ್ಮಗ್ರಂಥಗಳಲ್ಲು ಸ್ತ್ರೀಯಳ ಯೋಗ್ಯತೆಯನ್ನು ಪುರುಷನಿಗಿಂತಲು ಹೆಚ್ಚಿನದೆಂದು ಹೇಳಲ್ಪಟ್ಟಿದೆ. ಪ್ರಾಚೀನಕಾಲದ ಹಿಂದೂ ನಾರಿಯರ ಮರ್ಯಾದೆಯು ಪೂಜಾರ್ಹಸ್ಥಿತಿಯಲ್ಲಿತ್ತು. ಸೀತಾರಾಮ, ರಾಧಾಕೃಷ್ಣ, ಗೌರೀಶಂಕರ ಮೊದಲಾದ ಹೆಸರು ಇಂದಿಗು ನೆಲೆಗೊಂಡಿದೆ

ಎನುವಾಗ; ಹಿಂದೂ ಸಮಾಜದಲ್ಲಿ, ಮೊದಲು ನಾರಿಗೆ; ನಂತರ ಪುರುಷ ನಿಗೆ ಸ್ಥಾನ-ಮಾನವಿತ್ತೆನುವುದು ಸ್ಪಷವಾಗುವುದು. ಪರಂತು ಇಂದಿನ ಹಿಂದೂ ನಾರಿಯರು ಅಂಥ ಪೂಜ್ಯಸ್ಥಾನದಿಂದ ಎಷ್ಟರಮಟ್ಟಿಗೆ ಪತಿತ ರಾಗಿರುವರೆನ್ನುವುದನ್ನು ಎತ್ತಿಹೇಳುವುದು ಬೇಡ. ಹೀಗಿರುವಾಗ ನನ್ನ ಮಾತೃಸಮಾಜವು ತಮ್ಮಿಂದತಾವೇ ತಮ್ಮ ತಮ್ಮ ದೀನ-ಹೀನತೆ ಮತ್ತು ಅಬಲತೆಯನ್ನು ತಿಳಕೊಳ್ಳದ ಕಾರಣವೇನು? ತಮ್ಮ ತಮ್ಮ ಔನ್ನತಿ ಯನ್ನು ಬಯಸಬಾರದೇಕೆ?

ಅಧೋಗತಿಗೆ ಕಾರಣವು ಬಹುಭಾಗವಾಗಿರುವುದು. ಅವುಗಳಲ್ಲಿ ಕೆಲವು ರಾಜಕಾರಣದಿಂದಾಗಿ, ಕೆಲವು ಸಾಮಾಜಿಕದಿಂದಾಗಿ. ಭಾರತವು ಅನ್ಯದೇಶಿಗರ ದಾಸ್ಯತ್ವ ವಹಿಸಿದಂದಿನಿಂದ ಪುರುಷರ ಜೊತೆಗೆ ಸ್ತ್ರೀಯರೂ ಅಧೋಗತಿಗಿಳಿದದ್ದು ಸಹಜವಾಗಿದೆ. ಏಕಂದರೆ, ಪಾಶ್ಚಿಮಾತ್ಯರ ಸಭ್ಯತನ ದಿಂದಾಗಿ, ವಿದ್ಯದ ಅಭಾವತೆಯೊದಗಿ ಸಮಾಜವನ್ನು ಕುನೀತಿಗೆ ಎಳಕೊಂ ಡಿದೆ! ನೋಡಿ s ; ಹೀಗಿರುವ ಪರಿಸ್ಥಿತಿಯು, ಯಾವ ಮಹಾರಾಣಿಯಾದ ಝಾಂಶೀ ಲಕ್ಷೀಬಾಯಿ, ಮಹಾದೇವಿ, ದುರ್ಗಾವತಿ ಮೊದಲಾದ ಅಂಥಂಥ ವೀರಮಾತೆಯರ ಸಬಲಸಂತಾನವನ್ನೂ ಅಬಲತೆಗೊಳಿಸಿಬಿಟ್ಟಿತು!

ಓದು-ಬರಹ ಕಲಿತ ಇಂದಿನ ಹೆಣ್ಣುಹುಡುಗಿಯರ ದೃಷ್ಟಿಯಿಂದ, ವೈವಾಹಿಕ ಜೀವನವು ದು:ಖಮಯ ಎನ್ನುವುದನ್ನು ಸಿದ್ಧಪಡಿಸಲು ಎಷ್ಟೆಷ್ಟೊ ಲೇಖದ ಮೇಲೆ ಲೇಖಗಳು ಹೊರಡಹತ್ತಿವೆ! ಎಷ್ಟೆಷ್ಟೊ ನುಡಿಗುಂಡಿನ ಸಿಡಿಮಳೆಯೇ ಸುರಿಯಹತ್ತಿವೆ!! ಸಹವಾಸಾನುಗುಣದಿಂದ ವಿದ್ಯೆ ಕಲಿಯು ದವರೂ ಈ ತೀವ್ರಪ್ರಚಾರಕ ಮಂಡಲದಲ್ಲಿಯೇ ಸೇರಿಕೊಂಡರು. ಪುರುಷನು ಅತ್ಯಾಚಾರಕ್ಕೆ ಹೋಗಬೇಕು ಏಕೆ? ನಾರಿಯು ದಾರಿತಪ್ಪಿ ನಡೆಯಬೇಕು ಏಕೆ!? ಮುಂತಾಗಿ ನರ-ನಾರಿಯರ ಸಂಘರ್ಷಣೆ ನಡೆದಿದೆ. ಒಟ್ಟಿನಲ್ಲಿ ಪತ್ನಿ, ಪತಿಯ ದೋಷವನ್ನೂ ಪತಿಯು ಪತ್ನಿಯ ದೋಷವನ್ನೂ ಹುಡುಕುವುದರ ಲ್ಲಿಯೇ ಇರುವರು. ಇದು ಪದ್ಧತಿಯಲ್ಲ. ವರ್ಧಮಾನವಲ್ಲ.

—

ಉನ್ನತಿ ಮಾರ್ಗ

ಆರೇ ಆಗಲಿ ತನ್ನ ದೋಷವನ್ನು ಎರಡನೆಯವರಲ್ಲಿ ಆರೋಪಿಸುವುದೆಂದರೆ ಹಿತವಲ್ಲ. ಸ್ತ್ರೀ-ಪುರುಷರು ಪರಸ್ಪರರಲ್ಲಿ ಗುಣವನ್ನೆ ಆರಿಸುವದರ ಬದಲು ಹೀಗೆ ದೋಷವನ್ನಾರಿಸುತ್ತ ಉನ್ನತಿಯ ಶಿಖರವನ್ನು ಹತ್ತಲು ಪ್ರಯತ್ನಿಸುವುದೆಂದರೆ, ಇದು ದುರಾಶೆ. ದಡ್ಡತನ. ಅಷ್ಟೆ ಅಲ್ಲ; ಅವನತಿಯೇ ಪ್ರಾಪ್ತವಾಗದಿರದು.

ಆತ್ಮೈವಹ್ಯಾತ್ಮನೋಬಂಧು ಎನ್ನುವ ವಾಕ್ಯವನ್ನು ಎಲ್ಲರೂ ಅನುಕರಣ ಮಾಡಲೇಬೇಕು. ಇನ್ನು; ನಾರಿಯರಿಗೆ ಅಬಲೆಯರೆನ್ನುವದಿದೊಂದು ಮಿಥ್ಯಾಪವಾದವು. ಇದರ ಬಗ್ಗೆ ಪ್ರಾಚೀನ ಕಾಲದ ಕೈಕೇಯೀ, ಸೀತಾ, ಶತರೂಪೆ, ದ್ರೌಪದಿ ಮುಂತಾದವರನ್ನು ಇತ್ತೀಚಿನ ಕುಮಾರಿ ಹೇಲನಕೇಲನಳು, ಸಾಧ್ವಿ ಎಲಿಜಾಬೇಥಫ್ರಾಯಿ ಮತ್ತು ವೀರಾಂಗನಾ ವನಿತಾ, ದೇವಿ ಜೋನ, ಸಾಧ್ವಿ ರಾಣಿ ಎಲಿಜಾಬೇಥಿ, ದೇವಿ ಮರಿಯಮ, ಮೈಸೂರ ಮಹಾರಾಣಿ ಲಕ್ಷ್ಮಮ್ಮಣ್ಣಿ, ಮಾತಾ ಕಸ್ತೂರಬಾ, ಮಾತಾ ಕುಂದನದೇವಿ ಮಾಲವೀಯ, ಮಾತಾಸ್ವರೂಪರಾನಿ ನೆಹರು, ಮುಂತಾದ ವೀರಮಾತೆಯರ ಮತ್ತು ಅರ್ವಾಚೀನದ ಪುಣ್ಯವಾನ ಸತಿಯರ ಮಾರ್ಗವನ್ನವಲಂಬಿಸಿದರೆ ಅನುಭವಕಾಲದ ನಾರಿಯರ ಮತ್ತು ಭಾವೀ ಪೀಳಿಗೆಯ ಪ್ರಗತಿಗೆ ಹೆದ್ದಾರಿಯಿದು.

ಗೃಹಪ್ರಬಂಧ

ವ್ಯಾಸ ಸ್ಮೃತಿ ೨ನೆಯ ಅಧ್ಯಾಯ ೨೦-೩೬ರ ವರೆಗಿನ ಶ್ಲೋಕಾಭಿಪ್ರಾಯದಂತೆ ಹೇಳುವದಾದರೆ, ಹೆಂಗಸಾದವಳು ಪ್ರಾತಃಕಾಲದಲ್ಲಿ ತನ್ನ ಪತಿಗಿಂತಲು ಮುಂಚಿತವಾಗಿ ಹಾಸಿಗೆಯಿಂದೆದ್ದು, ಪತಿಪಾದಕ್ಕೆರಗಿ ತನ್ನ ಹಾಸಿಗೆಯನ್ನು ಮಡುಚಿಕೊಂಡು ಹೊರ ಹೊರಡಬೇಕು. ಕಾಲು-ಮೋರೆ ತೊಳೆದುಕೊಳ್ಳಬೇಕು. ಮಂಡೆಯನ್ನು ಕಟ್ಟಿಕೊಂಡು ತಿಲಕಧಾರಣಳಾಗಬೇಕು. ನಂತರ ದೇವರಿಗೆ ವಂದಿಸಿ ಮನೆ ಗೆಲಸದಲ್ಲೊಂದಾದ ಮನೆಯೊಳಗಿನ ಕಸಾಝೂಡಿಸಬೇಕು. ತದನಂತರ ಗೋಮಯದಿಂದ ಸಾರಣಿಯನ್ನು ಮುಗಿಸಿ, ಪಾತ್ರೆಗಳ ಶುದ್ಧೀಕಾರ್ಯವನ್ನು ನೆರವೇರಿಸಿ, ಪತಿಯು ಹಾಸಿಗೆಯಿಂದ ಎದ್ದು ಬರುವ ಮುಂಚಿತವೆ ಆತನಿಗೆ ಮೋರೆ ತೊಳೆಯಲುಬೇಕಾದ ಸಾಮಗ್ರಿಗಳನ್ನು ನಿಯಮಿತ ಸ್ಥಳದಲ್ಲಿ ಸಂಗ್ರಹಿಸಿ, ಸ್ವಚ್ಛವಾದ ಪಾತ್ರೆಯೊಳಗೆ ಶುದ್ಧೋದಕವನ್ನು ತುಂಬಿಡತಕ್ಕದ್ದು. ಆಮೇಲೆ ಗುರು-ಹಿರಿಯರಿಗೆ ವಂದಿಸಿ, ಮನೆಯಲ್ಲಿ ಭೋಜನ ಕಾರ್ಯಕ್ಕೆ ಬೇಕಾಗುವ ಸೋಪಸ್ಕರಗಳನ್ನು ಅಂದರೆ :— ಕಾಯಿ-ಪಲ್ಲೆ ಹೆಚ್ಚುವದು, ಅಕ್ಕೀ-ಬೇಳೆ ಹಸನಗೈವುದೆ ಮೊದಲಾದ ಶುದ್ಧೀಕರಣ ಕಾರ್ಯವನ್ನೆಸಗುವುದು.

ಅಂದಿನ ಅಥವಾ ಮುಂದಿನ ಖರ್ಚಿಗೆ ಆವುದಾದರು ಸಾಮಾನು-ಸರಕುಗಳು ಕಡಿಮೆಯಾಗುವ ಸಂಶಯವಿದ್ದಲ್ಲಿ ಅದನ್ನು ಪತಿಗೆ ಸೂಚಿಸತಕ್ಕದ್ದು. ಹಾಗೆ ಸೂಚಿಸಬೇಕಾದರೆ, ಪತಿಯನ್ನು ಗದ್ದರಿಸಿಯಾಗಲೀ ಎದುರಿಸಿಯಾಗಲಿ ಹೇಳಕೂಡದು! ಕಟ್ಟಪ್ಪಣೆಯನ್ನೂ ಮಾಡಕೂಡದು. ಇಷ್ಟರೊಳಗೇ ಆಗಲೀ ಈ ಮೇಲೆಯಾಗಲಿ, ಪತಿಗೆ ದೇವತಾರ್ಚನೆಗೆ ಬೇಕಾಗುವ ಹೂ, ತುಳಸಿ, ಬಿಲ್ವಾದಿಗಳನ್ನು ಸಂಗ್ರಹಿಸಿಡತಕ್ಕದ್ದು. ತದನಂತರ ತಾನು ಜಳಕ ಮಾಡಿ, ಮಡಿಯಾಗಿ, ಪತಿಗೆ ಜಳಕಕ್ಕೆ ಅನುಕೂಲಿಸಿಟ್ಟು, ಅವನು ಸ್ನಾನ

ತೀರಿಸಿ ಬರುವಷ್ಟಕ್ಕೆ, ಆತನಿಗೆ ನಿತ್ಯಾನುಷ್ಠಾನ, ದೇವತಾರಾಧನೆಗೆ ಬೇಕಾಗುವ ಸಾಹಿತ್ಯಗಳನ್ನು ದೇವರ ಕೋಣೆಯಲ್ಲೋ, ಹೋಮದ ಗೃಹದಲ್ಲೋ ನೆಹಮಿಯಂತೆ; ಸ್ವಚ್ಛ ಮತ್ತು ಶಿಸ್ತಿನಿಂದ ಇಡತಕ್ಕದ್ದು. ತದನಂತರ ಅಡಿಗೇ-ುನೆಯ ಪ್ರವೇಶಗೈದು ಸೂಪಶಾಸ್ತ್ರದಂತೆ ಅಡಿಗೆಯನ್ನು ತಯಾರಿಸತಕ್ಕದ್ದು.

ಕುಲೀನ ನಾರಿಯು ಅಡಿಗೆಯಾದ ಕೂಡಲೆ ಪತಿಗೆ ಸೂಚಿಸಬೇಕು. ಆವಾಗ, ಪತಿಯು ಬಲಿಹರಣ ವೈಶ್ವದೇವಾದಿ ಮುಗಿಸಿದನಂತರ ಆತನ ಅಪ್ಪಣೆಪಡೆದು, ಮೊದಲು ಬಾಲಕರಿಗು ನಂತರ ಅತಿಥಿಗಳಿಗು ಅನಂತರ ಗುರು-ಹಿರಿಯರಿಗೂ ಪತಿಗೂ ಭೋಜನ ಮಾಡಿಸಬೇಕು. ಎಲ್ಲವರದು ಊಟ ಮುಗಿದಮೇಲೆ ಗಂಡನ ಅಪ್ಪಣೆ ಪಡೆದು, ತಾನು ಪ್ರಸಾದ ರೂಪವಾದ ಅನ್ನವನ್ನುಣ್ಣಬೇಕು. ಪ್ರಸಾದವೆಂದರೆ ನಾಲ್ಕುಬಗೆ. ವಿವರವನ್ನು ಗುರುಗೀತೆಯಲ್ಲಿ ನೋಡಿರಿ. ಭೋಜನಾನಂತರ ಶುದ್ಧೀಕರಣಕಾರ್ಯವನ್ನು ಮುಗಿಸಬೇಕು. ಇದರಂತೆಯೆ ಸಾಯಂಕಾಲದಲ್ಲಿ ಮಾಡತಕ್ಕದ್ದು. ದಿವಸದ ಮೂರನೇ ಪ್ರಹರದಲ್ಲಿ ಮನೆಯ ಆಡಳಿತದ ಚೌಕಸಿಪುತ್ತ ಪುರಾಣ-ಪುಣ್ಯಕತೆ ಅಥವಾ ವೇದಾಂತ ಬೋಧಕ ಮೊದಲಾದವುಗಳ ವಾಚನ–ಶ್ರವಣಗಳಲ್ಲಿ ವೇಳೆ ಹಾಕಬೇಕು.

ರಾತ್ರೀಭೋಜನಾದಿ ಕೆಲಸ ಮುಗಿದಮೇಲೆ ಸಜ್ಜಾಗೃಹದ ಶುದ್ಧಿಯನ್ನೆಸಗಿ, ಶಯ್ಯೆಯನ್ನು ಮೃದುವಾಗಿ ಸಿದ್ಧಗೈದು ಪತಿದೇವನಿಗೆ ಶಯ್ಯೆಯನ್ನಲಂಕರಿಸಲು ಪ್ರಾರ್ಥಿಸಬೇಕು. ರಾತ್ರಿ ಹತ್ತುಗಂಟೆಯ ಒಳಗೂ ಪ್ರಾತಃಕಾಲ ನಾಲ್ಕುಗಂಟೆಯ ಹೊರಗೂ ಹಾಸಿಗೆಯಲ್ಲಿರಬಾರದು !

ಸಾಯಂಕಾಲದಲ್ಲಿ ದೀಪಾರಾಧನೆ, ಶಂಖವಾದನಾದಿ ಕೆಲಸವನ್ನು ತಪ್ಪದೆ ನಡೆಸಬೇಕು. ಪುರುಷನು ಮಲಗಿದ ಮೇಲೆ ಆತನ ಅನುಮತಿಯಂತೆ ಚರಣಸೇವೆ ಮಾಡುತ್ತ ಅವನಿಗೆ ನಿದ್ದೆ ಬಂದಮೇಲೆ, ತಾನು ಪತಿ

ಧ್ಯಾನಪರಾಯಣತೆಯಲ್ಲಿ ನಿದ್ರಿಸತಕ್ಕದ್ದು. ಆ ಸಮಯ ತನ್ನ ವಸ್ತ್ರಗಳನ್ನು ರಕ್ಷಿಸಿಕೊಂಡು ಮಲಗತಕ್ಕದ್ದು. ಆ ಸಮಯದಲ್ಲಿ ಕಾಮನಾಶೂನ್ಯಳಾಗಿ ಜಿತೇಂದ್ರಿಯತೆಯಲ್ಲಿರತಕ್ಕದ್ದು.

ಉಕ್ತ ಪ್ರತ್ಯುತ್ತರನ್ ದದ್ಯಾತ್ ।
ಯಾ ನಾರೀ ಕ್ರೋಧ ತತ್ಪರಾ ।
ಸರಮಾಜಾಯತೇ ಗ್ರಾಮೇ ।
ಶೃಗಾಲೀ ನಿರ್ಜನೇವನೇ ॥

ಸ್ಕಾಂದ. ಕಾಶೀಕಾಂಡ, ಅ. ೪/೩೯

"ಪತಿಯಲ್ಲಿ ಎದುರುತ್ತರ ಕೊಡುವವಳು, ಸಿಟ್ಟನ್ನು ಮಾಡುವವಳೂ ಅನ್ಯ ಜನ್ಮದಲ್ಲಿ ನಾಯಿಯಾಗಿ ಹುಟ್ಟುವಳು. ಅಲ್ಲವಾದರೆ ನಿರ್ಜನಾರಣ್ಯದಲ್ಲಿ ನರಿಯಾಗಿ ಹುಟ್ಟಿ ಬಾಳುವಳು" ಆದುದರಿಂದ !!!

ಹೆಂಗಳೆಯರು ಯಾವಾಗಲೇ ಆಗಲಿ, ಗಂಡನ ಸಂಗಡ ಗಟ್ಟಿಯಾಗಿಯೂ ಸಿಟ್ಟನಿಂದಲೂ ಮಾತಾಡಲಾಗದು. ಖಂಡಿತ ಹೇಳಲೇಕೂಡದು. ಅಧಿಕವಾಗಿಯೂ ಅಪ್ರಿಯವಾಗಿಯೂ ವಚಿಸಬಾರದು. ವಾದ–ವಿವಾದವಂತು ಯಾವಾಗಲು ಸಲ್ಲದು. ಪ್ರಲಾಪ–ವಿಲಾಪಗಳೂ ಸಲ್ಲದು. ಯಾವ ವಿಚಾರದಲ್ಲಿಯೂ ಹಠ ಹಿಡಿಯಕೂಡದು. ಪತಿಯು ಮಾಡುವ ಧರ್ಮಕಾರ್ಯದಲ್ಲಿ ವಿರುದ್ಧವಾಗಿ ಇರಸಲ್ಲದು. ಅಸಮಾಧಾನ, ಚಂಚಲಚಿತ್ತ ಕ್ರೋಧ, ಪ್ರವಂಚನೆ, ಅತ್ಯಂತಅಭಿಮಾನ, ದುಷ್ಟತನ, ಜೀವಹಿಂಸೆ, ಸಪತ್ನೀದ್ವೇಷ, ಅಹಂಕಾರ, ಧೂರ್ತತನ, ನಾಸ್ತಿಕತನ, ದುಃಸಹವಾಸ, ಜೋರತನ, ಚೌರ್ಯತನವೆ ಮೊದಲಾದ ದುರ್ಗುಣಗಳಿಂದ ಯಾವಾಗಲೂ ಯಾರಲ್ಲೂ ದೂರವಾಗಿರಬೇಕು.

ಈ ಬಗಯಾಗಿ ಪತಿಧರ್ಮವನ್ನು ಕಾಪಾಡಿಕೊಂಡು ಜೀವಿಸುವ ನಾರಿಯು, ಧವನೆ ದೇವರೆನುವ ಭಾವನೆಯಿಂದ ಭಯ–ಭಕ್ತಿಯನ್ನಿಟ್ಟು

ನಡಕೊಳ್ಳುವ ಹೆಂಗುಸು, ಸಾಧ್ವಿಶಿರೋಮಣಿ ಎನ್ನಿಸಿ, ಐಹಿಕ ಕಲ್ಯಾಣ ಶೋಭಾಂಗಿಯಾಗಿಯೂ ಪರಲೋಕದಲ್ಲಿ ಆ ಪತಿಸ್ವರೂಪೀ ಭಗವಂತನ ನಿನ ನಲ್ಲೆ ಅಕ್ಷಯ ಸುಖಭೋಗಿಯಾಗುವ !!!

ಬಗೆಯಾಗಿ ಹೇಳಿದ ವ್ಯಾಸನ ಮತದಂತೆ ಪ್ರತಿಯೊಬ್ಬ ಸ್ತ್ರೀಯಳು ನಡಕೊಂ ಎಲ್ಲಾ ಹೆಂಗಳೆಯರು ಕುಲಲಲನೆಯರೆ ಆಗುವರು. ಹಾಗಾಗುವಲ್ಲಿ ಪ್ರತಿಯೊಂದು ಗೃಹವೂ ಸ್ವರ್ಗಗೃಹವೇ ಆಗದಿರುವುದೆ? ಸತ್ಯವಾಗಿಯೂ ಆಗುವುದು !!!

ಪತಿವ್ರತಾ ಲಕ್ಷಣ

ಪಿತೃ ವಂಶಾಃ ಮಾತೃವಂಶಾಃ ತ್ರಯಸ್ತ್ರಯಃ ।
ಪತಿವ್ರತಾಯಾಃ ಪುಣ್ಯೇನ ಸ್ವರ್ಗ ಸೌಖ್ಯಾಯ ಭುಂಜತೇ ॥

ಪತಿವ್ರತಾ ಲಕ್ಷಣದಲ್ಲಿದ್ದ ಸ್ತ್ರೀಯು ಸಾಧ್ವಿಯಾಗಿ ತನ್ನ ಇಂದ್ರಿಯ ಗಳನ್ನು ವಶಪಡಿಸಿ ಕೊಂಡಿರುವಳು. ತನ್ನ ಮತ್ತು ತನ್ನ ಗಂಡನ ಸುಖ-ದುಃಖಗಳನ್ನು ಸಮವಾಗಿ ಭೋಗಿಸುವಳು. ಅತ್ತೆ-ಮಾವನಲ್ಲಿ, ತನ್ನ ತಾಯಿ-ತಂದೆಯ ಭಾವನೆಯಿಟ್ಟು ಸದಾ ನಡಕೊಳ್ಳುವಳು. ಭಾವ-ಮೈದುನರಲ್ಲಿ, ತನ್ನ ಅಣ್ಣ-ತಮ್ಮಂದಿರಲ್ಲಿಟ್ಟ ಪ್ರೇಮವನ್ನು ಇಡುವಳು. ಗಂಡನ ಇಷ್ಟುಳಿದ ಬಳಗದವರನ್ನು, ತನ್ನ ತವರಿನ ಬಳಗವನ್ನು ತಾನು ನೋಡುವಂತೆ ನೋಡು ವಳು. ಪತಿಯ ಮಿತ್ರರಲ್ಲಿ, ಆತ್ಮೀಯ ಮಿತ್ರರಲ್ಲಿ ನಡಕೊಳ್ಳುವಂತೆ ನಡ ಕೊಳ್ಳುವಳು. ಹೊರಗಿನ ಜನರಲ್ಲಿ ವ್ಯರ್ಥವಾದ ಮಾತನಾಡುವುದೆ ಇಲ್ಲ.

ಯಾರಲ್ಲು ಕ್ರೋಧ ಮತ್ತು ದಬ್ಬಾಳಿಕೆಯ ವಚನವನ್ನು ವಚಿಸಲಾರಳು. ಪತಿಗೆ ಧರ್ಮ ಮತ್ತು ವ್ಯವಹಾರ ಕಾರ್ಯದಲ್ಲಿ ಮಂತ್ರಿಯಂತೆಯೂ ಸಾರಥಿಯಂತೆಯೂ ಸಹಾಯಕಳಾಗುವಳು. ಶಿಶುಪಾಲನೆಯಲ್ಲಿಯೂ ಅತಿಥಿ ಸತ್ಕಾರದಲ್ಲಿಯೂ ತೂಕಹಿಡಿದು ನಡಕೊಳ್ಳುವಳು. ದುರ್ಜನರಲ್ಲಿ ಪ್ರಸಂಗ ಬಂದಾಗ ಬಂದಷ್ಟೆ ಪ್ರಸಂಗವನ್ನು ಪೂರೈಸಿಕೊಳ್ಳುವ ಔಪಚಾರಿಕ ಜಾಣ್ಮೆಯಿಂದ ವರ್ತಿಸುವಳಲ್ಲದೆ ತನ್ನ ಹಿಡತ ತಪ್ಪಿರಳು. ಇನ್ನುಳಿದ ಪರಪುರುಷರಲ್ಲಿ ವ್ಯವಹರಿಸುವ ಸಮಯ ಬಂದಾಗ, ತನ್ನ ತಂದೆಯಂತೆ ಆವರನ್ನು ನೋಡುತಿದ್ದು, ಎಷ್ಟು ಬೇಕೊ ಅಷ್ಟು ಆವರಲ್ಲಿ ವ್ಯವಹರಿಸಿ ಹಿಂತಿರುಗುವಳು.

ಭಕ್ತನಾದವನು ದೇವರನ್ನು ಪ್ರೀತಿಸುವಂತೆ, ಪತಿವ್ರತೆಯು ತನ್ನ ಪತಿದರ್ಶನದಲ್ಲಿ ಪ್ರೀತಿ–ಆತುರ ಪಡುವಳು. ಎಷ್ಟೇ ಜನರಿಂದ ಎಷ್ಟೇ ಆಶಾ ಅಂಕುರಗಳು ಕಂಡು ಬಂದರು, ತನ್ನ ಸ್ವತಂತ್ರತೆಯಲ್ಲಿ ಲೋಪವಿಲ್ಲದಿರುವಳು. ಪತಿಯ ಲಾವಣ್ಯ ಹೇಗೂ ಇದ್ದರು, ಸುಂದರತ್ವದಲ್ಲಿ ಮನುಷ್ಯ ಇಷ್ಟೆಅಲ್ಲ; ದೇವ ಗಂಧರ್ವಾದಿಗಳನ್ನೂ ಧಿಃಕರಿಸುವಷ್ಟು ಸುಂದರನೆಂದೇ ನೋಡುವಳು. ಗಂಡನ ಹೊರತು ಇನ್ನಾವ ದೇವರನೂ ಭಜಿಸುವದಿಲ್ಲ. ಮರ್‍ಯಾದೆ-ಲಜ್ಜೆ-ಶೀಲಗಳ ರಕ್ಷಣೆ ಯಾಗುವಂತೆ, ಅಂಗಾಂಗಗಳಿಗು ವಸ್ತ್ರದಿಂದ ಆಛ್ಛಾದಿಸಿ ಕೊಳ್ಳುವಳು. ಸ್ತನ ಉದರ ಜಂಘೆ ಪಾದದಗಂಟುಗಳೆ ಮೊದಲಾದ ಮರ್ಯಾದಿತ ಸ್ಥಾನಗಳಂತು ಯಾವಾಗಲು ವಸ್ತ್ರದಿಂದ ಮುಸುಕೇ ಇರುವವು. ಝುಳಝುಳವಾದ ಆರಿವೆಯಿಂದ ಶೋಭಿಸುವಳು. ಮೈಮೇಲೆ ಅರಿವೆ ಇಲ್ಲದೆ ಜಳಕ ಮಾಡಲಾರಳು. ಅವಳ ಮೋರೆಯಲ್ಲಿ ಹರ್ಷವು ಗುಡಾರ ಹೊಡೆದಿರುವುದು. ಶಬ್ದವಾಗದಂತೆ ಹೆಜ್ಜೆ ಯಿಡುವಳು. ಹೊರಗಿನವರಲ್ಲಿ ಯಾವಾಗಲು ವಿನೋದ–ವಿಲಾಸಗಳನ್ನು ಮಾಡುವುದೆ ಇಲ್ಲ. ನೋಡುವದೂ ಇಲ್ಲ. ಹೊರಗಿನವರಲ್ಲಿ ಹಾಸ್ಯ ಮಾಡುವುದಾದರೆ ಅವರಲ್ಲಿರುವ ಸದ್ಗುಣವನ್ನು ಎತ್ತಿ, ದುರ್ಗುಣವನ್ನು ಕತ್ತರಿಸುವಂಥ ಸ್ಥಿತಿಯಲ್ಲೆ ಮಾಡುವಳು. ಮುತ್ತು–ರತ್ನ, ಬಣ್ಣ–ಭಂಗಾರ, ಬೆಲೆಯುಳ್ಳ ಆರಿವೆ–

ಅಂಚಡಿಗಳ ಬದಲಾಗಿ ಸದಾ ಸೌಭಾಗ್ಯದರ್ಶಕ ಶೃಂಗಾರಗಳಿಂದ ಶೋಭಿಸು ತಿರುವಳು

ವ್ರತೋಪವಾಸ ನಿಯಮಂ । ಪತಿಮುಲ್ಲಂಘ್ಯಮಾಚರೇತ್ ।
ಆಯುಷ್ಯಂ ಹರತೇ ಭರ್ತೃಃ । ಮೃತಾನಿರಯ ಮೃಚ್ಛತಿ ॥

(ಸ್ಕಾಂದ. ಕಾಶೀಕಾಂಡ, ಅ. ೪/೩೫)

" ಪತಿಯ ವಾಕ್ಯವನ್ನು ಉಲ್ಲಂಘಿಸಿ, ವ್ರತೋಪವಾಸ ಪೂಜಾ ಯಾವುದನ್ನು ಮಾಡಿದರೂ ಗಂಡನ ಆಯುಷ್ಯವು ಕ್ಷೀಣವಾಗುವುದಿಷ್ಟೆ ಅಲ್ಲ; ಸತ್ತಮೇಲೆ ನರಕವಾಸಿಯಾಗುವಳು. " ಇದನ್ನರಿತೇ

ತೀರ್ಥ ಸ್ನಾನಾರ್ಥಿನೀ ನಾರಿ । ಪತಿಪಾದೋದಕಂ ಪಿಬೇತ್ ।
ಶಂಕರಾದಯ ವಿಷ್ಣೋರ್ವಾ । ಪತಿರೇಕೋಽಧಿಕ ಸ್ತ್ರೀಯಾಂ ॥

ಸ್ಕಾಂದ. ಕಾಶೀಕಾಂಡ, ಅ. ೪/೩೪

" ತೀರ್ಥಸ್ನಾನದಲ್ಲಿ ಇಚ್ಛೆಯಾದವಳು ಪತಿಪಾದ ತೀರ್ಥವನ್ನು ಕುಡಿಯಬೇಕು. ಏಕೆಂದರೆ, ಶಿವ ವಿಷ್ಣು ಮೊದಲಾದ ಎಲ್ಲಾ ದೇವರಕಿಂತಲು ಪತಿಯೇ ಶ್ರೆಷ್ಠನು." ಇವನ್ನೆಲ್ಲ ಅರಿತೇ ಪತಿವ್ರತೆಯಾದವಳು. ಶಾಶ್ವತಪದ ಪ್ರಾಪ್ತಿಗಾಗಿ ಸಾಕಷ್ಟು ಸಾಧನವನ್ನು ಪತಿಯ ಅನುಮತಿಯಂತೆ ಮಾಡುತಿರುವಳು. ಎಂತಹ ಬಿಕ್ಕಟ್ಟಿನ ಸಮಯದಲ್ಲು ಅಕ್ಷರಶಃ ಅಸತ್ಯವನ್ನು ನುಡಿಯಲಾರಳು. ಎಂಥ ದಾರಿದ್ರ್ಯ ಬಂದರು ಕಳ್ಳತನ ಮಾಡುವದಿಲ್ಲವು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯತೃಷೆಗಳಲ್ಲಿ ಉಗುಳಿದ ಎಂಜಲದಷ್ಟೇ ಪ್ರೀತಿಸುವಳು. ತನ್ನ ಮನೆಯಲ್ಲಿ ಆವಹೊತ್ತಿಗೆ ಎಷ್ಟು ಇರುವುದೊ, ಸಿಗುವುದೊ, ಅಷ್ಟರಿಂದಲೆ ತೃಪ್ತಳಾಗುವಳು. ವಿದ್ಯಾ–ವಿನಯಗಳನ್ನು ಗೌರವಿಸುವಳು. ಉದಾರಿಯೂ ಚತುರಳೂ ಧರ್ಮ-ನೀತಿ-ಸದಸದ್ ವ್ಯವಹಾರಗಳಲ್ಲಿ ಪರಾಯಣಳಾಗಿ, ಅವುಗಳನ್ನೆ ತನ್ನವರಿಗು ಅನ್ಯರಿಗು

ಬೋಧಿಸುವಳು. ತನ್ನಿಂದ ಆರಿಗು ದುಃಖವಾಗದಂತೆ ಎಚ್ಚರದಿಂದಿರುವಳು. ದಾಯಾದಿಗಳಲ್ಲಾಗಲಿ, ಸವತಿಇದ್ದರೆ ಅವಳಲ್ಲಾಗಲಿ, ಅವಳ ಮಕ್ಕಳು ಬಂಧು-ಬಳಿಗಳಲ್ಲಾಗಲಿ, ತನ್ನವರೆಂದೇ ಭಾವಿಸಿ ನಡಕೊಳ್ಳುವಳು. ಪುರಾಣ-ಪುಣ್ಯಕತೆಗಳನ್ನು ಕೇಳುವುದು ಹೇಳುವುದು ಅವಳ ನಿತ್ಯದ ಕೃತ್ಯದಲ್ಲ ದೊಂದು. ತನ್ನಂತೆ ನಡತೆಯುಳ್ಳವರಲ್ಲೆ ಗೆಳೆತನ ಬೆಳೆಸುವಳು. ಪತಿಗೆ ಆಪಮಾನ ವಾಗುವಂಥ ಸ್ಥಿತಿ–ಮಾತುಗಳನ್ನು ಎಂದೆಂದೂ ತಾರಳು. "ಜನ್ಮ ವೆತ್ತಿದ್ದಕ್ಕೆ ಇಂಥ ಅಸಾರವಾದ ಸಂಸಾರವನ್ನು ಆವ ಬಗೆಯಿಂದಲಾದರು ಹೊರಗೆ ಹಾಕದಿದ್ದರೆ, ಮನುಷ್ಯತ್ವದ ಒರೆ ಹೇಗೆ ಹತ್ತುವುದು ? ಅದಕ್ಕೆ ಉಪಾಯವೇನು ?" ಈ ಮೊದಲಾದ ಆಲೋಚನೆಯೆ ಅವಳ ದಿನಚರಿಯ ಪಾರಾಯಣವು.

ಇತ್ಯಾದಿ ಶುಭಗುಣ ಲಕ್ಷಣಯುಕ್ತಳೆ ಪತಿವ್ರತೆಯು.

ಈ ಬಗೆಯಿಂದ ಉಪಯುಕ್ತ ಲಕ್ಷಣಾನ್ವಿತ ಬ್ರಾಹ್ಮಿ, ಸುಂದರಿ, ಚಂದನಬಾಲಾ, ರಾಜೀಮತಿ, ದ್ರೌಪದಿ, ಕೌಸಲ್ಯಾ, ಮೃಗಾವತಿ, ಸುಲಸಾ, ಸೀತಾ, ಸುಭದ್ರಾ, ಶಿವೆ, ಕುಂತಿ, ಶೀಲವತಿ, ದಮಯಂತಿ, ಪುಷ್ಪಚೂಲಾ, ಮತ್ತು ಪದ್ಮಾವತಿ ಮೊದಲಾದ ಅನೇಕ ಸತಿಶಿರೋರತ್ನಗಳು ನಮ್ಮ ಈ ಭಾರತಮಾತೆಯ ಉದರದಲ್ಲಿ ಉದಯಿಸಿ ಹುದುಗಿಕೊಂಡರು. ಆವರಾದರೂ ಆನೇಕ ಪ್ರಕಾರದ ಸಂಕಟ ಸಮಯವನ್ನು ಎದುರಿಸಿ ವೀರಮಾತೆಯರೆನಿಸಿ ಪಾತಿವ್ರತ್ಯದ ಪಾಠಶಾಲೆಯಂತಿದ್ದು, ಪಾರ್ಥಿವ ಗಾತ್ರವನ್ನು ಪತನಗೈದರೂ ಕೀರ್ತಿಕಾಯವನ್ನು ನಕ್ಷತ್ರಾಳಿಗಳಂತೆ ಇಂದಿಗೂ ಎಂದಿಗೂ ಮಿನುಗಿಸುತ ಲಿರುವರು.

ನನ್ನ ಆಕ್ಕರೆಯ ಅಕ್ಕ–ತಂಗಿಯರೆ! "**ಸತಿ**" ಈ ಎರಡು ಅಕ್ಷರದ ಪದವನ್ನು ಹೊಂದಬೇಕಾದರೆ ಸಹಜ–ಸುಲಭವಲ್ಲ. ಸಾಮಾನ್ಯರಿಗೆ ಅಸಾಧ್ಯವು. ಅಸಾಧ್ಯವನ್ನೂ ಸಾಧ್ಯಗೊಳಿಸುವೆನೆಂಬ ಹಠಯೋಗ ಹಿಡಿದರೆ ಎಲ್ಲವರಿಗೂ ಅದು ಸುಲಭಸಾಧ್ಯವು.

ನೋಡಿರಿ; ಪತಿ ಆಜ್ಞಾಧಾರಣವೇ ಸತಿಪದದ ಅಧಿಕಾರ. ಇದಿಷ್ಟು ನಡೆಸಲು ನಿಮಗೆ ಅಸೌಲಭ್ಯವೇ ? ಗಂಡನ ಮಾತನ್ನು ನಡೆಸಲಾಗದವಳು ಅವಳು ಹೆಂಡತಿಯೆ? ಗಂಡನಿಗೆ ಎದುರುತ್ತರ ಈಯುವವಳು ಹೆಂಡತಿ ಯೆನಿಸುವಳೆ ? ವಿಚಾರಪರರಾಗಿರಿ! ಆಚಾರದಲ್ಲಿಳಿಯಿರಿ !! ಕ್ಷಣಿಕ, ತುಚ್ಛ ಈ ಸಂಸಾರ ಸುಖಉಣ್ಣುವುದಕ್ಕಾಗಿ, ಕನಿಷ್ಟವಾದ ಇಂದ್ರಿಯಗಳಿಗೆ ಸ್ವಾತಂತ್ರ್ಯವಿತ್ತು, ನಿಮ್ಮ ಭಾವೀಬಾಳುವೆಯನ್ನು ಹಾಳುಗೆಡಹಬೇಡಿರಿ !!!

ಪಾತಿವ್ರತ್ಯದ ಫಲಶ್ರುತಿ

ಪತಿವ್ರತಾ ಧರ್ಮಪಾಲನೆಯಿಂದ ಇಹಲೋಕ-ಪರಲೋಕ ವಷ್ಟೆ ಅಲ್ಲ; ಕ್ರಮೋನ್ನತಿಯಿಂದ ಮೋಕ್ಷಕ್ಕು ಅದೇ ಕಾರಣವಾಗುವುದು. ಪುರುಷನಿಗೆ ಜಪ-ತಪ ಅನುಷ್ಠಾನಗಳಿಂದ ಯಾವ ಅಲೌಕಿಕ ಶಕ್ತಿಪ್ರಾಪ್ತಿಯೊ ಅದೇ ಶಕ್ತಿಯು ನಾರಿಯರಿಗೆ ಸತಿಧರ್ಮ ಪಾಲನೆಯಿಂದ ಒದಗು ವುದು. ಇದಕ್ಕೆ ಉದಾಹರಣೆಯಾಗಿ ರಾಮಾಯಣ ಭಾರತಾದಿ ಪುಣ್ಯ ಗ್ರಂಥ ಗಳಲ್ಲಿ ಕಂಡುಕೊಳ್ಳಬಹುದು. ಯಾವ ಕಾಲದಲ್ಲೆ ಆಗಲಿ, ಸತಿಧರ್ಮ ಪಾಲನೆಯಿಂದ ದೈವಿಕಶಕ್ತಿಯನ್ನು ಸಂಪಾದಿಸಿದ ನಾರಿಯರೆಂದರೆ, ಭಾರತೀಯರೇ ಅಧಿಕ. ಹಾಗಿರುವ ನಿತಂಬಿನಿಯರಿಂದಲೆ ಈ ಭಾರತವು ಜಗತ್ತಿನಲ್ಲೆ ಅಗ್ರಸ್ಥಾನ ಪಡೆದಿದೆ !

ನ ಸ್ತ್ರೀ ಸ್ವಾತಂತ್ರ್ಯ

ಸ್ತ್ರೀಯಳಿಗೆ ಸ್ವತಂತ್ರವು ಯಾವಾಗಲು ಇಲ್ಲ. ಬಾಲ್ಯದಲ್ಲಿ ತಾಯಿ–ತಂದೆ, ಯೌವನದಲ್ಲಿ ಪತಿ, ವಾರ್ಧಿಕ್ಯದಲ್ಲಿ ಮಕ್ಕಳ ಪಾಲನೆಯಲ್ಲಿ ಇರಬೇಕೆನ್ನುವುದು ನೈಸರ್ಗಿಕವಾದುದು. ಸ್ತ್ರೀಯು ಎಷ್ಟೆ ಬಲಶಾಲಿಯಿರಲಿ ಪುರುಷನನ್ನು ತಿರಸ್ಕರಿಸುವಷ್ಟು ಸಾಮರ್ಥ್ಯ ಅವಳಿಗಿಲ್ಲ. ಅವಳ ಶೀಲವನ್ನು ಪೋಷಿಸುವ ಭಾರವು ಮಾತ್ರ ಅವಳ ಸ್ವಾತಂತ್ರ್ಯದಲ್ಲಿ ಇರುವುದು.

ಪ್ರಶ್ನೆ:— ನಾರಿಯಳಿಗೆ ಮಂತ್ರಾನುಷ್ಠಾನಗಳ ಬಲವಿಲ್ಲದೆ, ವ್ರತೋಪವಾಸ ವಿಧಿಯೂ ಶಾಸ್ತ್ರದಲ್ಲಿ ಎತ್ತದೆ ಇರಲು, ಅವಳಿಗೆ **'ಯತ್ರ ನಾರ್ಯಸ್ತು ಪೂಜ್ಯಂತೆ'** ಎನ್ನುವ ಶ್ಲೋಕದ ಅರ್ಥದಂತೆ ಅಷ್ಟೊಂದು ಪೂಜ್ಯಸ್ಥಾನವು ಹೇಗೆ ದೊರಕಿತು ?

ಉತ್ತರ :— ಇದೇ ಪ್ರಶ್ನೆಯನ್ನು ಮುನ್ನ ನಾರದನು ಸೃಷ್ಟಿಕರ್ತನಾದ ಬ್ರಹ್ಮದೇವರ ಹತ್ತರ ಕೇಳಿದ್ದನು. ಅದಕ್ಕೆ ಅವರು ಹೇಳಿದ್ದೆಂದರೆ, "ಪ್ರಾಣಿಮಾತ್ರಕೆ ಕಾಮಾಗ್ನಿಯ ಬಾಧೆ ತಪ್ಪಿದ್ದಲ್ಲ. ಅದರಲ್ಲು ನಾರಿಯರಿಗೆ **'ಕಾಮೋಷ್ಟ ಗುಣಧಾ ಸ್ಮೃತಾ'** 'ಕಾಮವು ಎಂಟು ಪಟ್ಟು' ಅಂತಾ ಇರುವುದು. ಹಾಗಿದ್ದರು, ಅದನ್ನು ತಣಿಸಿ ನಿಯಮಿತವಾಗಿ ಅಂದರೆ, ತಮ್ಮ ತಮ್ಮ ಪತಿಯ ಹೊರತಾಗದೆಯು, ಅವನಲ್ಲಾದರು ಅತಿಕಾಮಿಯೆನಿಸದೆಯು ಇರಲು ಸಾಧನವಾದ, ಪತಿಯೆ ಪರದೈವವೆಂಬ ಭಾವನಾಮಯ ವ್ರತಾಧೀನವಾಗಿರುವುದರಿಂದ, ಅವರಿಗೆ ಅಂಥ ಗೌರವ ಪೂರ್ಣಸ್ಥಾನವು ಲಭಿಸಿದೆ." ಎಂದಿರುವನು.

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನ ವ್ರತಂ ನಾಪ್ಯುಪೋಷಿತಮ್ ।
ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹೀಯತೇ ॥

"ಸ್ತ್ರೀಯರಿಗೆ ಪ್ರತ್ಯೇಕವಾಗಿ ಯಜ್ಞ–ಯಾಗಾದಿ ಯಾವ ಕರ್ಮವನ್ನು ಆಚರಿಸುವ ಅಗತ್ಯವಿಲ್ಲ, ವ್ರತ–ಉಪವಾಸಗಳನು ಮಾಡುವ ಅವಶ್ಯವಿಲ್ಲ. ಕೇವಲ ಪತಿಧರ್ಮಪರಾಯಣಳಾದರೆ ಉತ್ತಮೋತ್ತಮಗತಿ ದೊರೆಯುತ್ತದೆ."

ನಾರಿಯರು, ತಮ್ಮತಮ್ಮ ಅಭಾಗ್ಯದ ದೆಸೆಯಿಂದ ವಿಧವೆಯಾಗುವರು. ಹಾಗಾದ ಮಾತ್ರಕ್ಕೆ ಸ್ವತಂತ್ರ ಬಂತೆಂದಾಗಲಿಲ್ಲ. ಒಟ್ಟಾರೆ ಸತಿ–ಪತಿಗಳ ಶರೀರವು ಒಂದೆ ಎನ್ನುವುದು ಶಾಸ್ತ್ರಸಿದ್ಧ, ಸರ್ವಸಮ್ಮತ. ಆದುದರಿಂದ ಪತಿ ಆದವನು ಸತಿಯಳ ಮಾನಾಪಮಾನ, ಆಪತ್ತು-ಸಂಪತ್ತು ಮೊದಲಾದವುಗಳನ್ನು ಬಹು ಎಚ್ಚರಿನಿಂದ ಈಕ್ಷಿಸುತ್ತ, ಕೆಡುಕನ್ನು ಕಡೆಗಣಿಸಿ ಅವರನ್ನು ಪೊರೆಯುತಿರಬೇಕು. ಆದರಂತೆ, ಸತಿಯಳು ಪತಿಯ ಆಗು–ಹೋಗುಗಳಿಗು ಭಾಗಿಯಾಗಿ ಶಕ್ಯವಿದ್ದಮಟ್ಟಿಗು ಹಿತವನ್ನಾಚರಿಸಬೇಕು. ಅನ್ಯದೇಶದಲ್ಲಿ ಅವಿವಾಹಿತ ಸ್ತ್ರೀಯರುಗಳುಸಹ ನಮ್ಮ ದೇಶದ ವಿಧವೆಯರಂತೆ ಸ್ವೇಚ್ಛಗಳಾಗಿರುವರು. ಆರೇ ಇರಲಿ, ಆವ ದೇಶದಲ್ಲೆ ಆಗಲಿ, ನಾರಿಯರು ಸ್ವಚ್ಛಂದವಾಗಿರಕೂಡದು. ಹಾಗೇನಾದರು ಇದ್ದ ಹೆಣ್ಣುಮಕ್ಕಳು ಪದಭ್ರಷ್ಟರಾಗುವರೆನಲು ಸಾಕಷ್ಟು ಉದಾಹರಣೆಗಳುಂಟು.

ಹಿಂದೂ ವಿವಾಹದಲ್ಲಿಯ ಪತ್ನಿಯ ಸಮಾಧೃತ ಸ್ಥಾನ

ಸ್ತ್ರೀ–ಪುರುಷರ ಸಂಯೋಗವು ಪ್ರಪಂಚ ವಿಕಾಸದ ತಾಯ್ಬೇರು. ಇದು ನೈಸರ್ಗಿಕ ಪ್ರವೃತ್ತಿದ್ವಾರಾ ಸ್ತ್ರೀ–ಪುರುಷರ ಜೋಡಣೆಯು ಸಂಬಂಧಿಸುವುದು. ಈ ರೀತಿಯ ನಡತೆಯಿಂದ ಜಾತಿಯ ಮರ್ಯಾದೆಯು

ಪರಂಪರಾಗತವಾಗಿ ಗತಿಸಿ ಬಂದಿದೆ. ಇದರಲ್ಲಿ ಇನ್ನೊಂದೆಂದರೆ; ವಿಧಾತನ ವಿಲಕ್ಷಣವಾದ ಚತುರತೆಯ ಫಲಸ್ವರೂಪವು;ಸ್ತ್ರೀ-ಪುರುಷರ ಸಂಯೋಗದಿಂದ ಐಂದ್ರಿಯಸುಖದ ಅದ್ಭುತ ಲಾಭ ಮತ್ತು ಮಾನಸಿಕ ತೃಪ್ತಿ, ಹಾಗೇನೇ ಸಂತತಿಯಾಗುವುದರಿಂದ, ತನ್ನ ಸೃಷ್ಟಿಯ ಬೆಳವಣಿಗೆಯಲ್ಲಿ ಪೂರ್ಣತೆ ಮತ್ತು ಸ್ವಸ್ವರೂಪ ಲಭ್ಯತೆಗೆ ಪರಿಚಯವು, ಈ ಮಾರ್ಗವಾಗಿ ಉದಯಿಸುತ್ತದೆ. ಸ್ತ್ರೀ-ಪುರುಷರ ಸಂಯೋಗಜನ್ಯ ಸಂತತಿದ್ವಾರಾ ತಾಯಿ-ತಂದೆಗಳ ಮತ್ತು ಪ್ರಸಂಗಾನುಸಾರ ಆ ಆನುವಂಶಿಕ ಉತ್ತರದಾಯಿತ್ವ (ಉತ್ತರಾಧಿಕಾರ) ದ ಪ್ರಗತಿಯಾಗುವುದು.

ಹೀಗಿರುವ ಉತ್ತರಾಧಿಕಾರಿಯ ಲಭ್ಯವು, ದತ್ತಕ ಸ್ವೀಕಾರವಾಗಲಿ, ವಿವಾಹ ಪದ್ಧತಿಯಲ್ಲಾಗಲಿ ಇರತಕ್ಕದ್ದು, ಮತ್ತು ಸ್ತ್ರೀ-ಪುರುಷರ ಸಂಯೋಗವಾದರು ಮರ್ಯಾದಿತವಾಗಿರಬೇಕೆನುವ ಧ್ಯೇಯದಿಂದಲೆ ಸಮಸ್ತ ಸಭ್ಯ ಸಮಾಜವು ವಿವಾಹ ಪದ್ಧತಿಯನ್ನು ಇಟ್ಟುಕೊಂಡದ್ದಾಗಿದೆ. ಬರಬರುತ್ತ ಇನ್ನೂ ಎಷ್ಟೆಷ್ಟೊ ನಿಯಮಗಳು ಕೇವಲ ಹೆಸರಿಗೆಮಾತ್ರ ನಿಂತಿವೆ.

ಪ್ರಾಚೀನದಿಂದಲು ಅಸಭ್ಯಜಾತಿಯವರು, ತಮ್ಮ ಪ್ರಾಧಾನ್ಯತೆಯನ್ನು ಸ್ವಾರ್ಥಕ್ಕನುಗುಣವಾಗಿ ಸ್ವೇಚ್ಛೆಯಲ್ಲಿಟ್ಟುಕೊಂಡರು.ಮಧ್ಯಕಾಲದಲ್ಲಿ ಸಮಾಜದ ವೈವಾಹಿಕ ನಿಯಮದ ಧಾರ್ಮಿಕ ಪ್ರಾಧಾನ್ಯವು ಹೋಗಿ ಬಿಟ್ಟಿತಲ್ಲದೆ ಸಾಮಾಜಿಕವ್ಯವಸ್ಥಾ, ಹಾಗೇನೆ ವೈಯಕ್ತಿಕ ಭೌತಿಕ ಹಿತದ ಅವಹೇಲನವೂ ಆಗಿ ಹೋಯಿತು. ಆಧುನಿಕ ಪ್ರಗತಿಶೀಲ ಸಮಾಜವಂತು, ವೈಯಕ್ತಿಕ ಸ್ವತಂತ್ರದ ಸಂಗಡ ಸಾಮಾಜಿಕ ವ್ಯವಸ್ಥೆಯ ಐಕ್ಯತೆಯನ್ನು ಸ್ಥಾಪಿಸುವುದರಲ್ಲಿ ತೊಡಗಿ, ಪರಸ್ಪರ ವಿರೋಧಿ ನಿಯಮಗಳ ನಿರ್ಮಾಣ ಮಾಡಿಬಿಟ್ಟಿದೆ. ಈ ಬಗೆಯ ರಚನೆಯಿಂದಾಗಿ 'ಆ ಮೂಲನೈಸರ್ಗಿಕ ನಿಯಮಗಳ ತಿರಸ್ಕಾರ(ಅವಹೇಲನ)ವಾಯಿತು.ಹೀಗಾಗಿ, ಸ್ತ್ರೀಯರ ಗರ್ಭಧಾರಣೆಯ ಜೀವನವು ಅನಾಥಾಶ್ರಮವಾಗಿಬಿಟ್ಟಿತು ! ಅಷ್ಟೇ ಅಲ್ಲ; ಅವರ

ಯೌವನವಾದರೂ ಹಿತ-ಮಿತದಿಂದ ತಪ್ಪಿ ಹೋಗುತ್ತಲಿದೆ. ಇವೆಲ್ಲವುಗಳ ಜೊತೆಗೆ ನೈತಿಕ ಜೀವನ (ನೀತಿಯುಕ್ತ ಜೀವನ), ಆಧ್ಯಾತ್ಮಿಕ ಜೀವನ ಇವೆರಡೂ ನಿಂದಿತವಾಗುತ್ತಲಿವೆ. ಇದು ಸನಾತನಿಯ ಸಮಾಜಕ್ಕ ತಿರಸ್ಕೃತವಾದಂತಾಗಿದೆ. ಈ ಪರಿಯನೆಲ್ಲ ತಪ್ಪಿ ಉಳಿಯಬೇಕಾದರೆ ಸರ್ವ ಕಾಲವೂ ಸತೀತ್ವವನ್ನು ಕಾದುಕೊಳ್ಳಬೇಕು. ಹಾಗಿರುವ ವಿವಾಹ ನಿಯಮದಲ್ಲಿ ಮೂರು ಬಗೆಯ ಪರಿಣಾಮವುಂಟು.

(೧) ಕೇವಲ ವ್ಯಕಿಗತ ಇಂದ್ರಿಯ ತೃಪ್ತಿ.

(೨) ಶುದ್ಧ ಸಾಮಾಜಿಕಹಿತ ಅಂತೆಯೇ ನೈಸರ್ಗಿಕ ಲಾಭ.

(೩) ಆಧ್ಯಾತ್ಮಿಕ ಉನ್ನತಿ.

ಹೀಗೆ ನಡೆವವರ ಮಾರ್ಗವು ಸುಗಮವಾಗುವುದು. ಇಷ್ಟೆ ಅಲ್ಲ; ಗಂಡ–ಹೆಂಡರು ಒಮ್ಮನದಿಂದ ಬಾಳುವುದರಲ್ಲಿ ಮಾನವಜಾತಿಯ ವಿಕಾಸವಾಗುವುದಲ್ಲದೆ, ಪರಾಕಾಷ್ಠೆಯ (ಅತ್ಯಂತ್ಯ) ದಲ್ಲಿ ಮೋಕ್ಷಪದ ಲಾಭವೂ ಆಗುವುದು.

ಹಿಂದುಗಳಲ್ಲಿ ವಿವಾಹವೆನ್ನುವುದು ಈ ಬಗೆಯಿಂದಾಗಿ ಪವಿತ್ರ ಸಂಸ್ಕಾರವೆನಿಸಿಕೊಂಡಿದೆ. ಮುಸಲ್ಮಾನ, ಇಸ್ಲಾಮ್ (ಕ್ರೈಶ್ಚನ್) ಹಾಗೇನೆ ಅನ್ಯ ಧರ್ಮಾವಲಂಬಿಗಳಲ್ಲಿ, ವಿವಾಹವು ಒಂದು ಬಗೆಯ ನಿಯಂತ್ರದ ಎಲ್ಲೆಯಲ್ಲಿ ಸಾಗುತ್ತಿದೆ. ಆ ಕಾರಣವಾಗಿ ವಿವಾಹದ ಹೆಸರಿನ ಗುತ್ತಿಗೆಯನ್ನು ಸ್ವೀಕರಿಸಬೇಕಾದರೆ ದೇಶದ ಶಾಸನರೂಪದ ಸರಕಾರದಲ್ಲಿ ದಾಖಲೆಯನ್ನು ನಮೂದಿಸಬೇಕಾಗುವುದು. ಇದರಲ್ಲಿ ಸ್ತ್ರೀಯರಿಗೆ ಬಹುಶಃ ಸ್ವೆಚ್ಛಾಚಾರಕ್ಕೆ ಎಡೆಯಾಗುವುದಿಷ್ಟೆ ಅಲ್ಲದೆ; ಸೋಡಚೀಟಿನ ದ್ವಾರಾ ಬೇರೇ ಪುರುಷನನ್ನು ಸೇರಲಿಕ್ಕು ಆಸ್ಪದ ಸಿಗುವುದು.

ಪ್ರಶ್ನೆ:— ಹಿಂದೂ ಪದ್ಧತಿಯಂತೆ ಮದುವೆಯಾದರೆ ಸೋಡಚೀಟಿ ಗಾಗಲಿ ಇನ್ನುಳಿದ ಸ್ವೇಚ್ಛಾಚಾರಕ್ಕಾಗಲಿ ಆಸ್ಪದ ಸಿಗುವುದಿಲ್ಲವೆ ?

ಉ :— ಸಿಗುವದು. ಹಾಗಿದ್ದರು ಪರಿಣಯದಲ್ಲಿ;

ನೀಲಲೋಹಿತೇ ಭವತಃ ಕೃತ್ಯಾಽ ಸಕ್ತಿರ್ಯಜ್ಯತೇ ಎಸಂತೇ ಅಸ್ಯಾ ಜ್ಞಾತಯಃ ಪತಿ ಬಂಧೇಷು ಬಧ್ಯತಾಂ ।

"ಹೇ ಕಮಲಾಕ್ಷೀ! ಈ ಸೆರಗನ್ನು ಹೇಗೆ ಗಂಟು ಹಾಕುವೆವೊ ಹಾಗೇ ನಿಮ್ಮಿರ್ವರ ದಾಂಪತ್ಯ ಪ್ರೇಮ ಬಂಧನವು ಜೀವನಾಂತ್ಯದವರೆಗು ಅವಿಚ್ಛಿನ್ನವಾಗಿರಲಿ" ಎಂದು ಬ್ರಾಹ್ಮಣರು ಮಂಟಪದಲ್ಲಿ ಆಶೀರ್ವಾದ ಪೂರ್ವಕ ವಧು–ವರರ ಸೆರಗನ್ನು ಕಟ್ಟುವರು. ಇನ್ನು; ವಿವಾಹ ಹವನಕಾಲ ದಲ್ಲಿ, ವರನು ವಧುವಿಗಾಗಿ ಹೇಳುವುದೆಂದರೆ—

ಮಮಹೃದಯೇ ಹೃದಯಂತೇ ಅಸ್ತು। ಮಮಚಿತ್ತೇ
ಚಿತ್ತಮಸ್ತುತೇ ಮಮವಾಚಮೇಕಮನಾಶೃಣು।
ಮಾಮೇವಾನುವ್ರತಾ ಸಹಚರ್ಯಾ ಮಯಾಭವ।

ಇತ್ಯಾದಿಯಾಗಿಯೂ ದೇವ-ಬ್ರಾಹ್ಮಣ, ಗುರು-ಅಗ್ನಿ, ಬಂಧು-ಬಾಂಧ ವಾದಿ ಸಾಕ್ಷಿಯಿಟ್ಟಾಗಿಯೂ ಪರಿಣಯವನ್ನು ನೆರವೇರಿಸುವುದರಿಂದ ಇವೆಲ್ಲ ವುಗಳ ಆಂತರಿಕ ಶಕ್ತಿಯ ಪ್ರಾಭಲ್ಯದಿಂದಲೂ ಸನಾತನಿಗಳು ಹಾಕಿಕೊಟ್ಟ ಪಾಪ-ಪುಣ್ಯಗಳ ಬೆದರಿಕೆಯಿಂದಲೂ ಸ್ವೇಚ್ಛಾಚಾರದಲ್ಲಾಗಲಿ ಸೋಡಚೀಟಿ ನಲ್ಲಾಗಲಿ ಹೆಜ್ಜೆಯನ್ನಿಡಲು ಅಂಜುವರು. ಅಷ್ಟೆ ಏಕೆ; ಆಧ್ಯಾತ್ಮಿಕ ದೃಷ್ಟಿ ಯಿಂದ ನೋಡಿದರೆ, ಸ್ತ್ರೀ-ಪುರುಷರು ಒಂದೇ ಶರೀರವೆಂದು ಕಂಡುಬರು ವುದು. ಹಾಗಿರುವ ಉಪದೇಶ ಸಂಸ್ಕಾರವು ಸನಾತನ ಪದ್ಧತಿಯ ಪರಿಣಯ ದಲ್ಲಾಗುವುದು. ಆ ಮಾರ್ಮಿಕವನ್ನರಿಯುವುದರಿಂದಾಗಿ, ಸತಿ-ಪತಿಗಳ ಜೋಡಣೆಗೆ ಧಕ್ಕೆಬಾರದಂತೆ ನಡಕೊಳ್ಳಲು ಸಾಕಷ್ಟು ಸಹಾಯವಾಗುವುದು.

ಇದನ್ನು "ಅರ್ಧನಾರೀ ನಟೇಶ್ವರ" ನೆಂದು ಬಿರುದು ಹೊತ್ತ ಪಾರ್ವತೀ ಪರಮೇಶ್ವರರನ್ನು ನೋಡಿದರೇ ಸಾಕು. ರಜಿಸ್ಟರು ಮೊದಲಾದ ಇನ್ನಾವ ಬಗೆಯ ಲಗ್ನದಲ್ಲು ಇದಾವ ಬಗೆಯ ತಿಳುವಳಿಕೆಯಾಗಲಿ ಅಂಜಿಕೆಯಾಗಲಿ ಇರುವುದಿಲ್ಲ.

ಸ್ತ್ರೀಯರಿಗೆ ಗುರುವು ಯಾರು.

ಇಂದಿನ ಕಾಲದಲ್ಲಿ ಕುಶಿಕ್ಷೆಯ ಪ್ರಕಾಶವು ಜನತೆಯ ಮೇಲೆ ಬೀಳುತ್ತಿರುವುದರಿಂದ ವ್ಯಕ್ತಿಧರ್ಮವು ರಸಾತಲಕ್ಕದ್ದಲ್ಪಟ್ಟಿತು. ಅರ್ಥ ಕಾಮಲಂಪಟರಾಗಿ, ಶಾಸ್ತ್ರಜ್ಞಾನವನ್ನರಿಯದೆ, ಧರ್ಮದ ಹೆಸರಿನಿಂದ ದುರ್ವ್ಯಾಪಾರಗಳನ್ನು ಮಾಡುತ್ತ ಜೀವಿಸುವರು. ಇನ್ನೆಷ್ಟೊ ಜನರು ಅಶಿಕ್ಷಣದ ಫಲವಾಗಿ **"ಪಿತೃವಾಕ್ಯಂ ಪ್ರಮಾಣಂ"** ಎನುವ ವಾಕ್ಯವನ್ನು ಮುಂದಿಟ್ಟುಕೊಂಡು ಜೀವಿಸುವರು. ತಾತ್ಪರ್ಯ; ತನ್ನ ಅಜ್ಜ ಅಪ್ಪನ ಕಾಲದಿಂದ ನಡೆದು ಬಂದದ್ದು, ಅದನ್ನು ಬಿಡಲಾಗದು, ಅನ್ನುತ ಅದೇ ಹಾದಿಯುಂದಲೆ ನಡೆಯುವರು.

ದೇಶಾಚಾರಸ್ತಾವದಾದೌ ವಿಚಿಂತ್ಯೊ
ದೇಶೇ ದೇಶೇ ಯಾ ಸ್ಥಿತಿಃ ಸೈವ ಕಾರ್ಯಾ

"ಯಾವ ದೇಶದಲ್ಲಿ ಮೊದಲಿನಿಂದಲು ಯಾವ ಬಗೆಯ ಆಚಾರವು ನಡೆದು ಬಂದಿರುವುದೊ ಆ ಆಚಾರವೇ ಕರ್ತವ್ಯವಾಗಿರುವುದು." ಶಾಸ್ತ್ರಕ್ಕು

ಶಿಷ್ಟತೆಗು ಮಿಕ್ಕ ಹಿರಿಯರ ಕಾಲದ ನಡತೆ ನಡೆದು ಬಂದಿದ್ದರೆ, ವೈಯಕ್ತಿಕ ಆಚಾರವಾದ ಆ ಆಚಾರವು "**ಪಿತರಾಚರ**" ವೆನಿಸುವುದು.

ವಿಹಿತೋ ಧರ್ಮಃ ತದಲಾಭೆ ಶಿಷ್ಟಾಚಾರಃ ಪ್ರಮಾಣಮ್
(ವಶಿಷ್ಟ ಸ್ಮೃತಿ)

"ಶಾಸ್ತ್ರ ವಿಹಿತ ಕರ್ಮವು ಧರ್ಮಾಚಾರವೆನಿಸುವುದು. ಶಾಸ್ತ್ರಪ್ರಮಾಣದಲ್ಲಿ ಸಿಗದೆ ಇದ್ದ ಕರ್ಮವು ಶಿಷ್ಟಾಚಾರವೆನಿಸಿ, ಅದೂ ಪ್ರಾಮುಖ್ಯವು." ಶಿಷ್ಟಾಚಾರವೆಂದರೆ ಅದೂ ಸಮಾಜ ನೀತಿಜಾತ ಕರ್ಮವಾಗಿರುವುದು. ಒಟ್ಟಿನಲ್ಲಿ ಸಾಮಾಜಿಕ ಸುವ್ಯವಸ್ಥೆಗೆ ಮೂರು ಬಗೆಯ ಆಚಾರಗಳು ಜನ್ಮ ಎತ್ತಿವೆ.

ಧರ್ಮಜಿಜ್ಞಾಸಮಾ ನಾನಾಂ ಪ್ರಮಾಣಂ ಪರಮಂ ಶ್ರುತಿಃ
ದ್ವಿತೀಯಂ ಧರ್ಮಶಾಸ್ತ್ರಂತು ತೃತೀಯಂ ಲೋಕಸಂಗ್ರಹಃ
[ಮಹಾಭಾರತ, ಅನುಶಾಸನಪರ್ವ]

"ಧರ್ಮಜಿಜ್ಞಾಸುಗಳಿಗೆ ಆಚರಿಸಲು ಆಧಾರಭೂತ ವಿಧಿಯಂದರೆ; ಮೊದಲಿನದು ವೇದ,ಎರಡನೆಯದು ಶಾಸ್ತ್ರ,ಮೂರನೆಯದು ದೇಶಾಚಾರವು. ಹೀಗಿರುವ ಮೂರು ಆಚಾರಗಳಲ್ಲಿ ಮೂರನೆಯದಾದ ಶಿಷ್ಟಾಚಾರದ ಒಳಭೇದವಾಗಿ, "**ಕುಲಸಾಂಪ್ರದಾಯಕ**" ವಿರುವುದು. ಇದು ನಾಲ್ಕನೆಯದು. ಇವಕ್ಕೆಲ್ಲ ವಿರುದ್ಧವಾಗಿ ವಿಧಾನಪಾರೀಜಾತದಲ್ಲಿ ಹೇಳಿದ್ದೆಂದರೆ :—

ಸ್ಮೃತಿರ್ವೇದ ವಿರೋಧೇತು ಪರಿತ್ಯಾಗೊ ಯಥಾ ಭವೇತ್
ತಥೈವ ಲೌಕಿಕಂ ವಾಕ್ಯಂ ಸ್ಮೃತಿಬಾಧೆ ಪರಿತ್ಯಜೇತ್

"ವೇದ ವಿರುದ್ಧ ಸ್ಮೃತಿಯನ್ನುಪರಿತ್ಯಾಗ ಮಾಡಬೇಕು. ಸ್ಮೃತಿವಿರುದ್ಧ ಲೋಕಾಚಾರವನ್ನು ತ್ಯಜಿಸಬೇಕು."

ಸರ್ವತ್ರಹಿ ಶಾಸ್ತ್ರಪ್ರಾಪಿತಾ ಏವ ಧರ್ಮಾ ಉಪಾಸ್ಯಾ
ನ ವಿದ್ಯಮಾನಾ ಅಪ್ಯಶಾ ಸ್ತ್ರೀಯಾಃ

(ಛಾಂದೊ. ಶಾ. ಭಾ. ೨|೭-೧)

"ಹೀಗಿರುವ ಶ್ರುತ್ಯಾಚಾರ, ಶಾಸ್ತ್ರಾಚಾರ, ದೇಶಾಚಾರ, ಕುಲಾಚಾರವೆಂದು ನಾಲ್ಕುಬಗೆಯ ಆಚಾರಗಳು ಮಾನವರಿಗೆಂದು ಎತ್ತಿವೆ. **'ಮಾನವರು'** ಎಂಬ ಬಹುವಚನವನ್ನು ತೆಗೆದುಕೊಳ್ಳಲು ಕಾರಣವೆನಂದರೆ, ಸ್ತ್ರೀ-ಪುರುಷರೆಲ್ಲವರಿಗು ಸಂಬಂಧವೆಂದು ತಿಳಿಯಬೇಕು. ಹೀಗಿರುವ ಜನಸಮುದ್ರವು ಹಾಗಿರುವ ಆಚಾರಗಳಲ್ಲಿ ಒಂದಕ್ಕೊಂದು ತೊಡರು ಬಾರದಂತೆ ನೋಡಿಕೊಳ್ಳಬೇಕಾಗುವುದು. ಇಂತಹ ಆಚಾರನಿಷ್ಠರಾಗಬೇಕಾದರೆ ನಿಷ್ಠುರ ಬುದ್ಧಿಯನ್ನೂ ಕಳೆದುಕೊಳ್ಳಬೇಕಾಗುವುದು. ಅದನ್ನು ಕಳೆಯಲು **ಸದ್ಗುರು**ವನ್ನೂ ಶರಣು ಹೊಂದಬೇಕಾಗುವುದು. ಅಂಥ ಗುರುವು ಶರಣುಬಂದ ಇಂಥ ಶಿಷ್ಯನ, ಅಡ್ಡ-ತಿಡ್ಡ ಬುದ್ಧಿಯನ್ನು ತಿದ್ದಿ ಸರಿಯಾದ ಮಾರ್ಗದರ್ಶಿ ಆಗುತ್ತಾನೆ.

ಗುರುವೆಂದರೆ ಯಾರು? ಎಲ್ಲಿರುವನು? ಈ ಮೊದಲಾದ ಪ್ರಶ್ನೆಯ ಕಡೆಗೆ ಹೊರಳಿ ನೋಡಿದರೆ;

ಗುರುರಗ್ನಿರ್ದ್ವಿಜಾತೀನಾಂ । ವರ್ಣಾನಾಂ ಬ್ರಾಹ್ಮಣೋ ಗುರುಃ।
ಪತಿರೇವ ಗುರು ಸ್ತ್ರೀಣಾಂ । ಸರ್ವಸ್ಯಾಭ್ಯಾಗತೋ ಗುರುಃ॥

"ಬ್ರಾಹ್ಮಣರಿಗೆ ಅಗ್ನಿಯೂ ಇನ್ನುಳಿದ ವರ್ಣದವರಿಗೆ ಬ್ರಾಹ್ಮಣನೂ ಸ್ತ್ರಿಯಳಿಗೆಪತಿಯೂ ಸರ್ವರಿಗು ಅತಿಥಿಯೂ ಗುರುವು." ಮಕ್ಕಳಿಗೆ ಹೆತ್ತವರೇಗುರುವು. ಸ್ವಾನುಭವದಂತೆ ಇಲ್ಲಿ ಹೇಳುವುದಿದ್ದರೆ, ಸರ್ವರಿಗೂ ಜ್ಞಾನಸಿದ್ಧನೇ ಸದ್ಗುರುವು. ವಾಲ್ಮೀಕರಾಮಾಯಣದಲ್ಲಿ ಹಲವೆಡೆಗೆ ಇದೇ ಮಾತನ್ನೆ ಎತ್ತಿ ಹೇಳಿರುವುದು. ಸ್ತ್ರೀಯರಿಗಾಗಿಯಂತೂ ಒತ್ತಿ ಒತ್ತಿ ಹೇಳಿದೆ.

ವಿದಿತಂ ತು ಮಮಾಪ್ಯೇತದ್ಯಥಾ ನಾರ್ಯಾಃ ಪತಿರ್ಗುರುಃ

(ವಾಲ್ಮೀಕಿ. ಅಯೋ. ೧೧೮।೨)

"ಹೆಂಗಸಿಗೆ ಗಂಡನೇ ಗುರುವೆಂಬುವುದು ನನಗೆ ಗೊತ್ತಿದೆ." ಹೀಗೆ ಸೀತೆಯು ಅನಸೂಯಾದೇವಿಯೊಡನೆ ಹೇಳಿರುವಳು. ರಾವಣನು ಸೀತೆಯ ಇದಿರಿನಲ್ಲಿ ಶ್ರೀ ರಾಮನನ್ನು ಜರಿಯಲು, ಅದಕ್ಕೆ ಪ್ರತ್ಯುತ್ತರವಾಗಿ ಸೀತೆಯು ಹೇಳಿರುವುದೆಂದರೆ :—

ದೀನೋ ವಾ ರಾಜ್ಯಹೀನೋ ವಾ ಯೋ ಮೇ ಭರ್ತಾ ಸ ಮೇ ಗುರುಃ

(ವಾಲ್ಮೀಕಿ)

"ದೀನನಾಗಲಿ, ರಾಜ್ಯಭ್ರಷ್ಟನಾಗಲಿ, ಹೇಗೇ ಇರಲಿ, ಪತಿಯೇ ನನಗೆ ಗುರುವು."

ಪತಿರ್ಹಿ ದೇವತಾ ನಾರ್ಯಾಃ ಪತಿರ್ಬಂಧುಃ ಪತಿರ್ಗುರುಃ
ಪ್ರಾಣೈರಪಿ ಪ್ರಿಯಂ ತಸ್ಮಾದ್ಭರ್ತುಃ ಕಾರ್ಯಂ ವಿಶೇಷತಃ ||

"ನಾರಿಯರಿಗೆ ಪತಿಯೆ ದೇವರು. ಪತಿಯೆ ಬಂಧು-ಬಾಂಧವ ವರ್ಗವು. ಪತಿಯೆ ಗುರುವು. ಅಷ್ಟೆ ಅಲ್ಲ; ತನ್ನ ಪ್ರಾಣಕಿಂತಲು ಪ್ರಿಯತಮನು. ಆದ್ದರಿಂದ ಪತಿಸೇವೆಯೆ ಹೆಚ್ಚಿನದು."

ಪತಿಸೇವಾ ಗುರೌವಾಸಃ

(ಮನು. ೨।೬೭)

"ಸ್ತ್ರೀಯರಿಗೆ ಗುರುಕುಲವಾಸವೆಂದರೆ, ಪತಿಸೇವೆಯು."

ಬೃಹಸ್ಪತಿಯು, ಅಗಸ್ತ್ಯಪತ್ನಿಯಾದ ಲೋಪಾಮುದ್ರೆಯ ಪ್ರಶಂಸೆ ಮಾಡುತ್ತ ಹೇಳಿದ್ದೆಂದರೆ :—

ಭರ್ತಾ ದೇವೋ ಗುರುರ್ಭರ್ತಾ ಧರ್ಮ ತೀರ್ಥ ವ್ರತಾನಿಚ
ತಸ್ಮಾತ್ಸರ್ವಂ ಪರಿತ್ಯಜ್ಯ ಪತಿಮೇಕಂ ಸಮರ್ಚಯೇತ್

(ಸ್ಕಂದ. ಕಾಶೀಖಂ. ೪/೪೮)

"ಪತಿಯೆ ದೇವರು. ಪತಿಯೆ ಗುರುವು. ಧರ್ಮ, ತೀರ್ಥ, ಕ್ಷೇತ್ರ ವ್ರತ ಮುಂತಾದವೆಲ್ಲವೂ ಪತಿಯೆ ಆಗಿರುವನು. ಆದ್ದರಿಂದ ಎಲ್ಲವನ್ನು ಬಿಟ್ಟು ಪತಿಪೂಜೆ ಮಾಡಬೇಕು."

ಪತಿರೇಕೋ ಗುರುಸ್ತ್ರೀಣಾಂ ಈ ಮೊದಲಾದ ಇನ್ನೂ ಎಷ್ಟೊ ಆಧಾರಗಳಿವೆ.

ಒಟ್ಟಾರೆ; ಶಾಸ್ತ್ರವೆಂದರೆ ಮನುಷ್ಯನ ಕರ್ತವ್ಯಾಕರ್ತವ್ಯ ನಿರ್ಣಯ ವನ್ನು ಹೇಳುವುದಾಗಿದೆ. ಅದರಿಂದಲೆ............

''ತಸ್ಮಾಚ್ಛಾಸ್ತ್ರ ಪ್ರಮಾಣಂತೆ ಕಾರ್ಯಾಕಾರ್ಯ ವ್ಯವಸ್ಥಿತಃ"
''ಸರ್ವಸ್ಯ ಲೋಚನಂ ಶಾಸ್ತ್ರಮ್"

ಈ ಮೊದಲಾದ ವಾಕ್ಯಗಳಿರುವವು.

ಹಾಗಿರುವ ಎಲ್ಲ ಆಧಾರಗಳಿಂದಲು, ನಾರಿಯರು ತಮ್ಮ ತಮ್ಮ ಪತಿಯ ಸೇವಾತತ್ಪರತೆಯಲ್ಲಿರಬೇಕೆನುವುದೇ ಆಖೇರದ ಮುಖ್ಯ ಉದ್ಗಾರವು.

ವಿವಾಹದ ಉದ್ದೇಶ

ಆವುದೇ ಬೆಳೆಯನ್ನು ಬೆಳೆಸುವುದಾದರು ಮೊದಲು ಕ್ಷೇತ್ರ ಬೇಕು. ಅದಕೆ ತಕ್ಕಾದ ಬೀಜವನ್ನು ಬಿತ್ತಬೇಕು. ಆದರಲ್ಲು ಉತ್ತಮ

ಕ್ಷೇತ್ರದಲ್ಲಿ ಒಳ್ಳೇಬೀಜವನ್ನು ಪದ್ಧತಿಯಂತೆ ಉತ್ತಿ ಬೆಳೆಸಿದರೆ ಯೋಗ್ಯವಾದ ಬೆಳೆಯೇ ಬೆಳೆಯುವುದು.

ಪರಮಾತ್ಮನು ತನ್ನ ಸೃಷ್ಟಿಕ್ರಮದ ಹೆಚ್ಚಳಕ್ಕಾಗಿಯು ಅದು ಸ್ವೇಚ್ಛಾಚಾರವಾಗಬಾರದಾಗಿಯು ಒಂದು ಕ್ರಮಬದ್ಧ ಶಾಸನ ಗೈದಿರುವನು. ಅದು ಹದಿನಾರು ಬಗೆಯು. ಅವುಗಳಲ್ಲಿ ಒಂದಾದದ್ದು **ವಿವಾಹ.** ಹೀಗೆ ಕ್ರಮಬದ್ಧಶಾಸನ ಪೂರ್ವಕ ಪ್ರಜೋತ್ಪತ್ತೀಸಂಸ್ಕಾರವಾಗುವಲ್ಲಿ ಉತ್ತಮೋತ್ತಮ ಸಂತಾನವು ಅಭಿವೃದ್ಧಿಯಾಗುವುದು. ಆದರಿಂದ ಸಂಸಾರದ ಸಾಗುವಳಿಯು ಭೂಷಣಪ್ರಾಯವಾಗುವುದಲ್ಲದೆ ಅಕುಂಠಿತವಾಗಿಯು ಸಾಗುವುದು. ಹಿಗಾಗುತ್ತಾಗುತ್ತ ಸದ್ಧರ್ಮಾಭಿವೃದ್ಧಿಯಿಂದಾಗಿ ಸದ್ಗತಿಯು ಕರತಲ ಫಲವಾಗುವುದು !

ಸ್ತ್ರೀಯಳ ಮತ್ತು ಪುರುಷನ ಭೋಕ್ತೃ–ಭೋಗ್ಯ ಭಾವವು ಸ್ವಭಾವ ಸಿದ್ಧವಾಗಿಯೆ ಇರುವುದು. ಅದು ನಿಯಮಿತ ಸ್ಥಿತಿಯಲ್ಲಿ ನಡೆಯಬೇಕೆಂದು ವಿವಾಹಾದಿ ಕರ್ಮಗಳನ್ನು ಶಾಸ್ತ್ರವು ಬೋಧಿಸುತ್ತದೆ.

ಕನ್ಯಾ ಮತ್ತು ವರ ಇದರ ಅನ್ವೇಷಣ ಪದ್ಧತಿಯು ಎಲ್ಲಕಡೆಗು ಇದ್ದದ್ದೆ. ಆದರೆ....ಪುರುಷನಿಗಿಂತ ಸ್ತ್ರೀಯು ಅತಿಕಾಮಿಯಾಗಿರುವುದರಿಂದ ಕನ್ಯೆಯಿಂದ ವರಾನ್ವೇಷಣವು ಅಷ್ಟು ಶ್ರೇಷ್ಠವಲ್ಲೆಂದು ಮನ್ನಿಸಲಿಲ್ಲ. ಆದರಿಂದಲೆ ಪಾಲಕನಾದವನು ತಕ್ಕಾದ ವರನನ್ನು ಹುಡುಕಿ ಹುಡುಗಿಯನ್ನು ಲಗ್ನಮಾಡಿಕೊಡುವುದು ರೂಢಿಯಲ್ಲಿದೆ.

ಪುರಾಕಾಲೆ ಕುಮಾರೀಣಾಂ ಮೌಂಜಿ ಬಂಧನ ಮಿಷ್ಯತೆ ॥

"ಪುರಾತನ ಕಾಲದಲ್ಲಿ ಕನ್ಯೆಗೆ ಉಪನಯನ ಮಾಡುವ ಪದ್ಧತಿ ಇತ್ತು. ಈಗಿನ ಕಾಲಕ್ಕೆ ಕನ್ಯಗೆ ಲಗ್ನವೇ ಉಪನಯನ ಮತ್ತು ವಿವಾಹ

ಜೀ

ಎರಡೂ ಆಗಿದೆ. ಪುರುಷನಿಗೆ ಮೌಂಜಿಬಂಧನವಾದನಂತರ ಗುರುಕುಲ ವಾಸವೆಂತೊ ಅಂತೆಯೆ ಸ್ತ್ರೀಗೆ ಪತಿಗೃಹವಾಸವೆ ಗುರುಕುಲವಾಸವು.

ಸ್ತ್ರೀ–ಪುರುಷ ಧರ್ಮದಲ್ಲಿ ಅತ್ಯಾಚಾರ, ನಿರ್ದಯತಾ, ಗುಲಾಮಗಿರಿ, ಸ್ವಾರ್ಥಪರಾಯಣತೆ ಮೊದಲಾದ ಪಾಶವೀಶಕ್ತಿಯ ದಾಸ್ಯಪಾಶವು ಬಲಿಯುವುದುಂಟು. ಇಷ್ಟೆ ಅಲ್ಲ. ಸ್ತ್ರೀ–ಪುರುಷರ ಭೋಕ್ತೃ ಭೋಗ ಭಾವವು ಯಾವಾಗಲು ಅಧೋಗಾಮಿಯಾಗುವುದು. ಈ ಬಗೆಯಾದ ಸ್ತ್ರೀ–ಪುರುಷರಿಗಾಗಿ ಭಗವಂತನಾದ ಮನುವು ದೊಡ್ಡ ಅಪವಾದ–ಅನಾದರಗಳನ್ನು ಹೊರಿಸಿರುವನು. ಅದನ್ನು ತಪ್ಪಿಸಲು ಗೃಹಸ್ಥಾಶ್ರಮ ಕಾಯದೆಯನ್ನು ನಿರ್ಮಿಸಿ ಆ ಕಾಯದೆಯನ್ವಯ ಲಗ್ನಕಾಲದಲ್ಲಿ ಬ್ರಾಹ್ಮಣ, ಭೂಮಿ, ಅಗ್ನಿ ಮೊದಲಾದ ದೈವಿಕ ಶಕ್ತಿಯನ್ನು ಸಾಕ್ಷಿಯಿಟ್ಟು ಧರ್ಮ, ಅರ್ಥ, ಕಾಮಗಳಲ್ಲಿ ಪರಸ್ಪರರು ಅನುಯಾಯಿಗಳಾಗಿ ನಡಕೊಳ್ಳಲು ಪ್ರತಿಜ್ಞಾಪೂರ್ವಕ ವಧು–ವರರ ಪಾಣಿಗ್ರಹಣವಾಗುವುದು. †

ವಿವಾಹವೆನುವುದು ಪ್ರಪಂಚವನ್ನು ಚಿತ್ರಿಸುವ ಒಂದು ಗೋಡೆಯಾಗಿದೆ. ಗೃಹಭದ್ರತೆಗಾಗಿ ರಚಿಸುವ ಭಿತ್ತಿಯು ಪದ್ಧತಿಯಂತೆ ಅಂದರೆ :– ಸೋಸಿದ ಮಣ್ಣುಗಳಿಂದ ಕಟ್ಟಿದ ಭಿತ್ತಿಗಿಂತಲು ಕಲ್ಲಿನಿಂದಲೂ ಶಿಮೇಂಟ್ ಕಾಂಕ್ರೇಟ್ ಮಾಡಿ ಬಂಧಿಸಿದರೆ ಎಷ್ಟು ಗಟ್ಟಿಮುಟ್ಟಾಗಿ ಕಂಗೊಳಿಸುವದು? ಅದರಂತೆ ಕುಲ, ಶೀಲ, ಜಾತಿಶೋಧದಿಂದಲೂ ಗುಣ–ವರ್ಣಗಳ ಚೌಕಶಿಯಿಂದಲೂ ತಕ್ಕದ್ದಾಗಿ ಎಸಗಿದ ದೇಹಸಂಬಂಧವು ಆ ದಂಪತಿಗಳಲ್ಲಿ ಸ್ತ್ರೀಯಳ ಮಾತೃತ್ವಶಕ್ತಿಯೂ ಪುರುಷನ ಪಿತೃತ್ವ ಶಕ್ತಿಯೂ ಬೆಳೆದು ಆ ಪ್ರಪಂಚವು ಏಳಿಗೆಯ ಕೈಪಿಡಿಯಾಗುವುದು. ಅದಲ್ಲದೆ ವಿವಾಹ ವಿಧಿ ನಿಷಿದ್ಧ ದೇಹಸಂಬಂಧದಿಂದ ಪ್ರಾಪ್ತವಾಗುವ ಮಾತೃತ್ವಶಕ್ತಿಯಾಗಲೀ ಪಿತೃತ್ವಶಕ್ತಿಯಾಗಲಿ ದೋಷಕರ ಮತ್ತು ಹೇಯಕರವು. ಏಕಂದರೆ :— ವೈವಾಹಿಕ ವಿಧಾನದಲ್ಲಿ

(ಇದೇಪುಟದ ೧೨ನೇ ಪಂಕ್ತಿಯ ತಿದ್ದುಪಡಿ)

† …ದರಿಂದ ಮೋಕ್ಷಫಲ ವೃ[illegible]ಲನಕೂಲವೂ ಆಗುವದು.

ಪ್ರಾಣೈಸ್ತೇ ಪ್ರಾಣಾನ್ ಸಂದಧಾಮಿ ।
ಅಸ್ಥಿಭಿಸ್ತತಸ್ಥೀನಿ ಮಾಂಸೈರ್ಮಾಂಸಾನಿ ತ್ವಚಾತೇತ್ವಚಂ
ಸಂದಧಾಮಿ ॥

ಇತ್ಯಾದಿ ವಾಕ್ಯಗಳಿಂದ ಕಂಡು ಬರುವುದೆಂದರೆ; ಪುರುಷನು ವೇದ ಸಂಸ್ಕಾರ ಆಚ-ರಗಳಿಂದ ಪವಿತ್ರವಾದ ಅಸ್ಥಿ ಮಾಂಸ ರೇತ ತ್ವಚಾದಿ ಸಪ್ತ ಧಾತುಗಳಿಂದ ಬೆಳೆದ ದೇಹವುಳ್ಳವನು. ಸ್ತ್ರೀಯಳಿಗೆ ಆ ಸಂಸ್ಕಾರಾಚಾರಾದಿ ಬಲವಿಲ್ಲದಿರುವುದರಿಂದಲೂ ಅಪವಿತ್ರವಾದ ಆಹಾರವನ್ನು ತಿನ್ನುವುದ ರಿಂದಲೂ ಅಪವಿತ್ರವಾದ ಸಪ್ತಧಾತುಗಳಿಂದ ಬೆಳೆದ ದೇಹವಾಗಿರುವುದು. ಆದರಿಂದಲೇ, ವೈವಾಹಿಕ ಪದ್ಧತಿಯಂತೆ ಸತಿ–ಪುರುಷರ ಮಿಲನವಾದಲ್ಲಿ, ಮುಂದಿನ ಪ್ರಜೋತ್ಪತ್ತಿಯು ಪವಿತ್ರಮಯವೂ ಆದರಿಂದ ದೇಶದ ಔನ್ನತೆಯೂ ಆಗುವುದೆಂದು ತಿಳಿದೇ ಮನುವು ಈ ಬಗೆಯಾದ ಶಾಸನವನ್ನು ನಿರ್ಮಿಸಿರುವನು !

ವಿವಾಹದ ಒಳಭೇದ

ಮನುಸ್ಮೃತಿಯ (೩।೨೬–೩೪) ಆ ಶ್ಲೋಕಗಳ ಆಧಾರದಂತೆಯೂ ಇನ್ನಿತರ ಆಧಾರದಂತೆಯೂ ನೋಡಲಾಗಿ ಎಂಟು ಬಗೆಯ ವಿವಾಹವು ಕಂಡು ಬರುವುದು. ಅವುಗಳಲ್ಲಿ "ಬ್ರಾಹ್ಮೀ ವಿವಾಹ"ವು ಮೊದಲನೆಯದು. ಬ್ರಾಹ್ಮೀ ವಿವಾಹವೆಂದರೆ ಬ್ರಹ್ಮ ಪ್ರಾಪ್ತಿ. ಅರ್ಥಾಥ್ ಗೃಹಸ್ಥ ಧರ್ಮದ ಪಾಲನೆಯಿಂದ ಮೋಕ್ಷಪ್ರಾಪ್ತಿಯಾಗುವುದು.

ಎರಡನೇ ಪ್ರಕಾರದ ವಿವಾಹವೆಂದರೆ "**ದೈವ ವಿವಾಹ.**" ಇದು ಅಲಂಕಾರ ಕನ್ಯಾದಾನಕ್ಕೆ ಸಂಬಂಧ ಪಟ್ಟ ಹೆಸರು. ಇದೊಂದು ಯಜ್ಞ.

ಆರೇ ಇರಲಿ, ತನ್ನ ಯೋಗ್ಯತೆಗೆ ಸಮುಚಿತವಾಗಿಯೂ ತನ್ನ ಚರಿತ್ರೆಗೆ ಪ್ರಮಾಣವಾಗಿಯೂ ಈ ದಾನ ಮಾಡುವವನು ಸನಾತನೀಯ ಸಮಾಜದಲ್ಲಿ ಉನ್ನತಿಶೀಲನೆನಿಸುವನು. ಒಂದು ಕಾಲದಲ್ಲಿ ಯಾಜನ (ಯಜ್ಞಕರ್ಮ) ವು ಆದರಣೀಯವೂ ಧನಾವಹ (ದ್ರವ್ಯ ಕೊಡತಕ್ಕ) ವು ಆದ ಕರ್ಮವಾಗಿತ್ತು.

ಇಂಥ ಸ್ಥಿತಿಯಲ್ಲಿ ಆ ದಾನವನ್ನು ಪರಿಗ್ರಹಿಸುವ ಪತಿಯು ಆ ಕನ್ಯೆಯ ಮತ್ತು ಆವಳ ತಾಯಿ–ತಂದೆಗಳಿಂದಲೂ ಬಂಧು-ಬಳಿಯಿಂದಲೂ ಸರ್ವ ಪ್ರಥಮನಾಗಿದ್ದನು. ಇಂಥ ದೈವವಿವಾಹವು ಉಚ್ಚವರ್ಗದಲ್ಲಿ ಇಂದಿಗೂ ಅಲ್ಲಲ್ಲಿ ವಿರಳವಾಗಿಯಾದರು ಕಾಣಬಹುದು!

(೩) "ಆರ್ಷ ವಿವಾಹ." ಆರ್ಷ ವಿವಾಹವು ಋಷಿಕುಲಕ್ಕೆ ಸಂಬಂಧಿಸಿದ್ದು. ಋಷಿಕುಲದಲ್ಲಿ ಬ್ರಹ್ಮಚಾರಿಗಳೇ ಹೆಚ್ಚು. ಇನ್ನೇನಾದರು ಕೆಲವೊಬ್ಬರು ವಿವಾಹವಾದರೂ ಕೇವಲ ಭೋಗೇಚ್ಛುಗಳಾಗಲ್ಲ. ಸುಪುತ್ರಕಾಮಿಗಳಾಗಿ ಗೃಹಸ್ಥಾಶ್ರಮದಿಂದ ಆತಿಥಿಸತ್ಕಾರಾದಿ ಧರ್ಮಪಾಲನೆಯಾಗುವದೆಂದು ಲಗ್ನವಾಗುತ್ತಿದ್ದರು.

ಹಾಗೆ ಇಚ್ಛಿಸುವ ಪುರುಷನಿಗೆ ಕನ್ಯೆಯ ಮಾತಾ-ಪಿತರುಗಳು ದಾಂಪತ್ಯಜೀವನಕೆ ಸಾಕಾಗುವಷ್ಟು ಸಂಗ್ರಹಗಳನ್ನು ತಮ್ಮತಮ್ಮ ಶಕ್ತಿಗನುಸರಿಸಿ ದತ್ತ ಮಾಡುತ್ತಿದ್ದರು.

ಈ ಆರ್ಷ ವಿವಾಹದಲ್ಲಿ ಆಧ್ಯಾತ್ಮಿಕಭಾವ ಇಲ್ಲ ಎನ್ನವಂತಿಲ್ಲ. ಇದಕ್ಕೆ ಆಗಸ್ತ್ಯ–ಲೋಪಾಮುದ್ರೆಯರ ಉದಾಹರಣೆ ಸಾಕು.

(೪) "ಪ್ರಾಜಾಪತ್ಯ ವಿವಾಹ." ಇದು ಕೇವಲ ಸಂತಾನಪ್ರಾಪ್ತಿಗಾಗಿಯೇ ಇರುವುದು.

ಬ್ರಾಹ್ಮ ವಿವಾಹದಿಂದ ಹುಟ್ಟಿದ ಮಕ್ಕಳು ಒಳ್ಳೆಯವರಾದರೆ, ಪಿತಾಮಹಾದಿ ಹತ್ತು ತಲೆಯ ಮತ್ತು ಪುತ್ರ ಪೌತ್ರಾದಿ ಹತ್ತು ತಲೆಯ ಉದ್ಧಾರ

ವಾಗುವುದು. ತನ್ನ ಇಪ್ಪತ್ತೊಂದು ಜನ್ಮಗಳಲ್ಲಿ ಮಾಡಿದ ಪಾಪಗಳೆಲ್ಲ ಮುಕ್ತವಾಗುವವು. ದೈವವಿವಾಹದಿಂದ ಜನ್ಮಿಸಿದ ಮಕ್ಕಳು; ತನ್ನ ಹಿಂದೆ ಏಳು, ಮುಂದೆ ಏಳು ತಲೆಯವರನ್ನು ಉದ್ಧರಿಸುವರು. ಆರ್ಷವಿವಾಹದಿಂದ ಉತ್ಪನ್ನರಾದವರು ಹಿಂದೆ ಮೂರು, ಮುಂದೆ ಮೂರು, ತಲೆಯವರನ್ನು ಉದ್ಧರಿಸುವರು. ಪ್ರಜಾಪತ್ಯ ವಿವಾಹದಿಂದ ಉದಯಿಸಿದ ಮಕ್ಕಳು, ಹಿಂದೆ ಆರು ಮುಂಪೆ ಆರು ತಲೆಯವರನ್ನು ಉತ್ತೀರ್ಣಗೈವರು.

ಒಟ್ಟಿನಲ್ಲಿ; ಈ ನಾಲ್ಕೂ ಬಗೆಯ ಲಗ್ನದ ಫಲವಾಗಿ; ಸುರೂಪಿ, ಸದ್ಗುಣಿ, ಬಲವಾನ್, ಧನವಾನ್, ಧರ್ಮಿಷ್ಠ, ಈ ಮೊದಲಾದ ಸಂಪನ್ನತೆ ಯಿಂದ ಕೂಡಿದ, ದೀರ್ಘಾಯುಷಿ ಮಕ್ಕಳಾಗುವರು.

(ಮನು. ೩ । ೩೭-೪೨)

ಇನ್ನುಳಿದ ನಾಲ್ಕು ಬಗೆಯ ವಿವಾಹವು ಅಪ್ರಾಶಸ್ತ್ಯವು. ಹಾಗಿರುವ ಅವುಗಳಿಗೆ ಶಾಸ್ತ್ರವು ಆಜ್ಞೆಕೊಟ್ಟಿತೆಂದರೆ; ಜಗತ್ತಿನಲ್ಲಿ ಎಲ್ಲಬಗೆಯ ಗುಣ-ಧರ್ಮಾವಲಂಬಿಗಳಿರುವುದರಿಂದಲೂ ದುರಾವಲಂಬಿಗಳಿಂದ ಜಗತ್ತಿನಲ್ಲಿ ಕೋಲಾಹಲವೇಳಬಾರದೆಂದೂ ಆ ಬಗೆಯಾಗಿ ಆಜ್ಞಾಪಿಸಿದೆ.

(೫) **ಅಸುರ ವಿವಾಹ.** ಇದು ಶುಲ್ಕ ತೆಗೆದು ಕೊಂಡು ಕನ್ಯಾ ವಿವಾಹ ಮಾಡುವುದು. ದುಡ್ಡಿನ ಆಶೆಗಾಗಿ ಹೊಟ್ಟೇ ಮಕ್ಕಳನ್ನು ವಯೋ ವೃದ್ಧರಿಗಾಗಲಿ ಆಚಾರಭ್ರಷ್ಟರಿಗಾಗಲಿ ಎಂಥವರಿಗೆ ಆದರೂ ಮಾರಿ ಬಿಡುವರು. ಅದರಿಂದ ಆ ಮಕ್ಕಳ ಜೀವನವು ಸರಿಯಾಗಿ ನಡೆಯದಿರುವು ದಲ್ಲದೆ ಹೆತ್ತವರು ಪಾಪಗ್ರಾಹಿಗಳೂ ಆಗುವರು. ಇದಕ್ಕೆ ಮಹಾಭಾರತ ದಲ್ಲಿ ಪ್ರಸಿದ್ಧ ಪಾತ್ರರೆನಿಸಿದ ಪಾಂಡುಚಕ್ರವರ್ತಿ ಮತ್ತು ಮಾದ್ರಿ ಈ ದಂಪತಿಗಳು ಉದಾಹರಣೆಯಾಗಿರುವರು.

(೬) "**ಗಾಂಧರ್ವ ವಿವಾಹ**" ಇದು ಕೇವಲ ಸಂಭೋಗೇಚ್ಛೆಗಾಗಿ ವಿವಾಹವಾಗುವುದು. ಇದಕ್ಕೆ ರೂಪು, ಯೌವನ, ಮುಂತಾದವೇ ಸಂಬಂಧ.

ವಲ್ಲದೆ, ಕುಲಶೀಲವು ಸಂಬಂಧವಲ್ಲ. ಈ ವಿವಾಹದಿಂದ ಸಮಾಜಕ್ಕೆ ಏನೂ ಧಕ್ಕೆ ಇಲ್ಲ. ವೈಯಕ್ತಿಕ ಶಾಂತಿಗೂ ಕಚ್ಚು ಬೀಳುವಂತಿಲ್ಲ.

(೭) **"ರಾಕ್ಷಸ ವಿವಾಹ"** ಇದು ಕನ್ಯಾಪಾಲಕರನ್ನು ವಂಚಿಸಿ ಅಲದೆ ಕೊಂದುಹಾಕಿ ಅಲ್ಲವೆ ಹೆಣ್ಣಿನ ಮೇಲೆ ಅತ್ಯಾಚಾರ ನಡೆಸಿ ಅದು ಅಲ್ಲದೆ ದುರ್ಬೋಧೆಯಿಂದ ಮನವಲಿಸಿ ಆ ಹೆಣ್ಣನ್ನು ವರಿಸಿಕೊಳುವುದು.

(೮) **"ಪೈಶಾಚ ವಿವಾಹ"** ಇದು, ನಿದ್ದೆಯಲ್ಲಿದ್ದವರ ಅಲ್ಲವೆ ಹುಚ್ಚು ಹಿಡಿದವರ ಸಂಭೋಗ ಮಾಡುವುದು. ಇದಕ್ಕೆ ಉಷಾ ಮತ್ತು ಅನಿರುದ್ಧರ ಕೂಡುವಿಕೆಯೆ ಸಾಕ್ಷಿ. ಮನುವು, ಪೈಶಾಚ ಮತ್ತು ಆಸುರ ವಿವಾಹಗಳನ್ನು ನಿಷೇಧಿಸಿರುವನು. (೩ । ೨೫)

ಉಚ್ಚವರ್ಗದ ವಿವಾಹದಲ್ಲಿ ಸಪ್ತಪದಿಯು ವಿಧಾನವಿರುವುದು. ಆ ವಿಧಾನದಲ್ಲಿ ಸತಿ-ಪತಿಗಳು ಕೂಡಿಯೆ ಅಗ್ನಿಯನ್ನು ಪರಿಕ್ರಮ (ಪ್ರದಕ್ಷಿಣ) ಮಾಡುವರು. ಆ ಸಮಯ ಪತಿಯ ಮೊದಲನ ಪಾದದಲ್ಲಿ ಇಚ್ಛಾ ಪೂರ್ತಿಯನ್ನೂ ಎರಡನೆಯ ಪಾದದಲ್ಲಿ ಶಕ್ತಿಸಂಚಯವನ್ನೂ ಮೂರನೆಯ ಪಾದದಲ್ಲಿ ಗೃಹಸ್ಥಾಶ್ರಮ ಧರ್ಮಪಾಲನೆಯನ್ನೂ ನಾಲ್ಕನೆಯ ಪಾದದಲ್ಲಿ ದಂಪತಿಗಳ ಏಕಾತ್ಮತಾ ಮತ್ತು ಐದನೆಯದರಲ್ಲಿ ಮೈತ್ರಿಭಾವ ವೃದ್ಧಿ ಗೋಸ್ಕರ ಪಶು-ಧನಾದಿಗಳ ಪ್ರಾಪ್ತಿಯನ್ನೂ ಆರನೆಯದರಲ್ಲಿ ಸಕಲ ಸಂಪತ್ಪ್ರಾಪ್ತಿಯನ್ನೂ ಏಳನೆಯದರಲ್ಲಿ ನಿತ್ಯ-ನೈಮಿತ್ತಿಕ ಯಜ್ಞಫಲ ಪ್ರಾಪ್ತಿ ಮತ್ತು ಸಹಯೋಗವನ್ನೂ ಸಹಚರ್ಯವನ್ನೂ ದೇವರಲ್ಲಿ ಬೇಡಿಕೊಳ್ಳಲಾಗುವುದು.

ಅನಂತರ ಪತ್ನಿಯಲ್ಲಿ ಪ್ರತಿಜ್ಞಾಪೂರ್ವಕ ಹೇಳುವುದೆಂದರೆ :— ಪ್ರಿಯೆ; ವಿವಾಹಿತ ಜೀವನದಲ್ಲಿ ಈ ಏಳು ಉದ್ದೇಶಗಳನ್ನು ನಾನೂ ನೀನೂ ಜೊತೆಗೂಡಿಯೆ ದೊರಕಿಸೋಣ! ಅದಕ್ಕಾಗಿ ನಮ್ಮನಮ್ಮೊಳಗೆ ಸಖತ್ವವನ್ನು ಕಟ್ಟಿಕೊಳ್ಳುವ ವಚನ ಕೊಡುತ್ತೇನೆ.

ಸಖೇ ಸಪ್ತಪದೀಭವ। ಸಖ್ಯಂತೆ ವಾ ಯೋಷಾಃ (ಛಿಂದಂತು)
ಸಖ್ಯಂತೇ ಮಾಯೋಷ್ಠಾಃ (ಸುಖಕಾರಿಣಃ)

"ಸುಖಕಾರಿಣ್ಯಃ ಸ್ತ್ರಿಯಃ ತ್ವಯಾ ಸಹಸಖ್ಯಂ ಕುರ್ವಂತು" "ಸುಖವನ್ನುಕೊಡುವುದಕ್ಕಾಗಿಯೆ ಸ್ತ್ರಿಯಳೇ ನಿನ್ನ ಸಖ್ಯವನ್ನು ಮಾಡುತ್ತೇನೆ. ವೀರ್ಯವಾನ್ ಸತ್ಪುತ್ರರನ್ನು ಪಡೆಯಲಿಕ್ಕೂ ದೇಹಾಂತ್ಯದ ವರೆಗೆ ಪೋಷಿಸಲಿಕ್ಕೂ ಅಭಯ ಕೊಡುತ್ತೇನೆ."

ಇದರಂತೆ ಸತಿಯಳೂ ಹೇಳುವುದೆಂದರೆ :— "ಪತಿಯು ನನ್ನ ಸುಖವನ್ನೂ ಶಾಂತಿಯನ್ನೂ ಕಾದುಕೊಂಡು, ಅಶತ್ರುವಾಗಿ ಯಾವಾಗಲು ವರ್ತಿಸಲಿ!!" ಎಂದು ದೇವರಲ್ಲಿ ಪ್ರಾರ್ಥಿಸುವಳು!

ಹಿಂದುಗಳಲ್ಲಿ ಹೀಗೆ ಧರ್ಮ ಅರ್ಥ ಕಾಮುಗಳಿಂದ ಕೂಡಿ ಹಾರ್ದಿಕ ಜೀವನ ಸಾಗಿಸುವ ವಚನ ದತ್ತಕವಾಗಿಯೆ ಪಾಣಿಗ್ರಹಣವಾಗುವುದು. ವಚನದತ್ತವಾದರೂ ದೇವ ದ್ವಿಜ ಅಗ್ನಿ ಗುರುಗಳ ಸಾಕ್ಷಿಯಾಗಿರುವುದು. ಇವೆಲ್ಲ ಕಾರಣಗಳಿಂದ ವಿವಾಹ ವಿಚ್ಛೇದನಕ್ಕೆ ಬಹುಶಃ ಎಡೆಸಿಗಲಾರದು.

ವಿವಾಹಾನುಕೂಲ.

ಕನ್ಯಾ ವಿವಾಹ ವಿಚಾರದಲ್ಲಿ ಮನುವು ಹೇಳಿದ್ದೆಂದರೆ :—

ಕನ್ಯಾಲಗ್ನ ಮಾಡುವುದರಲ್ಲಿ ಎಷ್ಟು ಕಷ್ಟವಾಗುವುದೆನುವುದನ್ನು ಕನ್ಯೆಯ ಹೆತ್ತ ಪಿತನೆ ಬಲ್ಲನು. ಹಾಗಿರುವುದರಿಂದಲೆ ಕನ್ಯೆಗೆ ವಿವಾಹದ ವಯಸ್ಸು

ಆಗದಿದ್ದರು, ಉತ್ತಮನಾಗಿಯೂ ಸಜಾತೀಯ ಮತ್ತು ಗುಣವಾನ್ ವರನು ದೊರೆತರೆ, ಜಾತಕ-ಕೂಟಾದಿಗಳು ಕೂಡಿಬಂದರೆ ಅಂತಹ ವರನಿಗೆ ಆ ಕನ್ಯೆಯನ್ನು ದಾನ ಮಾಡುವುದು ಒಳಿತು. ಇದಲ್ಲದೆ, ಋತುಮತಿಯಾಗಲಿ. ಅಲ್ಲದೆ ಜೀವನದ ತುಂಬಾ ತಂದೆಯ ಮನೆಯಲ್ಲಿ ಜೀವಿಸಲಿ ಒಟ್ಟಿನಲ್ಲಿ ಯೋಗ್ಯ ವರನು ದೊರಕದಿದ್ದಲ್ಲಿ ಆ ಕನ್ಯೆಯ ವಿವಾಹ ಮಾಡಬಾರದು.

(೯ | ೮೮-೮೯)

ಲಗ್ನವಾದಮೇಲೆ ಆ ಹೆಣ್ಣಿನ ಜೀವನವು ಆ ಗಂಡಿನ ಜೊತೆಗೆ ಕಡೆತನಕರವು ಸಾಗ ಬೇಕಲ್ಲವೆ! ಹಾಗಿರುವಾಗ " ಕಡಕಲೀ ಗಂಡ, ಮಿಡುಕಲೀ ಹೆಂಡತಿ ಅಥವಾ ದುಡಕಲೀ ಹೆಂಡತಿ, ನಡಕಲೀ ಗಂಡ ಅದೂ ಅಲ್ಲದೆ ಬಡಕಲೀ ಗಂಡ, ಬಾಯಬಡಕ ಹೆಂಡತಿ" ಇವೇ ಮೊದಲಾದ ದಾಪಂತ್ಯ ಜೀವನವು ಎಷ್ಟು ಅಸಹ್ಯಕರ ನೋಡಿರಿ. ಲೋಕದಲ್ಲಿ ಇವೆಷ್ಟು ನಿಂದ್ಯಾಸ್ಪದ!? ಎಷ್ಟೊಂದು ಹಾಸ್ಯದಾಯಕ. ಅಂದಮೇಲೆ, ಬಡತನ ದೊಡ್ಡಸ್ತನದ ಮಾತಾದರು ಒತ್ತಟ್ಟಿಗೆ. ಈ ಮೇಲೆ ಹೇಳಿದ ಆ ಮನುವಿನ ಮಾತಿನಿಂದ ವರ ಮತ್ತು ವಧುವಿನ ಯೋಗ್ಯತೆಯು ಎಷ್ಟರ ಆವಶ್ಯಕತೆ ಎನುವುದು ಸಿದ್ಧವಾಗುವುದು.

ಪಾಲಕರು ಬಾಲೆಯುಳ ವಿವಾಹವನ್ನು ಯೋಗ್ಯಕಾಲದ ತನಕರವು ಯೋಗ್ಯವರನನ್ನು ತಾನೇ ಹುಡುಕಿ ಲಗ್ನ ಮಾಡಲಾಗದಿದ್ದಲ್ಲಿ ಆ ಹುಡುಗೆಯು ಋತುವಾಗಿ ಮೂರು ವರುಷದ ವರೆಗು ಮದುವೆಯ ಹಾದೀ ನೋಡಿ ಕೈಗೂಡದಿರಲು, ಆ ಮಗಳು ತನಗೆ ಯೋಗ್ಯ ವರನನ್ನು ತಾನೇ ಹುಡುಕಿಕೊಳ್ಳಬಹುದೆಂದೂ ಅವಳ ಇಚ್ಛೆಯಂತೆ ವಿವಾಹಕಾರ್ಯ ನಡೆಸಿದಲ್ಲಿ ಆ ಪಾಲಕನು ಅವ ದೋಷಾರ್ಹನಲ್ಲೆಂದೂ ಅದೇ ಮನು ಮಹಾರಾಯನು ಹೇಳಿರುವನು.

(೯ | ೯೦-೯೧)

ಹೀಗೆ ಧರ್ಮಗ್ರಂಥಕಾರರೇ ಹೆಂಗಳೆಯರಿಗೆ ಪರಿಣಯಸ್ವಾತಂತ್ರ್ಯ ವನ್ನಿತ್ತಿರುವರು. ನಮ್ಮ ಮನುವು ಹೆಣ್ಣಿನ ವಿವಾಹವಿಷಯದಲ್ಲಿ ಎಂಟರಿಂದ ಹನ್ನೆರಡು ವರುಷದವರೆಗೆ ಅವಧಿ ಬಾಧಕವಿಲ್ಲೆಂದು ಹೇಳಿರುವನು. ಇದಕ್ಕೆ ಅನ್ಯ ಸ್ಮೃತಿಕಾರರ ಅನುಮೋದನವೂ ಇರುವುದು. ಇದರಲ್ಲಿ :—"ಋತು ಮತಿ ಯಾಗದ ಮೊದಲು ಪುರುಷಕಾಮನೆ ಇರದಾದ್ದರಿಂದ, ದ್ವಾದ ಶಾಬ್ದದೊಳಗೆ ಪ್ರಥಮರಜೋದರ್ಶನವಾಗದಾದ್ದರಿಂದ, ಪುರುಷಕಾಮನೆ ಅನಂತರವೆ ಆಗುವುದಾದ್ದರಿಂದ, ಹಾಗಾದ ಬಳಿಕ ಸ್ವೇಚ್ಛಾ ಪ್ರಬಲ ವಾದಲ್ಲಿ ಮಾನಸಿಕ ದುಶ್ಚಟ–ದುರಾವಸ್ಥೆಯ ಹಾವಳಿಗೆ ಬಲಿಯಾಗುವರು ಎಂದು ತಿಳಿದೇ ಈ ಬಗೆಯ ಗೆರೆ ಹಾಕಿರುವರು !

ಬ್ರಹ್ಮಚರ್ಯೇಣ ಕನ್ಯಾ ಯುವಾನಂ ವಿಂದತೇ ಪತಿಮ್

(ಅಥರ್ವ, ಕಾಂ. ೧೧ ಸೂ. ೫ ಮಂ. ೧೮)

"ಬ್ರಹ್ಮಚರ್ಯವನ್ನು ಸಂಪೂರ್ಣ ಮಾಡಿದನಂತರ ಯುವಕನಾದ ಪತಿಯನ್ನು ವರಿಸಬೇಕು." ಇಲ್ಲಿ, ಬ್ರಹ್ಮಚರ್ಯೆಯೆಂದರೆ ಪುರುಷಸಂಯೋಗ ರಹಿತವಿಷ್ಟೆ ಅಲ್ಲ. ಇಂದ್ರಿಯನಿಗ್ರಹ, ವೇದಾಧ್ಯಯನ, ಪರಮಾತ್ಮನ ಜ್ಞಾನಪ್ರಾಪ್ತಿ ಇವೆಲ್ಲ ಸೇರಿಕೊಂಡಿವೆ. ಹೀಗೆ ಮಾಡಿದಲ್ಲಿ, ಲಗ್ನವಾದ ನಂತರ ತನ್ನ ಗಂಡನಲ್ಲಿ ಪರಮಾತ್ಮಭಾವನೆಯೂ ಭಕ್ತಿಯೂ ಹೆಚ್ಚಲು ಇವೆಲ್ಲ ಸಾಹಾಯಕವಾಗುವವು. ಇವೆಲ್ಲ ಬಗೆಯ ಶಿಕ್ಷಣ ಕೊಡುವುದು ಪಾಲಕರದು.

ಹೆಣ್ಣುಮಕ್ಕಳಿಗೆ ವಿವಾಹ ಸ್ವಾತಂತ್ರ್ಯವು ಹಿಂದಿನ ಕಾಲದಲ್ಲು ಇತ್ತೆನುವುದು ಇದರಿಂದಲೂ ಸ್ವಯಂವರಾದಿ ಪದ್ಧತಿಯಿಂದಲೂ ಕಂಡು ಬರುವುದು. ಭಾರತವರ್ಷದಲ್ಲಿ ಹಿಂದೂ ಸಮಾಜದಲ್ಲಿರುವ ವೈಧಿಕ ವಿವಾಹ ಪದ್ಧತಿ, ಅದರ ವಿಧಿ ಇವೆಲ್ಲ ನಮ್ಮ ಮಹಿಳೆಯರ ಸ್ವಾತಂತ್ರ್ಯ ಗೌರವಕ್ಕೆ ಪ್ರಕಾಶವನ್ನೊಡ್ಡುವುದಾಗಿವೆ.

ಪ್ರಾಚೀನಕಾಲದ ಪರಿಣಯವು ಲಜ್ಜಾಂಜನವಾಗಿದ್ದಿಲ್ಲ. ಕುಲದ ಮತ್ತು ಸಮಾಜದ ಅಭಿವೃದ್ಧಿಯೆ ಅದರ ನಿಜೋದ್ದೇಶವಾಗಿತ್ತು. ಆವ ಕಾರ್ಯದಲ್ಲಿ ಮಾನವಕುಲದ ಸದಭ್ಯುದಯ ವಿಧಿಗಳು ಅಂತರ್ಭೂತವಾಗಿವೆಯೊ ಆ ಕಾರ್ಯವು ಲಜ್ಜಾಸ್ಪದವೆಂದಾಗಲೀ ಹೇಯದಾಯಕ ವೆಂದಾಗಲಿ ಎಂತಾಗುವವು. ? ಆದರಿಂದಲೇ ಷೋಡಶ ಸಂಸ್ಕಾರಗಳಲ್ಲಿ ವಿವಾಹವು ಒಂದು ಪವಿತ್ರಸ್ಥಾನ ಪಡೆದಿತ್ತು! ಹಾಗಿರುವುದರಿಂದಲೆ ಆ ಕಾಲದಲ್ಲಿ ಧೀರೋದಾತ್ತ ಮಕ್ಕಳೆ ಹೆಚ್ಚೆನುವುದು. ಆ ಕಾಲದ ಮಹಿಳೆಯರು ಸುದಾ ಮಂತ್ರಾರ್ಥಜ್ಞರಾದುದರಿಂದ ವಿವಾಹದ ಮರ್ಮವನ್ನು ಅರಿತಿದ್ದು ಅಂತೆಯೆ ನಡಿಸುತಲಿದ್ದರು. ಪಾಪ–ಪುಣ್ಯಗಳ ಭಾವನೆ, ಧರ್ಮ–ಕರ್ಮಗಳಲ್ಲಿ ಶ್ರದ್ಧೆ ಇತ್ತು. ಆದರಿಂದಲೆ ವಿವಾಹ ವಿಚ್ಛೇದಗಳು ಬಹುಮಟ್ಟಿಗೂ ವಿರಳವಿತ್ತು. ಅದಕ್ಕಾಗಿಯೆ ಅಲ್ಲವೆ, ಪ್ರಾಚೀನ ಭಾರತವು ಅಂಗನೆಯರನ್ನು ಅರ್ಧಾಂಗಿ ಎಂದು ಕರೆಯುತಿತ್ತು. ಇದರ ಅರ್ಥ, ಗೃಹಸ್ಥಾಶ್ರಮವೆಂಬ ರಥಕ್ಕೆ ಸ್ತ್ರೀ ಪುರುಷರೆ ಎರಡು ಚಕ್ರವೆಂದು ಹೇಳಿದರು. ಅಂದಮೇಲೆ ಗಂಡಸಿನಂತೆ ಹೆಂಗಸಿಗು ಸಮಾನಾಧಿಕಾರವಿದೆಯೆಂದೂ ಹೇಳಿದಂತಾಗುವುದು. ಅದು ಹೇಗೆನ್ನುವುದೊಂದು ಪ್ರಶ್ನೆಯೂ ಇದೆ.

ಸ್ತ್ರೀ ಸ್ವಾತಂತ್ರ್ಯ

ಪ್ರಕೃತಿ ವೈಷಮ್ಯವನ್ನು ಕೆಲಮಟ್ಟಿಗೆ ಅಳಿಸಿ ಎಲ್ಲ ಸ್ತ್ರೀ-ಪುರುಷರ ಸಮಾನತೆಯನ್ನು ಈ ಹೊತ್ತು ತಂದುಕೊಡಬೇಕೆನುವುದು ನಿಜ.

ಇಧನ್ನು ವಿಚಾರಿಸಿದಲ್ಲಿ ಸ್ತ್ರಿ-ಪುರುಷರ ಕ್ಷೇತ್ರವು ಭಿನ್ನಭಿನ್ನ ವಾಗಿರುತ್ತದೆನ್ನುವುದು ಸ್ಪಷ್ಟವಿದೆ. ಸ್ತ್ರೀಯರಿಗೆ ಗೃಹದ ಅಧಿಕಾರ, ಪುರುಷ ರಿಗೆ ಹೊರಗಿನ ಅಧಿಕಾರ. ಸ್ತ್ರೀಯು ಮನೆಯ ಯಜಮಾನತಿಯು,

ಪುರುಷನು ಹೊರಗಿನ ಮಾಲಕನು. ಸತಿಯು ಸದುದ್ದೇಶವನ್ನಿಟ್ಟು ಯಾವ ಬಗೆಯ ಕಾರ್ಯವನ್ನು ಎಸಗುವುದಿದ್ದರು, ತನಗಾಗಿ, ತನ್ನ ಮಕ್ಕಳಿಗಾಗಿ, ಮತ್ತು ಅತಿಥಿಗಳಿಗಾಗಿ ಗೃಹಕೃತ್ಯದ ಸೊಬಗು. ಅಂತೆಯೆ ಬಾಹ್ಯ ವ್ಯವಹಾರದಲ್ಲಿ ಪುರುಷರ ಕರ್ತವ್ಯವೂ ಇರುವುದು.

ಒಟ್ಟಾರೆ; ಸ್ತ್ರೀಯಾಗಲಿ ಪುರುಷನಾಗಲಿ ಯಾವ ಕಾರ್ಯವನ್ನೆಸಗುವುದಿದ್ದರು ಚೈನಿ (ದುಂದುಗಾರಿಕೆ) ಗಾಗಲ್ಲ. ಪುರುಷನಷ್ಟೆ ಸ್ವಾತಂತ್ರ್ಯವು ಸ್ತ್ರೀಯಳಿಗೆ ಸರ್ವದರಲ್ಲು ಇಲ್ಲ. ಹೇಗೆಂದರೆ :—ಮುಟ್ಟು-ಮೈಲಿಗೆಯು, ಹೆತ್ತು-ಬಿತ್ತುವುದು, ಈ ಮೊದಲಾದ ವ್ಯವಹಾರಗಳಲೆಲ್ಲ ಮಹಿಳೆಯರು ಪರಾಧೀನರಲ್ಲವೆ? ಇನ್ನೂ ಹೇಳುವುದಾದರೆ, ಸ್ತ್ರೀ ವಾಚ್ಯವೆ ಅಬಲತೆಯನ್ನು, ಅಸ್ವತಂತ್ರತೆಯನ್ನೂ ಸೂಚಿಸುವುದು. ಹಾಗಾದರೆ ಽ ! ಸ್ತ್ರೀಯರಿಗೆ ತಾಯ್ತನದಲ್ಲಿರುವ ಸುಖವೂ ಗೃಹಣೀಪದದ ಆನಂದವೂ ಮನೆಯ ಹೊರಗಿನ ವ್ಯವಹಾರದಲ್ಲಿ ಹೇಗೆ ದೊರಕುವುದು? ನಾರಿಯ ಖಾಸಗಿ ಆಸ್ತಿಯಂದರೇ ತಾಯ್ತನವು. ಆವಳ ಪೂರ್ಣಶರೀರವೂ ಸತಿತನವನ್ನೂ ತಾಯ್ತನವನ್ನೂ ವಹಿಸುವುದರ ಸಲುವಾಗಿಯೆ ಸಚೇತನವಗೊಂಡು ಉದಯಿಸಿದೆ. ಅವಳು ಈ ಎರಡೂ ಅಧಿಕಾರವನ್ನು ಪೊಷಿಸುತ್ತಿರುವ ಗುಣದಿಂದಲೆ ಗೌರವ ಪೂರ್ಣಸ್ಥಾನವನ್ನು ಹೊಂದಿರುತ್ತಾಳೆ ! ಇಂತಹ ಮಾತೃಸ್ಥಾನವನ್ನು ಕಾದುಕೊಂಡು ಬಂದಿರುವುದರಿಂದಲೆ ಮಹಾನುಭಾವರ್ರುಗಳಿಂದಲು ಮನ್ನಣೆಯನ್ನು ಹೊಂದುತ್ತಿದ್ದಳು !! ಈ ಬಗೆಯಾದ ಮಾತೃತ್ವವನ್ನು ಸಂಪಾದಿಸಿರಲು, ಪುರುಷರ ಪ್ರಲೋಭತೆಯನ್ನು ಬಡಿದೋಡಿಸಿ ರಕ್ತದ ನಾಳನಾಳಗಳಲ್ಲು ಔದಾರ್ಯತೆಯನ್ನು ಚಿಮುಕಿಸುತ ದಂಪತಿಗಳು ಸುಖದಿಂದಿರುಲಾಗುವುದು.

ಪ್ರಶ್ನೆ:—ಮುಟ್ಟು–ಮೈಲಿಗೆ ಮೊದಲಾದ ನಿಸರ್ಗದ ಆಳತೆಯಲ್ಲಿ ನಾರಿಯರು ಆಸ್ವಾತಂತ್ರ್ಯರಾದರೆ, ಉಳಿದ ಎಲ್ಲ ವಿಧದಿಂದಲು

ಅಸ್ವತಂತ್ರ್ಯರೇನು ? ಮನೆಯ ಆಳಿನಂತೆ ನಡೆಸಿಕೊಳ್ಳಬಹುದೆ ? ಹೊರಗಿನ ಆಡಳಿತದಲ್ಲಿ ಭಾಗಿದಾರಳಾಗಲು ಆಸ್ಪದ ಕೊಡಬಾರದೇಕೆ ?

ಉತ್ತರ :—ಜೀವಿಗಳ ಜೀವನ ಮಟ್ಟದಲ್ಲಿ, ನೈಸರ್ಗಿಕವು ಎಷ್ಟು ಅನಿವಾರ್ಯವೊ ಅಷ್ಟೇ ಅನಿಸರ್ಗ ಪ್ರಪಂಚದಲ್ಲು ಇರುವುದು. ಇದು ಪರಮಾತ್ಮನ ಮುಖೋದ್ಗೀತ ಶ್ರುತಿ-ಸ್ಮೃತಿಗಳ ಕಟ್ಟಪ್ಪಣೆಯು. ಇದರಲ್ಲಿ ಇನ್ನೂ ಹೇಳುವುದಾದರೆ:—ಕ್ರಾಪು, ಮುಖಕ್ಷೌರ,ಮೊದಲಾದವು ಗಳನ್ನು ಗಂಡಸರು ಮಾಡಿಕೊಳ್ಳುವರೆಂದು ಹೆಂಗಸರೂ ಮಾಡಿಕೊಂಡರೆ ಆಶೋಭೆಯಲ್ಲವೆ ? ಗಂಡಸರು ನಿಲುವಂಗಿ, ಪಂಚೆ ಟೊಪ್ಪಿಗೆ ಪಾವುಡ ಮೊದಲಾದ ಪೋಷಾಕವನ್ನು ಧರಿಸುವಂತೆ ಹೆಂಗಸರು ಧರಿಸಿಕೊಂಡರೆ ಶೋಭಾಲಂಕೃತವಾದೀತೆ ? ಇಲ್ಲ ಇಲ್ಲ. ಅಂದಬಳಿಕ ಆರ್ಯಸನಾತನಿಗಳು ಸರ್ವದರಲ್ಲು ಹಾಕಿಕೊಟ್ಟ ಸಂಪ್ರದಾಯದ ಹೊರಗೆ ನಾವು ಹೋಗುವುದರಲ್ಲಿ ಹಿತವಿಲ್ಲ !

ಪುಸ್ತಕ ವಿಮರ್ಶೆ.

ಶ್ರೀಷಾಚಲ ಗ್ರಂಥಮಾಲೆ, ಆನಂದವನ ಇದರ ಸಂಪಾದಕತ್ವದಲ್ಲಿ, ರಾಜರತ್ನ ಪಾ.ವಿ. ಜೋಶಿ, ಎಲ್.ಎಲ್.ಬಿ. ವಕೀಲ ಬಡೋದೆ ಇವರ ಲೇಖನವಾಗಿರುವ ಬಿ. ಪ. ಕಾಳೆಯವರು ಅನುವಾದಗೈದ, "**ಸ್ತ್ರೀಯರ ಹಕ್ಕುಗಳೂ ಸುಧಾರಣೆಯೂ**" ಎಂಬ ಪುಸ್ತಕವು, ನನ್ನ ಓರ್ವ ಮಿತ್ರರ ಕೈಯಲ್ಲಿ ಸಿಕ್ಕಿತು. ಅದನು ಓದಿದೆನು. ಅದರಲ್ಲಿ ಕೆಲವೊಂದು ಅಪವಾದಾರ್ಹ ವಿಷಯಗಳನ್ನು ಇಲ್ಲಿ ಸೂಚಿಸುವುದೆಂದರೆ:- ಪುಟ ೨೫ರಲ್ಲಿ, ರಜಿಸ್ಟರ ಲಗ್ನದ ಕಾಯದೆಯ ಫಾಯದೆಯ ವಿಷಯವಾಗಿ ಬಹುಬಗೆಯಾಗಿ ಮಂಡಿಸುತ್ತ; "ಆದರಲ್ಲಿಯ ಮಹತ್ವದ ಬಾಬುಗಳನ್ನು ನೋಡಿದರೆ ಇನ್ನುಮೇಲೆ ಎಲ್ಲ ಯುವತಿಯರೂ ತಮ್ಮ ಲಗ್ನಗಳು ರಜಿಸ್ಟರ ಪದ್ಧತಿಯಿಂದಲೇ ಆಗಬೇಕೆಂದು ಹಟಹಿಡಿದರೆ ಅದು ಯೋಗ್ಯವೇ ಆದೀತು. ಎಂದು ಹೇಳಲಾಗಿದೆ. ಹಾಗೇ ಮುಂದರಿಯುತ್ತ ವಿದೇಶಗಳ ಬಹುದಂಶ

ಹೆಚ್ಚಳ-ಬಿಚ್ಚಳಗಳ ವರದಿಯನ್ನು ವಿವರಿಸುತ ೩೦ನೆ ಪುಟದಲ್ಲಿ "ಸೋಮಾರಿಯಾದ ಹಿಂದುಸ್ತಾನದ ತಲೆದಿಂಬಿಗೆ ತಲೆಯಿಟ್ಟು, ಅಘುವಿನ ನಿಶೆಯಲ್ಲಿ ಗೊರಿಕೆಹೊಡೆಯುತ್ತ ಬಿದ್ದಿದ್ದ ಚೀನದೇಶವೂ ಕೂಡಾ ಜಾಗ್ರತವಾಗಿದ್ದು" ಈ ಮುಂತಾಗಿ ಸ್ತ್ರೀಯರ ಆಧುನಿಕ ಜಾಗೃತೆಯನ್ನು ಎತ್ತಿ ಹೊಗಳಿ, ಬರಬರುತ್ತ, "ಪ್ರಸ್ತುತ ಕಾಲಕ್ಕೆ ತಕ್ಕಂತೆ ಉಚಿತವಾದಂಥ ಹೆಚ್ಚು ಕಡಿಮೆಗಳನ್ನು ಸಮಾಜ ರಚನೆಯ ತತ್ವಗಳಲ್ಲಿ ನಿರ್ಮಿಸಿಕೊಂಡರೇ ನಮ್ಮ ಹಿಂದು ಸಮಾಜವು ಬದುಕಿಸ್ಸೀತೆಂಬ ಸುಲಭ ಗಮ್ಯವಾದ ಸಂಗತಿಯು, ರಾಜಕೀಯ ಅಥವಾ ಸಾಮಾಜಿಕ ಸುಧಾರಣೆಗಳಂತೆ ಸ್ತ್ರೀಯರ ಕಾಯದೇಶೀರ ಹಕ್ಕುಗಳನ್ನು ಸುಧಾರಿಸುವ ಬಾಬಿನಲ್ಲೂ ಉಪಯೋಗ ಬೀಳಲಿಕ್ಕಿಲ್ಲೇನು ?" ಎಂದೂ ಅದೇ ಪ್ರಕರಣದ ಕೊನೆಯಲ್ಲಿ ಪ್ರಶ್ನಿಸಲಾಗಿದೆ.

ಭೌತಿಕ ದೃಷ್ಟಿಯಿಂದ ಇವೆಲ್ಲವನ್ನೂ ಒಮ್ಮೆ ಒಪ್ಪೋಣ. ಆದರೆ.... ಬರೇ ಭೌತಿಕ ಸುಖವನುಣ್ಣಲಿಕಷ್ಟೇ ಹುಟ್ಟಿ ಬದುಕಿರುವುದೇ ಉತ್ತಮೋತ್ತಮವಾದೀ ಮಾನವ ಜನ್ಮದ ವೈಶಿಷ್ಟ್ಯವೆ ?

ಅದು ಹಾಗೇ ಮುಂದರಿಯುತ್ತ "ವಧುವರರು ಹದಿನೆಂಟು ವರುಷಕ್ಕೆ ಕಡಿಮೆಯುವರಿರಬಾರದೆಂದೂ ಹಾಗೇನಾದರು ಕಡಿಮೆಯಾಗಿ ಉಭಯರಲ್ಲಿ ಯಾರೆಇರಲಿ, ಲಗ್ನಗೈದ ಆ ಲಗ್ನವನ್ನು ರದ್ದುಪಡಿಸುವ ಹಕ್ಕು ಅವರಿಬ್ಬರಿಗೂ ಇರಬೇಕು" ಎಂದೂ ಆದೇ ಪುಸ್ತಕದ ೪೨ ನೆ ಪುಟದಲ್ಲಿದೆ. ಹಾಗೇ ಮುಂದರಿಯುತ್ತ "ಕನ್ಯೆಯ ತಂದೆಯ ಅಭಾವದಲ್ಲಿ ಅವಳ ಅಜ್ಜನಿಗೆ ಕನ್ಯಾದಾನ ಮಾಡುವ ಅಧಿಕಾರವು, ನಂತರ ತಂದೆಯ ಕುಲದೊಳಗಿನ ಪುರುಷನಿಗೆ, ಆ ಮೇಲೆ ತಾಯಿಗೆ ಇರುತ್ತದೆ. ಹೀಗೆ ಅಧಿಕಾರ ಪರಂಪರೆಯನ್ನೂ ಶಾಸ್ತ್ರವು ಹಾಕಿಕೊಟ್ಟಿರುತ್ತದೆಯೆಂದೂ ಇದರ ಪರಿಣಾಮವಾಗಿ ತಾಯಿಯ ಹೊರತಾದ ಇತರರಿಗೆ ಹುಡುಗೆಯ ಸುಖ ದುಃಖದ ಪರಿವೆಯೆಷ್ಟಿದ್ದೀತು" ಎನುವ ಭಾವವನ್ನು ತಂದಿಳಿಸಿದೆ.

ಹೆಂಗಸಿನ ಬುದ್ಧಿಯು ಚಂಚಲವಿರುವುದೆನುವುದು ಪ್ರಸಿದ್ಧವಿದೆ. ಅಂದಾಗ; ತಾಯಿಗೆ ದುರ್ಬೋಧೆ ತುಂಬಿ, ಆರಾದರು ಅವಳ ಮಗಳನ್ನು ಎತ್ತಿ ಹಾಕುವದು ಲೋಕದಲ್ಲಿ ಎಷ್ಟೋ ಕಣ್ಣುಂದೆ ಕಾಣುತ್ತವೆ. ಹಾಗಿರಲು ಆ ಲೆಕ್ಕನಿಕೆಯ ಅಭಿಪ್ರಾಯದಂತೆ, ತಾಯಿಗೇ ಮೊದಲಧಿಕಾರವಿತ್ತರೆ, ವಧುವಿನ ಭಾವೀಜೀವನಕೆ ಹಿತವದಗಿತೆನ್ನುವ ಬರವಸೆಯುಂಟೆ? ಇನ್ನು; ಹದಿನೆಂಟು ವರ್ಷಗಳ ಅವಧಿಗೆ ವಧುವಿನ ಪರಿಣಯ ಬೆಳೆಸಿದಲ್ಲಿ, ಬರೇ ಸೌಂದರ್ಯರಸದಲ್ಲಿ ಮುಳುಗಿದ, ಅದಕ್ಕೇ ಇಂಬುಗೊಡುತಿರುವ ಈವಾಗಿನ ಹೆಣ್ಣುಮಕ್ಕಳು ವರಾನ್ವೇಷಣದಲ್ಲಿ ವರನ ಗುಣ-ದೋಷಗಳನ್ನಾಗಲಿ, ಸ್ಥಿತಿ-ಗತಿಗಳನ್ನಾಗಲಿ ತಿಳಿದುಕೊಳ್ಳಬಲ್ಲರೆ? ಇಲ್ಲಎನುವುದು ಆಧುನಿಕ ಸುಧಾರಣಾಯುವತಿಯರ ಎಷ್ಟೋ ಉದಹರಿಸ ಬರುವುದು. ಅಂದ ಮೇಲೆ ಈ ಬಗೆಯಾದ ತೀರ್ಪು ಎಷ್ಟರ ಮಟ್ಟಿಗೆ ಸ್ತ್ರೀಕೋಟಿಯ ಹಿತ ಸಾಧಿಸುವುದೋ ಆ ದೇವನಿಗೆ ಗೊತ್ತು.

ಅದೇ ಪ್ರಕರಣವು ಮತ್ತು ಮುಂಬಂದಾಗ; ಲಗ್ನಸಂಬಂಧ ಬರೇ ಲೌಕಿಕ ಸುಖಕ್ಕಿಷ್ಟೆ ಅಲ್ಲದೆ ಮೋಕ್ಷಸುಖಲಾಭವಿಲ್ಲೆಂದೇ ಆವಪೇಳನ ದಿಂದಲೂ ನಿರ್ಧಾರವಾಗಿಯೂ ಹೇಳುತ್ತದೆ. ಆದರನ್ನಾದರು ನೋಡೋಣ. ಆಥದಿಂದ ಇತಿಯವರೆಗೆ ನೈತಿಕ ಬೆಳಕಿನಲ್ಲಿ ನೀತಿ-ಸತ್ಯದಡಿಯಲ್ಲಿ ನ್ಯಾಯ ಪೀಠವನ್ನಾಳುವ ವಿವೇಕಾದಿ ಚಾಮರಗಳ ಶೋಭೆಯಲ್ಲಿ ಮೆರೆಯುವ ಗೃಹಸ್ಥಾಶ್ರಮಕ್ಕೇ ಅಲ್ಲವೆ ಶಾಸ್ತ್ರವು ಹೆದ್ದಾರಿಯನಿತ್ತದ್ದು? ಅಂದಾಗ ಆ ಪಥವಿಡಿದ ದಂಪತಿಗಳಿಗೇ ಮೋಕ್ಷಸುಖಲಾಭವಿಲ್ಲೆಂದಾಗ ಆರಪಾಲಿನ ಇಡಿಗಂಟದು?

ಹಾಗೇ ಮುಂದೆ ಹೋಗುತ್ತ ಆ ಲೆಕ್ಕನಿಕೆಯು; ಮನವಿಲ್ಲದ ಮದುವೆ ಯಾಗಿದ್ದರೆ, ಸತಿ-ಪತಿಯರ ಸಮಾಗಮವಾಗದ ಮುಂಚೆಯೇ ಅದನ್ನು ರದ್ದುಪಡಿಸುವ ರಯಾಯತಿ ಹೆಣ್ಣಿಗಿರಬೇಕೆಂದೂ ಸಮಾಗಮ ಒಮ್ಮೆ

ಆಯಿತೆಂದರೆ, ಆ ಹಕ್ಕು ನಷ್ಟವಾಗಿರಬೇಕೆಂದೂ ಲೇಖಿಸಿದೆ. ಯುಕ್ತಿ ವಾದದಲ್ಲಿ ಇವಕ್ಕೆಲ್ಲ ಸಾಕಷ್ಟು ಪುಟ ಕೊಡುತ್ತಲೂ ಬಂದಿದೆ. ಆ ಕಡೆಗೂ ಗಮನಿಸುವ! ಹದಿನೆಂಟು ವರುಷದ ಇತಃಪೂರ್ವದಲ್ಲೆ ಲಗ್ನವಾಗಬಾರ ದೆನುವುದು ಮೊದಲ ಮಾತು. ತಥಾಪಿ ಅಷ್ಟರ ಮೇಲೆ ಲಗ್ನವಾಗಿರಲು ನಂತರದ ಮಾತಿದಲ್ಲವೆ ಮನವಿಲ್ಲದ ಗಂಡನ ಬಿಡುವ ಹಕ್ಕನ್ನು ಕೇಳುವುದು? ಇರಲಿ. ಹದಿನೆಂಟು ವರುಷದ ವರೆಗು ಹೆಣ್ಣುಗಳು ಋತುವಾಗದಿರುವರೆ? ಆಗೇ ಆಗುವರು. ಅಂದಾಗ; ವಿವಾಹವಾದ ನಾಲ್ಕೋ ಏಂಟೊ ಹದಿನೈದೊ ಮೂವತ್ತೊ ಅಂತು ಅಷ್ಟೆ ದಿವಸದೊಳಗೇ ನಿಷೇಕಪ್ರಸ್ಥವೂ ಕೈಗೂಡಿ ಬಿಡುವುದು. ಆ ಪುಸ್ತಕದ ಹೇಳಿಕೆಯಂತೆ, ಈ ನಂತರವಂತೂ ಏನ ಮಾಡಲೂ ಬರುವಂತಿಲ್ಲ. ಹೊಸ ಹೊಸ್ತಿಲದಲ್ಲಿ ಹೆಜ್ಜೆಯಿಟ್ಟು ಅಷ್ಟು ಅಲ್ಪಾವಧಿಯಲ್ಲೇ ಆ ಗಂಡನ ಗುಣಾವಗುಣಗಳ, ನಡೆ-ನುಡಿಗಳ, ಪರಿಚಯ ಮಾಡಿಕೊಳುವಷ್ಟು ಕುಶಾಗ್ರಮತಿಗಳು ಸಿಗಬಹುದೆ? ಒಮ್ಮೆ ಎಲ್ಲಾದರು ಸಿಕ್ಕರೆಂದೇ ಇಟ್ಟುಕೊಳ್ಳೋಣ. ಒಂದೇ ಮಳೆಗೆ ಒಂದು ಛತ್ರಿಯನ್ನು ಛಿದ್ರಮಾಡಿದರೆ, ಆಯುಷ್ಯದಲ್ಲಿ ಬರುವ ಮಳೆಗಾಳಿಗೆ ಇನ್ನೆಷ್ಟು ಛತ್ರಿಗಳು ಬೇಕಾದೀತು? ಈ ಕಡೆಗೂ ಸ್ವಲ್ಪ ಅನುಲಕ್ಷಿಸಬೇಡವೇ ಆ ಹೆಣ್ಣು. ಇನ್ನೊಂದೆಂದರೆ :--ದೈಹಿಕ ಸುಖವನ್ನೆ ಲಗ್ನದ ಗುರಿಯಂದಿಟ್ಟುಕೊಂಡ ಆ ಲೆಕ್ಕನಿಕೆಯು ಘಟಸ್ಫೋಟದ ಪರವಾಗಿಯು ಬಹುಪುಟ್ಟಿಗೆ ಮುಂಡಿಸಿದೆ. ಎಲ್ಲೆಲ್ಲೋ ಇದ್ದ ತದ್ವಿಷಯಕೆ ಪುಷ್ಟಿದಾಯಕ ಆಧಾರಗಳನ್ನೂ ಎಳತಂದಿದೆ. ಆದರಂತೆ ಅಮಲಿನಲ್ಲಿ ಬಂದದ್ದಾದರೆ, ದಾಂಪತ್ಯಜೀವನವು ಸುಗಮವಾಗ ಲೆಂದಿರುವ ವೈಧಿಕ ಕಾಲದ ಹೆಬ್ಬಯಕೆಯೇ ವ್ಯರ್ಥ. ಲಗ್ನಶಬ್ದವೇ ಅನಗತ್ಯ.

ಇಂದಿನ ಸಮಾಜದ ಈ ಬಗೆಯ ಅಶಾಂತತಾಪ್ರವೃತ್ತಿಯ ಫಲಶ್ರುತಿಯನ್ನು ಈ ಹಿಂದೆ ಹೇಳಿಯಾಗಿದೆ. ಈವಾಗ ಅದೇ ಚರ್ವಿತ ಚರ್ವಣವ ಮಾಡುವು ದೆಂದರೆ; ತನ್ನ ಹೆಂಡತಿಯ, ಅಲ್ಲವೆ, ತನ್ನ ಮನೆಯಲ್ಲಿ ಇನ್ನಾವುದಾದರು

ವಿಧವೆ ಯಿದ್ದರೆ ಅವಳ, ಅದು ಅಲ್ಲದೆ ಹೆರವರ, ಈ ಬಗೆಯಾದ ಅತ್ಯಾಚಾರ ಗಳನ್ನು ಕಂಡರೆ ಅಥವಾ ಕೇಳಿದರೆ ಆ ಸುಹೃದಯಿಗೆ ಅದರ ತಡೆಯಲು ಪ್ರಯತ್ನಿಸಬೇಕಾಗುವುದು. ಆವಾಗ ಆ ಅತ್ಯಾಚಾರಿಗೆ ತನ್ನ ಸತ್ಯವನ್ನು ಮರೆಸುವುದೆ ವಾಸ್ತವವಾಗಿ ತೋರುವುದು. ಅದರಿಂದಾಗಿ ಆ ಸ್ತ್ರೀ-ಪುರುಷರಲ್ಲಿ ವ್ಯಭಿಚಾರಾದಿ ನೆಲೆಗೊಳ್ಳುವುದಲ್ಲದೆ ಸತ್ಯದ ಕೊಲೆಯುಂಗುವುದು. ಪ್ರೇಮಕ್ಕೆ ಮರೆಯಾಗುವುದು. ಪ್ರಸಂಗದಲ್ಲಿ ಹಿಂಸಾಕಾರ್ಯಕ್ಕು ಎಡೆ ಯಾಗುವುದು.

ಪ್ರೇಮಕ್ಕೂ ಕಾಮಕ್ಕೂ ಬಹಳ ಅಂತರವಿದೆ. ಪ್ರೇಮದಲ್ಲಿತ್ಯಾಗ (ತಾನಾಗಿಯೇ ಬಿಡುವುದು) ಇದೆ. ಉತ್ಸರ್ಗ [ಹೊರಗೆಹಾಕುವುದು] ಇದೆ. ಬಲಿದಾನ (ದೇಹತ್ಯಾಗ) ವಿದೆ. ಮನುಷ್ಯಜೀವನದ ಪರಿಣಾಮವು ಪ್ರೇಮದ ಪರಮಾವಧಿಯಾಗಿರುವುದು. ಪ್ರೇಮವು, ತ್ಯಾಗದ ಸ್ವರೂಪು ಆಗಿದೆ. ಉತ್ಸರ್ಗಪರಾಯಣವಾಗಿದೆ. ಕಾಮವು ವಿಷಯಲೋಭವಾಗಿದೆ. ಭೋಗ ಪರಾಯಣವಾಗಿದೆ. ಯಾವಾಗ ಗುಪ್ತೇಂದ್ರಿಯ ಸುಖೇಚ್ಛೆಯಾಗುವುದೊ ಆವಾಗ "**ಕಾಮ**" ವುದಯಿಸಿದೆ ಎಂದು ತಿಳಿಯಬೇಕು. ಆವಾಗ ಅದರ ಹೆಸರೂ "**ಪ್ರೇಮ**" ವೆನಿಸಿಕೊಳ್ಳುವುದು. ವಸ್ತುತಃ ಅದು ಪ್ರೇಮಸ್ಥಾನವಲ್ಲ. ಒಮ್ಮೆ ಅದೂ ಪ್ರೇಮಸ್ಥಾನವೆನ್ನುವುದಾದರು ನಿಜವಾದ ಪ್ರೇಮದ ಒಂದು ಕಣ. ಈ ಕಣವು ಪ್ರಾಣಿಗಳಲ್ಲಿ ತುಲನಾದೃಷ್ಟಿಯಿಂದ ಏರು-ಪೇರಿರುವವು. ಹೇಗೆಂದರೆ :— ಪಶುಗಳಲ್ಲಿ ಕಾಮವಾಸನೆಯುಂಟಾದಾಗಲೆ ಹೆಣ್ಣು-ಗಂಡು ಗಳಲ್ಲಿ ಪ್ರೇಮವು ಕಂಡುಬಂದು, ನಂತರ ಸಮಾಪ್ತವಾಗಿಬಿಡುವುದು. ಅದಕ್ಕೆ "**ಪಾಶವಿಕವೃತ್ತಿ**" ಎನ್ನುವುದು. ಮನುಷ್ಯರಲ್ಲಿ ಆ ಪ್ರೇಮವು ಕ್ಷಣ ತೃಪ್ತಿಯಿಂದ ಪೂರ್ಣತೆ ಹೊಂದುವುದಿಲ್ಲ. ಹಾಗಿರುವುದರಿಂದಲೆ ವಿವಾಹ ಬಂಧನವು ಯಾವಾಗಲು ಅಚ್ಛೇದ್ಯವಾಗಿರುವುದು. ಇಂತಹ ವಿವಾಹ ವಿಚ್ಛೇದ ವೆಂದರೆ, ಮನುಷ್ಯರಿಗೆ ಪಶುತ್ವದ ಸೂಚಕವಾಗಿರುವುದು. ತಾತ್ಪರ್ಯ:

೭೩ನೇ ಪುಟದ ಮೊದಲನೇ ಪಂಕ್ತಿಯಲ್ಲಿ; "ನಷ್ಟವಾಗಿರಬೇಕೆಂದೂ ಎಂದಿರುವ ದನ್ನು; "ನಷ್ಟವಾಗದಿರಬೇಕೆಂದೂ'' ಎಂದೋದಬೇಕು.

(**ಪ್ರೇಮದ ವಿಸ್ತಾರ ವಿವೇಚನೆಯನ್ನು ಶುಭ-ಶೋಭನ ಗಿತಾಮಂಜರಿಯಲ್ಲಿ ನೋಡಿರಿ.**)

ವಿವಾಹವಿಚ್ಛೇದನದಲ್ಲಿ ಆರು ಪ್ರೇಮಿಸುವರೋ ಅವರಿಗಾಗಿ, **ಪಶು** ಮತ್ತು ಮನುಷ್ಯ ಹೀಗೆ ಭೇದವೆಣಿಸಲಾಗುವುದಿಲ್ಲ. ಅಂದಮೇಲೆ, ಜನ್ಮವೆತ್ತಿದ ಹೆಣ್ಣಾಗಲಿ, ಗಂಡಾಗಲಿ ವಿವಾಹ ಸಂಬಂಧವನ್ನೂ ಬೆಳೆಸಿಕೊಂಡು ಅದನ್ನು ವಿಚ್ಛೇದಿಸುವುದೆಂದರೆ; ಒಂದು ಗಂಡು ನಾಯಿ, ಇನ್ನೊಂದು ಹೆಣ್ಣು ನಾಯಿಗಳು ಕಾಮಪೂರ್ತಿಗಾಗಿ ಒಮ್ಮೆ ಒಂದಾಗಿ ಆ ಮೇಲೆ ಎತ್ತೆತ್ತಲೋ ಸೇರಿದ ಹಾಗಾಗುವುದು. ನಾಯಿಗಳು ಒಮ್ಮೆ ಕಾಮವಾಸನೆಯು ಪೂರ್ತಿಯಾಗಲು ಸೋಡಚೀಟು ಮಾಡಿ, ಮತ್ತೊಮ್ಮೆ ಆ ವಾಸನೆಯು ಪ್ರಾಪ್ತವಾಗಲು ಈ ಹಿಂದೆ ದೊರೆತ ನಾಯಿಯು ದೊರೆಯದಿದ್ದರು, ಇನ್ನಾವುದಾದರೊಂದು ನಾಯಿಯ ಬೆನ್ನು ಬಡಿವಂತೆ; ಒಂದು ದಂಪತಿಗಳಲ್ಲಿ ಸೋಡಚೀಟಾದರೆ, ಆ ಗಂಡು–ಹೆಣ್ಣುಗಳೇ ಇನ್ನಾವುದಾದರೊಂದು ಗಂಡು-ಹೆಣ್ಣು ಜೊತೆಗೂಡುವುದು ಸಹಜ. ಆದರೆ ಮಾತ್ರ; ಆ ನಾಯಿಗಳು ಒಮ್ಮೆ ತೃಪ್ತಿಹೊಂದಿದ ನಂತರ ಎಷ್ಟೋಕಾಲದ ವರೆಗೆ ಶಾಂತವಿರುವವು. ಈ ಬಗೆಯು ಮಾನವ ವರ್ಗದ ಶುನಕಗಳು ಹಾಗೂ ಇರಲಾರವು!!

ಹೀಗೆ ತಲೆದೋರಿದ ಪಾಶವೀವೃತ್ತಿಯಲ್ಲಿ, ಪ್ರಪಂಚದ ತಿರುಳಾಗಿರುವ "**ನಾನು**" ಅನ್ನುವದಿಷ್ಟೇ ಅಲ್ಲ; **ನನ್ನದು** ಎನ್ನುವ ಶಬ್ದಕ್ಕೂ ಎಡೆ ಸಿಗದು.

ಅದೇ ಪುಸ್ತಕದ ೧೧೨ ನೆ ಪುಟದಲ್ಲಿ ದಾನ-ಧರ್ಮಗಳಿಗೆ ಪ್ರತಿಬಂಧ ಎನುವ ಕಲಮಿನಲ್ಲಿ ಸ್ವಲ್ಪ ಮಿದುಳನ್ನು ಸೇರಿಸೋಣ. "ವಿಧವೆಯು ಪತಿಯ ಆಸ್ತಿಯನ್ನು ಆವಶ್ಯಕ ಧರ್ಮಕ್ರಿಯೆಗಾಗಿ ಖರ್ಚು ಮಾಡಿದರೂ ಆ ಧರ್ಮ ಕ್ರಿಯೆಯು ಮೃತನ ಆತ್ಮಕ್ಕೆ ಸದ್ಗತಿ ಪ್ರಾಪ್ತವಾಗಲಿಕ್ಕೆಂದೇ ಮಾಡಿರಬೇಕಾ ಗಿರುತ್ತದೆ. ವಿಧವೆಯು ಸ್ವಂತದ ಮನಃಶುದ್ಧಿಗಾಗಿ ಕಾಶಿಗೆ ಹೋಗಿ ಬಂದರೆ, ಅವಳ ಆ ಖರ್ಚು ಅಯೋಗ್ಯವೆಂದು ತಿಳಿಯಲಾದೀತು. ಆದರೆ ಅವಳು ಕಾಶಿಯ ಬದಲು ಪ್ರಯಾಗಕ್ಕೆ ಹೋಗಿ, ಗಂಡನ ಹೆಸರಲ್ಲೇ ಪಿಂಡ

ಪ್ರಧಾನ ಮಾಡಿ ಬಂದರೆ, ಆವಳ ಆ ಖರ್ಚು ಕಾಯದೇಶೀರು ಎಂದು ತಿಳಿಯಲಾಗುವುದು. ಲೋಕೋಪಯೋಗೀಸಂಸ್ಥೆಗಳಿಗೆ ಅವಳು ದ್ರವ್ಯ ಸಹಾಯ ಮಾಡಿದರೆ ಆ ಖರ್ಚು ಯೋಗ್ಯವೆಂದು ತಿಳಿಯಲಾಗುವುದಿಲ್ಲ. ಆದರಿಂದ ಗಂಡನ ಆತ್ಮಕ್ಕೆ ಸದ್ಗತಿ ದೊರೆತೀತೆಂದು ಅನ್ನಲಾಗುವದಿಲ್ಲ. ಯಾಕಂದರೆ ಆದರಿಂದ ಬೇಕಾದರೆ ಅವಳು ತನ್ನ ಗಂಡನ ನಿತ್ಯ ನೈಮಿತ್ತಿಕ ಶ್ರಾದ್ಧಗಳನ್ನು ಮಾಡಲಿ. ಆ ಬಗ್ಗೆ ಎಷ್ಟೇ ಖರ್ಚಾದರು ಅದು ಯೋಗ್ಯ ಖರ್ಚೆಂದು ಪ್ರಸ್ತುತ ಕಾಯದೆಯ ಪ್ರಕಾರ ತಿಳಿಯಬರುತ್ತದೆ." ಈ ಮುಂತಾದ ವಾಕ್ಯಗಳ ಕಡೆಗೆ ಗಮನಿಸಿದರೆ ಹೀಗನಿಸುವುದು; ಕಾಶೀಕ್ಷೇತ್ರ ಪುರೋಹಿತರಿಗಿಂತಲು ಪ್ರಯಾಗ ಕ್ಷೇತ್ರದ ಪುರೋಹಿತರ ಅಧಿಕಾರ ಮೇಲ್ದರ್ಜೆಯದಿರಬೇಕೆಂದು. ಅಲ್ಲವೆ? ಅದಲ್ಲವಾದರೆ,ತ್ರಿಸ್ಥಳಿಯಲ್ಲೊಂದಾದ ಕಾಶಿಯಲ್ಲಿ ವಿಧವೆಯರು ಪುಣ್ಯಕಾರ್ಯದ ಬಗ್ಗೆ ಮಾಡಿದ ಖರ್ಚು ಅಯೋಗ್ಯ ವೆಂತಾದೀತು? ಇದರಲ್ಲಿ; ಸ್ವಂತದ ಬಗ್ಗೆ ವಿನಿಯೋಗದ ವಿಚಾರವಿದು. ಆಲ್ಲವೆ? ಒಬ್ಬ ಶತ್ರುವನ್ನು ಕೊಲ್ಲಲೋಸುಗ ಆತನು ರಾತ್ರಿ ಮಲಗಿ ನಿದ್ದೆ ಹೋಗುವ ಸಮಯದಲ್ಲಿ ಆ ಮನೆಗೇ ಅಗ್ನಿ ಇಟ್ಟರೆ, ಆವಾಗ ಆ ಶತ್ರು ವೊಬ್ಬನೇ ಸುಟ್ಟು ಸಾಯುವನೆ? ಅಲ್ಲದೆ ಇನ್ನುಳಿದ ಆ ಕುಟುಂಬಕ್ಕೇ ಘಾತವಾಗುವುದೋ? ಅಂತೆಯೇ ಮೃತನ ಆತ್ಮಶಾಂತಿಗಾಗಿ ಮಾಡಲೀ ತನ್ನ ಮನಃಶಾಂತಿಗಾಗಿ ಮಾಡಲೀ ಪುಣ್ಯಕಾರ್ಯವು ಕುಟುಂಬದಲ್ಲಿ ಒಬ್ಬ ಮಾಡುವುದರಿಂದ ಆ ಕುಟುಂಬಕ್ಕೆ ಫಲದಲ್ಲಿ ವ್ಯಾಪಕವಾಗುವುದೆನ್ನುವುದು ಸರ್ವಸಿದ್ಧಾಂತ. ಆದಕ್ಕಾಗಿಯೇ ಸಕಲ ಕರ್ಮಾರಂಭ ಸಂಕಲ್ಪವನ್ನೂ ಹಾಗೇ ಮಾಡುವ ಪರಿಪಾಠವಿದೆ. ಇನ್ನು...., ಕಾಶಿಯಲ್ಲಿ ಬರೇ ತಮ್ಮ ತಮ್ಮ ಮನಃಶಾಂತಿಗಾಗೇ ಕರ್ಮವನ್ನಾಚರಿಸುವರೆ? ಸತ್ತವರಿಗಾಗಿ ಮಾಡಬರು ವುದಿಲ್ಲವೆ? ಇಲ್ಲ ಅಂದಾಗ ಅದು ತ್ರಿಸ್ಥಳಿಯ ತುಲನೆಗೆ ಸೇರಿದ್ದಲ್ಲವೆಂದೇ ಎನಬೇಕಾದೀತು. ಇಷ್ಟೇ ಅಲ್ಲ;

ಆಮ್ನಾಯೆ ಸ್ಮೃತಿ ತಂತ್ರೇಚ ಲೋಕಾಚಾರೇಚ ಸೂರಿಭಿಃ
ಶರೀರಾರ್ಧಂ ಸ್ಮೃತಾ ಜಾಯಾ ಪುಣ್ಯಾಪುಣ್ಯ ಫಲೇ ಸಮಾಃ

(ಬೃಹಸ್ಪತಿ)

"ವೇದಗಳೂ ಸ್ಮೃತಿ-ಧರ್ಮಗಳೂ ಲೋಕಾಚಾರಗಳೂ ಮೊದಲಾಗಿ; ಗಂಡನ ಪಾಪ-ಪುಣ್ಯದ ಫಲದಲ್ಲಿ ಹೆಂಡತಿಯು ಸಮಾನ ಪಾಲುಗಾರಳೆಂದೂ ಆದರಿಂದಲೇ ಅವಳಿಗೆ ಅರ್ಧಾಂಗಿ ಏನುವುದೆಂದೂ ನಿರ್ಧರಿಸಿವೆ." ಹಾಗಿರುವ ಆಕೆಯು ತನಗಾಗಿ ಮಾಡಿದ ಕರ್ಮದಲ್ಲಿ ತನ್ನ ಅರ್ಧ ಭಾಗವಾಗಿರುವ ಪತಿಗೆ ಫಲ ದೊರೆಯುಲಾರದೆ!? ಮತ್ತೂ ಹೇಳುವುದಾದರೆ, ಈ ಹಿಂದೆ "ಲಗ್ನಸಂಬಂಧವು ಬರೀ ಲೌಕಿಕಕ್ಕಷ್ಟೇ" ಎಂದು ಹೇಳಿದ ಆದೇ ಲೆಕ್ಕನಿಕೆಗೆ ತನ್ನ ಮಾತು ಮರವೆಯಾಗಿ ಇಲ್ಲಿ ಸದ್ಗತಿಯ ಉದ್ಧಾರವನೆತ್ತುತ್ತಲೂ ಇದೆ ಎನುವಾಗ, ಇಂದಿನ ಜಗತ್ತಿನಲ್ಲಿ ಇಷ್ಟೊಂದು ಕನವರಿಸುವ ಪುಸ್ತಕಗಳನ್ನುಬರೆಯುವ ಕಾರಣವೇ ತಿಳಿಯದು!

ಸಕೃತ್‌ಕನ್ಯಾಪ್ರದೀಯತೆ ಇತ್ಯಾದಿ ಆ ಪುಸ್ತಕದೊಳಗಿನ ಇನ್ನೂ ಒಂದೆರಡು ವಿಷಯಗಳಿಗೆ ಮುಂದಿನ ಪ್ರಕರಣಗಳಲ್ಲಿ ವಿಮರ್ಶಿಸಲಾಗಿದೆ.

ಆ ಗೌರವದ ಲೆಕ್ಕನಿಕೆಯು ಶಾಸ್ತ್ರ ವಿರುದ್ಧ ಕಾಯದೆಯ ವಿರುದ್ಧ ಹೀಗೆಲ್ಲ ಮಡಿವಂತಿಕೆಯಿಂದ ಸುಧಾರಣೆಯನ್ನುತೋರಿಸಿದ್ದೆಂದರೆ, ಒಟ್ಟಿನಲ್ಲಿ; ಎಷ್ಟೋ ಕಾಲಪರಿಮಿತವಾಗಿ ದೇಹವನ್ನು ದಂಡಿಸಿ, ಮನವನ್ನೂ ನುಡಿಯನ್ನೂ ಬಿಗಿಹಿಡಿದು, ಇನ್ನುಳಿದ ಇಂದ್ರಿಯಗಳನ್ನು ಜೈಸಿ, ತಪವನ್ನಾಚರಿಸಿ, ಜ್ಞಾನ ಸಿದ್ಧಿ ಹೊಂದಿದ ಆ ಮಹನೀಯರು ಇನ್ನೆಷ್ಟೋ ಕಾಲದ ಹಿಂದೇ ಬರೆದಿಟ್ಟ, ಎಂದೆಂದೂ ಹಳಸದ ಶ್ರುತಿ-ಸ್ಮೃತಿಗಳನ್ನು ತಿದ್ದುಪಡಿಮಾಡಬೇಕೆಂದು ಅಲ್ಲವೆ? ಜ್ಞಾನಸಿದ್ಧರೆಂದರೆ ಪರಮಾತ್ಮನ ಪ್ರತಿನಿಧಿಗಳೆನುವುದರಲ್ಲಿ ಸರ್ವಾನುಮತವಿದೆ. ಕಾಯದೆಯಾದರು, ಧರ್ಮ-ಶಾಸ್ತ್ರದ ಹೊರಗಾಗಿಲ್ಲವು. ಏನಾದರು ಬಾಹಿರತೆಯನ್ನು ಪಡೆದ ಕಾಯದೆಯಿಂದ ಆವ ಕಾಲದಲ್ಲು

ಕ್ಷೇಮವಾಗಲಿಲ್ಲೆನುವುದು ಪುರಾಣೇತಿಹಾಸಗಳು ಒದರುತ್ತಿವೆ. ಅಂದಮೇಲೆ ರಾಜಕಾರಣ ಧುರೀಣರು ಇದನ್ನೆಲ್ಲ ಅನುಲಕ್ಷಿಸಿ, ಜಗತ್ತಿಗೆ ವ್ಯವಹಾರಿಕ ಪಾರಮಾರ್ಥಿಕ ಲಾಭವನ್ನೊದಗಿಸುವಂಥ ಪಥದಲ್ಲಿ ವಿಮರ್ಶೆಗೈದು ಸುಧಾರಿಸಲೆಂದು ಸದ್ಗುರುವಿನಲ್ಲಿ ಪ್ರಾರ್ಥನೆ.

ಸಕೃತ್ ಕನ್ಯಾ ಪ್ರದೀಯತೆ

ಸರ್ವಸಾಮಾಗ್ರಿಯಗಳ ಹಾಗೆ ಹೆಣ್ಣು ಪುನಃಪುನಃ ಕೊಟ್ಟುಕೊಳ್ಳುವ ಸಾಮುಗ್ರಿಯುವಲ್ಲ. ಒಮ್ಮೆಲೇ ಕೊಟ್ಟುಬಿಡುವುದು. ಈ ಪ್ರಕರಣದ ಶೀರ್ಷಕದ ಅರ್ಥವಿದು. ಆದರಿಂದಲೇ ಕನ್ಯಾದಾನ ಕಾಲದಲ್ಲಿ

ಇಮಾಂ ಕನ್ಯಾಂ ತುಭ್ಯ ಮಹಂ ಸಂಪ್ರದದೇ.

"ಈ ಕನ್ಯೆಯನ್ನು ನಿನಗೆ ನಾನು ಕೊಡುತ್ತೇನೆ" ಎಂದು ಮಂತ್ರರೂಪದಿಂದ ಹೇಳುವುದಾಗಿದೆ. ಅಂದಮೇಲೆ ಒಮ್ಮೆ ಕೊಟ್ಟ ಕನ್ಯೆಯನ್ನು ಪುನಃ ಕೊಡುವುದೆಂದರೆ ಅದೇ ಪುನರ್ವಿವಾಹವಾಗುವುದು. ಅರ್ಥಾತ್; ವಿಧವಾ ವಿವಾಹವೆಂದೂ ಆಗುವುದು.

ಕಾಮರೋಗ ಪೀಡಿತರಿಗೆ ಸರಿಯಾದ ಚಿಕಿತ್ಸೆಯೆಂದರೆ ವಿವಾಹವು. ಆ ಚಿಕಿತ್ಸೆಯನ್ನು ಮಾಡಿದ್ದಾದರೂ ಇನ್ನುಳಿದ ಎಲ್ಲ ರೋಗಿಗಳಿಗೆ ಪಥ್ಯಪಾನಗಳು ಹೇಗೆ ಎತ್ತಿರುವುದೊ ಹಾಗೆ ಈ ಕಾಮವಿಕಾರಿಗಳಿಗೂ ಪಥ್ಯವುಂಟು. ಈ ಔಷಧವಾದರೂ ಕಟುವಾದ ಕಹಿಯುಳ್ಳದ್ದು. ವಿವಾಹರೂಪದ

ಚಿಕಿತ್ಸೆಯನ್ನು ತೆಗೆದುಕೊಂಡವನು ಗೃಹಸ್ಥಧರ್ಮಕ್ಕನುಸರಿಸಿ ಹಬ್ಬ, ಹುಣ್ಣಿವೆ, ಅಮಾವಾಸ್ಯೆ, ಸಂಕ್ರಾಂತಿ, ವ್ರತವುಪವಾಸಾದಿ ದಿವಸಗಳನ್ನು ಕಾದುಕೊಂಡು ಇರಲೇಬೇಕು. ಹಾಗೆ ಇರುವುದರಲ್ಲಿ ಒಂದು ತಿಂಗಳಿಗೆ ಒಂದು ಎರಡು ದಿವಸವು ಮಾತ್ರ ಸಂಭೋಗಾರ್ಹದಿನವಾಗಿ ಲಭಿಸಬಹುದು. ಸ್ತ್ರೀ ರಜಸ್ವಲಾಕಾಲದ ನಿಯಮಿತ ನಾಲ್ಕುದಿವಸವಂತೂ ತ್ಯಾಜ್ಯವೆನುವುದು ಎಲ್ಲರಿಗೂ ತಿಳಿದಮಾತು. ಹೀಗೆ ನಿಯಮಬದ್ಧರಾಗಿದ್ದು ಗೃಹಸ್ಥಧರ್ಮದಂತೆ ಇನ್ನು ಕೆಲವು ನಿಯಮಕ್ಕನುಸರಿಸಿ ಪಿತೃಋಣ, ದೇವಋಣ, ಋಷಿಋಣಗಳಿಂದ ಮುಕ್ತರಾಗಬೇಕು. ಹಾಗಾದಾಗಲೇ ಅಂಥ ಕಾಮರೋಗದಿಂದ ಮುಕ್ತರಾದಂತಾಗುವುದು. ಮುಂದಿನ ಮೋಕ್ಷಪಥವೂ ಸುಗಮವಾಗಿ ಸಾಗುವುದು. ಇವೆಲ್ಲ ನಿಯಮಪಾಲನೆಯೇ ಈ ರೋಗಪೀಡಿತರಿಗೆ ಪಥ್ಯ–ಪಾನವು.

ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।
ಅನಪಾಕೃತ್ಯ ಮೋಕ್ಷಂ ತು ಸೇವಮಾನಂ ವ್ರಜತ್ಯಥಃ ॥

ಮೇಲೆ ಹೇಳಿರುವ ತ್ರಿಋಣದಿಂದ ಬಿಡುಗಡೆ ಹೊಂದಲು ಮನುಸ್ಮೃತಿಯಿನ್ನೂ ಹೇಳುವುದೆಂದರೆ, ನಿತ್ಯ ಯಜ್ಞ-ಯಾಗಾದಿಗಳಿಂದ ಋಷಿಋಣವನ್ನೂ ನೈಮಿತ್ತಿಕ ಯಜ್ಞ–ಯಾಗಾದಿಗಳಿಂದ ದೇವಋಣವನ್ನೂ ಸ್ತ್ರೀಸಂಭೋಗಕ್ಕೆ ಮೇಲೆ ಹೇಳಿದ ನಿಯಮಕ್ಕನುಸರಿಸಿನಡೆದು ಉತ್ತಮ ಪುತ್ರರನ್ನು ಪಡೆದು ಕುಲದೀಪವನ್ನೂ ಬೆಳಗಿಸುವುದು ಮತ್ತು ಪಿತೃಶ್ರಾದ್ಧ ಪಿತೃತರ್ಪಣಾದಿ ಕರ್ಮಾಚರಣೆಯಿಂದ ಪಿತೃಋಣವನ್ನು ಇಂಗಿಸಬೇಕು. ಹೀಗೆ ಹೇಳುವುದರಿಂದ ಸದ್ಧರ್ಮಪಾಲನೆ ಅಥಿತಿಅಭ್ಯಾಗತ ಸತ್ಕಾರ ಮೊದಲಾದವುಗಳೇ ವಿವಾಹದ ಮುಖ್ಯ ಉದ್ದೇಶವೆಂದಂತೆಯೂ ಆಗುವುದು.

ವಿವಾಹಪೂರ್ವದಲ್ಲಿ ಮನುಷ್ಯನು ತನ್ನ ವ್ಯಕ್ತಿತ್ವವನ್ನು ಕಾದುಕೊಂಡು ಇರಲು ಸಾಧ್ಯವಿದೆ. ವಿವಾಹವಾದಮೇಲೆ ಕುಟುಂಬ ಪೋಷಣೆ–ತೋಷಣೆ

ಗಾಗಿ ದೇಹ ಶೋಷಣವಾಗುತ್ತಿರಲು ಆವಾಗ ವ್ಯಕ್ತಿತ್ವವು ಈವಾಗಿನ ಶ್ರಮಕ್ಕೆ ಮಾರಾಟವಾಗಿ ಹೋಗುವುದು. ಇದರಲ್ಲಿ ಒಂದು ಲಾಭವೆಂದರೆ ಹೆಂಡತಿ ಮಕ್ಕಳು, ಬಂಧು-ಬಳಿ, ಹೀಗೆ ವಿಸ್ತಾರ ವಾಗುತ್ತಾಗುತ್ತಾ ವಸುಧಾ ಕುಟುಂಬಿಕನಾಗುವಷ್ಟು ಯೋಗ್ಯತೆ, ಮನೋವ್ಯಾಪಕತೆ ಬೆಳೆಯುವುದು. ಆದರಿಂದಾಗಿ, ವಿವಾಹದ ಅಂತಿಮಲಕ್ಷ್ಯವು, ಭಗವತ್ ಪ್ರಾಪ್ತಿಗಾಗಿ ಇರುವುದು.

ಈ ಪ್ರಕಾರವಾಗಿ ಸತಿಯೂ ನಡಕೊಳ್ಳುವುದರಲ್ಲಿ, ತನ್ನ ಆತ್ಮಾರ್ಪಣೆಯೇ ಪರಮಾತ್ಮನಲ್ಲಿ ಆಗುವುದರಿಂದ, ಅವಳಿಗೂ ಮೋಕ್ಷಕ್ಕೆ ಬೇರೆ ಸಾಧನ ಬೇಕಾಗಿಲ್ಲ.

ಅಪತ್ಯಂ ಧರ್ಮಕಾರ್ಯಾಣಿ ಶುಶ್ರೂಷಾ ರತಿರುತ್ತಮಾ।
ದಾರಾಧೀನಸ್ತಥಾ ಸ್ವರ್ಗಃ ಪಿತೃಣಾಮಾತ್ಮನಶ್ಚ ಹ ॥

(ಮನುಃ)

"ಅತಿಥಿ ಸತ್ಕಾರಾದಿ ಧರ್ಮಕಾರ್ಯವನ್ನು ನಡೆಸಲಿಕ್ಕೂ ಉತ್ತಮ ಮಕ್ಕಳನ್ನು ಪಡೆದು ಪಿತೃಗಳ ಉದ್ಧಾರ ಮಾಡಲಿಕ್ಕೂ ತನ್ನ ಉದ್ಧರಿಸಿ ಕೊಳ್ಳಲಿಕ್ಕೂ ಪತ್ನಿಯೇ ಕಾರಣಳು." ಆದರಿಂದಲೆ ಹಿಂದು ಶಾಸ್ತ್ರದಲ್ಲಿ ಪತಿ ವ್ರತಾ ಧರ್ಮಕ್ಕೆ ವೈಶೇಷಿಕವಿದೆ. ಹಾಗಿರುವುದರಿಂದ ಪುರುಷನಾದವನು ಸ್ತ್ರೀರಕ್ಷಣೆಯನ್ನು ಅವಶ್ಯವಾಗಿ ಮಾಡಲೇಬೇಕು. ಹೀಗೆ ಹೇಳುವುದರಿಂದ ಶಾಸ್ತ್ರಗಾರನು ಸ್ತ್ರೀ ಸ್ವಾತಂತ್ರ್ಯವನ್ನು ಕಡಿದು ಹಾಕಿದನೆಂದು ತಿಳಿಯ ಕೂಡದು. ಹೇಗೆ, ದೇವೀಸುತ್ತಲು ಗಣಗಳಿರುವವೋ, ಹೇಗೆ ರಾಣೀ ರಕ್ಷಣೆಗೆ ಸೈನ್ಯಗಳಿರುವವೋ ಹಾಗೇ ನಾರೀರಕ್ಷಣೆಗೆ ಪಿತೃ-ಪತಿ-ಸುತರುಗಳು. ಅಂದಾಗ ಸ್ತ್ರೀಪದವಿಗೆ ಇದೊಂದು ಗೌರವ ಸೂಚಕವು !

ಋತುಮತಿಯಾದಳೆಂದರೆ ಅವಳಲ್ಲಿ ಪುರುಷೇಚ್ಛೆಯಾಯಿತೆಂದ ಹಾಗೆ. ಈ ಸೂಚನೆ ತಿಳಿದ ಪಾಲಕರು ಅವಳ ವಿವಾಹ ಮಾಡಲೇಬೇಕು. ಹಾಗೆ

ಮಾಡದಿದ್ದರೆ ಮಾನಸಿಕ ವ್ಯಭಿಚಾರದೋಷಕ್ಕೆ ಅವಳನ್ನು ಗುರಿ ಮಾಡಿದಂತಾಗುವುದಿಷ್ಟೆ ಅಲ್ಲ; ಪಾಲಕರೂ ಆ ದೋಷಕ್ಕೆ ಇಂಬುಗೊಟ್ಟ ದೋಷಕ್ಕೊಳಗಾಗುವರು. ಮಾನಸಿಕವ್ಯಭಿಚಾರಕ್ಕಾರಂಭಿಸಿದ ಅವಳ ಮನಸ್ಸಿನ ಸಂಯಮವು ಕರಗಿಹೋಗಿ ಮುಂದೆ ದೈಹಿಕವ್ಯಭಿಚಾರ ದೋಷಿಯೂ ಆಗುವುದುಂಟು. ಆದ್ದರಿಂದ ಇದರಲ್ಲಿ ಹೆತ್ತವರ ಹೊಣೆಯು ಹೆಚ್ಚಿರುವುದು.

ಇಂದಿನ ಭಾರತೀಯರು ಯುರೋಪದ ಆದರ್ಶತೆಯನ್ನು ತಮ್ಮ ನಡೆ-ನುಡಿಗಳಲ್ಲಿ ಅರಗಿಸಿಕೊಳ್ಳಹತ್ತಿರುವರು. ಆದರೆ....! ವಿಚಾರಶೀಲರಾದ ವಿದೇಶೀವಿದ್ವಾನರು, ಹಿಂದೂ ವಿವಾಹವನ್ನೆ ಪ್ರಶಂಸನೆ ಮಾಡುತ್ತಿರುವರು ! **ಹೈವಲಕ ಎಲಿಸ** ಎಂಬುವವರು ವಿದೇಶೀ ವಿಜ್ಞಾನಿಗಳಲ್ಲಿ ಹೆಚ್ಚಿನವರು. ಅಂಥವರುಸಹ ಪ್ರೌಢ ವಿವಾಹವನ್ನು ನಿಷೇಧಿಸಿರುವರು. ವಿದುಷಿಯಾದ ಶ್ರೀಮತಿ " **ಕಾರಮಾ ಇಕಲ ಸ್ಟೋಪ್ಸ** " ಎನುವವರು ಹೀಗೆ ಬರೆದಿದ್ದಾರೆ :— "ನನ್ನ ದಿವಸಾನುದಿವಸದ ವಿಶ್ವಾಸವು ದೊಡ್ಡದಾಗಿ ನಿಲ್ಲುತ್ತದೆ. ಕನ್ಯಕಾವಿವಾಹವು ಶೀಘ್ರದಲ್ಲಾಗುವುದು ಅಂದರೆ ಸಕಾಲದಲ್ಲಾಗುವುದು ಉಚಿತವಿದೆ. ವಿಲಂಬದ ವಿವಾಹವು ಜಾತಿಯ ಮೇರೆಯನ್ನು ದಾಟುವ ವಿಪತ್ತನ್ನುಂಟುಮಾಡುವುದು. "

" **ಎ. ಟಿ. ಎ. ರಾಟ** " ಎನುವವರು ಬರೆದ ' **ಸೇಫಮ್ಯೆರೇಜ** ' ಎಂಬುವ ಪುಸ್ತಕದ ಇಪ್ಪತ್ತನೆ ಪುಟದಲ್ಲಿ ಇದ್ದದ್ದೆಂದರೆ :— " ಪಶ್ಚಿಮದೇಶದ ಸ್ತ್ರೀಯರುಗಳು ಅವೈಧಿಕ ವರ್ತನದಲ್ಲಿ ಆ ಸಂಸರ್ಗದ ಫಲವಾಗಿ ಫರ್ಮೀ ರೋಗದ ಶಿಕಾರಿಗೆ ಹೋಗುತಿದ್ದಾರೆ. ಶೀಘ್ರವಿವಾಹದಿಂದ ಆ ಶಂಕಾ ಪ್ರಾಯಶಃ ಕಡಿಮೆಯಾಗಬಹುದು ! "

ಅಮೇರಿಕನ್ ' **ಜಜ ಲಿಂಡಸೇನೆ** ' ಎನುವವರು ಹೀಗೆ ಬರೆದಿದ್ದಾರೆ :— " ಕೇವಲ ನ್ಯೂಯಾರ್ಕದಲ್ಲಿ ಕಮ್ಮಿಕಮ್ಮಿ ಐದು ಸಾವಿರ

ಹೆಂಗಸರು ಉಪಪತಿಯರ ಜೊತೆಗೆ ನಿಲ್ಲುತ್ತಿದ್ದಾರೆ. ವಿವಾಹವನ್ನು ಮಾಡಿಕೊಳ್ಳುವುದಿಲ್ಲ."

'**ಡಾ. ಫ್ಲೆಫೆಯರಕಾ**' ಎನುವವರ ಮತವು ಈ ಕೆಳಗಿನಂತಿದೆ:— ಅಧಿಕ ಅವಸ್ಥೆಯಲ್ಲಿ ಅಂದರೆ, ವಯಸ್ಸು ಅಧಿಕವಾದ ಮೇಲೆ ವಿವಾಹ ಮಾಡಿದರೆ ಆ ಹೆಣ್ಣಿಗೆ, ಗರ್ಭಾಧಾನವಾದನಂತರ ಪ್ರಸವಕಾಲವು ಕಷ್ಟ ಕಾರಕವಾಗುವುದು."

"**ವ್ಹಿ. ಲಿಕೀ**" ಎನುವವರು ಹೇಳುವುನೆಂದರೆ:— "ಆಯರ್ಲಂಡದ ಬಡವರಿಂದ ಕಿಸಾನ (ಒಕ್ಕಲ) ಜಾತಿ ರೈತರುಗಳಲ್ಲಿ ಶೀಘ್ರವಿವಾಹ ಮಾಡುವ ಪದ್ಧತಿ ಅದೆ. ಆದರಿಂದಾಗಿ ಆ ಸ್ತ್ರೀಯರುಗಳಲ್ಲಿ ಉಚ್ಚ ತರಗತಿಯ ಪಾತಿವ್ರತ್ಯಧರ್ಮ ಮತ್ತು ಪತಿಯಲ್ಲಿ ಹಾರ್ದಿಕ ಅನುರಾಗವು ಬಲಿಯುತ್ತಿರುತ್ತಿದೆ."

"**ಫೇಡರಿಕ ಪಿನಕಟಿಕಾ**" ಎನುನವರ ಅಂಬೋಣವು ಈ ಕೆಳಗಿನಂತಿದೆ.

"ಹಿಂದುಗಳ ವಿವಾಹಬಂಧನವನ್ನು ಕತ್ತರಿಸಲು ಬರುವಂತಿಲ್ಲ. ಅದು ಧರ್ಮ-ಶಾಸ್ತ್ರಗಳ ಅನುಸಾರದಂತೆ ಲೋಕ-ಪರಲೋಕಗಳನ್ನು ಗಂಟು ಹಾಕುವುದಾಗಿದೆ. ಅಂತಹ ವಿವಾಹದ ವಿಚ್ಛೇದವು ಆಕಾಶಪುಷ್ಪದಂತೇನೆ ಸರಿ. ಲಕ್ಷಗಟ್ಟಲೆ ವರ್ಷಗಳಿಂದ ಹಿಂದುಗಳಲ್ಲಿ ಈ ಪದ್ಧತಿ ನಡೆದು ಬಂದಿದೆ. ಹಿಂದೂವಿವಾಹ ಪದ್ಧತಿಯು ಸರ್ವೋತ್ತಮವಾದದ್ದು."

ವೀಮೇನ ಆಫ್ ಇಂಡಿಯಾದ ಲೇಖಕ "**ರಥಫೀಲ್ಡ**" ಎನುವವರು ಬರೆಯುವುದೆಂದರೆ:— ಹಿಂದುಗಳ ವಿವಾಹ ಪದ್ಧತಿಯು ಸುಖ ದಾಯಕವು. ಇದರಲ್ಲಿ ಸ್ವಾರ್ಥವು ಕಡಿಮೆ ಇದ್ದು ಸಾರ್ವಭೌಮಭಾವವು ಅಧಿಕವಿದೆ. ಹೇಗಂದರೆ:— ಪತಿಭಕ್ತಿಯ ಪೂರ್ಣತೆಯ ದ್ವಾರಾ ಯಾವುದೂ ಜಾತಿಯ ಉತ್ತಮ ಸ್ಥಿತಿಯು ತಿಳಿದು ಬಿರುತ್ತದೆ. ಹಿಂದೂ ನಾರಿಯಳ

ಕೂಡ ಸಂಸಾರವು, ಯಾವದೂ ಜಾತಿಯೊಡನೆ ತೂಕ ಹಚ್ಚಲಾಗುವದಿಲ್ಲ. ಇದರ ಮುಖ್ಯ ಕಾರಣವೆಂದರೆ, ಹಿಂದೂ ವಿವಾಹದ ಪವಿತ್ರತೆ ಆಗಿದೆ."

ಇಂಥಿಂಥವರೆಲ್ಲ ಸನಾತನ ಹಿಂದೂವಿವಾಹದ ಮೇಲೆ ಹೀಗೆ ಅಭಿಪ್ರಾಯ ಪಡುತ್ತಿರುವಾಗ, ನಮ್ಮ ಭಾರತೀಯರಾಗಲಿ ಭಾರತೇತರರಾಗಲಿ ಈ ಕಡೆಗೆ ಲಕ್ಷ್ಯವನ್ನು ಪೂರೈಸಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ !!!

ಋತುಕಾಲದ ನಿಯಮ

ಸ್ತ್ರೀ ಶರೀರದಲ್ಲಿ ಹೆಚ್ಚಾಗಿ ಕೂಡುವ ರಕ್ತವು ರಜಸ್ರಾವದ ದ್ವಾರಾ ಹೊರಗೆ ಬೀಳುವುದು. ಅವೆಲ್ಲ ಹೋಗಿ ಪವಿತ್ರವಾದ ನಂತರ ಗರ್ಭ ನಿಲ್ಲುತ್ತದೆ.

ಸ್ತ್ರೀ ಧರ್ಮಿಣೀ ತ್ರಿರಾತ್ರಸ್ತು ಸ್ವಮುಖಂ ನೈವ ದರ್ಶಯೇತ್ ।
ಸ್ವವಾಕ್ಯಂ ಶ್ರಾವಯೇನ್ನಪಿ ಯಾವತ್ ಸ್ನಾನಾನ್ನ ಶುಧ್ಯತಿ ॥
(ಮನುಃ)

"ಸ್ತ್ರೀಯು ಋತು ಸಮಯದಲ್ಲಿ ಆವಳ ಮೋರೆಯನ್ನು ನೋಡಬಾರದು. ಆಕೆಯು ನುಡಿದ ವಾಕ್ಯವನ್ನು ಕೇಳಿದ ಮಾತ್ರಕ್ಕೆ ಸ್ನಾನದಿಂದ ಶುಚಿಯಾಗಬೇಕು."

ನೋಪಗಚ್ಛೇತ್ ಪ್ರಮತ್ತೋಽಪಿ ಸ್ತ್ರಿಯಮಾರ್ತವ ದರ್ಶನೇ ॥
ಸಮಾನ ಶಯನೇ ಚೈವ ನ ಶಯೀತ ತಯಾಸಹ ॥
ರಜಸಾಭಿ ಪ್ಲುತಾಂ ನಾರೀಂ ನರಸ್ಯಹ್ಯುಪ ಗಚ್ಛತಿ ।
ಪ್ರಜ್ಞಾ ತೇಜೋ ಬಲಂ ಚಕ್ಷುರಾಯುಶ್ಚೈವ ಪ್ರಹೀಯತೇ ॥

ತಾಂ ವಿವರ್ಜಯತಸ್ತಸ್ಯ ರಜಸಾ ಸಮಭಿಪ್ಲುತಾಮ್ ।
ಪ್ರಜ್ಞಾ ತೇಜೋ ಬಲಂ ಚಕ್ಷುರಾಯುಶ್ಚೈವ ಪ್ರವರ್ಧತೇ ॥
(ಮನು. ೪। ೪೦-೪೨)

"ಕಾಮಾತುರನಾಗಿ ಪುರುಷನು ರಜೋದರ್ಶನ ಸಮಯದಲ್ಲಿ ಸ್ತ್ರೀ ಸಮಾಗಮವನ್ನು ಮಾಡಬಾರದು. ಆ ದಿವಸ ಬರುವ ಪೂರ್ವದಲ್ಲೇ ಏಕ ಶಯ್ಯೆಯ ತ್ಯಾಜ್ಯವಿರಬೇಕು. ಯಾವ ಪುರುಷನು ರಜಸ್ವಲೆಯವಳ ಸಮಾಗಮವನ್ನು ಮಾಡುತ್ತಾನೊ ಅವನ ಬುದ್ಧಿ, ತೇಜಸ್ಸು, ಬಲ, ನೇತ್ರ ಜ್ಯೋತಿ ಮತ್ತು ಆಯುಸ್ಸು ನಷ್ಟವಾಗದಿರದು. ಯಾವವನು ರಜಸ್ವಲೆ ಯವಳಿಂದ ದೂರವಿರುವನೊ ಅವನ ಬುದ್ಧಿ ತೇಜ ಬಲ ನೇತ್ರ ಜ್ಯೋತಿ ಮತ್ತು ಆಯುಸ್ಸು ಬಲವಾಗುತ್ತದೆ."

ಮುಟ್ಟಾದಾಗ ಎಷ್ಟೆಷ್ಟು ಅನಿಂದ್ರಿಯ ಸಂಯಮ, ತೀಕ್ಷ್ಣೋಷ್ಣ ಭೋಜನ. ಹಾವ-ಭಾವವಿಲಾಸ, ಮುಂತಾದವುಗಳು ಅಭಾವವಾಗುವವೋ ಅಷ್ಟಷ್ಟು ಸ್ತ್ರೀ ಶೋಣಿತಶಕ್ತಿಯು ಕಡಿಮೆ ಆಗುವುದು. ಆದರಿಂದ ಅವಳ ಋತುಸ್ನಾನಾನಂತರ ನಿಯಮಿತದಿನದಲ್ಲಿ ಗರ್ಭಾಧಾನವಾಯಿತೆಂದರೆ ಹೆಣ್ಣು ಮಗುವು ಹುಟ್ಟುವುದರ ಬದಲು, ಒಳ್ಳೇ ಗಂಡು ಮಗುವೇ ಹುಟ್ಟುವುದು.

ದಿವಾಸ್ವಾಪಂ ಅಲಂಕಾರಂ ಕ್ರೀಡಾಂ ಶಿಲ್ಪಕ್ರಿಯಾಂ ತಥಾ ।
ಗೃಹಕರ್ಮಾಣಿ ತಾಂಬೂಲಂ ಅಧ್ವಾನಂ ರಾತ್ರಿ ಭೋಜನಂ ॥
ಜ್ಯೋತಿಷಾಂ ದರ್ಶನಂ ಸ್ಪರ್ಶ ಮಗ್ನೇರ್ಮಾಂ ಸಾಶನಂ ತಥಾ ।
ಹಸನಂ ಶಯನಂ ತಪ್ಪಿ ಪ್ರಜಾ ನಿಶ್ರೇಯ ಸಾರ್ಥಿನಿ ॥
(ವೆಂಕಟೇಶಿ ಪೂರ್ವ ಸಂಪುಟ ೮೦)

"ಆ ಮೂರುದಿನಗಳಲ್ಲಿ ಹಗಲು ನಿದ್ದೆಮಾಡುವುದು, ಶರೀರಾಲಂಕಾರ ಮಾಡಿಕೊಳ್ಳುವುದು, ಏನಾದರು ಆಟವಾಡುವುದು, ಹೊಲಿಗೆ, ರಂಗೋಲಿ

ಬರಿಯೋಣ ಮುಂತಾದ ಶಿಲ್ಪಕಲೆಯನ್ನಾಚರಿಸುವುದು, ಮನೆಗೆಲಸ ಮಾಡುವುದು, ತಾಂಬೂಲಸೇವನೆ, ಎಲ್ಲೆಲ್ಲಾದರು ತಿರುಗಾಡುವುದು, ರಾತ್ರಿಯಲ್ಲಿ ಉಣುವುದು,ಸೂರ್ಯ-ಚಂದ್ರರನ್ನು ನೋಡುವುದು, ಬೆಂಕಿಯನ್ನು ಮುಟ್ಟುವುದು, ಮಾಂಸ ಭಕ್ಷಿಸುವುದು, ನಗೆಮಾಡುವುದು, ಹಾಸಿಗೆಯಲ್ಲಿ ಮಲಗುವುದೇ ಕ್ರಿಯೆಗಳನ್ನು, ಸುಪುತ್ರರನ್ನು ಬಯಸುವವಳು ತ್ಯಜಿಸಬೇಕು."

ಹಾಲು, ತುಪ್ಪ, ಮೊಸರುಗಳನ್ನು ಸೇವಿಸಬಾರದು. ಓದು–ಬರಹ ಮಾಡಿದರೆ ದುಷ್ಟಪುತ್ರರು ಹುಟ್ಟುವರು. ಹಲ್ಲು ತಿಕ್ಕಿದರೆ ಹುಳುಕು ಹಲ್ಲವರು, ಉಗುರು ತೆಗೆದರೆ ಹುಳುಕು ಉಗುರವರು, ಪ್ರಾಣಿಹಿಂಸೆಮಾಡಿದರೆ ನಪುಂಸಕರು, ಹೂವಿನ ದಂಡೆ ಕಟ್ಟಿದರೆ ಉರುಳುಹಾಕಿಕೊಂಡು ಸಾಯುವವರು, ಎಲೆಯಲ್ಲಿ ಉಂಡರೆ ಉನ್ಮತ್ತರು, ಸಣ್ಣಪಾತ್ರೆಯಲ್ಲಿ ಉಂಡರೆ ಕುಳ್ಳರು, ಹುಟ್ಟುವರು. ನಾಲ್ಕನೇದಿನ ಸಚೇಲಸ್ನಾನ ಉಟ್ಟವಸ್ತ್ರದಲ್ಲಿ ಸ್ನಾನ)ಮಾಡಬೇಕು.

ಋತುಕಾಲವೆಂದರೆ ಪ್ರಥಮರಜಸ್ವಲಾಕಾಲಕ್ಕೇ ಎಂದು ತಿಳಿಯ ಬಾರದು. ಪ್ರತಿ ಸರತಿ ರಜಸ್ವಲೆಯಾದಾಗಲೂ ಎಲ್ಲ ಬಗೆಯ ನಿಯಮಗಳನ್ನೂ ಪಾಲಿಸಿದರೆ ಹಿತವುಂಟು.

ಅಮೇರಿಕನ್ ಪ್ರೋಫೇಸರ್ ಶೀಕ ಎನುವವರು ಹೇಳಿದ್ದೆಂದರೆ :—
"ರಜಸ್ವಲೆಯಾದಾಗ ಆ ನಾರಿಯ ಅಂಗದಲ್ಲಿ ಒಂದುಬಗೆಯ ಪ್ರಬಲವಾದ ವಿಷವಿರುತ್ತದೆ. ಅವಳು ಆ ಕಾಲದಲ್ಲಿ ಹೂದೋಟದಲ್ಲಿ ಹಾದುಹೋದರೆ ಸಾಕು. ಆ ಭಗೀಚದಲ್ಲಿನ ಅವಳ ಗಾಳಿ ಸೋಂಕಿದ ಗಿಡಗಳೊಳಗುಳ್ಳ ಫಲ–ಪುಷ್ಪಗಳು ಒಣಗಿ ಹೋಗುವುದುಂಟು. ಅಲ್ಲವಾದರೆ, ಮರ–ಮಟ್ಟೆಗಳಿಗೆ ಕೇಡಿ ಬೀಳುವುದೇ ಮೊದಲಾದ ಅಪಘಾತದ ಸಂಭವವಿರುತ್ತದೆ. ಯಾವಾಗ ಲಾದರು ಸತ್ತುಹೋಗುವುದೂ ಉಂಟು."

ನಿಸರ್ಗದಂತೆ ನಾಲ್ಕು ದಿವಸ ಋತುಕಾಲವಿದ್ದರು ಕೆಲವರ ದೇಹಧರ್ಮ ದಲ್ಲಿ ಅಥವಾ ಬೇರೆಬೇರೆ ಬಗೆಯಲ್ಲಿ ಹೆಚ್ಚು–ಕಡಿಮೆ ದಿವಸಗಳ ಅವಧಿಯು

ವರೆಗು ರಕ್ತಶ್ರಾವವಾಗುವುದುಂಟು. ಹಾಗಿದ್ದ ಪ್ರಸಂಗದಲ್ಲಿ, ನಿಯಮಿತ ದಿವಸದಲ್ಲಿ ಶುದ್ಧಸ್ನಾನ ಮಾಡಿದರು ಪರಿಶುದ್ಧವಾಗಲಾರಳು. ಆದ್ದರಿಂದ ಎಲ್ಲಿಯವರೆಗೆ ರಕ್ತಶ್ರಾವವಿರುವುದೊ ಅಲ್ಲಿಯವರೆಗು ನಿಯಮಬದ್ಧಳಾಗಿಯೆ ಇದ್ದರೆ ಒಳಿತು. ಹೀಗೆ ಮಾಡುವುದರಲ್ಲಿ ತಪ್ಪಿದರೆ, ಆದರಿಂದಾಗುವ ಅಪಾಯವೆಂದರೆ :—ನೀರಿನಿಂದ ತುಂಬಿದ ಕೊಡವನ್ನೆತ್ತುವುದು,ಪದೇಪದೇ ಬಗ್ಗುವುದು,ದೌಡಾಗಿ ಓಡಾಡುವುದು,ಗಟ್ಟಿಯಾಗಿ ಕೂಗುವುದು,ಅಳುವುದು, ಹೊರಳುವುದು, ಹಾಡುವುದು, ಓದುವುದು, ಕೆಲಸದಲ್ಲಿ ನುಗ್ಗುವುದು, ಇವೇ ಮೊದಲಾದ ಶಾರೀರಕ ಶ್ರಮೆಯಿಂದಾಗಿ; ಮೊದಲೇ ರಕ್ತಾಸ್ರಾವದಿಂದ ಗಾಯಗೊಂಡಿದ್ದ ಹೊಟ್ಟೀಕರುಳಿಗೆ ಮತ್ತೂ ಪೆಟ್ಟುಬಿದ್ದು, ಹೆಚ್ಚಿನ ತ್ರಾಸಿಗೆ ಆ ಪ್ರಾಣಿಯು ಗುರಿಯಾಗಬೇಕಾಗುವುದು. ಆದರಿಂದಲೆ ರಜೋದರ್ಶನ ಕಾಲದಲ್ಲೆಲ್ಲ ಪೂರ್ಣವಿಶ್ರಾಂತಿಯನ್ನು ಹೇಳಿರುವುದು. ಋತುಕಾಲದಲ್ಲಿ ಸ್ನಾನಮಾಡಬಾರದೆನುವುದು ಇದೇಕಾರಣದಿಂದ. ಏಕೆಂದರೆ ಆ ಕಾಲದಲ್ಲಿ ಕಿರಿಹೊಟ್ಟೆಗೆ ಥಂಡಿ ತಗಲಬಾರದು. ಇಂತಹ ಕಾಲದಲ್ಲಿ ತಲೆಗೆ ಗರ್ಮಿಯಾಗ ದಂತೆ ಎಣ್ಣೆಹಾಕುತಿರಬೇಕು. ದೇಹದ ಮೇಲಿನ ಹೊಲಸನ್ನು ಹಸೀಬಟ್ಟೆ ಯಿಂದ ಒರೆಸಿ ತೆಗೆಯುತ್ತಿರಬೇಕು. ತಂಡೀಪ್ರದೇಶದಲ್ಲಿ ತಿರುಗಬಾರದು. ಕಡೆಯ ದಿನವಾದರು ಟೊಂಕದವರೆಗೆ ಮುಳುಗಿ ಸ್ನಾನಮಾಡಬಾರದು. ಹೊಲಸು ಅರಿವೆಯನ್ನು ಬಳಸಬಾರದು. ಒಮ್ಮೆ ಬಳಸಿದ ಅರಿವೆಯನ್ನು ಮತ್ತೊಮ್ಮೆ ತೊಳೆದುಸಹ ಮರೆತಾಗಲಿ ಬಳಸಬಾರದು.

ಏಕಂದರೆ........ರಜಸ್ವಲಾಕಾಲದ ರಕ್ತವು ಕೆಟ್ಟ ವಿಷವಾದುದರಿಂದ ಅಂತಹ ಸಾಂಸರ್ಗಿಕ ಕಾಲದಲ್ಲಿ ಒಮ್ಮೆಮುಟ್ಟಿದ ವಸ್ತುವನ್ನೆ ಪುನಃ ಮುಟ್ಟ ಬಾರದು. ಎಲ್ಲಿಯವರೆಗೆ ರಕ್ತಸ್ರಾವವಿರುವದೋ ಅಲ್ಲಿಯವರೆಗೆ ಮರೆತಾಗಲಿ ಅರಿತಾಗಲಿ ಪತಿಯ ಸಂಗವನ್ನು ಮಾಡಬಾರದು.

ಮಾಂಸಾಹಾರಿಗಳು ಈ ಕಾಲದಲ್ಲಿ ಮಾಂಸ, ಮೀನು, ವಗೈರೆ ತ್ಯಜಿಸ ಬೇಕು. ಸರ್ವಸಾಧಾರಣ ನಿಯಮವಾದ ಇವುಗಳನ್ನು ಯಾರು ಪಾಲಿಸುವು

ದಿಲ್ಲವೋ ಅವರು ನಿಶ್ಚಯವಾಗಿಯು ಕಷ್ಟಪರಂಪರೆಯಲ್ಲಿ ಬೀಳುತ್ತಾರೆ ಎಂದು ಶಾಸ್ತ್ರವು ಹೇಳುತ್ತದೆ. ಋತುಕಾಲದಲ್ಲಿ ನಾಯಿ, ಕಪ್ಪೆ, ಕುರಿ ಮೊದಲಾದ ಯಾವಯಾವ ಪ್ರಾಣಿಗಳ ಮೈಥುನವನ್ನು ನೋಡುವರೋ ಆಯಾಯ ರೂಪವೇ ಕಾಮುವಾಸನೆಯಾಗಿ, ಭಾವದಲ್ಲಿ ಬಲಿದು, ಸ್ವಪ್ನದಲ್ಲು ಸಹ ಆ ವಾಸನೆಯು ಪ್ರಾಬಲ್ಯದಿಂದ ಆ ಪ್ರಾಣಿಯನ್ನೇ ಕೂಡಿದಂತೆ ಕಂಡು, ಮುಂದೆ ಈ ಬಗೆಯ ವಿಕೃತಾಕಾರ ಗರ್ಭನಿರ್ಮಾಣವಾಗುವುದುಂಟು. ಆದ್ದರಿಂದ ನಾರಿಯರು ಋತುಕಾಲವನ್ನು ಅತಿ ಎಚ್ಚರದಿಂದ ಕಾದುಕೊಳ್ಳತಕ್ಕದ್ದು.

ಪುತ್ರಕಾಮೀ ನಾರಿ

ಯಾವಕಾಲದಲ್ಲು ನಮ್ಮ ಭಾರತೀಯರಿಗೆ ಹೆಣ್ಣು ಮಕ್ಕಳು ಹುಟ್ಟ ಬಾರದೆಂಬ ಇಚ್ಛೆ ಇರಲಿಕ್ಕಿಲ್ಲ. ಆದರೂ ಗಂಡು ಮಕ್ಕಳ ಅಪೇಕ್ಷೆಯೆ ಹೆಚ್ಚಿರುವುದು. ಏಕಂದರೆ; ಗಂಡುಮಗನು ತಾಯಿ–ತಂದೆಯ ಐಹಿಕ ಜೀವನನೂ ದೇಹಾಂತ್ಯದಲ್ಲಿ ಮಾಡಬೇಕಾದ ಉತ್ತರಾಧಿಕಾರಿಯೂ ಇರುವನೆಂದು. ಹೀಗಿದ್ದರೂ ಬರಬರುತ್ತ ಹೆಣ್ಣು ಪೀಳಿಗೆಯೆ ಹೆಚ್ಚುತ್ತ ಬಂದಿರುವವು. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ನೋಡೋಣ.

ವೈವಸ್ವತಮನುವು ಇಳಾ ಎಂಬ ಪುತ್ರಿಯನ್ನು ಪಡೆಯಬೇಕಾದರೆ ಪುತ್ರೇಷ್ಟಿ ಎನುವ ಯಾಗವನ್ನು ಮಾಡಿ ಪುತ್ರಿ ಆಗ ಬೇಕೆಂದೇ ಬೇಡಿದ್ದನು. ತಾತ್ಪರ್ಯ; ಪೂರ್ವಕಾಲದಲ್ಲಿ ಮಕ್ಕಳಿಲ್ಲದವರು, ಯಜ್ಞ—ಯಾಗಾದಿ ಕರ್ಮಗಳಿಂದ ದೇವತೆಗಳನ್ನು ತೃಪ್ತಿಪಡಿಸಿ, ತಮ್ಮತಮ್ಮ ಇಷ್ಟದಂತೆ

ಗಂಡು—ಹೆಣ್ಣು ಮಕ್ಕಳನ್ನು ಪಡೆಯುತಿದ್ದರು. ಈ ಕಾಲದಲ್ಲಿ ಕರ್ಮದೊಳಗೆ ಶ್ರದ್ಧೆಯು ತಪ್ಪಿಹೋಗಿದೆ. ಆದರಿಂದ ಅವು ಕೊಡಬಲ್ಲ ಫಲಗಳನ್ನು ಕೊಡದೆಯೇ ಇರುವವು. ಇನ್ನೊಂದೆಂದರೆ, ಹಳೆಯಕಾಲದವರು ಸಂಯಮಿಗಳಿರುವುದರಿಂದ ನಿಯಮಬದ್ಧ ಗೃಹಸ್ಥಜೀವನವನ್ನು ಪೋಷಿಸುತಿದ್ದರು. ಹೊಸಕಾಲದವರು ಅತಿಕಾಮಿಗಳಾಗಿದ್ದು, ಬೀಡಿ ಸಿಗರೇಟು ಚಹಾ ಮೊದಲಾದ ಮಾದಕ ಮತ್ತು ಅಪೋಷಕ ಆಹಾರಗಳ ಸೇವನೆಯಿಂದ ವೀರ್ಯವು ನೀರಾಗಿ ಇರುವರು. ನಾರಿಯರ ವೀರ್ಯವು, ಅವರ ಆಹಾರಾನುಗುಣವಾಗಿ ಬಲವಾಗುತ್ತಿರುವುದು. ಹೀಗೆ ನಾರಿಯರ ವೀರ್ಯವು ವೃದ್ಧಿಹೊಂದುತಿರುವಾಗ ಹೆಣ್ಣುಪೀಳಿಗೆ ಹೆಚ್ಚುವುದೆನುವುದು ಸಾಧಾರದ ಮಾತಿದು. ಇದೆನ್ನೆಲ್ಲ ತಿಳಿದ ಇಂದಿನ ನಮ್ಮ ಸರಕಾರವು ವಿವಾಹಕಾಲವನ್ನು ನಿಯಂತ್ರಣದಲ್ಲಿ ತಂದಿರುವುದು ಸ್ತುತ್ಯವಾಗಿದೆ ! ಆದರೆ !.... ಗಂಡಾಗಲೀ ಹೆಣ್ಣಾಗಲೀ ಆ ನಿಯಮಬದ್ಧ ಕಾಲದ ವರೆಗೆ ಬ್ರಹ್ಮಚರ್ಯವನ್ನು ಕಾದುಕೊಳ್ಳಬೇಕು. ಆಹಾರ — ವಿಹಾರಗಳಲ್ಲಿ ಆ ಮೇಲೂ ಸಹ ಅಕ್ರಮವಾಗಿರಕೂಡದು. ಶಾಸ್ತ್ರವು ನಿಷೇಧಿಸಲ್ಪಟ್ಟ ಆಹಾರ ಸೇವನೆಯಿಂದ, ಬ್ರಹ್ಮಚರ್ಯವು ಸ್ವಾಧೀನವಾಗಿರಲಾರದು !

ನಜಾತು ಕಾಮಃಕಾಮಾನಾ ಮುಪಭೋಗಾ
ತ್ಪ್ರಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿ ವರ್ಧತೇ ॥

(ಭಗವದ್ಗೀತಾ)

"ಅಗ್ನಿಯು ಘೃತದಿಂದ ವೃದ್ಧಿಯಾಗುವಂತೆ, ಕಾಮವು ತನ್ನ ಉಪಭೋಗದಿಂದ ಹೆಚ್ಚುತ್ತ ಹೋಗುವುದು." ಆದರಿಂದ ಕಾಮುಕೀ ಆದವರಿಗೆ ಜಗತ್ತಿನಲ್ಲಿ ಸಾಧಿಸಬೇಕಾದ ಯಾವುದನ್ನೂ ಸಾಧಿಸುವುದು ಕಷ್ಟಸಾಧ್ಯವು. ಇದರಿಂದ, ಬ್ರಹ್ಮಚರ್ಯವು ಗೃಹಸ್ಥ ಜೀವನಕ್ಕೂ ಅವಶ್ಯವೆಂದಂತಾಗುವುದು. ಆದರಿಂದಲೇ

ವರಮೇಕೋ ಗುಣೀ ಪುತ್ರೋ ನ ಚ ಮೂರ್ಖ
ಶತಾನ್ಯಪಿ ।

ಏಕಶ್ಚಂದ್ರಃ ತಮೋಹಂತಿ ನ ಚ ತಾರಾಗಣಾ ಅಪಿ ॥

(ನೀತಿಶಾಸ್ತ್ರ)

"ಹಲವಾರು ತಾರೆಗಳು ಆಕಾಶದಲ್ಲಿದ್ದರು, ಒಬ್ಬ ಚಂದ್ರನಿಂದ ಪ್ರಕಾಶವೆಂತೊ ಅಂತೆಯೆ ದುಷ್ಪುತ್ರರು ಒಂದುನೂರು ಹುಟ್ಟುವುದರ ಬದಲು ಸುಪುತ್ರನು ಒಬ್ಬನೆ ಹುಟ್ಟಿದರು ವಿಶೇಷವಿರುವುದು."

ಯಾವ ಬಗೆಯ ಮಕ್ಕಳು ಹುಟ್ಟುವುದಿದ್ದರು ಮಾತಾಪಿತರೆ ಕಾರಣ ರೆನುವುದನಂತು ಈ ಹಿಂದೆಯೆ ಸಾಧಾರಪೂರ್ವಕ ಹೇಳಿಯಾಗಿದೆ. ಇದನ್ನರಿತು ಪ್ರತಿಯೊಬ್ಬ ಭಾರತೀಯನೂ ನಡಕೊಂಡರೆ ತಮ್ಮತಮ್ಮ ಇಷ್ಟಾನುಸಾರ ಮಕ್ಕಳನ್ನು ಪಡೆಯಬಹುದು ! ಬ್ರಹ್ಮಚರ್ಯ ಪಾಲನೆಯ ಮಾರ್ಮಿಕವನ್ನು ಮತ್ತು ಹೇಳುವುದೆಂದರೆ. **'ವನಿತಾಗೀತ ಭಾಂಡಾರ'** ದ ಕವಿಯ ಕಣ್ಣಿನಲ್ಲಿ ವಿಸ್ತರಿಸಿಯಾಗಿದೆ!

ಗರ್ಭಾಧಾನ

ನಾರಿಯರ ಗರ್ಭಾಧಾನ ಸಮ್ಮಂಧದಲ್ಲಿ ಇರುವ ಸಾಮಾನ್ಯ ನಿಯಮವೆಂದರೆ :— ಸತಿ-ಪತಿಗಳ ರತಿಕ್ರೀಡಾಕಾಲವನ್ನು; ಸದ್ಭಾವನೆಯಿಂದಲೊ, ಪರಮಾತ್ಮನ ಸ್ಮರಣೆಯಿಂದಲೊ ನಡೆಸತಕ್ಕದ್ದು. ಇದರಲ್ಲಿ ವ್ಯತಿರಿಕ್ತ ನಡಕೊಳ್ಳುವಲ್ಲಿ ತತ್ಸಂಬಂಧಾನುಗುಣವಾದ ಮಕ್ಕಳು ಹುಟ್ಟುವರು. ರಜಸ್ವಲೆಯಾದವಳು ನಾಲ್ಕನೆಯ ದಿನ ಶುದ್ಧಸ್ನಾನ ಮಾಡಿಬಂದು, ಅನ್ಯರ ಮುಖಾವಲೋಕನ ಗೈಯದೆ, ತನ್ನ ಪತಿಯ

ಮುಖವನ್ನು ನೋಡಬೇಕೆಂದು ಶಾಸ್ತ್ರವು. ಋತುಕಾಲವೆಂದರೆ ಹದಿನಾರು ದಿವಸ. ಈ ದಿವಸಗಳಲ್ಲಿ ಸತಿಯು ಪತಿಯ ಸಾನಿಧ್ಯಸೇರಿರುವಾಗ

" ರಜಾಧಿಕ್ಯೇ ಭವೇತ್ಪುತ್ರೀ ಶುಕ್ರಾಧಿಕ್ಯೇ ಭವೇತ್ಪುಮಾನ್ "
" ಹೆಂಗಸಿನ ಶೋಣಿತವು ಅಧಿಕವಾದರೆ ಹೆಣ್ಣು ಹುಟ್ಟುವುದೆಂದೂ ಗಂಡಸಿನ ಶುಕ್ರವು ಅಧಿಕವಾದರೆ ಗಂಡು ಹುಟ್ಟುವುದೆಂದೂ ಅಭಿಪ್ರಾಯ." ಅದರಂತೆ, ಜ್ಯೋತಿರ್ವಿಜ್ಞಾನಿಗಳ ಮತವೆಂದರೆ, ಗುರು-ರವಿ-ಮಂಗಲ-ಮತ್ತು ಮೃಗಶಿರ ಪುನರ್ವಸು-ಪುಷ್ಯ-ಹಸ್ತ-ಮೂಲ-ಹೀಗಿರುವ ಉತ್ತಮವಾದ ವಾರ–ನಕ್ಷತ್ರಗಳ ಸಂಯೋಗದ ದಿನದ ರಾತ್ರಿ ಮೊದಲನೇ ಪ್ರಹರ (ಒತಾಸು) ಬಿಟ್ಟು ಸತಿ—ಪತಿಗಳು ಬೆರೆತರೆ; ಸುಂದರ, ಸುಶೀಲ, ದೀರ್ಘಾಯು ಮತ್ತು ಪ್ರಭಾವಶಾಲಿ ಮಕ್ಕಳು ಜನಿಸುವರು. ಸಂಭೋಗಕಾಲದಲ್ಲಿ ಸ್ತ್ರೀ—ಪುರುಷರ ಅಂಗಾಂಗಗಳು ಸರಿಯಾಗಿರತಕ್ಕದ್ದು. ಅಷ್ಟೇಏಕೆ ? ನಾರಿಯಳು ; ಸ್ವಾಸ್ಥ್ಯಚಿತ್ತ, ವಿಕಸಿತ ಹೃದಯ, ಉತ್ತಮಭಾವನೆ, ಹರ್ಷೋತ್ಸಾಹ ಮೊದಲಾದವುಗಳಿಂದ ಸಂಯುಕ್ತವಾಗಿರಬೇಕು. ಪುರುಷನು; ಸತ್ಯ—ಶೀಲ, ದಯಾ—ಧರ್ಮ, ದೇಶಸೇವಾಮನ ಅಥವಾ ಪರಮಾತ್ಮನ ಸ್ಮರಣೆ, ಧೈರ್ಯ—ಸ್ಥೈರ್ಯ, ವೀರ್ಯ—ಗಾಂಭೀರ್ಯ—ಉದಾರತಾ ಮೊದಲಾದವುಗಳಲ್ಲಿ ತತ್ಪರನಾಗಿರಬೇಕು- ಹೀಗೆ ನಡೆದುಕೊಳ್ಳುವಲ್ಲಿ ಉತ್ತಮ ಸಂತಾನೋತ್ಪತ್ತಿಯಾಗುವುದು.

ಆಧುನಿಕ ವೈಜ್ಞಾನಿಕರ ಮತವು ಹೀಗಿದೆ :— ಹೆಂಗುಸು ಸ್ವಪ್ನದಲ್ಲಿ ಗಂಡಸನ್ನು ಕೂಡಿದಂತೆ ಕಂಡು ಗರ್ಭವನ್ನು ಧರಿಸುವುದೂ ಉಂಟು. ಆ ಗರ್ಭ ದಿಂದ ಹುಟ್ಟಿದ ಶಿಶುವು; ತಲೇಕೂದಲು,ಉಗುರು, ಹಲ್ಲು,ಮೀಸೆ,ಶರೀರದಲ್ಲಿ ರೋಮಗಳು, ಶೀರಾಧಮನಿ (ಪ್ರಧಾನ ಶಕ್ತಿದಾಯಕನಾಡಿ)ಮತ್ತು ರೇತವೇ ಮೊದಲಾದವುಗಳು ಇರುವುದಿಲ್ಲ. ಹೀಗೆ ಹುಟ್ಟಿದ ಕೆಲವರಲ್ಲಿ ಈ ಚಿನ್ಹೆಗಳಲ್ಲಿ ಯಾವುದಾದರು,ಒಂದೊಂದಾದರು ನ್ಯೂನತೆ ತೋರಿಬರುವುದೂ ಉಂಟು. ಇದಕ್ಕೆಲ್ಲ ಕಾರಣವೆಂದರೆ, ಪಿತೃಸಮ್ಮಂಧವಿರುವ ಸಣ್ಣ ಸಣ್ಣ ಸ್ನಾಯು

(ನರ) ಗಳು, ಅಸ್ಥಿ, ಮಜ್ಜಾದಿಗಳು ಆ ಶಿಶುವಿಗೆ ಇರುವುದಿಲ್ಲ. ಮಾತೃ ಸಂಬಂಧವಿರುವ ರೋಮ, ರಕ್ತ, ಮಾಂಸಾದಿಗಳುಮಾತ್ರ ಇರುವವು.

ಈ ವಿಷಯವಾಗಿ ಇನ್ನೊಂದನ್ನು ಹೇಳಿದರೆ ವಾಚಕರಿಗೆ ಆಶ್ಚರ್ಯ ವಾಗಬಹುದು. ಅವಿಶ್ವಾಸವೂ ಬರಬಹುದು. ಅದಾವುದೆಂದರೆ:— ಮಲಯಾದ್ರಿಯಲ್ಲಿರುವ ಲಲನೆಯರು, ಶುದ್ಧಸ್ನಾನಮಾಡಿ ಬಂದು, ಕೇವಲ ವಾಯುಭಕ್ಷಣದಿಂದಲೇ ಗರ್ಭವತಿಯರಾಗುವರು. ಸುಂದರವಾದ ಮತ್ತು ಸಜಾತೀಯವಾದ ಮಕ್ಕಳನ್ನು ಪಡೆಯುವರು. ಇದು ಸ್ತ್ರೀ ಮಲೆಯಾಳದ ವರ್ತನವು. ಜಗತ್ತಿನ ಜೀವಿಗಳಲ್ಲಿ ಭೋಗಾಸಕ್ತತೆಯು ಎಷ್ಟರಮಟ್ಟಿಗೆ ಕಡಿಮೆಯಾಗುವುದೊ, ಅಷ್ಟರಮಟ್ಟಿಗು ಶುಕ್ರ-ಶೋಣಿತಗಳ ಪುಷ್ಟಿ, ಅದರಿಂದ ನಿರೋಗತಾ, ಪವಿತ್ರತಾ ಮತ್ತು ಶಕ್ತಿಮತರಾಗುವವು. ಅದರಿಂದಲೆ ಶಾಸ್ತ್ರಗಾರರಾಗಲಿ ವೈದ್ಯಗಾರರಾಗಲಿ ಕಾಲಕ್ಕೆ ಮಹತ್ವವನ್ನು ಕೊಟ್ಟದ್ದು. ಹಾಗಿರುವ ಮಹತ್ತತೆಯನ್ನು ಕಡೆಗಣಿಸಿದರ ಪರಿಣಾಮವಾಗಿ ತಾವೂ ದುರ್ಬಲತೆ-ಅಧಮತೆ ಹೊಂದುವರಲ್ಲದೆ ತಮಗೆ ಹುಟ್ಟುವ ಮಕ್ಕಳೂ ಅವರಂತೆ ಆಗುವರು. ಅಷ್ಟೆ ಅಲ್ಲ; ಕೆಲವು ಮಟ್ಟಿಗೆ ನಿರ್ವೀರ್ಯತೆಯಾಗುವುದೂ ಉಂಟು. ಗರ್ಭಧಾರಣಮಾಡಿದಂದಿನಿಂದ ಹೆತ್ತು ಮೂರು ತಿಂಗಳಾಗುವವರೆಗೂ ಪತಿಯ ಮುಖವನ್ನು ಧಿಟ್ಟಿಸುವುದಾಗಲಿ, ಅವನಲ್ಲಿ ರಸಿಕ ಸಂಭಾಷಣವನ್ನಾಗಲಿ ಮಾಡಿದಲ್ಲಿ-ಕಾಮೋತ್ತೇಜಕವಾಗುವುದೆಂದೂ ಅದರ ಫಲವಾಗಿ ಶಾರೀರಕ ದಾರ್ಢ್ಯತೆಯು ಕಳೆಯುವುದೆಂದೂ ಶಾಸ್ತ್ರಕಾರರ ಹೇಳಿಕೆಯಿದೆ. ಅದರಂತೆಯೇ ಜಾಪತ್ಕಾಲ (ಅಶಕ್ತತೆಯ ಕಾಲ) ದಲ್ಲೂ ನಡೆದುಕೊಳ್ಳಬೇಕು.

ತ್ರಿಸಂಧ್ಯಾಕಾಲವಂತು ರಾಕ್ಷಸರು ಮತ್ತು ಘೋರವಾದ ವಿಕಟಾಕಾರ ವುಳ್ಳ ಭೂತ-ಪ್ರೇತ-ಪಿಶಾಚಾದಿಗಳು ವಿಚರಣ ಮಾಡುತಿರುವ ಸಮಯವದು. ಆ ಸಮಯದಲ್ಲಿ ಭಗವಾನ್ ಭವಾನೀಪತಿಯು ಭೂತಗಳ ತಂಡವನ್ನು ಕಟಿ

ಕೊಂಡು ತಿರುಗುತ್ತಿರುವನು. ಅಂಥಸಮಯದಲ್ಲಿ, ದಿತಿದೇವಿಯು ಪತಿಯಾದ ಕಶ್ಯಪನಲ್ಲಿ ಗರ್ಭಾಧಾನವನ್ನುಯಾಚಿಸಿ, ಆತನನ್ನು ಆಗ್ರಹ ಪೂರ್ವಕ ಕೂಡಿದ್ದರ ಫಲವಾಗಿ ಹಿರಣ್ಯಾಕ್ಷ-ಹಿರಣ್ಯಕಶಿಪು ಎನುವ ದೈತ್ಯಬಾಲಕರನ್ನು ಪಡೆದ ಕಥೆಯುಂಟು. ರಾತ್ರಿಯ ಮೂರನೇ ಪ್ರಹರದಲ್ಲಿ ಗರ್ಭಾಧಾನ ವಾದಲ್ಲಿ ಹರಿಭಕ್ತ ಮತ್ತು ಧರ್ಮಪರಾಯಣನು ಹುಟ್ಟುವನು. ಒಟ್ಟಿನಲ್ಲಿ ಚರಕಸಂಹಿತೆಯ ಶಾರೀರ–ಅಷ್ಟಮಾಧ್ಯಯದ ಆಧಾರದಂತೆ ಹೇಳುವುದಾದರೆ ರಜ–ವಿರ್ಯಗಳ ಮಿಶ್ರಣಕಾಲದಲ್ಲಿ ತಾಯಿ–ತಂದೆಗಳ ಭಾವನೆಯು ಹೇಗೆ ಇರುವುದೊ ಹಾಗೆ ಮಕ್ಕಳು ಹುಟ್ಟುವರು. ಅಂಥ ಭಾವನೆಯಾದರು, ಪೂರ್ವ ಕರ್ಮಗಳ ಫಲಾನುಗುಣವಾಗಿ ಸಮನ್ವಯಿಸುವುದು. ನಮ್ಮ ಶಾಸ್ತ್ರದಲ್ಲಿ ಏನೇನು ಹೇಳಿದೆಯೋ ಅವೆಲ್ಲ ವಿಜ್ಞಾನಸಿದ್ಧವಾದವು. ನಾರಿಯು ಋತು ಸ್ನಾನಾನಂತರ ಮೊಟ್ಟಮೊದಲು ಯಾವ ವಸ್ತುವನ್ನು ನೋಡುವಳೋ ಆ ಸಂಸ್ಕಾರವು ಅವಳ ಚಿತ್ತದಲ್ಲಿ ನಟ್ಟುವುದು. ಅದೇಪ್ರಕಾರ ಸಂತಾನವೂ ಆಗುವುದು. ಋತುಸ್ನಾನಾನಂತರ ಪ್ರತಿದಿವಸವು ಪ್ರಾತಃಕಾಲದಲ್ಲಿ ಮೊಟ್ಟ ಮೊದಲು ಸೂರ್ಯದರ್ಶನವನ್ನು ಮಾಡಬೇಕು.

ಒಬ್ಬ ಅಮೇರಿಕನ್ ಸ್ತ್ರೀಯಳ ನಡುವಿನಲ್ಲಿ ಒಂದು ರೂಪದ ಭಾವ ಚಿತ್ರವು ಕಾಣಿಸುತ್ತಿತ್ತು. ಅವಳು ಋತುಸ್ನಾನದನಂತರ ಅದನ್ನೆ ನೋಡಿತ್ತು. ಮತ್ತು ಗರ್ಭಧಾರಣವಾದಮೇಲೂ ದಿನಾಲೂ ಅದನ್ನೇ ಪ್ರೀತಿಸಿ ನೋಡುತ್ತಿತ್ತು. ಹಾಗೆ ಮಾಡುತಿರುವುದರಿಂದ ಇದರ ಗರ್ಭಸ್ಥ ಬಾಲಕನ ಮೇಲೆ ಆ ನೋಟವು ಇಷ್ಟು ಪ್ರಭಾವವನ್ನೂ ಬೀರಿತ್ತೂ, ಆ ಭಾವಚಿತ್ರದ ರೂಪೇ ಈ ಬಾಲಕನ ಮೋರೆಯ ರೂಪು ಆಯಿತು.

ಒಬ್ಬ ಬ್ರಾಹ್ಮಣಸ್ತ್ರೀಯು ಶುದ್ಧಸ್ನಾನಮಾಡಿ ಬಂದವಳು ಒಬ್ಬ ದುಷ್ಟ ಪಠಾಣನನ್ನು ಒಮ್ಮಿಂದೊಮ್ಮೆ ನೋಡಿದಳು. ಇದರ ಫಲವಾಗಿ ಅವಳಲ್ಲಿ ಆ ಗರ್ಭದಿಂದ ಜನಿಸಿದ ಬಾಲಕ ಬ್ರಾಹ್ಮಣನು ಆಚರಣೆಯಿಂದ ಸಹ ಈ ಪಠಾ ಣನ ಪ್ರಕೃತಿಯನ್ನೆ ಹೊಂದಿದನು.

ಗರ್ಭಿಣಿ

ಮರನಲ್ಲಿ ಮರಹುಟ್ಟಿ ಮರಚಕ್ರಕಾಯಾಗಿ
ತಿನ್ನಲುಬಾರದ ಹಣ್ಣು ಬಹುರುಚಿ

ನಾನು ಚಿಕ್ಕವನಿರುವಾಗ ನನ್ನ ತೊಡೆಗೆ ಹೆಚ್ಚು-ಕಡಿಮೆ ನನ್ನ ವಯಸ್ಸಿನಲ್ಲೇ ಇರುವ ಮಕ್ಕಳ ಗುಂಪುಗೂಡಿಸಿಕೊಂಡು ನನ್ನ ಅಜ್ಜಿಯು ಒಂದೊಂದು ದಿವಸ ಇಂಥ ಒಗಟುಗಳನ್ನು ಎಷ್ಟೋ ಹೇಳುತ್ತಿದ್ದಳು. ಅವುಗಳ ಅರ್ಥವನ್ನೂ ಆ ಮೇಲೆ ಹೇಳಿ ನಮ್ಮೆಲ್ಲರನ್ನೂ ಹಾಸ್ಯರಸಸಾಗರದಲ್ಲಿ ಪುಳುಕಿತರನ್ನಾಗಿಮಾಡಿ ನಗಿಸಿ ಆಡಿಸುತ್ತಿದ್ದಳು. ಅವುಗಳಲ್ಲಿ ಇದೊಂದು ಈವಾಗ ನೆನಸಿಗೆ ಬಂತು.

ಮರದಲ್ಲಿ ಮರಹುಟ್ಟುವುದೆಂದರೇ ಮನುಷ್ಯನಲ್ಲಿ ಮನುಷ್ಯ ಹುಟ್ಟುವುದೆಂಬ ಅರ್ಥ. ನಿಸರ್ಗವಿದ್ದರೂ ಇದೊಂದು ಸಮಸ್ಯೆಯೇ ಆಗಿದೆ. ಈ ಸಮಸ್ಯೆಯು ಬಹು ನಿಯಮಬದ್ಧವಿರುವುದು. ಅತಿ ಚಮತ್ಕಾರವಿರುವುದು. ಜೀವಾಣುಗಳಲೆಲ್ಲ ತುಳುಕುತಿರುವ **ಪುತ್ರಮೋಹ** ಎನುವುದೆ "ಬಹುರುಚಿ" ಎನುವುದಕೆ ಅರ್ಥವು.

ಮಾನವಜಾತಿಯಲ್ಲಿ ನಾರಿಯರು ಪ್ರತಿಮಾಸದಲ್ಲು ರಜಸ್ವಲೆ ಯಾಗುವುದು ಸ್ವಾಭಾವಿಕರೂಢಿಯಿದು. ಆವಾಗ ಮೂರುದಿನಗಳತನಕ ಮೂತ್ರ ದ್ವಾರದಲ್ಲಿ ರಕ್ತ ಸ್ರವಿಸುವುದೂ ಎಲ್ಲರಿಗೂ ಗೊತ್ತಿದ್ದದ್ದೆ. ನಾಲ್ಕನೇ ದಿನ ಶುದ್ಧಸ್ನಾನಮಾಡಿ ಬರುವಳು. ಅಲ್ಲಿಂದೆ ಹದಿನಾರು ದಿವಸಗಳ ಒಳಗೆ ಗರ್ಭವತಿ ಯಾಗುವಳು. ಇದರಲ್ಲಿ ಸಮದಿನಗಳಲ್ಲಿ ಗರ್ಭನಿಂತರೆ ಗಂಡೆಂತಲೂ ವಿಷಮ ದಿನಗಳಲ್ಲಿ ಗರ್ಭನಿಂತರೆ ಹೆಣ್ಣೆಂತಲು ಆಧಾರವಿದೆ. ಆದರಲ್ಲು ೪, ೬, ೧೧, ೧೩ನೇ ರಾತ್ರಿಗಳನ್ನು ನಿಷಿದ್ಧಿಸಲ್ಪಟ್ಟಿದೆ. ಹಾಗೆ ಗರ್ಭನಿಂತ ಬಳಿಕ ಮಾಸಿಕಧರ್ಮಕಾರ್ಯವು ನಿಂತುಹೋಗಿ ಆ ರಕ್ತವು ಸ್ತನ್ಯದಲ್ಲಿ ಸೇರಿ

ಕ್ಷೀರರೂಪದಿಂದ ಪರಿಣಮಿಸುವುದು. ಆ ಕ್ಷೀರವೇ ಮುಂದೆ ಹುಟ್ಟುವ ಶಿಶುವಿಗೆ ಜೀವನಾಧಾರವಾಗುವುದು. ಆ ಶಿಶುವು ಮೊಲೆಯುಣ್ಣುವುದ ಬಿಟ್ಟನಂತರ ಮುನ್ನಿನಂತೆ ಆ ಪೂರ್ಣರಕ್ತವೂ ಪ್ರತಿ ಮಾಸಿಕಧರ್ಮಕ್ಕೆ ಸಮ್ಮಂಧವಾಗುವುದು. ಕೆಲವರಿಗೆ, ಮಗುವು ಸ್ತನ್ಯಪಾನ ಮಾಡುತಿರುವಾಗಲೆ ಮಾಸಿಕಧರ್ಮ ಪ್ರಾರಂಭವಾಗುವುದುಂಟು. ಅಂತಹ ಪ್ರಸಂಗವೆಂದರೆ; ಆ ರಕ್ತವು ಅರ್ಧಅತ್ತ ಅರ್ಧಇತ್ತ ಆಗುವುದು.

ಇದೇ ಪ್ರಕಾರ ಇನ್ನೊಂದು ಕ್ರಿಯೆಯು ನಡೆಯುತಿರುವುದು. ಅದಾವುದೆಂದರೆ:— ಪ್ರತಿಯೊಂದು ಪ್ರಾಣಿಗಳ ದೇಹದಲ್ಲು ಒಂದು ಯಂತ್ರವಿರುವುದು. ತಾನು ತಿಂದು-ಉಂಡು-ಮಾಡುವ ಅನ್ನ—ಪಾನ, ತೃಣ—ಕಣ, ಫಲ—ಪುಷ್ಪ ಮುಂತಾದ ಎಲ್ಲವು ಆ ಯಂತ್ರದ್ವಾರಾ ಈ ದೇಹ ಸೌಷ್ಟವಕ್ಕೆ ಕಾರಣವಾದ, ಅಸ್ಥಿ-ಮಜ್ಜೆ-ಮಾಂಸಾದಿ ಸಪ್ತಧಾತುಗಳ ಬೆಳವಣಿಗೆ ಆಗುತಿರುವುದು. ಹಾಗಿರುವ ಈ ಆಹಾರ ಭಕ್ಷಣವನ್ನು ತಾಯಿಯು ಮಾಡುವುದರ ಮೂಲಕ ಆ ಗರ್ಭಸ್ಥ ಶಿಶುವು ಮಾತೃವಿನ ಆಹಾರವಾಹಕ ನಾಡೀಮೂಲಕದಿಂದಲೂ ನಾಭಿಮೂಲಕವಿರುವ ನಾಡಿಯ ಸಹಾಯದಿಂದಲೂ ತಾಯಿಯು ಸೇವಿಸಿದ ಆಹಾರದ ಸಾರವನ್ನು ಗ್ರಹಿಸಿ ಜೀವಿಸುವುದು. ಇದರಲ್ಲಿ ಇನ್ನೊಂದು ವಿಲಕ್ಷಣ ಸ್ಥಿತಿಯಂದರೆ:—ಜನನಿಯು ತಿಂದ ತಿನಿಸಿನ ಕಷ್ಮಲವನ್ನು ಮಲ—ಮೂತ್ರಗಳ ರೂಪದಿಂದ ಹೊರಗೆ ಹಾಕುವಳು. ಗರ್ಭಸ್ಥ ಆ ಶಿಶುವು, ತಾಯಿ ತಿಂದದ್ದರ ಸಾರವನ್ನೆ ಸ್ವೀಕರಿಸುವುದರಿಂದ ಮಲ—ಮೂತ್ರ ವಿಸರ್ಜನೆಯ ಕೆಲಸ ಬರುವುದಿಲ್ಲ. ಇದನ್ನು ಆಯುರ್ವೇದ ಅಭಿಜ್ಞರು ಕಂಡು ಹಿಡಿದಿರುವರು.

ಗರ್ಭಿಣಿಯು ಪಾಲಿಸತಕ್ಕ ಕೆಲವು ಮಾತು:— ಗರ್ಭಿಣಿಯಾದವಳು ರತಿಕ್ರೀಡೆಮಾಡಲಾಗದು. ಮಲ—ಮೂತ್ರಗಳನ್ನು ತಡೆಯಬಾರದು. ಬಹುವೇಗದಿಂದ ಚಲಿಸಬಾರದು. ವಾಹನ ಹತ್ತಬಾರದು. ಭಾರವನ್ನು

ಹೊರಬಾರದು. ಶರೀರಕ್ಕೆ ಹೆಚ್ಚು ಶ್ರಮ ಕೊಡಬಾರದು. ಹಗಲು ನಿದ್ರಿಸಬಾರದು. ರಾತ್ರೀ ಜಾಗರವಿರಬಾರದು. ಹೆಚ್ಚು ಓದರಬಾರದು. ನಗಬಾರದು. ಸಿಟ್ಟು ಬಿಡಬೇಕು. ಅಳಬಾರದು. ಒಂಟಿಯಾಗಿ ತಿರುಗಬಾರದು. ಅಕರಾಳ, ವಿಕರಾಳ ರೂಪವನ್ನು ನೋಡಬಾರದು. ಕೆಂಪು ಬಣ್ಣದ ವಸ್ತ್ರವನ್ನು ಧರಿಸಬಾರದು. ಜಡವಾದ ಮತ್ತು ಖಾರ, ಕಹಿ, ಎಣ್ಣೆ, ಮುಂತಾದ ದುಷ್ಟ ಆಹಾರವನ್ನು ತಿನ್ನಬಾರದು. ಶುದ್ಧ ಮನಸ್ಕಳಾಗಿರಬೇಕು. ಯಾಕಂದರೆ :— ಸೀಮಾವಿನ ಬೀಜವನ್ನು ಭೂಮಿಯಲ್ಲಿ ಹೂಳಿದರೆ ಅದು ಪರಿಣಾಮದಲ್ಲಿ ಹುಳಿಯ ಫಲವನ್ನೀಯುವುದೂ ಉಂಟು. ಅದಕ್ಕೆ ಕಾರಣವೆಂದರೆ; ಆ ಭೂಮಿಯ ಗುಣವೂ ಅಲ್ಲಿಯ ವಾತಾವರಣವೂ ಆಗಿದೆ. ಅದರಿಂದಲೇ ಯಾವುದನ್ನು ಬಿತ್ತುವುದಿದ್ದರೂ ನೆಲ್ಲವನ್ನು ಚನ್ನಾಗಿ ಶೋಧಿಸಬೇಕೆನ್ನುವುದು. ಅಂತಯೆ; ಗರ್ಭಿಣಿಯು ತನ್ನ ಆಹಾರ—ವ್ಯವಹಾರಗಳಲ್ಲಿ ಪರಿಶುದ್ಧಳಾಗಿಯೂ ಸದಾ ಸತ್ಕಥಾ ಸದ್ವಾರ್ತೆಗಳನ್ನು ಕೇಳುವವಳೂ ಹೇಳುವವಳೂ ಆಗಿಯೂ ಶಾಂತಚಿತ್ತಳಾಗಿದ್ದರೆ ಆ ಸಂಸ್ಕಾರಾನುಬಲನಾಗಿ ಒಳ್ಳೆಮಕ್ಕಳೇ ಹುಟ್ಟುವರು.

ನಾರಿಯಲ್ಲಿ ಸೃಷ್ಟಿಉತ್ಪಾದನೆಯ ಯೋಗ್ಯತೆಯು ಭಿನ್ನರೂಪ ವಾಗಿರುತ್ತದೆ. ಅವಳಿಗೆ ಎರಡು ಹೃದಯಗಳನ್ನು ಧರಿಸುವಂಥ ಅಲೌಕಿಕ ಸಾಮರ್ಥ್ಯವಿರುವುದು. ಗರ್ಭಾವಸ್ಥೆಯ ಕಾಲದಲ್ಲಿ, ಶಿಶುವಿಗೆ ನಾಲ್ಕು ತಿಂಗಳ ನಂತರ ದೇಹದಲ್ಲಿ ಅಂಗೋಪಾಂಗಗಳು ಸಿದ್ಧ ವಾಗುತ್ತವೆ. ಮತ್ತು, ಹೃದಯ ಉತ್ಪನ್ನವಾಗುತ್ತದೆ. ಆ ಸಮಯದಲ್ಲಿ ಗರ್ಭದೊಳಗುಳ್ಳ ಶಿಶುವಿನ ಹೃದಯದ ಅಭಿಲಾಷೆಗಳು ತಾಯೀ ಹೃದಯದಿಂದ ಪ್ರಕಟವಾಗುತ್ತದೆ. ಗರ್ಭವತಿಯ ಸಂಗಡಿಗರು ಇವನ್ನು ತಿಳಿಯುವರು. ಹೀಗಿರುವ ಕಾಲದಲ್ಲಿ ಗರ್ಭಿಣಿಯು ಭಿನ್ನಭಿನ್ನವಾಗಿರುವ ಆಹಾರ—ವಿಹಾರಾದಿಗಳನ್ನು ಅಪೇಕ್ಷಿಸುವಳು. ಅವೆಲ್ಲ ಗರ್ಭಸ್ಥ ಶಿಶುವಿನ

ಇಚ್ಛೆ ಇರುತ್ತವೆ. ಇವುಗಳನ್ನು ಪೂರ್ತಿ ಮಾಡುವುದು ಗರ್ಭಿಣಿಯ ಗಂಡನ ಕರ್ತವ್ಯವಾಗಿರುತ್ತದೆ. ಅವನು ಒಂದೊಮ್ಮೆ ಪೂರ್ತಿ ಮಾಡದೆ ಇದ್ದಲ್ಲಿ, ಗರ್ಭದಲ್ಲಿರುವ ಶಿಶುವಿನ ಬುದ್ಧಿಹೀನತೆ ಅಥವಾ ವಿಕೃತಾಂಗ ಮೊದಲಾದ ದೋಷಯುಕ್ತವಾಗುವುದು. ಹಳ್ಳಿಗರ ಒಂದು ಕತೆಯಿರುವುದೇನಂದರೆ :— ಒಂದು ಕಾಲದಲ್ಲಿ ಒಂದು ಹಳ್ಳಿಯಲ್ಲಿರುವ ಒಂದಾನೊಂದು ಗರ್ಭಿಣಿಯು ಆಭಕ್ಷ್ಯ ಭಕ್ಷ್ಯಣವನ್ನು ಮಾಡಬೇಕೆಂದು ಇಚ್ಛಿಸಿದಳು. ಅಂಥ ಭಕ್ಷ್ಯಣವನ್ನು ಮಾಡಿದ ಕೂಡಲೆ ಅವಳ ದೇಹಾಂತವಾಯಿತು. ಆಗಿಂದಾಗ ಆಕೆಯ ದೇಹವನ್ನು ಕತ್ತರಿಸಿ ನೋಡಲು ತಿಂದಿರುವ ಆ ಪದಾರ್ಥವು ಗರ್ಭವಾಸಿಯಾದ ಈ ಶಿಶುವಿನ ಬಾಯಲ್ಲಿ ಇತ್ತು ಎಂದು ಒಬ್ಬ ಡಾಕ್ಟರರು ಹೇಳಿದ್ದರು. ಇದರಿಂದ, ಹೆಂಗಸಿನ ಹೃದಯದಲ್ಲಿ ತನ್ನದು ಮತ್ತು ಇನ್ನೊಂದು ಹೀಗೆ ಎರಡು ಹೃದಯವನ್ನು ಧರಿಸುವ ಸಾಮರ್ಥ್ಯವಿರುವುದೆಂದು ಸ್ಪಷ್ಟವಾಗುವುದು.

ಏಳು ತಿಂಗಳಿಗೆ ಹುಟ್ಟಿದ ಶಿಶುವು ಬದುಕುವುದೆಂತಲು ಎಂಟು ತಿಂಗಳಿಗೆ ಹುಟ್ಟಿದ ಶಿಶುವು ಬದುಕುವುದಿಲ್ಲವೆಂತಲು ಜನರು ಹೇಳಿಕೊಳ್ಳುವುದುಂಟು. ಅದಕ್ಕೆ ಕಾರಣವೂ ಇದೆ. ಎಂಟು ತಿಂಗಳಿಗೆ ಗರ್ಭದಲ್ಲಿ ಶಿಶುವು ಪೂರ್ಣ ತಯಾರಿ ಆಗುತ್ತದೆ. ಆ ಕಾಲದಲ್ಲಿ ಆ ಶಿಶುವಿಗೆ ಓಜಸ್ಸಿನ (ಜೀವಕಳೆಯ) ಉತ್ಪತ್ತಿ ಸಾಮಾನ್ಯವಾಗಿ ಪೂರೈಸುವುದು. ಅಂತಹ ಕಾಲದಲ್ಲಿ ಆ ಓಜವು (ತೇಜವು) ಕೆಲಕಾಲ ತಾಯಿಯ ಹೃದಯದಲ್ಲಿಯೂ ಕೆಲಕಾಲ ಶಿಶುವಿನ ಹೃದಯದಲ್ಲಿಯೂ ಓಡಾಡುತಿರುವುದು. ಆವಕಾಲದಲ್ಲಿ ಆ ಓಜಸ್ಸು ತಾಯಿಯ ಹೃದಯದಲ್ಲಿ ಸೇರಿರುವುದೋ ಆ ಕಾಲದಲ್ಲಿ ಜನನವಾದರೆ ಆ ಶಿಶುವು ಬದುಕದು.

ಅನಭಿಜ್ಞರಿಗೆ ತಿಳಿಯದ ಇನ್ನೊಂದು ವಿಷಯವೆಂದರೆ--ಗಂಡಸು ವೀರ್ಯರೂಪದಿಂದ ಹೆಂಗಸಿನ ಹೃದಯದಲ್ಲಿ ಪ್ರವೇಶಿಸಿ ಅವಳಲ್ಲಿ ಪುತ್ರರೂಪ ದಿಂದ ಜನಿಸುವನು. ಅಂಥಕಾಲದಲ್ಲಿ ಆವನ ಗುಣ, ಶೀಲ, ಆಕೃತಿ, ಆ

ಶಿಶುವಿನಲ್ಲಿ ತೋರಿಸಿ ಕೊಳ್ಳುವುದು. ಆದರಿಂದ **'ಆತ್ಮಾವೈ ಜಾಯತೆ ಪುತ್ರಃ'** 'ತಾನೆ ಪುತ್ರ ರೂಪದಿಂದ ಹುಟುವನು.' ಒಂದೇವೊ್ಮ ಆಕಾರಾದಿಗಳು ತದ್ಭಿನ್ನ ಆಗಿದ್ದರೆ, ಈ ಹಿಂದೆ ಹೇಳಿದಂತೆ ಗರ್ಭಿಣಿಯ ಬಯಕೆಗಳನ್ನು ಪೂರೈಸುವುದರಲ್ಲಿ ವ್ಯತ್ಯಸ್ಥವಾಗಿದೆ ಎಂದು ತಿಳಿದುಕೊಳ್ಳಬೇಕು. ಅಂತು; ತಂದೆಯು ಮಗನ ರೂಪದಿಂದಲು ತಾಯಿಯು ಮಗಳ ರೂಪದಲ್ಲೂ, ಜನಿಸುವರು.

ಪ್ರಶ್ನೆ :— ಪುರುಷನು ತಾನೆ ಪುತ್ರರೂಪದಿಂದ ಜನಿಸುವನೆಂದಾಗ, ತನ್ನ ಹೆಂಡತಿಯು ಮಾತೆಯಾಯಿತೆನುವುದು ಸಹಜಗತ್ಯಾ ತಿಳಿದುಬರುವುದಲ್ಲವೆ? ಹಾಗಿರಲು ಈ ಒಂದೇ ಆತ್ಮಕ್ಕೆ ತಾಯೀರೂಪದಿಂದಲುಪತ್ನಿ ರೂಪದಿಂದಲು ಆ ಸ್ತ್ರೀಯಳು ಪರಿಣಮಿಸುವಳೆಂದ ಹಾಗೂ ಆಗುವದಲ್ಲವೆ?

ಉತ್ತರ :— ಇದು ಸೃಷ್ಟಿಯ ನಿಯಮ. ಅಂದಾಗ ಅಪವಾದಕ್ಕೆ ಎಡೆಯಿಲ್ಲ. ಆದರಿಂದಲೇ **"ಭೋಜ್ಯೆಷು ಮಾತಾ ಶಯನೇಷು ವೇಶ್ಯಾ"** ಎನುವ ಮುಂತಾದ ಶ್ಲೋಕಾಧಾರಗಳಿಂದ ಕಾಲಕಾಲದಲ್ಲಿ ತಕ್ಕಾದ ಕರ್ತವ್ಯವನ್ನು ಸತಿ-ಪತಿಗಳಿಗೆ ಶಾಸ್ತ್ರವೇ ಅಪ್ಪಣೆ ಕೊಟ್ಟಿದೆ. ಅಂದಾಗ ಪುರುಷನು ಪುತ್ರರೂಪು ಮತ್ತು ಪ್ರತ್ಯೇಕರೂಪು ಇರುವನೆಂದರ್ಥವು. ಇನ್ನೂ ಹೇಳುವುದಾದರೆ, ರಾಮ-ಕೃಷ್ಣಾದಿ ಅವತಾರವು ವಿಷ್ಣುವಿನ ಅಂಶ ಎನ್ನುವುದರಲ್ಲಿ ಎಲ್ಲವರೂ ಒಪ್ಪಬೇಕಾಂದುದು. ಹಾಗಿದ್ದರು, ಮೂರ್ತಿ ಭೇದವನ್ನು ಕಲ್ಪಿಸುವಂತೆ ಇಲ್ಲಿಯೂ ಕಲ್ಪಿಸಿ ಕೊಳ್ಳಬಹುದು.

ಇನ್ನೊಂದೆಂದರೆ, ಜರತ್ಕಾರು ಎನುವ ಹೆಸರುಳ್ಳ ಮುನಿಯು ಪಿತ್ರೋದ್ಧಾರಕ್ಕೆಂದು ರಾಜನ ಮಗಳನ್ನು ಲಗ್ನವಾಗಿ ಓರ್ವ ಪುತ್ರನು ಜನಿಸಿದ ನಂತರ ಅವಳನ್ನು ತ್ಯಜಿಸಿ ಕಾನನಕ್ಕೆ ಹೋದ ಕತೆಯು ಮಹಾಭಾರತದ ಆದಿಪರ್ವದಲ್ಲಿ ಉಂಟು. ಆ ಮುನಿಯು ಹಾಗೆ ಮಾಡಲು ಕಾರಣವೂ ಇದೇ ಆಗಿದೆ. ಅರ್ಥಾತ್; ಗೃಹಸ್ಥಧರ್ಮ ಪಾಲಕನು ಪಿತೃಋಣವನ್ನು ಹಿಂಗಿಸಲು

ಸುಪುತ್ರನ ಮುಖಾವಲೋಕನ ಗೈದ ಬಳಿಕ ಆ ಸತಿಯಳ ಮುಖ್ಯಭೋಗ ವರ್ಜ್ಯವಾಗಿರಬೇಕೆನುವುದು ಇದರಿಂದ ವ್ಯಕ್ತವಾಗುವುದು.

(೨) **ಅಂತು ಸತಿ-ಪತಿಗಳ ಕೂಡಾಟವೆಂದರೆ ಸೃಷ್ಟಿನಿಯಮ ದಲ್ಲಿ ಅದು ಒಂದು. ಹಾಗಿರುವ ಅದರಲ್ಲಿ ಕೈಹಾಕಿ ಚರ್ಚಿಸಲು ಯಾರಿಗೂ ಹಕ್ಕಿಲ್ಲವು.**

ಪ್ರಸೂತೀ ಗೃಹ

ಮನುಷ್ಯ ಜೀವನದ ಎಲ್ಲಕ್ಕಿಂತ ಮೊದಲನ ಗೃಹವೆಂದರೆ ಪ್ರಸೂತೀ ಗೃಹ. ಈ ಗೃಹದಲ್ಲಿ ಹೊಸದಾಗಿ ಹುಟ್ಟುವ ಶಿಶುವಿನ ಪದಾರ್ಪಣವಾಗುವುದಿಷ್ಟೆ ಅಲ್ಲ, ಸ್ವಾಗತ (ಇದಿರು ಗೊಳ್ಳುವಿಕೆ) ಆಗುತ್ತದೆ. ಆದ್ದರಿಂದ ಪ್ರತಿಯೊಬ್ಬನ ಜೀವನದಲ್ಲಿ ಇದು ಬಹಳ ಮಹತ್ವದ್ದಿರುತ್ತದೆ. ಅದಕಾಗಿ ಆ ಸ್ಥಾನವನ್ನು ಸ್ವಚ್ಛ ಸುಸಜ್ಜಿತ ಮತ್ತು ಸುಂದರವಾಗಿಡ ಬೇಕಾಗುತ್ತದೆ. ಪರಂತು ಭಾವೀ ಪೀಳಿಗೆಯ ಆಧಾರಸ್ತಂಭವಾಗಿರುವ ಆ ಮನೆಯ ಸುವ್ಯವಸ್ಥೆಯ ಕಡೆಗೆ ಲಕ್ಷ್ಯ ಪೂರೈಸುವುದಿಲ್ಲ! ಅದು ಎಷ್ಟು ದುಃಖದ ಮಾತಾಗಿರುತ್ತದೆ. ಅಂಧವಿಶ್ವಾಸರೂಢಿ, ಅಶಿಕ್ಷತೆ ಈ ಮೊದಲಾದವು ಗುರಿಯಾಗಿ, ನಮ್ಮ ದೇಶದಲ್ಲಿ ಪ್ರಸೂತೀಗೃಹದ ಸಲುವಾಗಿ ಉಪೇಕ್ಷಿತ ದೃಷ್ಟಿಯಿಂದಅದು ನಿರರ್ಥಕವಾಗುತ್ತದೆ. ಬೆಳಕಿಗಾಗಿ ಕಿಡಕಿ ಇರುವುದಿಲ್ಲ, ವಿಶ್ರಾಂತಿಯ ಸೌಕರ್ಯವಂತು ಇಲ್ಲವೆ ಇಲ್ಲ. ಶುದ್ಧವಾದ ಗಾಳಿ ಬರಲು ಆಸ್ಪದ ಸಿಗುವುದಿಲ್ಲ. ಬಾಣಂತಿಯ ಮತ್ತು ಶಿಶುವಿನ ಆಛ್ಛಾದನ ವಸ್ತ್ರದ ಕಲೆ-ಕೊಳೆಗಳ ಹೋಗಲಾಡಿಸಲು ನಜರನ್ನು ತೆಗೆದುಕೊಳ್ಳುವುದೇ ಇಲ್ಲ. ಭೂತ-ಪಿಶಾಚಿಗಳ ಭ್ರಾಮಕದಿಂದ ಬಾಗಿಲದಲ್ಲಿ ಹೊಗೆ ಹಾಕುವ ಪದ್ಧತಿ ಯೊಂದುಂಟು. ಶಿಶು ಸಂಗೋಪನ, ಬಾಣಂತಿಯ ಔಪಚಾರಿಕ ಕೆಲಸ ವಂತೂ ಕೀಳು ಜಾತಿಯವರಿಂದ ಮಾಡಿಸುವರು. ಅವರು ಅಶಿಕ್ಷಿತರಿರುವುದ

ರಿಂದಹೇಗಾದರೂ ಆ ಕೆಲಸ ಮಾಡುವದುಂಟು. ಇವೆಲ್ಲ ಬಗೆಯಿಂದಾಗಿ ಆ ತಾಯಿ-ಶಿಶುವಿಗೆ ಪದೇ ಪದೆ ಆಪತ್ತು ಬರುವುದು !

ಪ್ರಸೂತಿಗೃಹದ ಬಾಗಿಲವು ಪೂರ್ವ ಅಥವಾ ದಕ್ಷಿಣದ ಕಡೆಗೆ ಇರಬೇಕು. ಅದು ೫–೬ ಗಜ ಎತ್ತರ, ೩–೪ ಗಜ ಅಗಲವಿರಬೇಕು. ಜೋರಿನಿಂದ ಗಾಳಿಬರಲು ಆಸ್ಪದವಿರಬಾರದು. ದಕ್ಷಿಣದಲ್ಲಿ ಬಾಗಿಲವನ್ನಿಡಲು ಅನುಕೂಲವಿಲ್ಲದಿದ್ದರೆ ಆ ದಿಕ್ಕಿನಲ್ಲಿ ದೊಡ್ಡ ಕಿಡಕಿಯನಾದರೂ ಇಡಬೇಕು. ಯಾಕಂದರೆ, ಬಾಣಂತಿಯರಿಗೆ ದಕ್ಷಿಣ ದಿಕ್ಕಿನ ಹವೆಯು ಅವಶ್ಯವಾದದ್ದು. ಆ ಕೋಣೆಯಲ್ಲಿ ಹರಗಣವನ್ನು ಇಡಲೇ ಬಾರದು. ತಾಯನ್ನಾಗಲಿ, ಶಿಶುವನ್ನಾಗಲಿ ನೆಲದ ಮೇಲೆ ಮಲಗಿಸಲಾಗದು. ಶುದ್ಧ ಹವಾ ಇರಬೇಕು. ಏಕಂದರೆ, ಶಿಶುವಿನ ಪುಪ್ಪುಸ (ಶ್ವಾಸಕೋಶ)ವು ಸಣ್ಣದಿರುವ ಕಾರಣ, ಇವೆಲ್ಲ ಅಧಿಕ ಅವಶ್ಯವಿರುತ್ತದೆ. ಅಷ್ಟೆ ಅಲ್ಲ; ಹಾಗಿಡದಿದ್ದರೆ, **'ಕೋಲಂಬೊ'** ಎನುವ ರೋಗದ ಕೀಡಿಯು ಉತ್ಪನ್ನವಾಗುವುದು. ಪ್ರಸೂತೀಗೃಹದಲ್ಲಿ ೨೪ ತಾಸೂ ಬೆಂಕಿ ಹೊತ್ತಿಸುವ ರೂಢಿಯುಂಟು. ಅದರಿಂದ ಅನರ್ಥವುಂಟಾಗುವುದು. ಬಾಣಂತೀಮನೆಯಲ್ಲಿ ಚಿಮಣೀ ಎಣ್ಣೆ (ಕೆರೊಸೀನ್) ದಿಪವನ್ನು ಉರಿಸಬಾರದು. ಧೂಪದಿಂದ ಹವೆಯನ್ನು ಶುದ್ಧವಿಡಬೇಕು. ಗರ್ಭಿಣಿಯಲ್ಲಾಗಲೀ ಬಾಣಂತಿಯಲ್ಲಾಗಲಿ ಶಾಂತವರ್ತನ, ಸಮಾಧಾನಕರ ಮಾತನ್ನಾಡಬೇಕು. ಅದರಿಂದ ಶಿಶುವಿಗೆ ಒಳ್ಳೇ ಸಂಸ್ಕಾರವಾಗಿ ಮುಂದೆ ಸುಗುಣಯೇ ಆಗುವುದು. ತಾಯಿಯ ರಕ್ತನಾಳಗಳಲಿಲ್ಲ ಎಂತು ಸಮಾಧಾನವು ವ್ಯಾಪಿಸುವುದೋ ಅಂತೆಯೆ ಶಿಶುವು ತಯಾರಾಗುವುದು.

ಸೂತಿಕಾಗೃಹದಲ್ಲಿ ಬಾಣಂತಿಗಾಗಿ ಇಡುವ ಪಲ್ಲಂಗ (ಮಂಚ) ವು ಬಿಲ್ವ–ಆಲ–ತಿಂದುಕ–ಭಲ್ಲಾತಕ ಹೀಗೆ ನಾಲ್ಕು ಜಾತಿಯ ಕಟ್ಟಿಗೆಯಲ್ಲಿ ಯಾವುದಾದರೊಂದದಿರಬೇಕು. ಪ್ರಸೂತಕಾಲದ ಮೊದಲು ರಕ್ಷಾಮಂತ್ರದಿಂದ ಆ ಗೃಹವನ್ನು ರಕ್ಷೆಮಾಡಿ, ಶುದ್ಧಮಾಡಿ ನಂತರ ಅದರಲ್ಲಿ

ಗರ್ಭಿಣಿಗೆ ಪ್ರವೇಶ ಕೊಡಬೇಕು. ಬಾಣಂತಿಗಾಗಲೀ ಶಿಶುವಿಗಾಗಲಿ ಅಗದಿ ಸಡಿಲವುಳ್ಳ ಬಟ್ಟೆಯನ್ನು ಹೊದಿಸಬೇಕು. ಪ್ರಸೂತೀಗೃಹ ಪ್ರವೇಶಗೈದ ಕೂಡಲೆ ಅವಳ ಮಲ-ಮೂತ್ರದ್ವಾರಗಳನ್ನು ಸ್ವಚ್ಛಗೊಳಿಸಬೇಕು. ಪ್ರಸೂತ ಸಮಯದಲ್ಲಿ ಸ್ವಾಭಾವಿಕವಾಗಿಯೇ ಆಗುವ ಹೊಲಸನ್ನು ಆಗಾಗ ಸ್ವಚ್ಛ ಮಾಡುತಿರಬೇಕು.

ಪವಿತ್ರ ವೈಧವ್ಯ ಮತ್ತು ಸನ್ಯಾಸದ ಅಂತರ

ಭೋಗ ಮತ್ತು ಮೋಕ್ಷ ಇವೆರಡೂ ಮಾನವಕೋಟಿಯ ಜೀವನೋದ್ದೇಶವಿರುವುದು. ಶ್ರುತಿಯು ಈ ಬಗೆಯಲ್ಲಿ ಕ್ರಮಶಃ ಪ್ರೇಯೋಮಾರ್ಗವೆಂದೂ ಶ್ರೇಯೋಮಾರ್ಗವೆಂದೂ ತೋರಿಸಿರುವುದು.

ತಯೋಃಶ್ರೇಯ ಆದದಾನಸ್ಯ ಸಾಧುರ್ಭವತಿ ಹೀಯತೇಽ
ರ್ಥಾದ್ಯ ಉಪ್ರೇಯೋ ವೃಣೀತೆ

(ಕಠ. ೧/೨-೧)

"ಧೀರರು(ಬುದ್ಧಿವಾನರು)ಶ್ರೇಯೋಮಾರ್ಗಾವಲಂಬನ ಮಾಡುವರು. ಮಂದಾಧಿಕಾರಿಗಳು (ಚೈನಿಅಲ್ಲದೆ ಈ ಲೋಕದ ಸಾದಾಜೀವನ ಆದೂ ಅಲ್ಲದಿರಲು ಭೂಲೋಕ–ಸ್ವರ್ಗಲೋಕ ಸುಖಸಾಧನದಲ್ಲಿ ಪ್ರಯತ್ನಿಸುವುದೆ ತಮ್ಮ ಕೃತಕೃತ್ಯತೆ ಎಂದು ತಿಳಿದವರು) ಪ್ರೇಯೋಮಾರ್ಗ ಪ್ರವರ್ತಕರಾಗಿ ಅದರಲ್ಲೆ ಅಗ್ರೇಸರರೆನಿಸುವರು.

ಶ್ರೇಯೋಹಿ ಧಿರೋಽಭಿ ಪ್ರೇಯಸೋ ವೃಣೀತೆ।
ಪ್ರೇಯೋ ಮಂದೋ ಯೋಗಕ್ಷೇಮಾದ್ ವೃಣೀತೆ॥

(ಕಠ. ೧/೨-೨)

ಈ ವಾಕ್ಯದಿಂದ ಆಗುವ ನಿಶ್ಚಯವೆಂದರೆ "ಶ್ರೇಯ" ಅರ್ಥಾತ್; "ಜ್ಞಾನ" ಇದು ಮಾನವ ಜೀವನದ ಅಂತಿಮ ಧ್ಯೇಯವಾಗಿರುತ್ತದೆ.

ಹೇಗಂದರೆ:— ತಿಳುವಳಿಕೆಯಿಂದಲೆ ಪ್ರಪಂಚದ ಸಕಲಕಷ್ಟ ನಿವಾರಣೆ ಮಾಡಿಕೊಳ್ಳುವುದು. ತಿಳುವೇ ಜ್ಞಾನ. ಆರಿಗೆ ಇರಲಿ, ಸ್ವಸ್ವರೂಪ ವಿಸ್ಮೃತಿಯೆ ದುಃಖ ಅಥವಾ ವಿಪತ್ತು. ಅದು ಹೇಗಂದರೆ, ನೀರಿನಲ್ಲಿ ಹುಟ್ಟಿ ಅದೇ ನೀರಿನಲ್ಲೆ ಏಕತ್ರವಾಗುವ ತೆರೆ–ನೊರೆಗಳಿಗೆ ಆ ಮೂಲವಸ್ತುವಾಗಿರುವ ನೀರಿನ ಗುರುತೆ ಇಲ್ಲವೆಂದಹಾಗೆ, ತನ್ನ ಮೂಲರೂಪವೆ ಆದ "ಆತ್ಮಾರಾಮ"ನ ಪರಿಚಯವ ಮರೆತು; ತಾನೊಬ್ಬ ಜೀವಿ, ಈ ದೇಹವೇ ತಾನು,ತನಗು"ಆತ್ಮಾರಾಮ"ನಿಗು ಭಿನ್ನವಿದೆ,ಎನುವ ಹಂಬಲದಲ್ಲಿ ಪ್ರವರ್ತಿಸುವವಗೆ ಕರ್ಮಕೋಟಲೆಯು ಹೇಗೆ ತಪ್ಪಬಲ್ಲುದು? ಕೋಟಲೆಯಲ್ಲಿರುವವನಿಗೆ ಶಾಂತಿಸುಖವು ಹೇಗೆ ದೊರೆಗೊಂಬುದು? ಕರ್ಮಕೋಟಲೆಯಂದರೇ ಇಹ–ಪರ ಪ್ರಾಪಂಚಿಕಭೋಗ. ಕೆಸರಿನಲ್ಲಿ ಬಿದ್ದಿರುವ ಹಂದಿಗೆ, ಕೆಸರೇ ಹೇಗೆ ಸುಖರೂಪು ಎನಿಸುವುದೊ, ಹಾಗೇ ದೇಹವೆ ತಾನೆಂಬ ಬಳಿಕೆಯ ಬುದ್ಧಿಯುಳ್ಳವನಿಗೆ, ನಾಮ–ರೂಪದ ತವರಮನೆಯಾದ ಈ ಪ್ರಪಂಚ ಭೋಗವೆ ಸುಖಮಯವೆನಿಸುವುದು. ನಿಜವಾದ, ಬಂದು–ಹೋಗಿ ಮಾಡದ, ಕೊರತೆಗಾಣದ, ಸುಖವೇ ಸತ್ಯಸುಖವೆಂದೂ, ಅದೇ "ಆತ್ಮಾರಾಮ"ಸ್ವರೂಪು ಎಂದೂ,ಅದು ಜೀವಿಗಳ ಚರಮಾವಸ್ಥೆಯ ಗತಿ ಎಂದೂ, ಕಂಡುಂಡವರು ಹೇಳುವರು!

ಈ ಸಂಸಾರದಲ್ಲಿ ಎಷ್ಟುಬಗೆಯ ಧರ್ಮಗಳಿರುವವೊ ಅಷ್ಟೂ ಧರ್ಮಗಳ ಕೊನೆಯ ಗುರಿಯಾದರೂ ಆ ಪರಮಪದದ್ದೇ ಇರುತ್ತದೆ. ಆದರೂ ಇವೆಲ್ಲ, ಈಹಿಂದೆ ಹೇಳಿದಂತೆ ಆ ಮಂದಾಧಿಕಾರಿಗಳ [ಮಂದಬುದ್ಧಿಗಳ] ದಿರುತ್ತವೆ. ಅಷ್ಟೆಅಲ್ಲ; ಅವರವರ ಭಾವನೆಗೆ ಅನುಸರಿಸಿ ಬೇರೆ ಬೇರೆ ಗತಿಪ್ರದವೂ ಇರುತ್ತವೆ.

ಈಗ, ಧರ್ಮ ಮತ್ತು ಶಾಸ್ತ್ರಗಳ ಅಭಿಪ್ರಾಯಗಳನ್ನು ತಿಳಿಯೋಣ!

ಯತೋಽಭ್ಯುದಯ ನಿಃಶ್ರೇಯ ಸಸಿದ್ಧಿಃ ಸ ಧರ್ಮಃ

(ವೈಶೀಷಿಕ. ೧/೨)

"ಯಾವುದು ಲೌಕಿಕ ಮತ್ತು ಅಲೌಕಿಕಸುಖ ಸಾಧಿಸಲು ಮಾರ್ಗದರ್ಶಿಯೊ ಅದಕ್ಕೆ ಧರ್ಮವೆಂಬುದಾಗಿ ಹೆಸರು. ಅಂತಹ ಧರ್ಮವನ್ನೂ ಎತ್ತಿ ನಿರೂಪಿಸುವುದೇ ಶಾಸ್ತ್ರವು." ಎಲ್ಲಾ ಧರ್ಮಗಳೂ ಎಲ್ಲವ್ಯಕ್ತಿಗಳಲ್ಲು ಒಂದೇಕಾಲದಲ್ಲಿ ಇರಲು ಸಾಧ್ಯವಿಲ್ಲ. ಕೆಲವರು ರಾಗಿಗಳು, ಕೆಲವರು ಭೋಗಿಗಳು, ಆಗುವುದುಂಟು. ಅಂಥವರನ್ನು ಕಾಲಕ್ರಮದಿಂದ ಶಾಸ್ತ್ರವನ್ನು ತಿಳಿಹೇಳಿ, ಸಾವಕಾಶವಾಗಿ ನೀತಿಯ ಮಟ್ಟಕ್ಕೆ ಎಳೆಯುವುದು. ಮನಸ್ಸಿನಲ್ಲಿ ಯಾವಾಗಲು ಶಾಂತಿಯನ್ನು ನೆಲೆಗೊಳಿಸಲು ಪ್ರೇರೇಪಿಸಿದರೂ ಮನವು ಚಿರಶಾಂತಿಯಲ್ಲಿಡುವುದು ಒಮ್ಮೆಲೇ ಸಾಧ್ಯವಿಲ್ಲ. ಆದುದರಿಂದ ಅದನ್ನು ಸಾವಕಾಶವಾಗಿ ಶಾಸ್ತ್ರದಲ್ಲಿ ಭಕ್ತಿ–ವಿಶ್ವಾಸವು ಕೂಡುವಂತೆ ಮಾಡಬೇಕು. ಅದಕ್ಕಾಗಿಯೆ ಶಾಸ್ತ್ರವು, ಜಗತ್ತಿನ ಎಲ್ಲ ಉತ್ಕಟೇಚ್ಛೆಯನ್ನೂ ಬಿಡೆಂದು ಬೋಧಿಸುವುದು !

ಹಾಗೆ ಬಿಡುವುದರಿಂದ, ಭೋಗಮಗ್ನವಾಗಿರುವ ಈ ಮನವನ್ನು ಮೋಕ್ಷಪ್ರಿಯವನ್ನಾಗಿ ಆ ಶಾಸ್ತ್ರವು ಮಾಡಬಲ್ಲುದು. ಆವಾಗ ತಾನೆ "ಆತ್ಮಾರಾಮಿಯಾಗಿ ಸೌಖ್ಯವ ಹೊಂದುವನು! ಅಂಥ ಸೌಖ್ಯವನ್ನು ದಯಪಾಲಿಸುವುದೆ ಶಾಸ್ತ್ರದ ಉದ್ದೇಶ. ಅದನ್ನು ತಿಳಕೊಳ್ಳಲಾರದೆ, ಶಾಸ್ತ್ರದ ಕೇವಲ ಭೋಗಬೋಧಕ ಭಾಗವನ್ನೆಗ್ರಹಿಸಿ, ಪ್ರಾಪಂಚಿಕ ದುಃಖದಲ್ಲಿ ಭಾಗಿಗಳಾಗುವವರೆಂದರೇ ಮೂಢರು.

ಶಾಸನಾತ್ ಶಾಸ್ತ್ರ

ಶಾಸ್ತ್ರವು, ಮನಬಂದಂತೆ ನಡಕೊಳ್ಳಲು, ಯಾವಾಗಲೂ ಯಾರಿಗೂ ಬೋಧಿಸುವುದಿಲ್ಲ. ಮನುಷ್ಯನ ಪ್ರತಿಯೊಂದು ಕ್ಷಣದಲ್ಲು ನಡೆಯುವ ಪ್ರತಿ ನಡತೆಗು ಶಾಸ್ತ್ರವು ಸುಗಮತೆಯ ಮಾರ್ಗದರ್ಶಿ. ಆದರಿಂದಲೆ

ತಸ್ಮಾಚ್ಛಾಸ್ತ್ರಂ ಪ್ರಮಾಣಂತೆ ಕಾರ್ಯಾಕಾರ್ಯ ವ್ಯವಸ್ಥಿತೌ।
ತಸ್ಮಾಚ್ಛಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ॥

"ಎಲ್ಲಾ ವಿಷಯಗಳನ್ನು ಇಲ್ಲಿಹೇಳಲು ಸಾಧ್ಯವಿಲ್ಲ. ಅದಕ್ಕಾಗಿ ಶಾಸ್ತ್ರರೂಪದಲ್ಲಿ ಎಲ್ಲವನ್ನೂ ನಿರೂಪಿಸುತ್ತೇನೆ. ಪ್ರತಿಯೊಂದಕ್ಕು ಶಾಸ್ತ್ರವೆ ಪ್ರಮಾಣವೆಂದು ಭಾವಿಸಿ, ಅದರಂತೆ ಕೆಲಸಮಾಡು." ಹೀಗೆ ಪರಂತಪನಾದ ಪಾರ್ಥನಿಗೆ ಉಪದೇಶಿಸಿದ ಪರಮಾತ್ಮನ ವಾಕ್ಯವಿದು. ಅರ್ಜುನನಿಗೆ ಉಪದೇಶವನ್ನೂ ಜಗತ್ತಿನ ಉದ್ದೇಶವನ್ನೂ ಹಿಡಿದು ಉದ್ಗರಿಸಿದ ಗೀತಾ ವಾಕ್ಯವಿದು. ಆ ಪರಂಧಾಮನೇ ಶಾಸ್ತ್ರವನ್ನು ಈ ಬಗೆಯಾಗಿ ಎತ್ತಿಹಿಡಿದ ನೆಂದಮೇಲೆ, ಶಾಸ್ತ್ರದಲ್ಲಿ ಎಂಥ ಸೌಜನ್ಯ ಇರುವುದೆನುವುದು ತಿಳಿದು ಬರುವುದು!

ಮಹಿಳಾ ಸನ್ಯಾಸ

ಧರ್ಮ, ಅರ್ಥ, ಕಾಮಗಳೆಂಬ ತ್ರಿಫಲಗಳು ಗೃಹಸ್ಥ, ಗೃಹಿಣೀ ಜೀವನಕ್ಕೇ ಸಂಬಂಧ ವಿರುವವು. ಅಂದಮೇಲೆ ಇವರು ಮೋಕ್ಷ ಭಾಜನರಲ್ಲವೇ? ಎನುವ ಪ್ರಶ್ನೆಒಂದು ಇಲ್ಲಿ ಬರಬಹುದು. ಈ ಸಿಂದಿಗ್ಧವನ್ನು ಹೋಗಲಾಡಿಸುವುದೆಂದರೆ :— ಅಕ್ಷೀರದಾದ ಮೋಕ್ಷಫಲವು ಧರ್ಮತರುವಿ ನಲ್ಲಿರುವುದೇ ಆದರೂ ಕೊನೆಯಲ್ಲಿರುವ ಹಣ್ಣದು. ಅದನ್ನು ಮೇಲಲು, ಆ ಮನುಮಹಾರಾಯನಿಂದಲೇ ನಿರ್ಮಿತವಾದ, ನಿಯಂತ್ರಿತ ವಾನಪ್ರಸ್ಥ, ಸನ್ಯಾಸಗಳಿಗೆ ಸಂಬಂಧಿಸುರುವುದು.

ಪ್ರಶ್ನೆ:— ವಾನಪ್ರಸ್ಥವಂತೂ ಸತಿ—ಪತಿಗಳಿಗೆ ಸಮಾನಾಧಿಕಾರ ಯುಕ್ತಾಶ್ರಮವದು. ಮುಂದಿನದಾದ ಸನ್ಯಾಸದಲ್ಲು ಸತಿಯರಿಗೆ ಅನಧಿಕಾರವಲ್ಲವೆ?

ಉತ್ತರ :— ಹೌದು. ಒಪ್ಪುವ ಮಾತು. ಆದರೂ ಆ ಆಶ್ರಮದಲ್ಲಿ ನಾರಿಯರಿಗೆ ರೂಪಾಂತರದಿಂದ ಅಧಿಕಾರವಿರುವುದು. ಅದು ಹೇಗಂದರೆ :—

ಪತಿಗೆ ಸನ್ಯಾಸವಾದರೆ ಅಥವಾ ಪತಿಯು ಮೃತನಾದರೆ, ಸಹಧರ್ಮಿಣಿಯಾದ ತಾನು ಅಲ್ಲಿಯವರೆಗೆ ನಡೆಯುತ್ತ ಬಂದಹಾಗೆಯೇ ಅರ್ಥಾತ್; ಪತಿ–ಭಕ್ತಿಯನ್ನು ತನ್ನ ಹೃದಯದಲ್ಲಿ ಮೂರ್ತಗೊಳಿಸಿ, ಏಕೀಭವಿಸಿ ಕೊಂಡು ಸರ್ವ ಸ್ತ್ರೀಯರಿಗೂನಿಜವಾಗಿಯೂ ಸುಖವಾಗಬೇಕೆಂದೇ ಶಾಸ್ತ್ರಕಾರನು ಪಾತಿವ್ರತ್ಯ ಧರ್ಮವನ್ನು ಎತ್ತಿಹೇಳಿದ್ದಾನೆ. ಯಾರೆ ಇರಲಿ, ಧರ್ಮಾಚರಣೆಯಲ್ಲಿ ಆಯಾಯ ಧರ್ಮದ ಫಲಿತಾಂಶದಾಶೆಯಿಂದ ಆಚರಿಸಿದಲ್ಲಿ, ಅದು, ತಾನು ಕೊಡಬೇಕಾದ ನಿಜವಾದ ಫಲವನ್ನು ಕೊಡಲಾರದು!

ಪತಿಯು ಜೀವಂತ ಇರುವಾಗಲಾದರು ನಾರಿಯರು ಸಕಲ ಇಚ್ಛೆಯನ್ನು ಮರೆತು ಗಂಡನೆ ತನ್ನ ಸರ್ವಸುಖಮೂರ್ತಿಯೆಂದು ಭಾವಿಸಿ; ಪತಿಹಿತ ಚಿಂತನ, ಪತಿಆಜ್ಞಾಪಾಲನ, ಪತಿಸೇವಾರತಳಾಗುವುದೇ ತ್ಯಾಗಸಿದ್ಧ ಸ್ತ್ರೀಯರಿಗೆ ಪಾತಿವ್ರತ್ಯವೆನಿಸುವುದು. ಹೀಗೆ ಹೇಳುವುದರಿಂದ, ಸನ್ಯಾಸಿಗು ಪತಿವ್ರತೆಗು ಭೇದವಿಲ್ಲವೆಂದಹಾಗೂ ಆಗುವುದು. ಅದು ಹೇಗಂದರೆ, ಸನ್ಯಾಸದ ಅರ್ಥವು ಸರ್ವತ್ಯಾಗವೆಂದಾಗುವುದು.

ಕಾಮ್ಯಾನಂ ಕರ್ಮಣಾ ನ್ಯಾಸಂ ಸನ್ಯಾಸಂ ಕವಯೋ ವಿದುಃ

"ಮಾಡತಕ್ಕ ಯಾವುದೆ ಕರ್ಮವಿದ್ದರು ಫಲದಾಶೆಯಿಲ್ಲದೆ ಮಾಡುವುದೇ ಸನ್ಯಾಸಧರ್ಮ. ಸಮತಾವಾದಿಯಾಗಿಯೂ ಅಹಿಂಸಾಧರ್ಮ ಪಾಲಿಸುತ್ತಲೂ ಕಾವೀವಸ್ತ್ರ ಅಥವಾ ನಾರ(ಜ್ಞಾನ) ವಸ್ತ್ರವನ್ನು ಧರಿಸಿಯೂ ಸುರೂಪತೆಯನ್ನು ಮರೆಸಿರುವುದು.

ವಿಧವಾಯೋಗವೆಂದರೇ ಸನ್ಯಾಸಾಧಿಕಾರ. ಅದಲ್ಲದೆ, ಸಹಗಮನ ವಿಧಿಯು **ಈಗಿನ ಕಾಲಕ್ಕೆ ನಿಷಿದ್ಧಿಸಲ್ಪಟ್ಟಿದೆ.**

ಪುನರ್ವಿವಾಹ ಪಕ್ಷದವರು ತಮ್ಮ ತಮ್ಮ ಪಕ್ಷದ ಪುಷ್ಟಿಗಾಗಿ ಬಹುಬಗೆಯಾಗಿ ಸಮರ್ಥಿಸುತಿರುವರು. ಅವುಗಳಲ್ಲಿ ಇಲ್ಲಿ ಒಂದೇಒಂದನ್ನು ಉದಾಹರಣೆಗಾಗಿ ಕೊಡಲಾಗಿದೆ. –

ಸೋಮಃ ಪ್ರಥಮೋ ವಿವಿದೇ ಗಂಧರ್ವೋ ವಿವಿದ ಉತ್ತರಃ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ॥
(ಋ. ಮಂಡಲ ೧೦, ಸೂ. ೮೫, ಮಂತ್ರ ೪೦)

"ಸೋಮ, ಗಂಧರ್ವ, ಅಗ್ನಿ, ಮನುಷ್ಯ ಈ ನಾಲ್ಕು ಒಂದು ಹೆಣ್ಣಿಗೆ ಗಂಡಂದಿರು." "**ವಿಧವಾವಿವಾಹ ಶಾಸ್ತ್ರವಿರುದ್ಧವೇ**" ಎನುವ ಪುಸ್ತಕದ ೧೧೩–೧೧೫ ಪುಟಗಳಲ್ಲಿ ಈ ಶ್ಲೋಕದ ಅರ್ಥವನ್ನು ವಿವರಿಸುತ್ತ ಈ ದೇವತೆಗಳಿಗೆ ತಕ್ಕಾದ ದೇವಕನ್ಯೆಯರಿಲ್ಲವೆ? ಅಥವಾ ದೊರೆಯುವದಿಲ್ಲವೆ? ಈ ಮುಂತಾಗಿಯೂ ದೇವತೆಗಳಿಂದ ಭೋಗಿಸಲ್ಪಟ್ಟ ಮಾನವ ಕನ್ಯೆಯರು ಎಲ್ಲವರೂ ವ್ಯಭಿಚಾರಿಣಿಗಳಾಗುವುದಿಲ್ಲವೆ?" ಇವೇ ಮೊದಲಾಗಿ ಪ್ರತಿಪಾದಿಸಿರುವರು. ಆ ಪುಸ್ತಕ ಕರ್ತರು ಈ ಶ್ಲೋಕದ ಆಳ–ಅಗಲವನ್ನು ಅಳೆದುಕೊಂಡೋ ಅಲ್ಲವೆ ತಮ್ಮ ಲೆಕ್ಕನಿಕೆಗೆ ಪುಷ್ಟಿಕೊಡಲೆಂದೊ ಏನೊ ತಿಳಿಯದು, ಹೀಗೆ ವಿವರಿಸಿದ್ದು. ಅದಲ್ಲದೆ, ವಸ್ತುಸ್ಥಿತಿಯನ್ನೂ ಎತ್ತಿಹಿಡಿದಲ್ಲಿ; ದೇವತೆಗಳಾಗಲೀ, ಋಷಿಗಳಾಗಲಿ ಮಹಾಶಕ್ತಿಯುಳ್ಳವರು. ಆದರಿಂದ ಲೋಕ ವಿರುದ್ಧ ಯಾವ ಕಾರ್ಯವು ಒಮ್ಮೊಮ್ಮೆ ನಡೆದರೂ ಲೋಕಕ್ಕೆ ಸಮ್ಮಂಧವಾಗದು. ಒಮ್ಮೆ ಸಮ್ಮಂಧ ಆಗುವುದೆಂದರೆ ಅದು ಅವಿರುದ್ಧವಿದೆಯೆಂದೂ ತಿಳಿಯತಕ್ಕದ್ದು. ನೋಡಿ; ಪರಾಶರನು ಮತ್ಸ್ಯಗಂಧಿಯನ್ನೂ ವಿಶ್ವಾಮಿತ್ರನು ಊರ್ವಶಿಯನ್ನೂ ವಿಷ್ಣುವು ಬೃಂದೆಯನ್ನೂ, ಇಂದ್ರನೂ ಸೂರ್ಯನೂ ಕುಂತಿಯನ್ನೂ ಉಪಭೋಗಿಸಿದರು. ಆದರಿಂದ ಆಯಾಯ ಕನ್ಯೆಯರ ಕನ್ಯೆತನವು ಕೆಡಲಿಲ್ಲವೆನುವುದರಲ್ಲಿ ಎಲ್ಲವರೂ ಒಪ್ಪುತ್ತಾರೆ. ಈ ವಿಷಯುಗಳನ್ನಷ್ಟೆ ಅವರು ಗಮನಿಸಿದಲ್ಲಿ ಬಾಹ್ಯವಲ್ಲದಿದ್ದರು, ಅವರ ಅಂತರಂಗವು ಸಮಾಧಾನ ಹೊಂದದಿರದು! ಹೀಗೆ ಇನ್ನೂ ಎಷ್ಟೊಬಗೆಯ ಸಮರ್ಥನೆಗಳು ಆ ಪುಸ್ತಕದಲ್ಲಿ ಪಕ್ಷದವತಿಯಿಂದ ನಡೆದಿರುವುದು. ಅದೆಲ್ಲ ಇಲ್ಲಿಬೇಕಾಗಿಲ್ಲ. ಪತಿವ್ರತಾಧರ್ಮವು ಸನ್ಯಾಸಧರ್ಮದ ತುಲನೆಯುಳ್ಳೆ ಇರುವುದು.

ಇದೇ ನಿಜವಾದ ನಾರೀಧರ್ಮವು. ಪತಿಯೆ ತನ್ನ ಸರ್ವಸ್ವ ಎಂದು ಭಾವಿಸಿದಾಗ, ಅಲ್ಪಸುಖ ಕೊಡುವ ಭೋಗವಾಸನೆಗಳೆಲ್ಲ ಕುಂಠಿತ ವಾಗುವವು. ಯಾಕಂದರೆ :—' ರಾಮ ' ಮತ್ತು ' ಕಾಮ ' ಇವೆರಡೂ ಒಂದೇ ಸ್ಥಳದಲ್ಲಿ ಇರಲು ಸಾಧ್ಯವಿಲ್ಲ. ಮಂದಬುದ್ಧಿಯ ಹೊರತಾಗಿ ವಾಸನೆಯು ಎಂದೂ ಉದ್ರೇಕವನ್ನು ಹೊಂದಲಾರದು. ಹಾಗಿರಲು, ತನ್ನ ಪತಿಯೆ ಭಗವತ್ಸ್ವರೂಪು ಎಂದು ತಿಳಿದು, ಅದರಂತೆ ನಡಕೊಳ್ಳುವ ನಾರಿಯಳಿಗೆ, ಸಾಂಸಾರಿಕವಿಷಯ ವಾಸನೆಗಳು ಯಾವವೂ ಬಾಧಿಸ ಲಾರವು. ಅಷ್ಟೆಏಕೆ ? ಆ ಪರಮಾತ್ಮಸ್ವರೂಪಜ್ಞಾನವೂ ಪ್ರಾಪ್ತವಾಗಿ, ತದೇಕ ಚಿತ್ತಹೊಂದಿ, ಮುಂದೊದಗುವ ಮರಣಕಾಲದಲ್ಲಾದರೂ ಆ ಭಗವಂತಸ್ವರೂಪೀಪತಿಯ ಚಿಂತನೆ ಮಾಡುತಿದ್ದ ಈ ಸ್ತ್ರೀಯಳಿಗೆ, ಶ್ರೀ ಭಗವಾನ್ ಸಾಯುಜ್ಯ (ಬಗವಂತನಲ್ಲೆ ಐಕ್ಯವಾಗುವುದು.) ಅಲ್ಲವೆ, ಸಾಮೀಪ್ಯ, (ಆತನ ಹತ್ತರದಲ್ಲಿ ಇರುವುದು.) ಅದು ಅಲ್ಲದಿರಲು, ಸಾರೂಪ್ಯ ತದೇಕರೂಪು ಹೊಂದುವುದು.) ಸಾಲೋಕ್ಯ (ಅವನಿರುವ ಲೋಕ ದಲ್ಲಿರುವುದು.) ಅಂತು;ನಾಲ್ಕು ಬಗೆಯ ಮುಕ್ತಿಗಳಲ್ಲಿ ಯಾವುದಾದರೊಂದನ್ನು ಹೊಂದುವಳು.

ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್।
ತಂ ತಮೇವೈತಿ ಕೌಂತೇಯ ಸದಾ ತಧ್ಭಾವ ಭಾವಿತಃ ॥

(ಗೀತಾ)

" ಮರಣಕಾಲಕ್ಕೆ ಭಾವನೆಯಲ್ಲಿ ಯಾವಯಾವ ಸ್ಮರಣೆಯನ್ನಿಟ್ಟು ಭಜಿಸುತ ಶರೀರವನ್ನು ಬಿಡುವರೊ, ಆ ಆ ಗತಿಯನ್ನು ಹೊಂದುತ್ತಾರೆ. " ಗೀತಾವಾಕ್ಯ, ಧರ್ಮ-ಶಾಸ್ತ್ರಗಳಲ್ಲಿ ಹೇಳಿರುವ ಮಾತು ' **ರೋಚನಾರ್ಥಾ ಫಲಶ್ರುತಿಃ** ' ಎಂದಂತಲ್ಲ. ಅಕ್ಷರಶಃ ಸತ್ಯವಿರುವುದು. ಆದ್ದರಿಂದ ಸ್ತ್ರೀ—ಪುರುಷ ಪ್ರತಿಯೊಬ್ಬರೂ ಪಾಲಿಸಲೇ ಬೇಕು.

ದೈವಯೋಗದಲ್ಲಿ ಪತಿಯು ಮೃತನಾದರೆ ವಿಧವೆಯರಿಗಾಗಿ ಹೇಳಿದ ಪಾತಿವ್ರತ್ಯಧರ್ಮ ಪಾಲನೆ ಮಾಡತಕ್ಕದ್ದು. ಹಾಗಿರುವ ತಪೋನುಷ್ಠಾನಗಳಲ್ಲಿ

ನೆಲಸುವಿಕೆ ಯಿಂದ, ಮೂಢಜನರ ಅಪವಾದದಿಂದ ತಪ್ಪಿ,ಮಹಾನುಭಾವರ ಅನುಗ್ರಹಕ್ಕೆ ಪಾತ್ರಳಾಗಿ, ಕುಟುಂಬದ ಜನರಿಗು ಮಾರ್ಗದರ್ಶನವನ್ನು ಮಾಡುತ್ತ, ಜೀವನಯಾತ್ರೆಯನ್ನು ಸಾಗಿಸುತ್ತ ಬರಲಾಗುವುದು.

ನಾರಿಯರಿಗೆ ಪತಿಯೆ ಪರಮಾತ್ಮನೆಂದಿರುವಾಗ, ಪತಿಯ ಪಾರ್ಥಿವ ಶರೀರವು (ಸ್ಥೂಲಶರೀರವು) ಮಾಯವಾದ ಮಾತ್ರಕ್ಕೆ ಶ್ರೀ ಪರಮಾತ್ಮನ ರೂಪಕ್ಕೆ ಧಕ್ಕೆ ಬರುವುದುಂಟೆ? ಇಲ್ಲ! ಅಂದಾಂಗ; ಪತಿವ್ರತೆಗೆ ವೈಧವ್ಯ ಪ್ರಾಪ್ತವಾದರು, ಅಂತರಂಗದಲ್ಲಿ, ತನ್ನ ಪತಿಸ್ವರೂಪಿ ಪರಮಾತ್ಮನನ್ನು ನಿಲ್ಲಿಸಿ, ತ್ಯಾಗಮಯಜೀವನವನ್ನು ಸಾಗಿಸುತಿರುವಲ್ಲಿ, ಅದು ಪವಿತ್ರ ಸನ್ಯಾಸ ಆಗುವುದು ಎಂದು ಶಾಸ್ತ್ರಗಳು ಘೋಷಿಸುವವು.

ಚತುರ್ವಿಧ ಫಲಗಳಲ್ಲಿ ಅಖೇರದಾದ ಮೋಕ್ಷಫಲವು, ಧರ್ಮ ತರುವಿನಲ್ಲಿರುವುದೇ ಆದರೂ ಕೊನೆಯಲ್ಲಿರುವ ಹಣ್ಣದು. ಅದನ್ನು ಮೆಲ್ಲಲು, ಆ ಮನುಮಹಾರಾಯನಿಂದಲೆ ನಿಯಂತ್ರಿತ, ವಾನಪ್ರಸ್ಥ ಸನ್ಯಾಸಗಳಿಗೆ ಸಮ್ಮಂಧಿಸಿ ಮುಂದಿನದಾದ ಸನ್ಯಾಸದಲ್ಲಿ ಸ್ತ್ರೀಯರಿಗೆ ಅನಧಿಕಾರವಲ್ಲವೆ? ಎಂದರೆ :— ಆ ಆಶ್ರಮಧರ್ಮದಲ್ಲಿ ರೂಪಾಂತರದಿಂದ ಸ್ತ್ರೀಯರಿಗೆ ಅಧಿಕಾರ ವಿರುವುದು.

ವಾನಪ್ರಸ್ಥದಿಂದ ಸನ್ಯಾಸದಲ್ಲಿ ಪತಿಯು ಹೆಜ್ಜೆಯಿಟ್ಟರೆ; ಸತಿಯಳು ಆವಾಗ ಅಲ್ಲಿಯವರೆಗೆ ತಾನು ನಡಕೊಂಡಂತೆ ಪತಿಭಕ್ತಿಯನ್ನು ಹೃದಯ ದಲ್ಲಿ ಮೂರ್ತಗೊಳಿಸಿ, ಭವಿಕೀವಿಸಿದ್ದು, ಸರ್ವಸಮತಾ ಬುದ್ಧಿಯನ್ನು ಬಲಕರಿಸಿ, ಅಹಿಂಸಾಮಯಳಾಗಿ ಕಾವೀವಸ್ತ್ರ ಧರಿಸಿ, ಸುರೂಪತೆಯನ್ನು ಮರೆಸಿ ಶಾಸ್ತ್ರಬದ್ಧಳಾಗಿರುವುದು. ಸ್ತ್ರೀಯರಿಗೆ ಇದು ಸನ್ಯಾಸಧರ್ಮವೇ ಆಗುವುದು.

ಒಟ್ಟಾರೆ; ಪತಿ ಇರಲಿ ಇರದಿರಲಿ; ನಾರಿಯರು ಶಾಸ್ತ್ರಗಳಲ್ಲಿ ಹೇಳಿ ದಂತೆ ಪತಿವ್ರತಾಧರ್ಮಪಾಲನೆ ಅಗತ್ಯ ಮಾಡಬೇಕು. ಅಂತಹ ಪತಿವ್ರತೆ

ಯರನು ಗೌರವಿಸಲೂ ಬೇಕು. ಹಾಗೆ, ಹೆಮ್ಮಕ್ಕಳಲ್ಲಿ ಎಲ್ಲವರೂ ನಡಕೊಳ್ಳುತಿದ್ದರೇ ಜಗತ್ತಿನ ಕಲ್ಯಾಣ.

ಅಂತಹ ಶೀಲವತಿಯರನ್ನು ಎಲ್ಲವರೂ ಗೌರವಿಸತಕ್ಕದ್ದು.

ಪುರುಷನ ಕರ್ತವ್ಯ

೩೦ ದಿನ ಯುಗದಲ್ಲಿ ಪುರುಷನು ತನ್ನ ಕರ್ತವ್ಯದ ಸ್ಮರಣೆಯಿಲ್ಲದಿರುವನೆಂಬುವುದೇ ಧರ್ಮಪತ್ನಿಯಳ ಧಾರ್ಮಿಕೇಚ್ಛೆಗೆ ದುಮ್ಮಾನ ಬಲಿದಿರುವುದು. ಪಾತಿವ್ರತ್ಯ ಪರಿಪಂಥದಲ್ಲಿ ಪ್ರಯಾಣಿಸುವುದಾದರೆ, ದೀಪಕ್ಕೆ ವಾತದ ಬಾಧೆ ತಗಲದಂತೆ ನೋಡಿಕೊಳ್ಳುವ ಹಾಗೆ, ಪತಿಯಾದವನು ಅತಿ ಎಚ್ಚರದಿಂದ ತ್ರಿಕಾಲದಲ್ಲು ನೋಡಿಕೊಳ್ಳಬೇಕಾಗುವುದು. ಅದರಲ್ಲಿ ತಪ್ಪಿದರೆ ಪತಿಯ ಬಾಳ್ವೆಗೂ ಧಕ್ಕೆ ತಗಲುವುದು.

ಅನುಕೂಲಾ ಮನಾಗ್ದುಷ್ಟಾಂ ದಕ್ಷಾಂ ಸಾಧ್ವೀಂ
ಪ್ರಜಾವತೀಮ್ ।
ತ್ಯಜನ್ ಭಾರ್ಯಾಮವಸ್ಥಾಪ್ಯೋ ರಾಜಾ ದಂಡೇನ ಭೂಯಸಾ ॥

(ನಾರದ)

"ಆಜ್ಞಾಧಾರಕಳು, ಪ್ರಿಯಭಾಷಿಣಿಯೂ ಸುಗ್ರಣಿಯೂ ಪತಿವ್ರತೆಯೂ ಆದಂಥ ಮಡದಿಯನ್ನು ಬಿಟ್ಟು ಬೇರೆಯವಳೊಡನೆ ಯಾವವನು ಮದುವೆಯಾಗುತ್ತಾನೊ, ಅವನನ್ನು ರಾಜನಾದವನು ಕಠಿಣ ಶಿಕ್ಷೆಗೆ ಗುರಿಮಾಡತಕ್ಕದ್ದು."

" ಆಜ್ಞಾಸಂಪಾದಿನೀಂ ದಕ್ಷಾಂ ವೀರಸೂ ಪ್ರಿಯವಾದಿನೀಮ್।
ತ್ಯಜನ್ ದಾಪಸ್ತೃತೀಯಾಂಶಮ್ ದ್ರವ್ಯೋ ಭರಣಂ ಸ್ತ್ರಿಯಃ॥

(ಯಾಜ್ಞವಲ್ಕ್ಯ)

" ಆಜ್ಞಾಧಾರಿಣಿ, ಪ್ರಿಯಭಾಷಿಣಿ, ದಕ್ಷ ಮತ್ತು ಪುತ್ರವತಿಯಾದ ಹೆಂಡತಿಯನ್ನು ಆವವನು ತ್ಯಜಿಸುವನೊ ಅವನ ಆಸ್ತಿಯಲ್ಲಿ ೧।೩ ಪಾಲನ್ನು ಅವಳಿಗೆ ಕೊಡಿಸಲು ರಾಜಾಧಿಕಾರದಲ್ಲಿದೆ. ಆತನು ನಿರ್ಧನನಾದರೆ ಅನ್ನ-ವಸ್ತ್ರವನ್ನಾದರು ಕೊಡಿಸಬೇಕು.

ಬಂಜೆಯ ಬಗ್ಗೆ ೮ ವರ್ಷ, ಮಕ್ಕಳಾಗಿ ಆಗಿ ಸಾಯುತಿರುವವಳ ಬಗ್ಗೆ ೧೦ ವರ್ಷ, ಕೇವಲ ಹೆಣ್ಣನ್ನೆ ಹಡೆಯುವವಳ ಬಗ್ಗೆ ೧೧ ವರ್ಷ, ಅವಧಿ ನಿರೀಕ್ಷಿಸಿ, ನಂತರ ಆಕೆಯ ಗಂಡನು ಮತ್ತೊಂದು ಲಗ್ನವಾಗಬೇಕು. ಇಂಥ ಸ್ಥಿತಿಯಲ್ಲು ಅವಳು ಪುತ್ರರಹಿತಳು, ಜಗಳಗಂಟಿಯು ಆಗಿದ್ದರೆ ತತ್ಕಾಲವೆ ಅವಳ ತ್ಯಜಿಸಬೇಕು.

(ಮನು)

ಧರ್ಮಕೃತ್ಯಗಳಲ್ಲಿ ದಕ್ಷಳಾದಂಥ ಪುತ್ರವತೀಸ್ತ್ರೀ ಇರಲು, ಆಕೆಯ ಗಂಡನು ಯಾವಕರಣದಿಂದಲು ಬೇರೆ ಲಗ್ನವಾಗಬಾರದು.

(ಆಪಸ್ತಂಬ)

ಸೆರೆಕುಡಿಯುವವಳು, ಸದಾರೋಗಿ, ಯೋಗ್ಯತೆಗಿಂತ ಹೆಚ್ಚು ಖರ್ಚು ಮಾಡುವವಳು, ಪತಿಯ ಮನದ ವಿರುದ್ಧ ನಡೆಯುವವಳು, ಇಂಥವರಿದ್ದರೆ ಅವರ ತ್ಯಜಿಸಿ ಬೇರೆ ಲಗ್ನವಾಗಬಹುದು. ರೋಗಿಷ್ಠಳಿದ್ದ ಭಾರ್ಯೆಯ ಅಪ್ಪಣೆ ಪಡೆದು ಬೇರೆ ಲಗ್ನವಾಗಬಹುದು. ಅವಳ ಎಂದಿಗು ಅವಹೇಳನ ಗೈಯಬಾರದು.

(ಮನು)

ಇಂಥಿಂಥ ಪ್ರಸಂಗದಲ್ಲಿ ಮಡದಿಯ ಬಿಡುವುದಿದ್ದರು, ಅವಳ ತವರ ಮನೆಯವರ ಕರೆಸಿ ಅವರ ಸ್ವಾಧೀನ ಮಾಡಬೇಕೆಂದೂ ಸ್ಮೃತಿಕಾರರ ಹೇಳಿಕೆಯಿದೆ.

ಉತ್ಕೃಷ್ಟಾಯಾಭಿರೂಪಾಯ ವರಾಯ ಸದೃಶಾಯಚ ।
ಅಪ್ರಾಪ್ತಾಮಪಿ ತಾಂ ತಸ್ಮೈ ಕನ್ಯಾಂ ದದ್ಯಾದ್ಯಥಾವಿಧಿಃ ॥

(ಮನು. ೧|೮೮-೮೯)

"ಉತ್ಕೃಷ್ಟ, ಸುರೂಪ ಮತ್ತು ಯೊಗ್ಯನಾದ ವರನಿಗೆ ಕನ್ಯೆಯನ್ನು ಕೊಡಬೇಕು. ಋತುಮತಿಯಾದ ಕನ್ಯೆಯು ಸಾಯುವವರೆಗೆ ತಂದೆ ಮನೆಯಲ್ಲೆ ಬ್ರಹ್ಮಚರ್ಯದಿಂದ ಯಿದ್ದರು ಅಡ್ಡಿಯಿಲ್ಲ. ಗುಣಹೀನವರನಿಗೆ ಮಾತ್ರ ದತ್ತಮಾಡಬಾರದು."

ನಪಂಸಕ, ಊನ, ತೀರಕುಳ್ಳ, ಹುಟ್ಟುಗುರುಡ, ಬಲಹೀನ, ರೊಗಗ್ರಸ್ಥ ಈ ಮೊದಲಾದವರು ಮರಣ ಪರ್ಯಂತರವು ವ್ರತಸ್ಥರಾಗಿರ ಬೇಕಲ್ಲದೆ ಲಗ್ನವಾಗಕೂಡದೆಂದು ವಿಷ್ಣುಸ್ಮೃತಿಯಲ್ಲಿ ಹೇಳಿದೆ.

ವರಾನ್ವೇಷಣಮಾಡುವಾಗ, ಹುಚ್ಚ, ಜಾತಿಭ್ರಷ್ಟ, ಷಂಢ, ದತ್ತಗೇಡಿ, ಬಂಧುಜನರಿಂದ ತ್ಯಜಿಸಲ್ಪಟ್ಟವ, ಹಳೇರೋಗಿ ಹಾಗು ವ್ಯಂಗಕಾಯದವ ಈ ಬಗೆಯವರನ್ನು ಆರಿಸಿಕೊಳ್ಳಬಾರದೆಂದು ನಾರದಸ್ಮೃತಿಯಲ್ಲಿವೆ.

ಹಾಗಿರುವ ಸ್ಮೃತಿಮತಗಳಿಗೆ ಮರ್ಯಾದೆ ಕೊಟ್ಟು ಮದುವೆ ಮಾಡುವವರೂ ಆಗುವವರೂ ನಡಕೊಳತಕ್ಕದ್ದು.

ಇತ್ತೀಚೆಗರಲ್ಲಂತು ಎಷ್ಟೊ ಗಂಡಂದಿರು, ತಮ್ಮ ತಮ್ಮ ಹೆಂಡರು ಗಳಿಂದ ವ್ಯಭಿಚಾರವನ್ನು ಮಾಡಿಸಿ ಜೀವಿಸುವವರಿರುವರಂತೆ. ಇದೆಂತಹ

ಹವ್ಯಾಸದ ಬಾಳುವೆ ? ಅಷ್ಟೆ ಅಲ್ಲ; ತಮ್ಮ ತಮ್ಮ ಹೆಂಡಿರನು ನಾಟಕ ಸಿನೇಮಾದಿಗಳಲ್ಲಿ ನಟಿಯರನು ಮಾಡಿಸಿಯೂ ಸರಕಾರೀ ಹುದ್ದೆದಾರರ ಮಾಡಿಸಿಯೂ ದೊಡ್ಡ ದೊಡ್ಡ ಸಮಾಜದಲ್ಲಿ; ಗಾಯನ, ಭಾಷಣ, ನಟನಾದಿಗಳಲ್ಲಿ ಸೇರಲು ಆಸ್ಪದ ಕೊಡಿಸಿಯೂ ಕೃಶಿಮೊದಲಾದವುಗಳಿಂದ ಪರಗೃಹದಲ್ಲಿ ದುಡಿಸಿಯೂ ಜೀವಿಸುವ ಪುರುಷರುಂಟು. ಈ ಬಗೆಯು ಚಾಪಲ್ಯ ಜೀವನವು ಅವಹೇಳನವಲ್ಲವೆ ! ? ಅಷ್ಟೆ ಏಕೆ ? ಇವುಗಳಿಂದ ಸತಿಯರಿಗೂ ಪಾತಿವ್ರತ್ಯ ಧರ್ಮದ ಪತನವು.

ಪ್ರಶ್ನೆ:— ಹಿಂದೂ ಸ್ತ್ರೀಯರಿಗೆ ಪಾತಿವ್ರತ್ಯದ ಹೆಸರಿನಿಂದ ಸ್ವಗೃಹ ವಾಸವೆಂಬ ಕಾರಾಗೃಹದಲ್ಲಿ ದಬ್ಬಿ ಬಿಡುವರು. ಇದರಲ್ಲಿ ಅವರಿಂದ ಆಗ ಬೇಕಾದ ದೇಶಸೇವೆಯು ಆಗುವುದಿಲ್ಲ. ಇದರಿಂದ ಸಮಾಜವಂಚನೆ ಆಗುವುದಲ್ಲದೆ, ದೊಡ್ಡದೊಡ್ಡ ಮೆರವಣಿಗೆಯಲ್ಲಿ ಭಾಗವಹಿಸುವುದು, ಸಭೆ ಯಲ್ಲಿ ಭಾಷಣ ಮಾಡುವುದು, ಪತಿ—ಪುತ್ರರನ್ನು ಬಿಟ್ಟು ಸ್ವತಂತ್ರವಾಗಿ ತಿರುಗಾಡುವುದು, ವಕೀಲ ಮತ್ತು ಜಜ್ಜಮುಂತಾದ ಸಣ್ಣ—ದೊಡ್ಡ ಪದವೀಧರರಾಗಿ ಕೆಲಸ ಮಾಡುವುದು, ಆಫೀಸುಗಳಲ್ಲಿ ಕೆಲಸ ಕೈಕೊಳುವುದು, ಸಮಾಜದಲ್ಲಿ ಮೇಂಬರರಾಗುವುದು, ಈ ಮೊದಲಾದ ಸಮಾಜಹಿತ ಕಾರ್ಯಗಳಲ್ಲಿ ಇಳಿಯಲು ಅವಕಾಶ ಸಿಗದೆ ಹೋಗುವುದರಿಂದ ದೇಶದ್ರೋಹವೇ ಆಗುವುದು. ಲೋಕದ ಅಭ್ಯುದಯಕ್ಕಾಗಿ ನಾನಾಬಗೆಯ ಶುಭಸಂಕಲ್ಪ ಮಾಡಿ, ತನ್ನ ಸರ್ವಸ್ವವನ್ನೂ ಆ ಸಂಕಲ್ಪದಲ್ಲಿ ಧಾರೆಯರೆದು ದೇಹವನ್ನು ಅದರಲ್ಲೆ ರಮಿಸುವುದು, ಸೈನಿಕರ ಅಲ್ಲವೆ ಸೇವಕರನ್ನು ತಯಾರಿಸುವುದು, ಹೀಗೆ ತಯಾರಿಸಿದ ಅವರನ್ನು ನ್ಯಾಯ—ಧರ್ಮಯುಕ್ತ ಕಾರ್ಯಕ್ಷೇತ್ರಗಳಲ್ಲಿ ಪ್ರೇರೇಪಿಸುವುದು, ಈ ಮೊದಲಾದವುಗಳು ವೀರಮಣಿಗಳು ಮಾಡತಕ್ಕ ದೇಶಸೇವೆಯೆನಿಸುವುದು. ಹೀಗಿರುವ ದೇಶಸೆವೆಯಲ್ಲಿ ಧುಮ್ಮಿಕ್ಕಲು ರಮಣಿಯು ಅನರ್ಹಳೆ. ? ಹಾಗೆ ಅನರ್ಹಳೆಂದಿದ್ದರೆ ನಾರಿಯಳು ದೇಶ ಸೇವೆಯನ್ನು ಮಾಡಬೇಕೋ ಬೇಡವೊ ? ಮಾಡಬೇಕೆಂದಿದ್ದರೆ ಅದು ಹೇಗೆ ?

ಉತ್ತರ:— ಮೇಲೆಹೇಳಿದ ಕಲಮುಗಳಲ್ಲಿ, ನಾರಿಯಳು ತನ್ನ ಪತಿವ್ರತಾಧರ್ಮಕ್ಕೆ ಸಮ್ಮಂಧಪಟ್ಟ, ಯಾ, ಆ ಧರ್ಮಕ್ಕೆ ಭಂಗಬಾರದ, ಅಥವಾ ಭಂಗಬಾರದಂತೆ ಕಾದುಕೊಳ್ಳುತ್ತ, ಪತಿಯ ಆಜ್ಞೆಯಂತೆ ಯಾವ ಕೆಲಸವನ್ನಾದರೂ ಸ್ವೀಕರಿಸಬಹುದು. ಮುಖ್ಯವಾಗಿ ಹೇಳುವುದೆಂದರೆ; ಹೆಣ್ಣಾದವಳು ತನ್ನ ಸನಾತನಧರ್ಮವನ್ನು ಕಾದುಕೊಂಡು ಗೃಹದೇವಿ ಯಾಗಿರುವುದರಲ್ಲಿ ಸರ್ವಸಾಧ್ಯವಾಗುವುದು. ಅದು ಹೇಗಂದರೆ; ಅಂಥ ಗೃಹದೇವಿಯು ತನ್ನ ಧರ್ಮದ ಬಲದಿಂದ, ಮನಸ್ವಿಯೂ ತೇಜಸ್ವಿಯೂ ತಪಸ್ವಿಯೂ ಬುದ್ಧಿಮಾನ್ ವಿದ್ವಾನ್ ವೀರಹೃದಯೀಪುತ್ರನನ್ನು ಒಬ್ಬನೋ ಇಬ್ಬನೋ ಮತ್ತೂಹೆಚ್ಚೋ ಪಡೆದು ಆ ಮುಖದಿಂದ ಬಹುಭಾಗವಾಗಿ ದೇಶಕಾರ್ಯಗಳನ್ನು ಪೂರೈಸಬಹುದು. ಇದಕ್ಕೆ ಉದಹರಿಸುವುದಾದರೆ :— ಭಗವಾನ್ ಶ್ರೀರಾಮ, ಶ್ರೀಕೃಷ್ಣ, ಭೀಷ್ಮ, ಯುಧಿಷ್ಠಿರ, ಪಾರ್ಥ, ಮಹಾರಾಣಾ ಪ್ರತಾಪ, ಛತ್ರಪತಿ ಶಿವಾಜಿ, ಮಹಾತ್ಮಾ ಬುದ್ಧ, ಮಹಾವೀರ ಸ್ವಾಮಿ, ಮಹಾರಾಜಾ ಅಶೋಕ, ನಾನಕ, ಕಬೀರ, ಗುರುಗೋವಿಂದ ಸಿಂಹ, ಗೋಸ್ವಾಮೀ, ತುಲಸೀದಾಸ, ಕವಿ ರವೀಂದ್ರ, ಪರಮಹಂಸ ಶ್ರೀಧರ ಸ್ವಾಮೀ, ಮಹಾತ್ಮಾ ಮಾಲವೀಯ, ಶ್ರೀ ಗಾಂಧೀಜೀ, ಲಾಲಾ ಲಜಪತ ರಾಯ, ಶ್ರೀ ಮೋತೀಲಾಲ ನೆಹರು ಮೊದಲಾದ ವೀರರನ್ನು ಪಡೆದ ಪುಣ್ಯ ತಾಯಿಯರನ್ನು ಸ್ಮರಿಸಿಕೊಂಡರೇ ಸಾಕಾಗುವುದು.

ಗೃಹರಾಣಿಯಾಗುವುದು, ವೀರರ ಮಾತೆಯಾಗಲು ಪತಿಸೇವಾ ತತ್ಪರಳಾಗಿ, ಶಾಸ್ತ್ರಾರ್ಥದಂತೆ ನಡಕೊಂಡಲ್ಲಿ ತನ್ನ ಬಯಕೆಗೆ ಅನುಗುಣ ವಾದ ಮಕ್ಕಳನ್ನು ಪಡೆದು, ತಾನು ಮಾಡಬೇಕಾದ ದೇಶಸೇವೆಯನ್ನು ಆ ಮಕ್ಕಳಿಂದ ಮಾಡಿಸಲು, ಅದೂ ತಾನೇ ಮಾಡಿದಂತಾಗುವುದು!

ನೈತಿಕ ಪರಿವಿಡಿಯಲ್ಲಿ ಪರಾನುಕರಣಗೈಯದೆ, ಹಿಂದೂಧರ್ಮದ ಶ್ರೇಷ್ಠತೆಯ ಸೊಡರನು ಹಿಡಿದು, ಪಾವಿತ್ರ್ಯ ಪಾತಿವ್ರತ್ಯಪಥಃಕ್ರಮಣದಲ್ಲಿ ದೇಹವ ಸವೆಸುತ್ತ, ವಿದೇಶಿಗರಮೇಲೂ ಆ ಬೆಳಕನ್ನು ಹರಡಿ, ಗೃಹರಾಣಿ

ಯೆನಿಸಿ, ಶೂರಪುತ್ರರನ್ನು ಹಡೆದು ಭಾರತಮಾತೆಗೆ ಅರ್ಪಿಸಿದ ಮತ್ತು ಅದೇ ಮಾರ್ಗದಲ್ಲಿ ಸ್ವಯಂ ವೀರಮಾತೆಯಾಗಿ ದೇಶಭಕ್ತಿಯನ್ನು ಮಾದರಿಗೊಳಿಸಿದ; ಪೌರಾಣಿಕ, ಐತಿಹಾಸಿಕ ಮತ್ತು ಅನುಭವಕಾಲದ ಸ್ತ್ರೀರತ್ನಗಳ ಪರಿಚಯುವ ಮುಂದಿನ ಭಾಗದಲ್ಲಿ ಕೆಲಮಟ್ಟಿಗೆ ಚಿತ್ರಿಸಲಾಗಿದೆ. ಆ ಮಣಿಗಳಾದರೂ ಇಂದಿನ ಜಗತ್ತಿಗೆ ಅನಪರಿಚಯುಕರೇ! ಆದರು ಮಹಿಳೆಯರ ಪ್ರಧಾನಕಾರ್ಯ ಮಾರ್ಗದರ್ಶನಕ್ಕೆ ಪುನಃ ನೆನಸಿಗೆ ತಂದುಕೊಟ್ಟಿದೆ.

ದೇಶದ ಔನ್ನತಿಗಾಗಿ ಈ ಎರಡು ಹೆದ್ದಾರಿಯಲ್ಲಿ ಹಿರಿದಾಗಿ ಹೆಜ್ಜೆ ಇಟ್ಟು ನಡೆಯುವುದರಲ್ಲಿ, ದೇ ದೇಶದೊಳಗುಳ್ಳ ತನ್ನಹಿತ ಸಾಧಿಸೇ ಸಾಧಿಸುವುದು. ತನ್ನಹಿತದಬಗ್ಗೆ ಹೊಸದಾಗಿ ಪ್ರಯತ್ನಿಸುವುದುಬೇಡ. ನಮ್ಮ ಭಾರತೀಯ ಭಪ್ರಿಯರು ಅಂತಹ ಸತ್ಫಲವನ್ನು ಸಮರ್ಪಿಸಲು ಮುಂಬರಲೆಂದು ಸದ್ಗುರು ವಿನಲ್ಲಿ ನನ್ನ ಪ್ರಾರ್ಥನೆ!

ಶ್ರೀ ಗುರವೇ ನಮಃ

ಗ ರ ತಿ

ಭಾಗ ೨

ಯತ್ರ ನಾರ್ಯಸ್ತು ಪೂಜ್ಯಂತೆ।
ರಮಂತೇ ತತ್ರ ದೇವತಾಃ॥

ಪತಿಪ್ರಾಣಾ ವಿಪ್ರಪತ್ನಿ

ಶರ್ಯಾತಿ ಮಹಾರಾಜನು ದಿಗ್ವಿಜಯಕ್ಕೆ ಹೊರಟು ಎಷ್ಟೋ ರಾಜರಿಂದ ವಿಜಯವನ್ನು ಪಡೆದು ಹಿಂದಿರುಗಿ ಬರುತ್ತಿರುವಾಗ, ರಸ್ತೆಯಲ್ಲಿ ಮಹಾರಾಜನ ಪುರೋಹಿತ ಮತ್ತು ಸಂಯಮಿಯೂ ತಪಸ್ವಿಯೂ ವಿದ್ವಾನನೂ ಆದ ಬ್ರಹ್ಮಋಷಿ ವಿಶ್ವಾಮಿತ್ರನ ಮಗನಾದ ಮಧುಛ್ಛಂದನು ಬಂದರು. ಅವನ ಅಸಂತೋಷವನ್ನು ನೋಡಿದ ರಾಜನು "ನೀವು ಈ ಹೊತ್ತು ಬಹಳ ದುಃಖಿತರಾಗಿದ್ದೀರೆಂದು ತಿಳಿದು ಬರುತ್ತಾ ಇದೆ. ನಿಮ್ಮ ಮೋರೆಯು ಬಾಡಿ ಬಸವಳಿದಿದೆ. ನಾನು ಭಕ್ತಿಯಿಂದ ತಮ್ಮ ಪಾದ ಕಮಲಕ್ಕೆ ಎರಗಿರುವೆನು. ತಾವು ತಮ್ಮ ದುಃಖಿತ ಕಾರಣವನ್ನು ತಿಳಿಸಬೇಕಾಗಿ ಬೇಡಿಕೊಳ್ಳುತ್ತೇನೆ. ತಮ್ಮ ಆಶೀರ್ವಾದದಿಂದ ಶತ್ರುಗಳಲ್ಲಿ ವಿಜಯವನ್ನು ಹೊಂದಿದ್ದೇನೆ. ನನಗೆ ಆವುದೆ ತರಹ ತೊಂದರೆ-ತೊಡಕು ಬಂದೊದಗಲಿಲ್ಲ. ಇಂಥ ಸಂತೋಷದ ಸಮಯದಲ್ಲಿ ತಾವು ಏಕೆ ದುಃಖದ ಕಡಲಲ್ಲಿ ಅಡಕಾಗಿರುವಿರಿ." ಎಂದು ಕೇಳಿದನು. ಉತ್ತರಕೊಡುತ್ತ ಮಧುಛ್ಛಂದನು ಶಾಂತಸ್ವರದಿಂದ "ರಾಜಾ! ನನಗೆ ಆವುದೇ ಒಂದು ಅಪಮಾನವಾಗಲಿಲ್ಲ, ಹಾನಿ ಸಂಭವಿಸಲಿಲ್ಲ. ನನ್ನ ದುಃಖದ ಕಾರಣವೆ ಬೇರೆ. ನಾನು ನನ್ನ ಪತ್ನಿಗೆ ನಾಳೆ ಸೂರ್ಯೋದಯದೊಳಗಾಗಿ ತಲ್ಪುವೆ

ನೆಂದು ವಚನ ಕೊಟ್ಟಿದ್ದೆ. ಈಗ ಕೇವಲ ಈ ಹೊತ್ತಿನರಾತ್ರೆ ಉಳಿದಿದೆ. ನಾನಾದರೊ ಬಹಳ ದೂರದಲ್ಲಿದ್ದೇನೆ. ನಾನು ಸರಿಯಾದ ವೇಳೆಗೆ ಹೋಗಿ ಮುಟ್ಟದಿದ್ದರೆ ನನ್ನ ಹೆಂಡತಿಗೆ ಅಪಾರವಾದ ಕ್ಲೇಶವಾಗಬಹುದು. ಅದಕ್ಕೆ ಬಹಳ ದುಃಖಿತನಾಗಿದ್ದೇನೆ."

ಈ ಮಾತನ್ನು ಲಾಲಿಸಿದ ರಾಜನು ನಗುವಿನಿಂದ "ತಾವು ತಪಸ್ವಿಯಾಗಿರುವಿರಿ, ಶಾಸ್ತ್ರಜ್ಞರಿರುವಿರಿ ಮತ್ತು ತ್ಯಾಗಿಯಿರುವಿರಿ. ಹೀಗಿರುವಾಗ ತಮಗೆ ಈ ಪ್ರಕಾರದ ಪತ್ನಿಯ ಸಲುವಾಗಿ ವ್ಯಥೆಯೊ? ಇದು ಅತ್ಯಂತ ಹಾಸ್ಯಾಸ್ಪದ ಮಾತಾಗಿರುವದು. ತಾವು ತಮ್ಮ ಮನಸ್ಸಿನಮೇಲೆ ಧೈರ್ಯವನ್ನಿಡಬೇಕು. ಶ್ರೇಷ್ಠ ಪತಿವ್ರತೆಯೆಂದು ತಾವು ತಿಳಿದುಕೊಂಡಿದ್ದ ನನ್ನ ಹೆಂಡತಿಗಾದರು ಅದೇ ಸಮಯದಲ್ಲಿ ಬರುವೆನೆಂದು ನಾನೂ ಸಹ ಹೇಳಿರುವೆನು. ಅವಳು ನನ್ನನ್ನೆ ಯೋಚಿಸುತ್ತಿದ್ದಾಳೆ. ಆದರು ನಾನು ಇಷ್ಟೊಂದು ವ್ಯಥಿಸುವದಿಲ್ಲ. ತಮಗೆ ಸರಿಯಾದ ಬ್ರಹ್ಮನಿಷ್ಠೆ ಮತ್ತು ಶಾಸ್ತ್ರಜ್ಞತೆಯು ಬಲವಿರುವಾಗ ಸಾಧಾರಣ ಒಂದು ಸ್ತ್ರೀ ಇಚ್ಛೆಗೆ ಬಹಳ ಚಿಂತಿಸುವದು ಅಯೋಗ್ಯ"

ಮಧುಛಂದಸಿಗೆ ಇದರಿಂದ ನಾಚಿಕೆ ಆಗಲಿಲ್ಲ. ಬಹಳ ಸರಳ ಭಾವದಿಂದ ಉತ್ತರವೀಯುತ್ತ "ರಾಜಾ! ನೀನು ಹೇಳುತ್ತಿರುವದು ಸಾಮಾನ್ಯ ದೃಷ್ಟಿಯಿಂದ ಸರಿಯಾಗಿದೆ. ಆದರೆ ಗಂಡ-ಹೆಂಡಿರು ತಮ್ಮತಮ್ಮಲ್ಲಿ ಸರಿಯಾದ ಪ್ರೇಮ ಮಾಡುವದು ಯೋಗ್ಯವಾಗಿದೆ. ಹೀಗೆ ಮಾಡುವದರಿಂದಲೆ ಮನೆತನವು ಆನಂದದಿಂದ ಸಾಗುತ್ತದೆ. ಮನೆತನಕೆ ಇದು ಕೆಡಕಲ್ಲ, ಭೂಷಣವೆ ಆಗಿದೆ. ನನ್ನ ಹೆಂಡತಿಯ ಜೀವವು ನನ್ನಲ್ಲಿಯೆ ವಾಸಿಸುತ್ತದೆ. ನನ್ನ ಹೊರತು ಅವಳು ಒಂದುಕ್ಷಣ ಸಹ ಜೀವಂತಳಾಗಿ ಉಳಿಯಲಾರಳು. ಒಂದುವೇಳೆ ನನಗೆಸಹ ಅವಳ ಸ್ಮರಣೆಮಾಡಿದರೆ ವ್ಯಥೆಯಾಗುತ್ತಲಿದೆ."

ರಾಜನು ಪುರೋಹಿತನಿಗೆ ಅಭಯಕೊಡುವುದಕ್ಕೆ ಸೇನೆಗೆ ಹೊರಡಲು ಅಪ್ಪಣೆ ಕೊಟ್ಟನು. ಇಷ್ಟರಮೇಲೆ ಸಹ ಮಧುಛಂದನ ಮಾತುಗಳಿಂದ, ಅವನ ಹೆಂಡತಿಯಲ್ಲಿಯೆ ಪ್ರೀತಿಯು ಪೂರ್ಣವಿದೆಯೆಂದು ತಿಳಿದುಬಂತು.

ರಾಜನು, ಪರೀಕ್ಷಾರ್ಥ ಕಿವಿಮಾತನ್ನುಹೇಳಿ ಒಬ್ಬ ದೂತನನ್ನು ರಾಜಧಾನಿಗೆ ಕಳುಹಿಸಿದನು. ಆ ದೂತನು "ತೀವ್ರಗಾಮಿ" ಎಂಬ ಕುದುರೆಯನ್ನು ಏರಿ ರಾಜಧಾನಿಗೆ ಹೋಗಿ ತಲ್ಪಿದನು. ರಾಜನ ಮನೆಯಲ್ಲಿ ರಾಣಿ ಮತ್ತು ಗುರುಪತ್ನಿ ಇಬ್ಬರೂ ಕೂಡಿ ಕುಳಿತಿದ್ದರು. ದೂತನು ಅಳುವ ಸ್ವರದಿಂದ "ಶರ್ಯಾತಿ ಮಹಾರಾಜರು ಶತ್ರುಗಳಿಂದ ವಿಜಯುವನ್ನುಹೊಂದಿ ತಿರುಗಿ ಬರುತ್ತಿದ್ದರು ರಾತ್ರಿಯ ವೇಳೆಯಲ್ಲಿ ಒಂದು ಭಯಂಕರವಾದ ಅಡವಿಯಲ್ಲಿ, ಒಬ್ಬ ರಾಕ್ಷಸನು ಪುರೋಹಿತ ಮತ್ತು ರಾಜನನ್ನು ತಿಂದು ಪಾತಾಳಕ್ಕೆ ಹೋದನು. ರಾಜನಿಂದ ಅಗಲಿದ ಸೇನೆಯು ಅತ್ಯಂತ ದುಃಖಪೀಡಿತರಾಗಿದ್ದಾರೆ. ಅವರು ಪಟ್ಟಣದ ಕಡೆಗೆ ತಿರುಗಿ ಬರುತ್ತಾ ಇದ್ದಾರೆ. ನಾನು ಸುದ್ದಿಯನ್ನು ಮುಟ್ಟಿಸಲು ಬಂದಿದ್ದೇನೆ. ನನಗೆ ಅಪ್ಪಣೆಯೇನು?" ಎಂದು ಬಿನ್ನವಿಸಿಕೊಂಡನು.

ರಾಕ್ಷಸನು ರಾಜಪುರೋಹಿತ ಮತ್ತು ಮಹಾರಾಜನನ್ನು ತಿಂದನೆಂಬ ವಾಕ್ಯವನ್ನು ಕೇಳುತ್ತವೆ; ಪುರೋಹಿತನ ಹೆಂಡತಿಯು ಭೂಮಿಯಮೇಲೆ ಮೂರ್ಛಿತಳಾಗಿ ಸತ್ತುಹೋದಳು. ರಾಣಿಯು ಕೆಲವು ವೇಳೆಯವರೆಗೆ ಸುಮ್ಮನೆ ಕುಳಿತಳು. ಒಂದು ಕ್ಷಣದಲ್ಲಿ ತನ್ನ ಮನಸ್ಸನ್ನು ಸರಿಪಡಿಸಿಕೊಂಡು ದೂತನ ಹತ್ತರ ಕೆಲವು ವಿಷಯಗಳನ್ನುಕೇಳುವ ಲವಲವಿಕೆಯಿಂದ ತಲೆಯನ್ನೆತ್ತಿ ನೋಡಿದಾಗ, ದೂತನು ಹೋಗಿಬಿಟ್ಟಿದ್ದಾನೆ.

ದೂತನು ಅರಸನಿದ್ದಲ್ಲಿಬಂದು "ನಾನು ಬಹಳ ಪಾಪಿಯಾಗಿರುವೆನು. ಅತ್ಯಂತ ನೀಚನಿರುವೆನು. ನಾನು ಕುತೂಹಲವಶನಾಗಿ ಬ್ರಹ್ಮಹತ್ಯಮಾಡಿದೆ" ಎಂದನು. ದೂತನಿಂದ ಈ ಸಮಾಚಾರವನ್ನು ಕೇಳಿದ ಮಹಾರಾಜನು ವ್ಯಥೆಯಲ್ಲಿ ಮುಳುಗಿಹೋದನು. ಮಹಾರಾಜನು ವ್ಯಥೆ ಸೈರಿಸಿ, ವಿಷಯು ವನ್ನು ಗೋಪ್ಯವಾಗಿಟ್ಟು ನನಗೆ ತಿರುಗಿಬರಲು ತಡವಾಗುವದೆಂದುಹೇಳಿ, ರಾಜಪುರೋಹಿತನನ್ನು ರಾಜಧಾನಿಯ ಕಡೆಗೆ ಕಳುಹಿಸಿದನು. ತಾನು ಗೌತಮೀ (ಗೋದಾವರಿ) ತೀರಕ್ಕೆ ಹೋಗಿ, ಅಲ್ಲಿ ಸ್ನಾನ ಮಾಡಿ, ಮಾತಾ–ಪಿತೃಗಳಿಗೆ ತರ್ಪಣಕೊಟ್ಟು, ಬ್ರಾಹ್ಮಣರಿಗೆ ಭೋಜನ ಮಾಡಿಸಿ,

ಅನ್ನ, ವಸ್ತ್ರ, ಗೋವು ಮೊದಲಾದವನ್ನು ದಾನಮಾಡಿದನು. ಅಲ್ಲಿಂದ ಗಂಗಾನದಿಗೆ ಹೋಗಿ ಇಲ್ಲಿಯೂ ಸ್ನಾನ–ದಾನಾದಿಗಳನ್ನು ಮುಗಿಸಿದ ನಂತರ ಅಗ್ನಿಯನ್ನು ಪ್ರಜ್ವಲಿಸಿ ಅಗ್ನಿದೇವನ ಮುಂದೆನಿಂತು ನಾನು ದಾನ–ಹವನ ಮತ್ತು ಪ್ರಜೆಗಳ ರಕ್ಷಣೆ ಇವೆಲ್ಲವೂ ಕಡಿಮೆ ಭಾವದಿಂದ ಮಾಡಿದ್ದಾದರೂ ಅಗ್ನಿದೇವನು ನನ್ನ ಆಯುಷ್ಯದಿಂದ ನನ್ನ ಪುರೋಹಿತನ ಹೆಂಡತಿಗೆ ಜೀವವು ಪುನಃ ಬರುವಂತೆ ಅನುಗ್ರಹಿಸಿಬೇಕೆಂದು ಪ್ರಾರ್ಥಿಸಿ ಅಗ್ನಿಯಲ್ಲಿ ಪ್ರವೇಶ ಮಾಡಿದನು. ಅವನ ಶರೀರವು ಭಸ್ಮವಾಯಿತು. ಅಷ್ಟರಲ್ಲಿಯೆ ರಾಜನ ಮಂದಿರದಲ್ಲಿ ಪುರೋಹಿತನ ಹೆಂಡತಿಗೆ ಜೀವವು ಬಂತು.

ಮಧುಛ್ಛಂದನಿಗೆ ಶರ್ಯಾತಿ ಮಹಾರಾಜನ ಯಾವುದೊಂದು ಸಂಗತಿಯೂ ಗೊತ್ತಾಗಲಿಲ್ಲ. ಆವನು ಹುರುಪಿನಿಂದ ಪಟ್ಟಣಕ್ಕೆ ಹೋಗುತ್ತಿದ್ದನು. ರಸ್ತೆಯಲ್ಲಿ ಪುರೋಹಿತನಿಗೆ ರಾಜಧಾನಿಯಿಂದ ಮತ್ತು ಗಂಗಾನದಿಯಿಂದ ಬಂದ ದೂತರು ಸಿಕ್ಕಿದರು. ಹೆಂಡತಿಯು ಮರಣ ಹೊಂದಿ ಪುನಃ ಜೀವಿತಳಾದ ಸುದ್ದಿಯನ್ನುಕೇಳಿ ಅವನಿಗೆ ಅತ್ಯಾನಂದವಾಯಿತು. ಆದರೆ........! ಮಹಾರಾಜನ ಅಗ್ನಿಪ್ರವೇಶದ ಸುದ್ದಿಯನ್ನು ಕೇಳಿದಾಗ ದುಃಖಿತನಾದನು. ಪುರೋಹಿತನು ಈಗ ನಾನುಮಾಡುವ ಕರ್ತವ್ಯವೇನೆಂದು ಆಲೋಚಿಸತೊಡಗಿದ್ದನು. ಹೆಂಡತಿಯು ನನ್ನಸಲುವಾಗಿ ಪ್ರಾಣಬಿಟ್ಟಿದ್ದಳು. ಈಗ ನಾನು ಅವಳಹತ್ತಿರ ಹೋಗಬೇಕೊ ಅಥವಾ ರಾಜನು ನನ್ನ ಸಲುವಾಗಿ ಚಿತೆಯಲ್ಲಿ ಪ್ರವೇಶ ಮಾಡಿರಲು ಅದಕ್ಕಾಗಿ ನಾನೂ ಅಗ್ನಿಪ್ರವೇಶ ಮಾಡಬೇಕೊ? ಎನುವ ಯೋಚನೆಯ ಕಡಲಲ್ಲಿಳಿದುತತ್ಕ್ಷಣದಲ್ಲೆ ರಾಜನಿಗೆ ಜೀವ ತರಿಸಬೇಕೆಂದು ನಿರ್ಧಾರಮಾಡಿ, ತಪಸ್ವಿಯಾದ ಮಧುಛ್ಛಂದನು ಪರಮಾತ್ಮನಾದ ಸೂರ್ಯನನ್ನು ಸ್ತವನಮಾಡಲು ಪ್ರಾರಂಭಿಸಿದನು. "ಮೋಕ್ಷದಾಯಕ ಮತ್ತು ಬಹಳ ತೇಜಸ್ವಿಯುಳ್ಳ ಪರಮಾತ್ಮನಾದ ಸೂರ್ಯನಿಗೆ ಅನೇಕ ವಂದನೆಗಳು. ಹೇ ದೇವ! ನೀನು ಛಂದೋಮಯ ಮತ್ತು ತತ್ವಸ್ವರೂಪದಿಂದ ರಹಿತನಾಗಿರುವೆ. ಎಲ್ಲರೂಪವೂ

ನಿನ್ನದೇ ಇರುವದು. ನೀನು ತ್ರಿಗುಣ, ತ್ರಿಮೂರ್ತಿ ಮತ್ತು ಸೃಷ್ಟಿ-ಸ್ಥಿತಿ-ಪ್ರಳಯ ಇವೆಲ್ಲಕ್ಕೆ ಕಾರಣವಾಗಿರುವಿ. ಹೇ! ಪರಮಾತ್ಮ! ನಿನಗೆ ನಮಸ್ಕಾರ!"

ಪುರೋಹಿತನ ಸ್ತುತಿಗೆ ಪರಮಾತ್ಮನಾದ ಸೂರ್ಯನು ದರ್ಶನವನ್ನು ಕೊಟ್ಟು ವರವನ್ನು ಬೇಡಲು ಹೇಳಿದನು. ಮಧುಛ್ಛಂದನು ಶರ್ಯಾತಿ ಮಹಾರಾಜನಿಗೆ ಪುನರ್ಜೀವ ಬರುವಂತೆ ಬೇಡಿದನು. ಮಹಾರಾಜನು ಶ್ರೇಷ್ಠವಾದ ಕಿರೀಟ ಕುಂಡಲವನ್ನು ಧರಿಸಿ ಎದುರಿನಲ್ಲಿ ನಿಂತುಕೊಂಡನು. ಅಲ್ಲಿ ಮಧುಛ್ಛಂದನು ಪರಮಾತ್ಮನಾದ ಸೂರ್ಯನನ್ನು ಸ್ತುತಿಸಿ ಸಂತೋಷ ಪಡಿಸಿದನ. ಆ ಸ್ಥಳವು ಪವಿತ್ರವಾದ "**ಸೂರ್ಯ ತೀರ್ಥ**" ಎಂಬ ಹೆಸರಿನಿಂದ ಈಗಲೂ ಪ್ರಸಿದ್ಧವಿದೆ. ಆ ಸ್ಥಳದಲ್ಲಿ ಯಾವವನು ನಿಯಮದಂತೆ ಸ್ನಾನ ದಾನಗಳನ್ನೂ ಸೂರ್ಯನ ಆರಾಧನೆಯನ್ನೂ ಭಕ್ತಿಯಿಂದ ಮಾಡುವನೊ ಅವನ ಪಾಪವು ದೂರವಾಗುತ್ತದೆ. ಮತ್ತು ತನ್ನ ಇಷ್ಟವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಭಕ್ತಳಾದ ವಿದುರನ ಹೆಂಡತಿ

"ರಾಜ! ನಾನು ನಿಮ್ಮ ಆಮಂತ್ರಣಕ್ಕೆ ಮರ್ಯಾದೆಯನ್ನಿಡುತ್ತೇನೆ. ಆದರೆ ನಾನು ಅದರನ್ನು ಸ್ವೀಕಾರ ಮಾಡಲು ಸಮರ್ಥನಲ್ಲ. ಅದಕ್ಕಾಗಿ ದುಃಖ ಪಡುತ್ತಿದ್ದೇನೆ. "**ಎಲ್ಲಿ ಅಡಿಗೆ ಊಟ ಆಗುತ್ತದೆಯೊ ಅಲ್ಲಿ ಪ್ರೇಮ ನಿಲ್ಲುತ್ತದೆ.**" ಕುರುಪತಿಗೆ ಹೀಗಂದ ಶಾಂತಿದೂತನಾದ ಶ್ರೀ ಕೃಷ್ಣನು ಪಾಂಡವರ ಕಡೆಯಿಂದ ಹಸ್ತಿನಾಪುರಕ್ಕೆ ಬಂದಿದ್ದನು. ಕೌರವೇಶ್ವರನು ಅವನ ಸ್ವಾಗತಕ್ಕಾಗಿ ಬಹಳ ಸಾಮಗ್ರಿಗಳನ್ನು ಒಟ್ಟು ಮಾಡಿಟ್ಟಿದ್ದನು. ಅವನ ಭೋಜನಕೆ ರುಚಿಕಟ್ಟಾಗಿ ಮಾಡುವುದಕ್ಕಾಗಿ ಇಡೀ ರಾಜ್ಯದಲ್ಲಿ ಶ್ರೇಷ್ಠರಾದ ಅಡಿಗೆಯವರನ್ನು ಕರೆಸಿದ್ದನು. ಮತ್ತು ರಾಜನು ರಾತ್ರಿಯನ್ನೂ ಸಹ ಹಗಲನ್ನೆ ಮಾಡಿಬಿಟ್ಟಿದ್ದನು. ಸುಯೋಧನನು ತನ್ನ ಮನೆಗೆ ಬಂದ ಶ್ರೀರಾಜನಿಗೆ ಊಟ ಮಾಡುವುದಕ್ಕೆ ಪ್ರಾರ್ಥನೆ ಮಾಡಿದನು. ಅಲ್ಲಿಯ ಊಟದ

ಉಪ ಸಾಮಗ್ರಿಗಳೆಲ್ಲವು ರತ್ನಖಚಿತವಾಗಿದ್ದವು. ಹಾಗಿದ್ದರೂ ಅವುಗಳಲ್ಲಿ ಶ್ರೀಕೃಷ್ಣನಿಗೆ ಪ್ರೇಮವಿದ್ದಿಲ್ಲ. ಯಾಕಂದರೆ **ಮಾಧವನಿಗೆ ಯಾವಾಗಲೂ ಪ್ರೇಮದ ಹಸಿವೆ.** ಆದರಿಂದಲೆ ಈತನ ಮನಸ್ಸು ಬೇರೆ ಕಡೆಗೆ ಸೆಳೆಯುತ್ತಿತ್ತು. ಆವನಿಗಾದರು ವಿದುರನ ಮನೆಯನ್ನು ಸಫಲ ಮಾಡಬೇಕೆಂದು ಇತ್ತು. ವಿದುರನ ಹೆಂಡತಿಯು ಶ್ರೀ ಕೃಷ್ಣನು ತನ್ನ ಮನೆಗೆ ಬರಲು ಹೊರಟಿದ್ದಾನೆಂಬ ವಾರ್ತೆಯನ್ನು ಕೇಳಿ ಅವಳ ಜೀವ, ಅವಳ ಮನಸ್ಸು, ಅವಳ ಹೃದಯವು ಒಂದೇ ಸವನೆ ಶ್ರೀ ಕೃಷ್ಣನ ಜಪ ಮಾಡುತ್ತಿತ್ತು. ಅವಳ ಪೂರ್ಣಶಕ್ತಿಯು ಒಂದೇ ಇಚ್ಛೆಯಲ್ಲಿ ತಲ್ಲೀನವಾಗಿ ಹೋಗಿತ್ತು. "ನಾನು ಆ ವೀರ ಪುರುಷನ ದರ್ಶನ ಮಾಡುವೆನು. ಅಭಾಗಿನಿಯಾದ ನನ್ನ ಭಾಗದಲ್ಲಿ ಕಲ್ಯಾಣವಿಲ್ಲವೆ? ಆದರೆ........! ಆತನು ತನ್ನ ಸೋದರತ್ತೆ ಯಾದ ಕುಂತಿಯ ಭೆಟ್ಟಿಯಾಗಲು ಅವಶ್ಯವಾಗಿ ಹೋಗುವನು. ಆವಾಗ ಆ ಸೇವಕಳ ದರ್ಶನ ಮಾಡುವಾಗ ನಾನು ಮರೆಯಿಂದಲೆ ದರ್ಶನ ಮಾಡುವೆನು. ಈ ಹೊತ್ತು ನನ್ನ ಜನ್ಮಜನ್ಮಾಂತರದ ಪುಣ್ಯವು ಉದಯವಾಗಿದೆ!" ನೆನೆಸುತಿದ್ದಳು, ಈ ಬಗೆಯಾಗಿ

ಅವಳು ಶ್ರೀ ಕೃಷ್ಣನ ಸ್ವರೂಪು ಮತ್ತು ಗುಣಗಳ ವಿಷಯದಲ್ಲಿ ತನ್ನ ಗಂಡನ ಹತ್ತರ ಕೇಳಿಕೊಂಡಿದ್ದಳು. "ಶ್ರೀಮಾನ್ ವಾಸುದೇವನು ಹೇಗಿರುವನು ? ಆತನು ಸುಂದರವಾಗಿರುವನೊ ? ಅವನ ಮಯೂರ ಮುಕುಟವು ಎಷ್ಟು ಮನೋಹರ ವಾಗಿರಬಹುದು? ಹೀಗೆಲ್ಲವಾಗಿ, ಅವನ ಕೊರಳಲ್ಲಿರುವ ತುಳಸೀ ಮಾಲೆ, ಅವನ ಕೆಯ್ಯೂರ, ಬಳೆ ಮೊದಲಾದ ಆಭರಣ ಇವೆಲ್ಲವೂ ಅವಳ ಮನಸ್ಸಿನಲ್ಲಿಯೇ! ಅವಳ ಮನೋಮೂರ್ತಿಯು ಈ ಬಗೆಯಿಂದ ಒಂದೇ ಸವನೆ ಧ್ಯಾನಿಸುತ್ತಿತ್ತು.

"ಶ್ರೀ ಕೃಷ್ಣನು ನನ್ನ ಹತ್ತಿರ ಚಿಕ್ಕವ್ವ" ಎಂದು ಕರೆಯುವನು. ಶ್ರೀ ಕೃಷ್ಣನನ್ನು ದ್ವಾರಕೆಯ ಅಧಿಕಾರಿ ಕೌರವೇಶ್ವರನು ಪುರಸ್ಕಾರದಿಂದ ಸ್ವಾಗತಿಸುವನು. ರಾಜಭವನದ ದಿವ್ಯವಾದ ವೃಷ್ಟಾನ್ನ ಬಿಟ್ಟು ಅವನು

ನನ್ನಲ್ಲಿ ಯಾಕೆ ಭೋಜನ ಮಾಡುವನು ? ಇಲ್ಲ ! ನನಗೆ ಮಾತಾಡಲಿಕ್ಕಾದರೂ ಎಲ್ಲಿ ಬರುತ್ತದೆ? ರಾಜರಾಜೇಶ್ವರನಾದಂಥವನ ಹತ್ತರ ಮಾತಾಡಲೂ ಸಹ ನಾನು ಯೋಗ್ಯನಲ್ಲ. ನಾನು ವಿದ್ಯಾವಂತಳಲ್ಲ ಅಂದಾಗ ಹೇಗೆ ಆ ದಿವ್ಯಮೂರ್ತಿಯ ದರ್ಶನ ಲಭ್ಯ? ಅವನ ಸಮ್ಮುಖದಲ್ಲಿ ನಿಂತುಕೊಳ್ಳಲು ಸಹ ಯೋಗ್ಯನಲ್ಲ. ಅವನ ಸಂಗಡ ಯಾರು ಯಾರು ಬರುವರೆನ್ನುವದು ಗೊತ್ತಿಲ್ಲ. ಭೀಷ್ಮ, ದ್ರೋಣ, ಕೃಪಾಚಾರ್ಯ ಇವರೆಲ್ಲರೂ ಕೇವಲ ಅವನೊಬ್ಬನನ್ನು ಕಳುಹಿಸುವದಿಲ್ಲ. ಹಾಗಿರುವ ಅವನ ಸಮೀಪ ಹೋಗಲು ಯಾರು ಬಿಡುವರು. ಹೇಗೇ ಆಗಲಿ ನನ್ನ ಅತ್ತೆಯ ಮನೆಗೆ ಬಂದಾಗ ನಾನು ಅಡಗಿ ಕೊಂಡಾದರು ಆವನ ಪ್ರತಿಬಿಂಬದಿಂದ ನನ್ನ ನೇತ್ರಗಳನ್ನು ಸಫಲ ಮಾಡಿಕೊಳ್ಳುವೆನು!" ಈ ಪ್ರಕಾರ ಅನೇಕ ಸಂಕಲ್ಪ–ವಿಕಲ್ಪಗಳಿಂದ ಆಕೆಯ ಮನಸ್ಸು ಕಡೆಯುತ್ತಿತ್ತು. ಇಡೀ ರಾತ್ರಿಯನ್ನು ಇದೇ ವಿಚಾರದಲ್ಲಿ ಕಳೆದಳು. ಪ್ರಭಾತದಲ್ಲಿ ಪತಿಯ ಆಜ್ಞೆಯಂತೆ ಮನೆಯನ್ನು ಸ್ವಚ್ಛ ಮಾಡಿ, ಸ್ನಾನ ಮಾಡಲು ಹೋಗಿದ್ದಳು.

ಅಷ್ಟರಲ್ಲಿಯೆ ಚಿಕ್ಕವ್ವ ಓ ಚಿಕ್ಕವ್ವ! ಎಂದು ಕರೆಯುತ್ತ ಶ್ರೀ ಕೃಷ್ಣನು ರಥವನ್ನು ಇಳಿದು ಬರುತಲಿದ್ದನು. ಅವನ ಸಂಗಡಿಗರು ಇರಲಿಲ್ಲ. ಭುವನೇಶ್ವರನು ವಿದುರನ ಭಾಗಿಲದಲ್ಲಿ ನಿಂತುಕೊಂಡು ಕಟ ಕಟ ಎಂಬ ಶಬ್ದ ಮಾಡುತ್ತಿದ್ದನು. ಆ ಶಬ್ದವು ಸ್ನಾನಮಾಡುತ್ತಿದ್ದವಳ ಕಿವಿಯಲ್ಲಿ ಹೋಗಿ ಅಪ್ಪಳಿಸಿತು. ಶ್ರೀ ಕೃಷ್ಣನು ಒಂದೇಸವನೆ ದ್ವಾರದ ಮೇಲೆನಿಂತುಕೊಂಡು ಕರೆಯುತ್ತಿದ್ದನು. ಯೋಗಿ ಮತ್ತು ಮುನೀಶ್ವರರು ಸಾವಿರಾರು ಕೂಡಿಕೊಂಡು ಕರೆದ ಹಾಗೆ ಇಂಪಾಗಿ ಸ್ವರವು ಕೇಳಬರುತ್ತಿತ್ತು. ವಿದುರನ ಹೆಂಡತಿಗೆ ಮೈಮೇಲಿನ ಒದ್ದೆಯಾದ ವಸ್ತ್ರವು ಬಿದ್ದ ನೆನಪು ಇಲ್ಲದೆ ಓಡುತ್ತ ದ್ವಾರದ ವರೆಗೆ ಹೋಗಿ ಜೇಗನೆ ಬಾಗಿಲವನ್ನು ತೆರೆದಳು. ಆ ಕ್ಷಣದಲ್ಲಿ ಶ್ರೀ ಕೃಷ್ಣನು ತಾನು ಹೊದ್ದುಕೊಳ್ಳುವ ಪೀತಾಂಬರವನ್ನು ತೆಗೆದು

ಇಡೀ ಶರೀರವು ಮುಚ್ಚುವಂತೆ ಒಗೆದನು. ಅವಳು ಒಂದೇ ಸವನೆ ಶ್ರೀ ಕೃಷ್ಣನನ್ನು ನೋಡುತ್ತನಿಂತಳು.

ಶ್ರೀ ಕೃಷ್ಣನು ತಾನೇ ಒಳಗೆ ಹೋಗಿ ಒಂದು ಹಳೆಯ ಮಣೆಯನ್ನು ಹಾಕಿಕೊಂಡು ಕುಳಿತನು. ತಾಯಿಯ (ಆಕಳ) ಹಿಂದೆ ಕರುವು ಆವ ಪ್ರಕಾರ ಹೋಗುತ್ತದೆಯೊ, ಅದೇ ಪ್ರಕಾರ ಆವಳು ಹಿಂದಿನಿಂದ ಹೋದಳು. "ಈಗ ನನಗೆ ಬಹಳ ಹಸಿವೆಯಾಗಿದೆ. ಏನಾದರೂ ತಿನ್ನಲಿಕ್ಕೆ ಕೊಡು." ಎಂದು ಶ್ರೀ ಕೃಷ್ಣನು ನುಡಿದನು. ವಿದುರನ ಹೆಂಡತಿಯು ಕೋಣೆಯಿಂದ ಒಂದು ಬಟ್ಟಲ ಬಾಳೀಹಣ್ಣು ತಂದಳು.

'ಬಹಳ ರುಚಿಕಟ್ಟಾದ ಹಣ್ಣುಗಳು ಇವು ತಾಯಿ ಯಶೋಧೆಯು ಮಾಡಿದಂಥ ಬೆಣ್ಣೆಯನ್ನು ತಿಂದ ನಂತರ ರುಚಿಕಟ್ಟಾದ ಪದಾರ್ಥವು ಈ ಹೊತ್ತೇ ಸಿಕ್ಕಿತು.' ಅಂಪವನೆ ತಡಮಾಡದೆ ಬಹಳ ಸಂತೋಷದಿಂದ ತಲೆದೂಗುತ್ತ ಸ್ವೀಕಾರಮಾಡಿದನು. ವಿದುರನ ಹೆಂಡತಿಯು ಶ್ರೀ ಕೃಷ್ಣನ ಭಕ್ತಳಾಗಿದ್ದಳು. ಆವಳು ಬಾಳೀಹಣ್ಣಿನ ಸಿಪ್ಪೆಯನ್ನು ಸುಲಿದು ಒಳಗಿನ ತಿರುಳನ್ನು ಕೊಡುತ್ತಿದ್ದಳು. ಅವಳು ಆನಂದದ ಸರೋವರದಲ್ಲಿ ಆಲೆದಾಡುತ್ತಿದ್ದಳು. ಆಕೆಯು ಏನು ಮಾಡುತ್ತಾಳೆಂದು ಶ್ರೀ ಕೃಷ್ಣನಿಗೆ ಗೊತ್ತಿಲ್ಲವಾಗಿತ್ತು. ಅವನು ಏನು ತಿನ್ನುತ್ತಾನೆಂಬುದು ಆವಳಿಗೆ ಗೊತ್ತಿಲ್ಲವಾಗಿತ್ತು. ಪ್ರೇಮದ ಪ್ರಸಾದವನ್ನು ಸ್ವೀಕಾರ ಮಾಡುತ್ತಿದ್ದಳು.

"ಎ ಹುಚ್ಚಿ, ಏನು ಮಾಡುತ್ತೀಯೆ ? ಬಾಳೀಹಣ್ಣು ತನ್ನಿಸುತ್ತಿದ್ದೀಯಾ ? ಬರೀ ಮೈಯಿಂದ ಕುಳಿತುಕೊಂಡಿದ್ದೀಯಾ ? ಛಿ. ಹೋಗು ವಸ್ತ್ರವನ್ನು ಧರಿಸಿಕೊ. ಕೊಡು ನಾನು ಬಾಳೆಹಣ್ಣನ್ನು ತಿನ್ನಿಸುತ್ತೇನೆ." ಎಂದು ವಿದುರನು ಬರಬರುತ್ತಲೆ ಗದ್ದರಿಸಿದನು. ಆಗ ಆವಳು ಬೆಚ್ಚಿ ಎಚ್ಚರವಾದಳು ! ಬಾಳೀಹಣ್ಣನ್ನು ಪತಿಯ ಕೈಯಲ್ಲಿ ಕೊಟ್ಟು ಹೋದಳು.

"ಸಾಕು ಚಿಕ್ಕಪ್ಪ! ಹಣ್ಣು ಸಿಹಿ ಆದೆ. ಆದರೆ ಇದರಲ್ಲಿ ಅಂಥ ರುಚಿಯಿಲ್ಲ." ಅಂದ ದೇವನು ಒಂದೇ ಹಣ್ಣು ತೆಗೆದುಕೊಂಡು ಕೈ ತಡೆದು ಬಿಟ್ಟನು.

ವಿದುರನು ಸ್ವಲ್ಪ ಆಲೋಚಿಸಿ, "ನನ್ನಲ್ಲಿ ಅಂಥ ಪ್ರೇಮವೆಲ್ಲಿದೆ?" ಎಂದು ಅಂದು ಕೊಂಡನು.

ವೇದವತಿ

ಕುಶಧ್ವಜ ಮಹಾರಾಜನು ವಿಶ್ವೋದ್ಭವ ಸ್ಥಿತಿ ಸಂಹಾರ ಕಾರಣೆಯಾದ ಮಹಾಲಕ್ಷ್ಮಿಯನ್ನು ಕುರಿತು ಕಠಿಣ ತಪಸ್ಸು ಮಾಡಿದನು. ಅವಳು ತಪಸ್ಸಿಗೆ ಮೆಚ್ಚಿ ವರವನ್ನು ಬೇಡೆಂದು ಅಪ್ಪಣೆಯಾದ ನಂತರ ರಾಜನು ಅರ್ಥ ಗರ್ಭಿತ ವಾಕ್ಯದಿಂದ ಅವಳನ್ನೆ (ಲಕ್ಷ್ಮಿಯನ್ನೆ) ಮಗಳ ರೂಪದಿಂದ ಬೇಡಿದನು.

ಹಾಗೆಯೇ ಆಗಲಿ ನನ್ನ ಯೋಗ್ಯತೆಗೆ ಸರಿಗಟ್ಟುವ ಪುತ್ರಿಯನ್ನು ನೀನು ಬೇಡಿದ್ದರಿಂದ ನಾನೇ ಒಂದು ಅಂಶರೂಪದಿಂದ ನಿನ್ನ ಮಗಳಾಗುವೆನು. ಈ ಪ್ರಕಾರ ಹೇಳಿ ಮಿಂಚಿನಂತೆ ಹೊಳೆದು ಅಂತರ್ಧಾನಳಾದಳು. ರಾಜನು ಹಿಂದಿರುಗಿ ತನ್ನ ಭವನಕ್ಕೆ ಬಂದನು. ಮಹಾರಾಣಿಯು ಕೆಲವೇ ದಿವಸಗಳಲ್ಲಿ ಗರ್ಭವತಿಯಾದಳು.

"ಓಂ ಗಣಾನಾಂತ್ವಾ" ಎಂಬ ಮಂತ್ರದಿಂದ ಒಮ್ಮಿಂದೊಮ್ಮೆ ಬಾಣಂತಿ ಮನೆಯಲ್ಲಿ ವಿಪ್ರರು ಸ್ವರಯುಕ್ತವಾದ ವೇದಮಂತ್ರವನ್ನು ಹೇಳಲು ಪ್ರಾರಂಭಿಸಿದರು. ಈ ಬ್ರಾಹ್ಮಣರ ಸಂಗಡವೇ ಆ ಜನ್ಮವೆತ್ತಿದ ಹುಡುಗಿಯೂ ಪ್ರತಿಧ್ವನಿಯಾಗುವಂತೆ ಹೇಳಹತ್ತಿದಳು. ರಾಣಿಯಾದ ಮಾಲಾವತಿಗೆ, ಇದನ್ನು ನೋಡಿ ಬಹಳ ಸಂತೋಷವಾಯಿತು. ಹುಡುಗಿಯ ಹೆಸರನ್ನು ಈ ನಿಮಿತ್ತದಿಂದ ವೇದವತಿ ಎಂದು ಇಡಲ್ಪಟ್ಟಿತು.

ಅವಳು ಸಾಮಾನ್ಯಹುಡುಗಿಯಲ್ಲವಾಗಿತ್ತು. ಅವಳು ಒಂದೇ ಕ್ಷಣದಲ್ಲಿಯೇ ೫—೬ ವರ್ಷದ ಮಕ್ಕಳಂತೆ ಆಗಿಬಿಟ್ಟಳು. ಅವಳು ಬಾಣಂತಿ ಮನೆಯಿಂದ ಹೊರಬಿದ್ದು ಸ್ನಾನಮಾಡಿದಳು. ವಸ್ತ್ರವನ್ನು ಧರಿಸಿ ಕೊಂಡಳು. ತಪಸ್ಸಿಗಾಗಿ ಕಾಡಿಗೆ ಹೋಗುವುದನ್ನು ನಿಶ್ಚೈಯಿಸಿ ತಾಯಿ—ತಂದೆಗಳಿಂದ ಅಪ್ಪಣೆ ಬೇಡಿದಳು. ಅವಳು ತಪಸ್ಸು ಮಾಡಿ ಶ್ರೀಹರಿಯನ್ನು ಯಾವಾಗ ಮೆಚ್ಚಿಸುವೆನೆಂದು ಚಿಂತೆ ಮಾಡುತ್ತಿದ್ದಳು. ಆಕೆಯ ದೃಢ ನಿಶ್ಚಯವನ್ನು ತಡೆಯಲು ಸಮರ್ಥರಾರಿದ್ದಾರೆ !?, ಮನಸ್ಸನ್ನು ಗಟ್ಟಿಮಾಡಿ ಮಹಾರಾಜ ಮತ್ತು ಮಹಾರಾಣಿ ಇಬ್ಬರೂ ಚಿಂತೆ ಮಾಡುತ್ತಿರುವ ಹುಡುಗಿಯನ್ನು ಹೋಗಲು ಅಪ್ಪಣೆ ಮಾಡಿದರು.

ವೇದವತಿಯು ಗಂಧಮಾದನ ಪರ್ವತದ ಮೇಲೆ ಹೋದಳು. ಅಲ್ಲಿ ಕಠಿಣವಾದ ತಪಸ್ಸು ಮಾಡಲು ಪ್ರಾರಂಭಿಸಿದಳು.

ಒಂದು ದಿವಸ ದಾನವರಾಜನಾದ ರಾವಣನು ಪುಷ್ಪಕ ವಿಮಾನವನ್ನೇರಿ ಆಕಾಶ ಮಾರ್ಗದಿಂದ ತಿರುಗಾಡುತ್ತ ಗಂಧಮಾದನ ಪರ್ವತದ ಮೇಲಿಂದ ಹಾದು ಹೋಗುತ್ತಿದ್ದ ಅಲ್ಲಿ ತಪೋಮಗ್ನಳಾದ ಆ ಸೌಂದರ್ಯರಾಶಿಯನ್ನು ನೋಡಿದನು. ಪುಷ್ಪಕದಿಂದ ಇಳಿದು ಬಂದು ಅವಳ ಪರಿಚಯ ಮಾಡುವುದಕ್ಕಾಗಿ ಪ್ರಾರ್ಥನೆ ಮಾಡಿದನು. ವೇದವತಿಯು ಅತಿಥಿಸತ್ಕಾರಕ್ರಮವಿಡಿದು ಆಸನವನ್ನಿಟ್ಟಳು. ಕಾಲು ತೊಳೆಯಲು ನೀರು ಕೊಟ್ಟಳು. ತನ್ನ ಗುರುತಿನ ಸಲುವಾಗಿ ರುಚಿಕಟ್ಟಾದ ಗಡ್ಡೆ—ಗೆಣಸು—ಹಣ್ಣು—ಹಂಪಲ ಮೊದಲಾದವುಗಳನ್ನು ಅರ್ಪಿಸಿದಳು. ರಾವಣನು ಕಾಮದಲ್ಲಿ ಕಾಲಿಟ್ಟಿದ್ದನು. ಆದ್ದರಿಂದ ಆವನು ಅತಿಥಿ ಸತ್ಕಾರದ ಸಾಮಗ್ರಿಗಳನ್ನು ಸ್ವೀಕಾರ ಮಾಡಲಿಲ್ಲ. ಅವನು ವೇದವತಿಯನ್ನು ಸ್ಪರ್ಶಮಾಡಿ ನಡೆದನು.

“ ಒಳ್ಳೇದು ಹೋಗು ! ನನ್ನ ಕಾರಣದಿಂದ ನಿನ್ನ ಪರಿವಾರವೆಲ್ಲವೂ ನಾಶವಾಗುವದು. ” ಈ ಪ್ರಕಾರ ವೇದವತಿಯು ಅವನಿಗೆ ಶಾಪ ಕೊಟ್ಟಳು.

ಅಥವಾ ರಾಕ್ಷಸನ ಸ್ಪರ್ಶದಿಂದ ಶರೀರವು ಅಪವಿತ್ರವಾಯಿತೆಂದು ತಿಳಿದು, ಅವಳು ನಾಭಿಚಕ್ರದಲ್ಲಿ ಧ್ಯಾನಮಾಡಿ ಅಗ್ನಿ ಹುಟ್ಟಿಸಿದಳು. ಯೋಗಾಗ್ನಿಯು ಅವಳ ಶರೀರವನ್ನು ಭಸ್ಮಮಾಡಿತು. ಇದೇ ವೇದವತಿಯು, ತ್ರೇತಾ ಯುಗದಲ್ಲಿ ಮಿಥಿಲಾಪಟ್ಟಣದ ಅರಸನಾದ ಜನಕನಲ್ಲಿ ಹುಟ್ಟಿ, ಸೀತೆಯೆಂಬ ಹೆಸರಿನಿಂದ ಪ್ರಸಿದ್ಧಳಾದಳು. ಅಡವಿಯಲ್ಲಿ ರಾಮಚಂದ್ರನು ಇವಳನ್ನು ಅಗ್ನಿಲ್ಲಿಯರಿಸಿರಲು ಛಾಯಾಸೀತೆಯನ್ನು ರಾವಣನು ಅಪಹರಣ ಮಾಡಿದ್ದರಿಂದ ಪರಿವಾರದ ಸಂಗಡ ಅವನೂ ಸತ್ತು ಹೋದನು. ಲಂಕೆಯ ಯುದ್ಧದ ನಂತರ ಛಾಯಾಸೀತೆಯು ಅಗ್ನಿಯಲ್ಲಿ ಪ್ರವೇಶ ಮಾಡಿದ್ದಾದರೂ ಪುನಃ ಪ್ರಕಟವಾಗಿ ಅಪ್ಪಣೆ ಬೇಡಿದಳು. ಶ್ರೀರಾಮ ಮತ್ತು ಜನಕನ ಆಜ್ಞೆಗನುಸಾರವಾಗಿ ಪುಷ್ಕರದಲ್ಲಿ ಹೋಗಿ ಮೂರು ಲಕ್ಷ ವರುಷದ ವರೆಗೆ ಅವಳು ಆಳವಾದ ತಪಸ್ಸು ಮಾಡಿದಳು. ದ್ವಾಪರಾ ಯುಗದ ಅಂತ್ಯದಲ್ಲಿ ದ್ರುಪದರಾಜನ ಯಜ್ಞಕುಂಡದಿಂ ಪ್ರಕಟವಾಗಿ ಅವಳೇ ಪಾಂಡವರ ಹೆಂಡತಿ ದ್ರೌಪದಿ ಯಾದಳು ಎಂದು ಅಲ್ಲಿಯ ಪುರಾಣದಲ್ಲಿದೆ.

ಜವಾಹರ ಬಾಯಿ

ಹದಿನಾರು ಶತಮಾನಗಳ ಹಿಂದಿನಮಾತು. ಪಠಾಣರು ಮತ್ತು ಮುಸಲ್ಮಾನರುಕೂಡಿ ಇಡೀ ದೇಶವನ್ನು ಅಧೀನ ಮಾಡಿಕೊಳ್ಳಬೇಕೆಂತ ಪ್ರಯತ್ನಿಸಿದರು. ಆದರೆ ರಾಜಪೂತಾನದಲ್ಲಿ ವೀರತ್ವ ಮತ್ತು ಉತ್ಸಾಹವು ತುಂಬಿತುಳುಕುತಿರುವ ಸಂಗ್ರಾಮಸಿಂಹನಿದ್ದನು. ಇಂಥ ಮಹಾಪುರುಷನು ಅವರನ್ನು ದೇಶದಿಂದ ಹೊರಗೋಡಿಸಿದನು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಮತ್ತು ಅಟಕದಿಂದ ಕಟಕದವರೆಗೆ ಹಿಂದೂರಾಜ್ಯವನ್ನು ಸ್ಥಾಪಿಸಿದನು.

ಮೇವಾಡ ಕುಲಸೂರ್ಯನಾದ ಸಂಗ್ರಾಮಸಿಂಹನ ಮರಣದ ನಂತರ ಚಿತ್ತೌಡದ ಸಿಂಹಾಸನದಮೇಲೆ ಅವನ ಮಗನಾದ ವಿಕ್ರಮಾದಿತ್ಯನು ಕುಳಿತನು.

ಇವನು ವಿಲಾಸಪ್ರಿಯನೂ, ಹೇಡಿಯೂ ಆಗಿದ್ದನು. ಗುಜರಾಥ ಮತ್ತು ಮಾಳವದ ಪಠಾಣರು ಆವನ ಶಕ್ತಿಹೀನತೆಯನ್ನು ನೋಡಿ ಚಿತ್ತೌಡ ಕೋಟೆಯಮೇಲೆ ಆಕ್ರಮಿಸಿದರು. ರಾಜನು ಸೋತು ಓಡಿಹೋದನು. ಮುಸಲ್ಮಾನರು ಪಟ್ಟಣದಲ್ಲಿ ಹೊಕ್ಕರು.

ರಾಜಪೂತಾನದ ಸ್ತ್ರೀಯರಲ್ಲಿ "ಜೌಹರ"ಮಾಡುವ ಪದ್ಧತಿಯಿತ್ತು. ವಿಪತ್ತಿನಲ್ಲಿ ಅಲ್ಲಿಯ ಸ್ತ್ರೀಯರು ಅಗ್ನಿಯಲ್ಲಿ ಆತ್ಮಹತ್ಯಮಾಡಿಕೊಳ್ಳುವ ದಕ್ಕೆ "ಜೌಹರ" ಎಂದು ಹೇಳುತ್ತಾರೆ. ವಿಕ್ರಮಾದಿತ್ಯನ ರಾಣಿಯಾದ ಜವಾಹರಬಾಯಿಯು ಅಲ್ಲಿ ಸ್ತ್ರೀಯರನ್ನುಕರೆದು ಹೇಳಿದಳು. "ಜೌಹರ ಮಾಡುವದರಿಂದ ನಾರೀಧರ್ಮದ ಪಾಲನೆಯು ಅವಶ್ಯವಾಗಿ ಆಗುವದು. ಆದರೆ ದೇಶದ ರಕ್ಷಣೆಯಾಗುವದಿಲ್ಲ. ಸಾಯುವದಾದರೂನಿಜ. ಆದರೂ ವಿರುದ್ಧಿಗಳನ್ನು ಹೊಡೆದು ಕೊಲ್ಲುವುದು ಮತ್ತೂ ಯೋಗ್ಯವಾದದ್ದು. ಕೈಯಲ್ಲಿ ಖಡ್ಗಧರಿಸಿ ಶತೃಗಳಿಗೆ ಅವರವರ ತೇಜಸ್ಸು ಮತ್ತು ವೀರತೆಯನ್ನು ತೋರಿಸಲೇಬೇಕು." ಎಂದಳು. ಕ್ಷತ್ರಿಣಿಯರು ವೀರತ್ವಭರಿತರಾಗಿ ಸಿಂಹನಾದ ಮಾಡಿದರು. ಗಗನವನ್ನು ಭೇದಿಸುವಂತಹ ಸಿಂಹನಾದವು ಮುಸಲ್ಮಾನರ ಎದೆಯಲ್ಲಿ ನಡುಗು ಹುಟ್ಟಿಸಿತು.

ಲೆಕ್ಕವಿಲ್ಲದಷ್ಟು ವೀರಾಂಗನೆಯರು ಅಸ್ತ್ರ–ಶಸ್ತ್ರಗಳಿಂದ ಸುಸಜ್ಜಿತರಾಗಿ ಕುದುರೆಗಳ ಮೇಲೇರಿ ರಣರಂಗಕ್ಕೆ ಹೊರಟರು. ಎಲ್ಲರಿಗಿಂತ ಮುಂದೆ ಜವಾಹರಬಾಯಿಯವರಿದ್ದರು. ಈ ಸ್ತ್ರೀಯರು ಪಠಾಣರ ಸಂಗಡ ಒಂದೇ ಸವನೆ ಯುದ್ಧಮಾಡಿದರು. ರಕ್ತದ ನದಿಗಳು ಹರಿದವು. ಕೊಲೆಗಾರರ ಮತ್ತು ವಿಧರ್ಮಿಯರ ಧರ್ಮವು ಮುರಿದವು. "ಹರಹರ ಮಹಾದೇವ ಮತ್ತು ಈಶ್ವರ ಮಹಾರಾಜಕೀ ಜೈ" ಎನ್ನುತ್ತ ಅಸಂಖ್ಯ ವೀರಸ್ತ್ರೀಯರು ಸ್ವರ್ಗಯಾತ್ರೆಗೆ ನಡೆದರು. ವೀರಾಂಗನೆಯಾದ ಜವಾಹರಬಾಯಿಯೂ ಸ್ವರ್ಗದ ದಾರಿಯನ್ನು ಹಿಡಿದಳು. ಪಠಾಣರು ವಿಜಯ ಪದವಿಗೇರಿದರು.

ಈ ಪ್ರಕಾರ ಮೇವಾಡದ ಜವಾಹರಬಾಯಿಯ ನಾಮಾಂಕಿತವು ಹಿಂದುಸ್ತಾನದ ಇತಿಹಾಸದಲ್ಲಿ ಸ್ಥಿರವಾಯಿತು.

ದೈತ್ಯೇಶ್ವರಿ ಕಯಾಧು

ತಾಯಿಯೇ ಪುತ್ರನ ಗುರುವು. ಗರ್ಭದಲ್ಲಿರುವಾಗ ತಾಯಿಯು ಸತ್ಸಹವಾಸ ಮೊದಲಾದ ವಿಚಾರಗಳಕಡೆಗೆ ಕಣ್ದೆರೆದರೆ ಅದೇ ಬಾಲಕನ ಸಂಪೂರ್ಣ ಜೀವನನಿರ್ಮಾಣದ ಆಧಾರವಾಗುತ್ತದೆ. ಹೇಗಂದರೆ:— ತಾಯಿಯ ಉದರದಲ್ಲಿ ಶಿಶುವು ಬಂದಮೇಲೆ ಸಾತ್ವಿಕಾಹಾರ ಧಾರ್ಮಿಕ ಜೀವನಚರಿತ್ರೆ ಭಗವದ್ಗುಣಾನುವಾದ ಮೊದಲಾದವುಗಳ ಶ್ರವಣವಾದರೆ ಆ ಬಾಲಕನು ನಿಜವಾಗಿ ಧಾರ್ಮಿಕ ಮತ್ತು ಪರಮಾತ್ಮನ ಭಕ್ತನಾಗುವನು. ಕುಲ-ಕುಟುಂಬವನ್ನು ಪಾವನ ಮಾಡುವನು. ಇದಕ್ಕೆ ಉದಾಹರಣೆಯಂದರೆ:-

"ದಿತಿಯು" ಶೂರರಾದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರಿಬ್ಬರನ್ನು ಹಡೆದಳು. ಇಬ್ಬರೂ ತ್ರಿಭುವನ ಅಜೇಯರಾಗಿದ್ದರು. ಸುರರು ಅವರ ನಾಮಾಂಕಿತವನ್ನು ಕೇಳಿದೊಡನೆಯೆ ನಡುಗುತ್ತಿದ್ದರು. ಅಣ್ಣ–ತಮ್ಮಂದಿರಿಬ್ಬರು ಬಹಳ ಸ್ನೇಹದಲ್ಲಿದ್ದರು. ನಾರಾಯಣನು "**ಜಲೌಘಮಗ್ನಾ ಸಚರಾಚರಾಧರಾದ್**" ಹಾಗಿರುವ ಜೀವಿಗಳ ಉದ್ಧಾರಮಾಡುವಾಗ ಸೃಷ್ಟಿಗೆ ಕಂಟಕಿಯಾದ ವರಾಹರೂಪುಧರಿಸಿದ ಹಿರಣ್ಯಾಕ್ಷನನ್ನು ಕೊಂದು ಹಾಕಿದನು. ಆ ಕಾಲಕ್ಕೆ ಹಿರಣ್ಯಕಶಿಪುವಿಗೆ ಕ್ರೋಧವು ನಾರಾಯಣನ ಮೇಲೆ ಉಕ್ಕೇರಿ ಬಂತು. ತಾನು ಅಮರನಾಗುವುದಕ್ಕೆ ತಪಸ್ಸುಮಾಡಲು ನಿಶ್ಚಯಿಸಿದನು. ತಾಯಿಯಾದ ದಿತಿ, ಮತ್ತು ಅಣ್ಣನಹೆಂಡತಿ ಅಣ್ಣನ ಮಕ್ಕಳನ್ನು ಸಮಾಧಾನ ಪಡಿಸಿ ರಾಜ್ಯಕಾರಭಾರವನ್ನು ಸಮುಚಿ, ಶಂಬರ ಪುಲೋಮಮೊದಲಾದ ಮಂತ್ರಿಗಳಮೇಲೆ ಬಿಟ್ಟು, ಮಂದರಾಚಲಕ್ಕೆಹೋಗಿ ಕಠೋರತಪಸ್ಸನ್ನು ಪ್ರಾರಂಭಿಸಿದನು.

ಇಂದ್ರನುನೋಡಿ, "ದೇವತೆಗಳು ದೈತ್ಯಪುರಿಯನ್ನು ಲೂಟುಮಾಡಿ ಸುಟ್ಟುಬಿಟ್ಟಿದ್ದಾರೆ. ಹಿರಣ್ಯಕಶಿಪುವಿನ ಪರಾಕ್ರಮಕ್ಕೆ ಇಂದ್ರನಾದ ನಾನೂ ಸಹ ಅತ್ಯಂತ ಭಯಪಡುತ್ತಿರುವೆನು. ದೈತ್ಯರಾಜನು ಈಗ ರಾಜನಲ್ಲ. ಇಷ್ಟಾದರೂ ದೇವತೆಗಳಿಗೆ ಘೋರ ವಿಪತ್ತು ಬರುತ್ತವೆ. ಹಿರಣ್ಯಕಶಿಪುವಿನ ಹೆಂಡತಿಯಾದ ದೈತ್ಯೇಶ್ವರೀ ಕಯಾಧು ಈ ವೇಳೆ ಗರ್ಭವತಿಯಿರುವಳು. ಅವಳ ಎಲ್ಲ ನಡೆ–ನುಡಿಗಳು ದೈತ್ಯವರ್ತನೆಯಾಗಿದೆ" ಹೀಗಂದುಕೊಂಡ ಇಂದ್ರನು ಅಲ್ಲಿಹೋಗಿ ಅವಳನ್ನು ಬಲಾತ್ಕರಿಸಿ ರಥದಲ್ಲಿ ಕೂಡ್ರಿಸಿಕೊಂಡು ಅಮರಾವತಿಗೆ ಕರೆದುಕೊಂಡು ಹೋದನು. ಅವಳು ಅತ್ಯಂತ ದುಃಖ ಪಡುತ್ತಿದ್ದಳು.

"ಮಹೇಂದ್ರ! ನೀನು ದೇವರಾಜನಿರುವಿ. ಪರಸ್ತ್ರೀಯರನ್ನು ಮುಟ್ಟುವದು ನಿನಗೆ ಶೋಭೆಯಾಗುವದಿಲ್ಲ. ಈ ಪತಿವ್ರತೆಯನ್ನು ಬೇಗನೆ ಬಿಟ್ಟುಬಿಡು." ಹೀಗೆ ಬಗೆಬಗೆಯಾಗಿ ಇಂದ್ರನನ್ನು ಪ್ರಾರ್ಥಿಸುತಿದ್ದಳು. ಈ ದುಃಖದಮಾತು ದೇವರ್ಷಿಯಾದ ನಾರದರ ಕಿವಿಗಳಲ್ಲಿ ಬಿತ್ತು. ನಾರದನು ಮುಂದೆಹೋಗಿ ದೇವರಾಜನನ್ನು ನಿಲ್ಲಿಸಿ "ಇವಳ ಗರ್ಭದಲ್ಲಿ ದೈತ್ಯೇಂದ್ರನ ಸ್ಪರ್ಶವಾಗಿದೆ. ಆದ್ದರಿಂದ ನಮಗೆ ಅತ್ಯಂತ ಭಯವಾಗುತ್ತದೆ!" ಅಂದನು. ಇದನ್ನು ತಿಳಿದ ಇಂದ್ರನು ನಾನು ಅವಳನ್ನು ಕೊಲ್ಲಲು ಬಯಸುತ್ತೇನೆ. ಶಿಶುಹತ್ಯೆಯಿಂದ ಉಳಿಸುವದಕ್ಕೆ ಅಮರಾವತಿಗೆ ಒಯ್ಯುತ್ತಿದ್ದೇನೆ. ಪುತ್ರನಾದಮೇಲೆ ಪುತ್ರನನ್ನು ಬಿಟ್ಟುಬಿಡುವೆನು. ಅಲ್ಲಿ ಇವಳಿಗೆ ಯಾವದೂ ಕಷ್ಟವಾಗುವದಿಲ್ಲ, ಅಪಮಾನವಾಗುವದಿಲ್ಲ." ಈ ಪ್ರಕಾರ ದೇವರ್ಷಿಗಳಿಗೆ ನಮಸ್ಕಾರಮಾಡಿ, ಇಂದ್ರನು ನಮ್ರತೆಯಿಂದ ವಾಕ್ಯಾರ್ಪಣೆ ಮಾಡಿದನು.

"ಈ ಗರ್ಭದ ಬಾಲಕನು ಚಿರಂಜೀವಿಯಾಗುವನು. ಅವನಿಗೆ ದೇವತೆಗಳ ಹೆದರಿಕೆ ಇಲ್ಲ. ಅವನಾದರೂ ನಿಮ್ಮ ಕಲ್ಯಾಣಕ್ಕೆ ಕಾರಣ ಭೂತನಾಗುವನು. ಭಗವಂತನ ಪರಮಭಕ್ತನು ಈ ದೈತ್ಯೇಶ್ವರಿಯ ಗರ್ಭದಲ್ಲಿರುವನೆಂದು ದೇವರ್ಷಿಯು ಹೇಳಿದನು.

ಪರಮಾತ್ಮನ ಪ್ರೀತಿಯ ಭಕ್ತನು ಇವಳ ಗರ್ಭದಲ್ಲಿರುವನು ಎನವುದರಿಂದ ಇಂದ್ರನು, ಕಯಾಧುವಿಗೆ ಆದರಿಸಿದನು. ಆವಳಿಗೆ ನಮುಸ್ಕಾರಮಾಡಿ ರಥದಿಂದ ಇಳಿಸಿದನು. ಆಗ ನಾರದನು,

"ಮಗಳೇ ! ನಿನ್ನ ದೈತ್ಯಪುರವು ಧ್ವಂಸವಾಗಿದೆ. ದೈತ್ಯೇಶ್ವರನು ತಪಸ್ಸು ಮಾಡುವನು. ಅದು ಮುಗಿಯುವತನಕ ನೀನು ನನ್ನ ಆಶ್ರಮದಲ್ಲಿರು. ಅಲ್ಲಿಯವರೆಗೆ ನಾರದನಿಗೆ ಪ್ರಜಾಪತಿಯಾದ ದಕ್ಷನು ಶಾಪಕೊಡುವದಿಲ್ಲ. ನೀನು ಆಶ್ರಮ ಮಾಡಿಕೊಂಡು ಭಗವಂತನ ಭಜನೆಮಾಡುತ್ತ ವಾಸಿಸು" ಅಂದನು. ಕಯಾಧು ಅವನ ಆಜ್ಞೆಯನ್ನು ಸ್ವೀಕರಿಸಿ ಅವನ ಹಿಂದಿನಿಂದ ಆಶ್ರಮಕ್ಕೆ ಹೋದಳು.

ಶ್ರದ್ಧೆಯಿಂದ ಕಯಾಧು ದೇವರ್ಷಿಯ ಸೇವೆಯಲ್ಲಿಯೆ ಮಗ್ನಳಾಗಿದ್ದಳು. ಆಶ್ರಮದ ಎಲ್ಲ ಕೆಲಸವನ್ನು ಸ್ವತಹ ಮಾಡುತ್ತಿದ್ದಳು. ತನ್ನ ಪುತ್ರನ ಮಾಂಗಲ್ಯಕ್ಕೆ ನಾರದನ್ನು ಪ್ರಸನ್ನನಾಗಬೇಕೆಂದು ಯತ್ನ ಪಡುತ್ತಿದ್ದಳು. ಕಟ್ಟೆಯ ಮೇಲೆ ಕುಶಾಸನ ಹಾಕಿ ಮಲಗುತ್ತಿದ್ದಳು. ನಾರುವಸ್ತ್ರವನ್ನು ಧರುಸುತ್ತಿದ್ದಳು. ಬಿದುರುಭತ್ತ ಮತ್ತು ಗಡ್ಡೆ-ಗೆಣಸುಗಳಿಂದ ಹಸಿವೆಯನು ಇಂಗಿಸುತ್ತಿದ್ದಳು. ವೇಳೆ ಸಿಕ್ಕಾಗ ಪುರಾಣ ಪುಣ್ಯ ಕಥೆಗಳಲ್ಲಿ ಕಳೆಯತ್ತಿದ್ದಳು. ಗರ್ಭದಲ್ಲಿದ್ದ ಶಿಶುವಿಗೆ ತತ್ವಜ್ಞಾನದ ಗೂಢತತ್ವವನ್ನು ಉಪದೇಶಿಸುತ್ತಿದ್ದಳು. ಸಂಸಾರದ ತೊಡಕನ್ನು ಬಿಡಿಸಿ ವೈರಾಗ್ಯದ ದಾರಿ ಹೇಳುತ್ತಿದ್ದಳು.

ದೇವತೆಗಳ ಹೆದರಿಕೆಯಿಂದ ಕಯಾಧು ಹಡೆಯಲಿಲ್ಲ. ಎಷ್ಟೋ ಸಾವಿರ ವರ್ಷಗಳ ಮೇಲೆ ದೈತ್ಯರಾಜನು ವರವನ್ನು ಪಡೆದು ತಿರುಗಿದ ನಂತರ ದೇವರ್ಷಿಯು ಕಯಾಧುವಿಗೆ ಪತಿಯ ಭೆಟ್ಟಿ ಮಾಡಿಸಿದನು. ಕಯಾಧುವಿನ ಗರ್ಭದಿಂದ ಸುರಾಸುರವಂದಿತನಾದ ಭಗನಂತನ ಪರಮ ಭಕ್ತನಾದ ಪ್ರಹ್ಲಾದನು ಹುಟ್ಟಿದನು.

ಪನ್ನಾದಾಸಿ

ತಾಯಿಯ ಹೃದಯದ ಕಲ್ಪನೆಯನ್ನು ತಾಯಿಯೇ ಮಾಡಲು ಸಮರ್ಥಳು. ಭಾರತ ಮತ್ತು ಎಲ್ಲ ಇತಿಹಾಸಗಳಲ್ಲಿ ಪನ್ನಾ ದಾಸಿಯ ಚರಿತ್ರೆಯನ್ನು ನೋಡಬಹುದು. ಮೇವಾಡದ ರಾಜಕುಮಾರನಾದ ಉದಯಸಿಂಹನ ಪ್ರಾಣರಕ್ಷಣೆಮಾಡಿದ ಘಟನೆಯು ಇತಿಹಾಸಗಳಲ್ಲಿ ಸ್ಥಿರವಾಗಿದೆ. ರಾಣಾ ಸಂಗ್ರಾಮಸಿಂಹನ ತರುವಾಯ ಅವನ ಮಗ ವಿಕ್ರಮಾದಿತ್ಯನು ಮೇವಾಡದ ಸಿಂಹಾಸನದಲ್ಲಿ ಕುಳಿತನು. ಅವನು ಕೆಲವು ದಿವಸಗಳಲ್ಲಿ ತನ್ನ ಪ್ರಜಾಜನರಿಗೆ ಅಪ್ರಿಯನಾದನು. ಹಾಗಾಗಿ ಆ ಅಸಂತುಷ್ಟಪ್ರಜರಿಂದ ಜೇಲನ್ನೂ ಭೋಗಿಸುವ ಕಾಲಬಂತು, ವಿಕ್ರಮನಿಗೆ.

ಸಂಗ್ರಾಮಸಿಂಹನ ತಮ್ಮನು ಪೃಥ್ವಿರಾಜನು. ಅವನ ಮಗನು ಬನವೀರನು. ಹೀಗಿದ್ದ ಆ ವಿಕ್ರಮನು ತನ್ನ ಆಡಳಿತದಲ್ಲಿ ಈ ಬನವೀರನ ತಾಯಿಯಾದ ಶೀತಲಸೇನೆಯನ್ನು ಅಪಮಾನ ಪಡಿಸಿದನು. ಬನವೀರನು ಇಂಥ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಯತ್ನಿಸುತಲೂ ಇದ್ದನು. ಆವನಿಗೆ ಈಗ ಒಳ್ಳೇಸಂಧಿಯು ದೊರಕಿತು. ಆದ್ದರಿಂದ ಅವನು ವಿಕ್ರಮನನ್ನುನಾಶ ಮಾಡಿ ತಾನೇ ಆ ಸಿಂಹಾಸನವನ್ನಾಳುತಿದ್ದನು.

ಸಂಗ್ರಾಮ ಸಿಂಹನ ಎರಡನೆ ಮಗನಾದ ಉದಯಸಿಂಹನ ರಕ್ಷಣೆಯನ್ನು ದಾಸಿಯಾದ ಪನ್ನೆಯು ಮಾಡುತ್ತಿದ್ದಳು. ಯಾಕೆಂದರೆ ಅವನ ವಯಸ್ಸು ಕೇವಲ ಆರು ವರ್ಷವಿತ್ತು. ಮತ್ತು ಅವನ ತಾಯಿಯಾದ ರಾಣೀ ಕರುಣವತಿಯು ಸ್ವರ್ಗವಾಸಿಯಾಗಿದ್ದಳು.

ಪನ್ನಾ ಇವಳು ಬುದ್ಧಿಮಾನ್,ತ್ಯಾಗಿ ಮತ್ತು ಸಾಹಸಿ ಸ್ತ್ರೀಯಿರುತ್ತಾಳೆ. ಅವಳ ಹೃದಯವು ಅತ್ಯಂತ ವಿಶಾಲವಾಗಿದೆ. ಉದಯಸಿಂಹನ ರಕ್ತದಿಂದ ತನ್ನ ಖಡ್ಗದ ನೀರಡಿಕೆಯನ್ನು ಆರಿಸಬೇಕೆಂತ ಬನವೀರನು ಆಲೋಚಿಸಿದನು.

ಕಪ್ಪುರಾತ್ರಿಯ ಸಮಯ ನಾಲ್ಕೂ ಕಡೆ ಕತ್ತಲೆಯೇ ಕತ್ತಲೆ, ದುಷ್ಟ ಬನವೀರನು ರಾಜಕುಮಾರನನ್ನು ಕೊಲುವ ವರ್ತಮಾನವು ಪನ್ನೆಗೆ ಗೊತ್ತಿಲ್ಲ, ರಾಜಕುಮಾರನು ರಾತ್ರಿಯ ಊಟ ಮುಗಿಸಿ ಮಲಗಿದ್ದಾನೆ. ಆ ಸಮಯದಲ್ಲಿ ಒಬ್ಬ ಕ್ಷೌರಿಕನು ಬಂದು, ಬನವೀರನ ಖಡ್ಗವು ವಿಕ್ರಮಾದಿತ್ಯನ ತುಂಡು ಮಾಡಿದೆ, ಆ ರಕ್ತವು ಈಗ ಒಣಗಿ ಹೋಗಿದೆ, ಉದಯಸಿಂಹನನ್ನು ಅದೇ ಅಸಿಯಿಂದರಿದು ಆ ಖಡ್ಗಕ್ಕೆ ರಕ್ತಪಾನ ಮಾಡಿಸಲು ಬರುವನೆಂದು ಪನ್ನೆಗೆ ತಿಳಿಸಿದನು. ಅವಳು ಉದಯಸಿಂಹನನ್ನು ತನ್ನ ಮಗುವಿಗಿಂತ ಹೆಚ್ಚು ಪ್ರೀತಿಸುತ್ತಿದ್ದಳು. ಕೂಡಲೇ ಕ್ಷೌರಿಕನ ಕೈಯಲ್ಲಿ ಕೊಟ್ಟು "ನಾನು ಈ ಉದಯಸಿಂಹನ ಮರಣದ ಸಂಸ್ಕಾರವನ್ನು ನೋಡಲಾರೆ" ಎಂದು ಉದಯಸಿಂಹನನ್ನು ಮುದ್ದಿಟ್ಟು ಬುಟ್ಟಿಯಲ್ಲಿ ಮಲುಗಿಸಿ ಎಲೆಗಳನ್ನು ಮುಚ್ಚಿದಳು. "ನೀನು ಇದನ್ನು ಬೀರಾನದಿಯ ದಡದವರೆಗೆ ಮುಟ್ಟಿಸುವ ಪ್ರಯತ್ನ ಮಾಡು" ಅಂದಳು. ಪನ್ನೆಯ ಅಪ್ಪಣೆಯಮೇರೆಗೆ ನಾಪಿಕನು ಬುಟ್ಟಿಯನ್ನು ಕೋಟೆಯ ಹೊರಗೆ ದಾಟಿಸಿದನು. ಅವಳು ತನ್ನ ಮಗು ಚಂದನನ್ನು ಮಂಚದಮೇಲೆ ಮಲುಗಿಸಿ ಬನವೀರನ ದಾರೀ ನೋಡುತ್ತಿದ್ದಳು. ಅವಳ ಮೋರೆಯ ಮೇಲೆ ಸ್ವಾಮಿಭಕ್ತಿಯು ಹೊಳೆಯುತ್ತಿತ್ತು. ಅವಳು ಉದಯಸಿಂಹನ ಜೀವರಕ್ಷಣೆಯೇ ತನ್ನ ಮತ್ತು ಮೇವಾಡದ ಸೌಭಾಗ್ಯವಿದೆಯೆಂದು ತಿಳಿದಿದ್ದಳು. ಇಷ್ಟರಲ್ಲಿ ದುಷ್ಟನಾದ ಬನವೀರನು ಬಂದನು. "ಉದಯನೆಲ್ಲಿರುವನು ?" ಎಂದು ಕೇಳಿದನು. ಆದರೆ ತುಟಿ ಒಡೆಯಲಿಲ್ಲ, ಉಸಿರೆತ್ತಲಿಲ್ಲ, ಮಂಚದ ಮೇಲೆ ಶಯನ ಮಾಡಿದ ಚಂದನನ್ನು ತೋರಿಸಿದಳು. ಖಡ್ಗ ಬಿದ್ದಿದ್ದೇ ತಡ, ಬಾಲಕನು ಒಮ್ಮೆಲೇ ಚೀರಿದನು. ಪನ್ನೆಯ ಕಣ್ಣಿನಿಂದ ಒಂದು ಹನಿ ಕಣ್ಣೀರು ಸಹ ಬೀಳಲಿಲ್ಲ! ಆದರೆ ಪುತ್ರವ್ಯಾಮೋಹವು ಅವಳನ್ನೇ ನುಂಗಿತು. ಬನವೀರನು ನಡೆದನು.

ತಾಯಿಯು ಮೃತಪುತ್ರನ ಅಂತಿಮಸಂಸ್ಕಾರವನ್ನು ಬೀರಾನದಿಯ ದಡದಮೇಲೆ ಸಾಗಿಸಿದಳು. ಮರುದಿವಸ ಉದಯಸಿಂಹನನ್ನು

ಎತ್ತಿಕೊಂಡು ಕಮಲಮೀರಕ್ಕೆ ಹೋದಳು. ಆ ಕಾಲಕ್ಕೆ ಅಲ್ಲಿಯ ರಾಜನು ಆಶಾಶಾಹನಿದ್ದನು. ಪನ್ನೆಯು ಅವನಲ್ಲಿ ರಾಜಕುಮಾರನಾದ ಉದಯಸಿಂಹನನ್ನು ರಕ್ಷಣೆಗಾಗಿ ಇಟ್ಟಳು.

ಹೀಗಿರುವಾಗ ಎಷ್ಟೋ ದಿವಸಗಳ ತರುವಾಯ ಉದಯಸಿಂಹನು ಜೀವಂತನಿರುವನೆಂಬ ವಾರ್ತೆಯು ಬನವೀರನ ಹೃದಯದಲ್ಲಿ ನಡುಗು ಹುಟ್ಟಿಸಿತು. ಅವನು ತನ್ನ ಪಾಪಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತ ದೊರೆಯಿತೆಂದು ಮನಗಂಡನು. ಬನವೀರನು ಪನ್ನೆಯೊಡನೆ ಉದಯಸಿಂಹ ನೊಡಗೂಡಿ ಕರೆತಂದು ಉದಯಸಿಂಹನಿಗೆ ಪಟ್ಟಾಭಿಷೇಕವನ್ನು ಎಲ್ಲರೂ ಕೂಡಿ ವಿಜೃಂಭಣೆಯಿಂದ ಮಾಡಿದರು. ರಾಜತಿಲಕನ ತರುವಾಯ ಮಹಾರಾಜನ ಪಾದಧೂಳಿಯನ್ನು ಸಿರಸಾವಹಿಸಿದನು.

ಪನ್ನೆಯು ತನ್ನ ಆದರ್ಶತ್ಯಾಗದಿಂದ ಅಮರಳಾದಳು.

ವೀರಾಂಗನಾ ವಿದ್ಯುಲ್ಲತಾ

ಮಧ್ಯಕಾಲದ ಭಾರತೀಯ ರಾಣಿಯರು ಮುಸಲ್ಮಾನರನ್ನು ಮತ್ತು ಪಠಾಣರನ್ನು ಓಡಿಸಿದ ನಂತರ ತಮ್ಮ ಸತೀತ್ವದ ರಕ್ಷಣೆಗಾಗಿ ಪ್ರಾಣವನ್ನು ಅಂಗೈಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಸಾಧಾರಣ ಸಣ್ಣ ಪುಟ್ಟ ಹೆಣ್ಣುಮಕ್ಕಳಿಂದ ದೊಡ್ಡದೊಡ್ಡ ಹೆಂಗಳೆಯರವರೆಗೂ ಸಹ ತಮ್ಮ ದೇಶದ ಸಂರಕ್ಷಣೆ ಮತ್ತು ಅಸ್ತಿತ್ವಕ್ಕೆ ಪ್ರಾಣವನ್ನು ಬಲಿ ಕೊಡಲು ಸಿದ್ಧರಿದ್ದರು.

ಅಲ್ಲಾಉದ್ದೀನನು ಚಿತ್ತೌಡವನ್ನು ಏರಿಹೋದ ಕಥೆಯು ಇತಿಹಾಸ ಪ್ರಸಿದ್ಧವಾಗಿದೆ. ಚಿತ್ತೌಡದಲ್ಲಿ ಒಬ್ಬ ಪ್ರಸಿದ್ಧ ಸರದಾರನಿಗೆ ರಾಮಸಿಂಹ ನೆಂಬ ಮಗನಿದ್ದನು. ಅವನಲ್ಲಿ ಧೈರ್ಯವು ತುಂಬಿ ತುಳುಕಾಡುತ್ತಿತ್ತು.

ಒಬ್ಬ ಸೈನಿಕನಿಗೆ ವಿದ್ಯುಲತೆಯೆಂಬ ಮಗಳಿದ್ದಳು. ಅವಳು ಅತ್ಯಂತ ಸುಂದರಳಿದ್ದಳು. ಉದಾರ ಮತ್ತು ಸದ್ಗುಣ ಸಂಪನ್ನಳಾಗಿದ್ದಳು.

ಅಲ್ಲಾಉದ್ದೀನನ ಆಕ್ರಮಿಸುವಿಕೆಯನ್ನು ತಡೆಯುವದಕ್ಕೋಸುಗ ರಾಮಸಿಂಹನೂ ಹೋಗಿದ್ದನು.

ರಾತ್ರಿಯ ಸಮಯ ಚಂದ್ರನು ತನ್ನ ಹದಿನಾರು ಕಲೆಗಳಿಂದೊಡಗೂಡಿ ಗಗನದಲ್ಲಿ ಶೋಭಿಸುವ ಶರಚ್ಚಂದ್ರನಂತೆ ಎಸೆದಿದ್ದನು. ಪೃಥ್ವಿಯು ಕ್ಷೀರದಂತೆ ಮಿನುಮಿನು ಮಿನುಗುತ್ತಿತ್ತು. ಸ್ಫಟಿಕದಂತೆ ಹೊಳೆಯುವ ಚಂದ್ರನನ್ನು ನೋಡಿದಾಗ ಅವನ ಹತ್ತಿರ ಸಮರ ನಿಂತಿದ್ದಾನೆ. ಅವಳು ಆಶ್ಚರ್ಯ ಚಕಿತಳಾದಳು.

"ಹೇ! ವಿದ್ಯುಲ್ಲತಾ ನಾನು ನಿನ್ನಲ್ಲಿ ಒಂದು ಕಾರ್ಯದ ಸಲುವಾಗಿ ಬಂದಿದ್ದೇನೆ. ನನಗೆ ನಿನ್ನ ಪ್ರೇಮದ ಸ್ವರ್ಗ ಮತ್ತು ಉಪಸರ್ಗವಿದೆ. ಸೇನಾಪತಿಯ ಕಣ್ಣು ತಪ್ಪಿಸಿ ರಣರಂಗದಿಂದ ಓಡಿಬಂದಿರುವೆನು. ನಾನು ಬೇರೊಂದೂರಿಗೆ ಹೋಗಲು ಇಚ್ಛಿಸುತ್ತೇನೆ." ಅಂದನು

ವಿದ್ಯುಲತೆಯು ಸಿಟ್ಟಿಗೆದ್ದಳು. " ಏ ಸಮರ ! ನಿನ್ನ ಈ ಹೇಡಿತನದ ಮಾತುಗಳು ನನ್ನನ್ನು ಆಶ್ಚರ್ಯದಲ್ಲಿ ಹಾಕಿತು. ರಾಜಪೂತಕನ್ಯೆಯರು ಧೈರ್ಯಹೀನಪುರುಷನ ಸಂಗಡ ವಿವಾಹವಾಗಲು ಇಚ್ಛಿಸುವದಿಲ್ಲ ಮತ್ತು ಪಾಪವೆಂದು ತಿಳಿಯುತ್ತಾರೆ. ನೀನು ಕರ್ತವ್ಯ ವಿಮುಖನಾಗಿ ಹೇಡಿತನವನ್ನು ಪ್ರದರ್ಶಿಸುವೆ ಅಂದಳು.

ಈ ವಿದ್ಯುಲತೆಯ ಮಾತುಗಳು ಆ ದುಷ್ಟನ ಮನಸ್ಸಿಗೆ ಒಂದೂ ನಟ್ಟಲಿಲ್ಲ."

ಅಷ್ಟಕೇ ನೂರಾರು ಬಂಧು–ಭಗಿನಿಯರು, ಸಾವಿರಾರು ರಾಜ-ರಾಣಿಯರು ಜೌಹರ ಯಜ್ಞದಲ್ಲಿ ಪ್ರಾಣವನ್ನು ಆಹುತಿ ಮಾಡಿದ್ದರು. ಈ ಭೀಷ್ಮ ಕಾಂಡದ ನಂತರ ಸಮರನು ವಿದ್ಯುಲ್ಲತೆಯನ್ನು ಸ್ಮರಿಸಿ ಚಿತ್ತೌಡದ ಕಡೆಗೆ ನಡೆದನು. ಅವನ ಸಂಗಡ ನೂರಾರು ಮುಸಲ್ಮಾನ ಸೈನಿಕರಿದ್ದರು.

ವಿದ್ಯುಲತೆಗೆ ಅಗ್ನಿಕಾಂಡ ಚರಿತ್ರೆಯು ಗೊತ್ತಿಲ್ಲ. ಅವಳು ಸಮರನನ್ನು ನೋಡಿ ಸಂತೋಷ ಭರಿತಳಾಗಿ ನಾಚು ಮಾಡಿದಳು. ಈ ಸಮರನು ದೇಶಕ್ಕೆ ವಿಶ್ವಾಸಘಾತ ಮಾಡಿದ್ದಾನೆಂದು ತಿಳಿದುಕೊಂಡಿದ್ದಳು. ಅವನು ಇವಳಲ್ಲಿ ಹೇಗೆ ಮನಸ್ಸಿಡುತ್ತ ಬಂದನೋ ಹಾಗೆಯೇ ಅವಳೂ ಸಹ ನೀಚನೆಂದು ಭಾವಿಸಿದಳು. ನೀನು ನನ್ನ ಶರೀರವನ್ನು ಸ್ಪರ್ಶ ಮಾಡಿ ಅಪವಿತ್ರಳನ್ನು ಮಾಡಿದರೆ ಅಗ್ನಿಯಲ್ಲಿ ಬಿದ್ದು ಸಾಯುವೆನೆಂದರೂ ಕೇಳದೆ ಆತನು ಬಲಾತ್ಕರಿಸಲೆತ್ನಿಸಲು, ವಿದ್ಯುಲ್ಲತೆಯು ಕಟಿಯಿಂದ ಖಡ್ಗವನ್ನು ತೆಗೆದು ತನ್ನ ಎದೆಯಲ್ಲಿ ಇಳಿಸಿದಳು. ಸಮರನು ಅವಳನ್ನು ಹಿಡಿಯಲು ಇಚ್ಛಿಸಿದನು. ಆದರೆ ಅವಳು ಆ ಪಾಪಿಯಿಂದ ಅಪವಿತ್ರಳಾಗುವ ಮೊದಲೇ ಸ್ವರ್ಗವಾಸಿಯಾಗಿದ್ದಳು.

ವಿದ್ಯುಲ್ಲತೆಯು ಹೀಗೆ ಪ್ರಾಣವನ್ನು ಆಹುತಿ ಮಾಡಿ ಚಿತ್ತೌಡದ ಇತಿಹಾಸದಲ್ಲಿ ತನ್ನ ಕೀರ್ತಿಯನ್ನು ಸ್ಥಿರ ಮಾಡಿದಳು.

ಮೀರಾಬಾಯಿ

ಹಿಂದೂ ಜನರು ಆಧ್ಯಾತ್ಮಿಕ ಜಾಗರಣೆಯಲ್ಲಿ ಮುಂದಿರುವರೆಂಬುವುದು ಸರ್ವಸಾಮಾನ್ಯರಿಗು ಗೊತ್ತಿದ್ದ ಮಾತು. ಆಯೋಧ್ಯಾ ಮಥುರಾ ಮತ್ತು ಚಿತ್ರಕೂಟ ಇಂಥಿಂಥ ಪವಿತ್ರ ಕ್ಷೇತ್ರಗಳಲ್ಲಿ ಪುರಾಣ ಪುಣ್ಯ ಕಥೆಗಳ ರಸವನ್ನು ಹಿಂದೂಜನರು ಸೇವಿಸಿದ್ದಾರೆ.

ತಾವೂ ಸಫಲ ಹೊಂದಿದ್ದಲ್ಲದೆ, ಸಮಾಜ ಸಾಹಿತ್ಯ ಮತ್ತು ದೇಶಕ್ಕೆ ಹಿತಸಾಧಿಸಿದ ಸ್ತ್ರೀಯರಲ್ಲಿ ಮೀರಾಬಾಯಿಯೂ ಒಬ್ಬಳು. ಇದನ್ನು ಕೇಳಿದ ಜನರಿಗೆ ಮೀರಾರಾಣಿಯ ಜನ್ಮವೆಲ್ಲಾಯಿತು ? ಯಾವಾಗಾಯಿತು? ಅವಳ ತಂದೆಯ ಹೆಸರೇನು? ಇಂಥ ಪ್ರಶ್ನೆಗಳು ಹೊಳೆಯದಿರಲಾರದು.

ಆವಳ ಜೀವನ ಆಧಾರದಿಂದ ಆವಳ ಲಗ್ನವಾದದ್ದು ಪವಿತ್ರ ಸಸೋದಿಯಾಕುಲದಲ್ಲಿ. ಆವಳ ಜನ್ಮವು ಸಂವತ್ ೧೫೬೦ ರಲ್ಲಿ ಕುಡ ಎಂಬ ಹಳ್ಳಿಯೊಳಗೆ ಜೋಧ ಪಟ್ಟಣದ ಸಂಸ್ಥಾಪಕನಾದ ಪ್ರಸಿದ್ಧ ರಾಠೌರ ವಂಶದ ರಾವ್ ಜೋಧಾನಿಗೆ ರಾವ್ ದೂದಾ ಎಂಬ ಮಗನಿದ್ದನು. ಆವನಿಗೆ ರತನಸಿಂಹನೆಂಬ ಮಗನಿದ್ದನು. ಇವನ ಮಗಳೇ ಮೀರಾಬಾಯಿ. ಇವಳ ಚಿಕ್ಕಂದಿನಲ್ಲಿಯೆ ತಾಯಮ್ಮನವರು ಸ್ವರ್ಗವಾಸಿಯಾದರು. ಆದ್ದರಿಂದ ಆವಳ ಅಜ್ಜನಾದ ದೂದಾ ಇವನು ಮೀರಾಬಾಯಿಯನ್ನು ಪಾಲನೆ ಮಾಡಿದನು. ಬಾಲ್ಯದಿಂದಲೆ ಇವಳಲ್ಲಿ ಭಕ್ತಿರಸವು ತುಂಬಿ ತುಳುಕಾಡುತ್ತಿತ್ತು. ಪ್ರಿಯದಾಸನು, ತನ್ನ ಭಕ್ತಮಾಲೆಯನ್ನು ಹೆಣೆಯುವಾಗ ಸಹ ಇವಳನ್ನು ಎತ್ತಿ ಹಿಡಿದಿದ್ದಾನೆ. ಸನ್ ೧೫೭೩ ರಲ್ಲಿ ಚಿತ್ತೌಡದ ರಾಜಕುಮಾರನಾದ ಭೋಜರಾಜನಿಗೆ ಮೀರಾಬಾಯಿಯ ೧೩ನೇ ವರ್ಷದಲ್ಲಿ ವೈಭವದಿಂದ ಲಗ್ನಮಾಡಿಕೊಟ್ಟರು. ಆವಳ ಮದುವೆಯಾಗಿ ಐದನೇ ವರ್ಷದ ನಂತರ ಭೋಜರಾಜನು ಈ ಲೋಕದ ಯಾತ್ರೆಯನ್ನು ಮುಗಿಸಿದನು. ಅಂದಿನಿಂದ ವಿಕ್ರಮನು ಆವಳಿಗೆ ತನ್ನ ಸಹೋದರಿಯ ಮಾತು ಕಟ್ಟಿಕೊಂಡು ಬಹಳ ಕಷ್ಟ ಕೊಡಲು ಪ್ರಾರಂಭಿಸಿದನು. ಅವಳನ್ನು ಕೊಲುವುದಕ್ಕೆ ಒಂದು ಪ್ಯಾಲೆ ವಿಷ ಕೊಟ್ಟನು. ಆದರೆ ವಿಷದಿಂದೇನೂ ಆಗಲಿಲ್ಲ. ವಿಷದ ನಾಗನನ್ನು ಆವಳ ಬಳಿಗೆ ಕಳುಹಿಸಿದನು. ನಾಗನೂ ಆವಳಿಗೆ ಕಷ್ಟ ಕೊಡಲಿಲ್ಲ. ಯೋಗಿನಿಯಾದ ಮೀರಾ ತನ್ನ ದೇವರಲ್ಲಿ ವಿಶ್ವಾಸವನ್ನಿಟ್ಟಿದ್ದಳು.

ಆವಳ ಬಂಧು-ಬಳಗಗಳೆಲ್ಲರೂ ಆವಳಿಗೇ ವೈರಿಯಾದರು. ಆ ಕಾಲಕ್ಕೆ **ಜಾರಿಯ ಹೂವೂ ಮುಳ್ಳಾಗಿ ಸಂದಿತು!** ಆವಳ ಅಂಗಾಂಗಗಳಲ್ಲಿ ಭಕ್ತಿಯ ಭಾಗೀರಥಿಯೆ ಧಾರವಾಗಿ ಹರಿಯುತ್ತಿತು. ಇಂಥ ಸಮಯದಲ್ಲಿ ಆವಳ ಚಿತ್ತದ ನದಿಯು ಉಕ್ಕೇರಿಬಂದು ಹೀಗೆ ಹೇಳಿದಳು:—

"ಮೇರೆತೋ ಗಿರಿಧರ ಗೋಪಾಲ, ದೂಸರೆ ನ ಕೋಯಿ"

ಹೀಗಾಗುತ್ತಾಗುತ್ತಾ ಆತ್ಮೋಪಾಸನೆಯ ಬಲದಿಂದ ಮೂರ್ತಿ ಪೂಜೆಯನ್ನು ವಿಸರ್ಜಿಸಿ, ಚಿತ್ತೋಡದ ಪವಿತ್ರಭೂಮಿಗೆ ನಮಸ್ಕರಿಸಿ, ಶ್ರೀ ಕೃಷ್ಣನ ಅಪ್ಪಣೆಯಂತೆ ಆವನ ಜನ್ಮಭೂಮಿಯಾದ ಗೋಕುಲಕ್ಕೆ ಹೊರಟಳು. ಬರಬರುತ್ತ ಅನೇಕ ತಿರ್ಥಗಳನ್ನು ಸಂದರ್ಶಿಸುತ್ತ ಪವಿತ್ರ ವ್ರಜಭೂಮಿಗೆಬಂದು ಅಲ್ಲಿಯ ಗೋಪಿಕಾಜನರೊಂದಿಗೆ ಎಷ್ಟೋಕಾಲ ನಿವಸಿಸಿದಳು.

ಎಷ್ಟೋ ಕಾಲಾನಂತರ ವ್ರಜದಿಂದ ದ್ವಾರಕಿಗೆ ಬಂದಳು. ಒಂದೊಮ್ಮೆ ಅಲ್ಲಿಯ ಭಕ್ತಾಗ್ರೇಸರರಲ್ಲಿ ಒಬ್ಬನಾದ ಶ್ರೀ ರಣಛೋಡನು ದೇವಾಲಯದಲ್ಲಿ ಸ್ವಾಮಿಯ ಪ್ರೀತ್ಯರ್ಥವಾಗಿ ಅತಿ ಮನೋಹರವಾದ ನೃತ್ಯ ಗೀತಗಳನ್ನು ಏರ್ಪಡಿಸಿದ್ದನು. ಆ ಊರ ಸಂತಸಾಮುದಾಯಕವೂ ಅಲ್ಲಿ ನೆರೆದಿದ್ದವು. ಹೀಗೆ ಅತಿ ವಿಜೃಂಭಣೆಯಿಂದ ಕೀರ್ತನಾಸಮಾರಂಭವು ನಡೆಯುತ್ತಿರುವಾಗ ಒಮ್ಮಿಂದೊಮ್ಮೆಲೇ ಒಂದು ದಿವ್ಯಜ್ಯೋತಿಯು ಪರಮಾತ್ಮನ ಮೂರ್ತಿಯಿಂದ ಹೊರಟು ಮಿರಾಬಾಯಿಯಲ್ಲಿ ಸಮಾವೇಶ ವಾಯಿತು! ಇಂದಿಗೂ ಆ ಮೂರ್ತಿಯು ಡಾಕೋರದಲ್ಲಿದೆ. ಮೀರಾಬಾಯಿಯ ಹೆಗ್ಗುರುತಿನ ಪತಾಕೆಯು ಅಲ್ಲಿ ಹಾರಾಡುತ್ತದೆ ! ಸಂವತ್ ೧೬೦೪ರಲ್ಲಿ ಮೀರಾಬಾಯಿಯು ದೇಹತ್ಯಾಗ ಮಾಡಿದಳೆಂದು ಹೇಳುತ್ತಾರೆ.

ಮೀರಾ ಕೇವಲ ಬಕ್ತಳಿಷ್ಟೇ ಅಲ್ಲ, ಭಾವಿಕಕವಿಯೂ ಆಗಿದ್ದಳು. ಕವಿತೆಯು ಭಕ್ತಿಯ ಆಲಂಕಾರ ಮತ್ತು ಅವಳ ಚಿತ್ತಪರಿಪಾಕದ ಕಾವ್ಯ ವಾಗಿತ್ತು. ಶ್ರೀಕೃಷ್ಣನು ಆ ಕಾವ್ಯದ ನಾಯಕನು. ಅವಳ ಉಪಾಸನೆಯು ಮಧುರವಾಗಿತ್ತು. ಅವಳು ತನ್ನ ಕವಿತೆಗಳಲ್ಲಿ ಪರಮಾತ್ಮನನ್ನು ಹೆಜ್ಜೆಹೆಜ್ಜೆಗೂ ಹೊಗಳಿದ್ದಾಳೆ. ಅವಳು ಪ್ರೇಮಯೋಗಿನಿಯು. ಅವಳ ಜೀವನವು ದನ್ಯಧನ್ಯ !!!

ಭಕ್ತಿ ಮತಿಯಾದ ವಿಧನೆ

ಈ ಭರತ ಭೂಮಿಯು ಪರಮಾತ್ಮನಿಗೆ ಒಂದು ಲೀಲಾಕ್ಷೇತ್ರ ದಂತಿದೆ. ಭಗವಂತನ ಲೀಲೆಗಳು ಅಲೌಕಿಕವಾಗಿವೆ. ಅಂದ ಮೇಲೆ ದೇವರ ತೀರಾ ಸಮೀಪ ಇರುವಂಥ ಭಕ್ತರ ಜೀವನಲೀಲೆಯು ಅಲೌಕಿಕವಾಗಿದ್ದಲ್ಲಿ ಆಶ್ಚರ್ಯವೇನು ? ವಂಗ ದೇಶದಲ್ಲಿ ಒಬ್ಬ ಯೋಗ ಸಿದ್ಧ ಭಗವದ್ಭಕನಾದ "**ಶ್ರೀ ಮತ್ಸ್ವಾಮೀ ಸರಸ್ವತಿ**" ಎಂಬ ಪ್ರಸಿದ್ಧ ಸನ್ಯಾಸಿಯಾಗಿ ಹೋಗಿದ್ದಾನೆ. ಈ ಸ್ವಾಮಿಯ ಕಾಲದಲ್ಲಿ ಶಾಂತಿಪುರದ ಸಮೀಪ ಗುಪ್ತಪಾಡಾ ಎಂಬ ಹಳ್ಳಿಯೊಳಗೆ ಭಗವದ್ಭಕ್ತಿ ಪರಾಯಣರಾದ ಬ್ರಾಹ್ಮಣಪರಿವಾರವು ನಿವಸಿಸುತಿತ್ತು. ಒಂದು ದಿವಸ ಗಂಗಾಸ್ನಾನ ಮಾಡುತ್ತಿರುವ ಬ್ರಾಹ್ಮಣರಿಗೆ ಶ್ರೀ ಕೃಷ್ಣನ ಮೂರ್ತಿಯು ಗಂಗೆಯ ಧಾರೆ ಯಲ್ಲಿ ಕಾಣಿಸುತಿತ್ತು. ಭಕ್ತರು ಶ್ರೀ ಕೃಷ್ಣನ ದರ್ಶನದಿಂದ ಸಂತೋಷ ಭರಿತರಾದರು.

ಪರಮಾತ್ಮನ ಮೂರ್ತಿಯನ್ನು ಬ್ರಾಹ್ಮಣರು ಮನೆಗೆ ತಂದು ಶ್ರದ್ಧೆಯಿಂದ ಪೂಜೆಮಾಡಿದರು. ಬ್ರಾಹ್ಮಣ ಪರಿವಾರದವರೆಲ್ಲರೂ ಮಂದಾ ಕಿನಿಯಲ್ಲಿ ಸ್ನಾನ ಮಾಡಿ ಸಂತೋಷ ಹೊಂದಿದರು. ರಾತ್ರಿಯಲ್ಲಿ ಪರಮಾ ತ್ಮನ ಪ್ರಸಾದ ಸ್ವೀಕರಿಸಿ ಎಲ್ಲರೂ ನಿದ್ದೆ ಹೊಂದಿದರು. ಅನಂತರದಲ್ಲಿ ಆ ಪರಮಾತ್ಮನ ಶ್ರೀಮೂರ್ತಿಯು ಓರ್ವ ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಕಾಣಿಸಿ ಕೊಂಡು " ನಾನು ಸನ್ಯಾಸಿಯ ಮನೆಗೆ ಹೋಗುವೆನು. ಗೃಹಸ್ಥನ ಮನೆ ಯಲ್ಲಿ ವಾಸಿಸುವದಿಲ್ಲ. ನನ್ನನ್ನು ಇಟ್ಟುಕೊಂಡರೆ ಕಷ್ಟವೂ ಸಹ ಬಂದೊದ ಗುವದು. ನಾನು ಸತ್ಯದೇವಸರಸ್ವತಿಯ ಸಮೀಪ ಹೋಗುವೆನು." ಅಂದನು.

ಬ್ರಾಹ್ಮಣರ ಭಕ್ತಿಭಾವನೆಯೇ ಮೂರ್ತಿಯಿತ್ತು. ಯಾವನಿಗೇ ಆಗಲಿ, ಇಷ್ಟವು ಸಿಕ್ಕಿರುವಾಗ ಲೌಕಿಕದ ಅನಿಷ್ಟದ ಕಡೆಗೆ ಲಕ್ಷವನ್ನೇಕೆ ಇಡುತ್ತಾನೆ ?

ಬ್ರಾಹ್ಮಣರು ಶ್ರೀ ವಿಗ್ರಹದ ಪೂಜಾಸಂಭ್ರಮದಲ್ಲಿ ದಿನವನ್ನು ಕಳೆಯುತ್ತಿದ್ದರು. ಆದರೆ ಭವಿಷ್ಯವನ್ನು ಯಾರುತಡೆಯಲು ಸಮರ್ಥರಿದ್ದಾರೆ. ಬ್ರಾಹ್ಮಣ ಸಮೂಹದಲ್ಲಿ ಒಬ್ಬೊಬ್ಬರಾಗಿ ಪರಲೋಕವನ್ನೈದಿದರು. ಆ ಮನೆಯಲ್ಲಿ ಪರಮಾತ್ಮನ ಮೂರ್ತಿ ಇವೆರಡು ಉಳಿದವು. ವಿಧವಾಕನ್ಯೆಯು ಒಬ್ಬೊಂಟಿಗ ವಿಧವೆ ಮತ್ತಳಾಗಿ ಪರಮಾತ್ಮನ ಆರಾಧನೆಯಲ್ಲಿ ತತ್ಪರಳಾದಳು. ಹಗಲಿರುಳು ಧ್ಯಾನ–ಪೂಜಾದಿಗಳಲ್ಲಿ ಕಳೆಯುತ್ತಿದ್ದಳು.

ಒಂದು ದಿವಸ, ಶ್ರೀ ಸ್ವಾಮೀ ಸತ್ಯದೇವಸರಸ್ವತಿಗೆ ಪರಮಾತ್ಮನು ಸ್ವಪ್ನದಲ್ಲಿ ಕಾಣಿಸಿಕೊಂಡು "ನನ್ನ ಮೂರ್ತಿಯನ್ನು ನೀನು ತಂದು ಇಲ್ಲಿಯೇ ಪ್ರತಿಷ್ಠೆ ಮಾಡು" ಅಂದನು. ಸ್ವಾಮಿಯು ಅಪ್ಪಣೆಯ ಮೇರೆಗೆ ಭಗವಂತನ ಮೂರ್ತಿಯನ್ನು ಹುಡುಕಲು ಹೊರಟನು. ಅರಸುತ್ತ ಅರಸುತ್ತ ಗಂಗಾನದಿಯನ್ನು ದಾಟಿ, ಗುಪ್ತಿಪಾಡಾ ಎಂಬ ಊರಲ್ಲಿ ಆ ಬ್ರಾಹ್ಮಣನ ಮನೆಗೆ ಹೋದನು. ಆ ಮನೆಯಲ್ಲಿ ಅವನಿಗೆ ಯಾರೂ ಕಾಣಿಸ ಲಿಲ್ಲ. ಒಳಗೆ ಹೊಕ್ಕು ನೋಡುವಾಗ ಕೇವಲ ಅಪೂರ್ವ ರೂಪವತಿಯಾದ ಕನ್ಯೆಯು ಶ್ರೀಕೃಷ್ಣನ ಪ್ರತಿಮೆಯ ಮುಂದೆ ಭಕ್ತಿಯಲ್ಲಿ ತಲ್ಲೀನಳಾಗಿ ಪೂಜೆ ಮಾಡುತ್ತಿದ್ದಳು. ಈ ಸ್ವಾಮಿಯು ಪರಮಾತ್ಮನ ಆ ದಿವ್ಯಸ್ವರೂಪವನ್ನು ನೋಡಿ ಮುಗ್ಧನಾಗಿಬಿಟ್ಟನು. ಕನ್ಯೆಯು, ಪರಮಾತ್ಮನಿಗೆ ಒಳ್ಳೊಳ್ಳೆ ಹಣ್ಣು–ಹಂಪಲ-ಗಡ್ಡೆ–ಗೆಣಸು ಮತ್ತು ಮೃಷ್ಟಾನ್ನ ಮೊದಲಾದ ನೈವೇದ್ಯ ವನ್ನು ನಿವೇದನೆ ಮಾಡುತಿದ್ದಳು. ಶ್ರೀವೃಂದಾವನವಿಹಾರಿ ಆ ಪುಣ್ಯಮಯ ಮೂರ್ತಿಯು ಮುಗುಳುನಗೆ ಸುರಿಸುತ್ತ ಈ ಕಾಮಿನಿಯು ನಿವೇದಿಸಿದ ನೈವೇದ್ಯವನ್ನು ಪ್ರೇಮದಿಂದ ಆಸ್ವಾದಿಸಿತು.

ಪರಮಾತ್ಮನ ಸಂತೋಷದ ದರ್ಶನವೆಂದರೆ ಹಗುರವಲ್ಲ! ದರ್ಶನ ವಾದಮೇಲೆ ಜೀವಕ್ಕೆ ಈ ಸಂಸಾರದಲ್ಲಿ ಯಾವುದೇ ಒಂಧು ವಸ್ತುವಿನ ಇಚ್ಛೆ ಇರುವುದಿಲ್ಲ. ಪರಮಾತ್ಮನು ಯಾವಾಗ ಸಂತೋಷದಿಂದ ದರ್ಶನ ಕೊಡುತ್ತಾನೋ ಆವಾಗಲೆ ಕೃತಾರ್ಥತೆಯ ಹೊಂದುತ್ತಾನೆ, ಭಕ್ತನು.

ಈ ಹೊತ್ತು ಸ್ವಾಮಿಯು ಭಕ್ತಿಯ ಪ್ರತ್ಯಕ್ಷಮೂರ್ತಿ ಆಗಿ ಆ ವಿಧವೆಯ ಮುಂದೆ ದರ್ಶನವನ್ನಿತ್ತುದ್ದು ನೋಡಿ ಸನ್ಯಾಸಿಯು ಕೃತಕೃತ್ಯನಾನೆಂದಂಡು ಕೊಂಡನು. ನೇತ್ರಗಳಿಂದ ಪ್ರೇಮಾಶ್ರು ಪ್ರವಾಹಿತವಾಯಿತು ! ನಿಮಿಷ ನಿಮಿಷಕ್ಕೆ ಪರಮಾತ್ಮನನ್ನು ನೋಡುತ್ತ ನೋಡತ್ತ ಸನ್ಯಾಸಿಗೆ ತನ್ನ ಶರೀರದ ಭಾವನೆ ಉಳಿಯಲಿಲ್ಲ. ಇದೇ ಮೂರ್ತಿಯೆ ಅದೇ ಸ್ವಾಮಿಗೆ ದರ್ಶನ ಕೊಟ್ಟಿತ್ತು, ಸ್ವಪ್ನದಲ್ಲಿ.

ಭಕ್ತಿಮತಿವಿಧವೆಯು ಗದ್ಗದವಾಣಿಯಿಂದ ಪರಮಾತ್ಮನನ್ನು ಸ್ತುತಿಸಿದಳು. ಆರತಿಯ ತರುವಾಯ ಪುಷ್ಪಾಂಜಲಿ ನಿವೇದನೆಮಾಡಿ ಪೂಜೆಯಿಂದ ನಿವೃತ್ತಳಾಗಿ ಅಂಗಳದ ಕಡೆಗೆ ದೃಷ್ಟಿಯನ್ನಿಟ್ಟಾಗ ಒಬ್ಬ ತಪೋಮೂರ್ತಿಯಾದ ಸನ್ಯಾಸಿಯು ನಿಂತಿದ್ದಾನೆ. ಅವಳು ಶ್ರದ್ಧೆಯಿಂದ ಸನ್ಯಾಸಿಯ ಪಾದಾರವಿಂದಕ್ಕೆ ಎರಗಿ ಪ್ರಶ್ನೆಯನ್ನಿತ್ತಳು :— ಪ್ರಭೋ ! ತಾವು ಯಾರು ? ಮತ್ತು ಎಲ್ಲಿಂದ ಯಾವ ಪ್ರಯೋಜನದಿಂದ ಈ ಮಂದಿರ ದಲ್ಲಿ ಬರುವ ಕೃಪೆ ಮಾಡಿದಿರಿ ?

ಸನ್ಯಾಸಿಯು ತನ್ನ ಜೀವನದಲ್ಲಿ ಇದೇ ಮೊದಲು ಆ ಭಕ್ತಿಮತಿ ಪೂಜಾರಿಯ ದರ್ಶನ ಮಾಡಿದ್ದು. ಅವನು ಈ ಅಲೌಕಿಕ ಲೀಲೆಯನ್ನು ನೋಡಿ ಅವಾಕ್ಕನಾಗಿದ್ದನು:ನೇತ್ರಗಳಲ್ಲಿ ಪ್ರೇಮಾಶ್ರುವು ತಡೆಯಲಾಗುತಿರಲಿಲ್ಲ. ಹೀಗಿದ್ದ ಸನ್ಯಾಸಿಯು ಪ್ರಯತ್ನದಿಂದ ಹೇಳಿದ್ದೆಂದರೆ; ಕಲ್ಯಾಣಿ ! ನಾನೊಬ್ಬ ಹೀನ ಪಂಕ್ತಿಯ ಸನ್ಯಾಸಿ ಇದ್ದೇನೆ. ಭಿಕ್ಷೆಗಾಗಿ ಇಲ್ಲಿಗೆ ಬಂದಿರುವೆನು.

ಸಾಧ್ವಿಯು ಈ ಮಾತು ಕೇಳಿ ಸಂತೋಷದಿಂದ “ದೇವ ! ನಾನೀಯುವ ಭಿಕ್ಷೆಯನ್ನು ಸ್ವೀಕರಿಸಿ ಈ ಹೊತ್ತು ಈ ದುಃಖಿತಳನ್ನು ಕೃತಾರ್ಥಳನ್ನು ಮಾಡಿರಿ” ಎಂದು ಆ ಸನ್ಯಾಸಿಗೆ ಭಿಕ್ಷೆಯನ್ನು ಮಾಡಿಸಿದಳು.

ಸನ್ಯಾಸಿಯು ಪ್ರೇಮದಿಂದ ಪ್ರಸಾದ ಸ್ವೀಕರಿಸಿ “ತಾಯಿ ! ಭೋಜನ ದಾನಗಳಲ್ಲಿ ದಕ್ಷಿಣೆಯ ಹೊರತು ಭಿಕ್ಷಾಗ್ರಹಣವು ಪೂರ್ತಿಯಾಗಲಾರದು. ಆದರೆ ನಾನು ಸನ್ಯಾಸಿ. ಹಣ–ಕಾಸುಗಳನ್ನು ಮುಟುವದಿಲ್ಲ. ನನಗೆ ಭೋಜನದಕ್ಷಿಣೆಗಾಗಿ ಈ ದೇವಮೂರ್ತಿಯನ್ನು ಕೊಡು” ಎಂದನು.

ಪರಮಾತ್ಮ! ನಿನ್ನ ಆಜ್ಞೆಯನ್ನು ಪಾಲಿಸುವೆನು. ದೇವಮೂರ್ತಿಯನ್ನು ನಿಮಗೆ ಒಪ್ಪಿಸುವೆನು. ಈ ಪ್ರಕಾರ ಹೇಳಿ ಭಕ್ತಿಪೂತಾರಮಣಿಯು ವಿಗ್ರಹದ ಮುಂದೆ ನಿಂತುಕೊಂಡು ಕೆಲವು ನಿಮಿಷ ಪರಮಾತ್ಮನನ್ನು ಸ್ಮರಿಸಿ, ಹೇಳಿದಳು :– "ದೇವ! ಈ ಸಂಸಾರತ್ಯಾಗ ಮಾಡಿದ ಸಂಯಮಿ ಸನ್ಯಾಸಿಯ ಅಭಿಲಾಷಿಯಾಗುವೆಯೆಂದು ನನಗೆ ಮೊದಲೇ ಗೊತ್ತಿತ್ತು. ನೀನು ತಂದೆಯ ಸ್ವಪ್ನದಲ್ಲಿ ಕಾಣಿಸಿಕೊಂಡು ಅಪ್ಪಣೆ ಮಾಡಿದ್ದು ಈ ಹೊತ್ತು ಎದುರು ನಿಂತಿದೆ. ನಾವು ನಿನ್ನನ್ನು ಸನ್ಯಾಸಿಯ ಮನೆಗೆ ಒಪ್ಪಿಸದೆ ಇರುವ ಕಾರಣ ನಮ್ಮವರೆಲ್ಲರು ಪರಲೋಕಕ್ಕೆ ತೆರಳಿದರು. ನಾನು ವಿಧವೆ. ಭಕ್ತವತ್ಸಲ! ನನ್ನ ಮನೆಯ ಜನರನ್ನು ಬಿಟ್ಟರೂ ನಿನ್ನನ್ನು ಬಿಡಲಿಲ್ಲ. ಈಗ ನನ್ನವರೆಲ್ಲರೂ ನನ್ನನ್ನು ಬಿಟ್ಟಿದ್ದಾರೆ. ನಾನು ಒಂಟಿಗನಾದರೂ ನೀನೊಬ್ಬ ಆಧಾರ ಭೂತನಾಗಿದ್ದೆ. ಈಗ ನೀನೂ ಆತನ ಕೈ ಸೇರುವೆ. ನಿರಾಶ್ರಯ ಅನಾಥಳಿಗೆ ಸ್ಥಾನವೆಲ್ಲಿ ? ಪ್ರಭೊ! ಹೆಚ್ಚೇನನ್ನಲಿ? ಕರುಣೆಯಿಟ್ಟು ಈ ಕಂಗಾಲಿನಿಯನ್ನು ನಿನ್ನಾ ಚರಣಗಳಲ್ಲಿ ವಿಲೀನ ಮಾಡಿಕೊ !!"

ಈ ಪ್ರಕಾರ ಗದ್ಗದ ವಾಣಿಯಿಂದ ಹೇಳುತ್ತ ಪರಮಾತ್ಮನ ಪಾದ ಪದ್ಮದ ಕಡೆಗೆ ನೋಡಹತ್ತಿದಳು. ಶ್ವಾಸವು ಒಂದೇಸವನೆ ಬರುತಿತ್ತು. ಕೆಲವೇ ನಿಮಿಷದಲ್ಲಿ ಶ್ವಾಸವು ಬಂದಾಯಿತು. ಆ ಮಹಾಯೋಗಿನಿಯು ಮಾನವ ಲೀಲೆಯನ್ನು ತಪ್ಪಿಸಿಕೊಂಡು ಪರಮಾತ್ಮನ ಶ್ರೀಚರಣಾರವಿಂದಗಳಿಗೆ ಆತ್ಮನಿವೇದನೆ ಮಾಡಿದಳು !

ಡಾಕ್ಟರ ಆನಂದೀಬಾಯಿ ಜೋಶಿ

ಇವಳ ಜನ್ಮವು ಪುಣೆಯ ಗಣಪತರಾವ ಇವರಲ್ಲಿ ೧೮೬೫ರ, ಸುಮಾರಕ್ಕೆ ಆಯಿತು. ತಂದೆಯು ಧರ್ಮವಂತನು, ನೀತಿವಂತನು. ತಾಯಿಯೂ ಸಹ ಪತಿಗೆ ಅನುಗುಣವಾಗಿದ್ದಳು.

ಬಾಲ್ಯದಲ್ಲಿ ‘ಬತ್ತಿಗೆ ಮಕ್ಸು ಬಂದರೆ ಹೇಗೆ ಅಲ್ಪ ಪ್ರಕಾಶವಾಗುವುದೋ ಅಂತೆಯೆ ಆವಳ ಸುಂದರತ್ವಕ್ಕೆ ಮಕ್ಸು ಬಂದೊದಗಿತ್ತು. ತಂದೆಯು ಅವಳ ಐದನೆಯ ವರುಷದಲ್ಲಿ ಅವಳನ್ನು ಪಾಠಶಾಲೆಗೆ ಕಳುಹಿಸಿದನು. ಓದುವುದರಲ್ಲಿ ಅತ್ಯಂತ ತೀಕ್ಷ್ಣಬುದ್ಧಿಯಿತ್ತು. ಒಮ್ಮೆ ಪಾಠ ಹೇಳಿಕೊಟ್ಟರೆ ಸಾಕು. ಅದನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳುತಿದ್ದಳು. ಬಾಲ್ಯದ ಅವಳ ಮನಸ್ಸು ಆಟ-ಓಟ-ವ್ಯಾಯಾಮುಗಳ ಕಡೆಗೆ ಅಧಿಕವಾಗಿತ್ತು. ಅವಳ ಶರೀರವು ದಷ್ಟ ಪುಷ್ಟ ಮತ್ತು ಶಕ್ತಿ ತುಂಬಿ ತುಳುಕಾಡುತ್ತಿತ್ತು.

ಗೋಪಾಲ ವಿನಾಯಕಜೋಶಿ ಇವರು ಪೋಸ್ಟ ಆಫೀಸಿನಲ್ಲಿ ನೌಕರಿ ಮಾಡುತ್ತಿದ್ದರು. ಇವರಿಗೆ ಅವಳ ಸಣ್ಣ ವಯಸ್ಸಿನಲ್ಲಿಯೆ ಲಗ್ನ ಮಾಡಿಕೊಟ್ಟರು. ಜೋಶಿಯವರು ಸುಧಾರಕರು. ವಿಧವಾವಿವಾಹದ ಪಕ್ಷದವರು. ಮಿತ್ರರ ಆಗ್ರಹದಿಂದ ಈ ಮದುವೆ ಮಾಡಿಕೊಂಡರು. ಅವರೂ ತನ್ನ ಪತ್ನಿಯು ಸುಶಿಕ್ಷಿತಳಾಗಬೇಕೆಂದು ಅಲೀಗಡದಲ್ಲಿಟ್ಟರು.ಆನಂದೀಬಾಯಿಯು ಓದುವುದರಲ್ಲಿ ತೊಡಗಿದಳು. ಪತಿಯ ಎಲ್ಲ ಪತ್ರಗಳನ್ನು ಅವಳೇ ಬರೆಯುತ್ತಿದ್ದಳು. ಆದ್ದರಿಂದ ಅವಳ ಭಾಷೆಯು ಸುಧಾರಿಸಿತು. ಗೋಪಾಲರಾಯರು, ಪತ್ನಿಯು ಇಂಗ್ಲೀಷು ಕಲಿಯುತ್ತಿರುವಾಗ ತನ್ನ ಜೊತೆಗೆ ಅಡ್ಡಾಡಲು ಕರೆದುಕೊಂಡು ಹೋಗುತ್ತಿದ್ದರು.

ಅಲೀಗಡದಿಂದ ಅವರು ಕೊಲ್ಲಾಪುರಕ್ಕೆ ಬದಲೀಮಾಡಿಕೊಂಡರು. ಗೋಪಾಲರಾಯರು ಕ್ರೈಸ್ತಗುರುಗಳಹತ್ತರ ಪತ್ರವ್ಯವಹಾರಮಾಡಿ, ತನ್ನ ಪತ್ನಿಯು ಅಮೇರಿಕೆಗೆಹೋಗಿ ಉಚ್ಚಶಿಕ್ಷಣ ಹೊಂದಬೇಕೆಂದು ಇಚ್ಛಿಸಿದರು. ಕ್ರೈಸ್ತಗುರುಗಳು ಈಬಗ್ಗೆ ಸಹಾಯವನ್ನೀಯಲಿಲ್ಲ. ಅವರು ಆನಂದೀಬಾಯಿಗೆ ಕ್ರೈಸ್ತಧರ್ಮವನ್ನು ಚೆನ್ನಾಗಿ ತಿಳಿಸಿದರು. ಗೋಪಾಲರಾಯ ಮತ್ತು ಕ್ರೈಸ್ತಗುರುಗಳ ಪತ್ರವ್ಯವಹಾರವು“ಕ್ರಿಶ್ಚನ್ ರಿವ್ಯೂ”ದಲ್ಲಿ ಹೊರಟಿತ್ತು. ಅಮೇರಿಕೆಯ ಒಬ್ಬ ಮಹಿಳೆಯಾದ ಕಾರ್ಪೆಂಟಳು ಈ ಪತ್ರವ್ಯವಹಾರದ ಮೇಲೆ ತನ್ನ

ದೃಷ್ಟಿಹಾಕಿದ್ದು, ಅವಳು ಆನಂದೀಬಾಯಿಗೆ ಪತ್ರ ಬರೆದಳು. ಆ ಪತ್ರವೇ ಈಕೆಗೆ ಸಾವಕಾಶ ಅಮೇರಿಕೆಗೆ ತೀರ ಸಮೀಪಸ್ನೇಹದ ದಾರಿಯಾಯಿತು.

ಗೋಪಾಲರಾಯರು ಕೊಲ್ಲಾಪುರದಿಂದ ಮುಂಬಯಿಗೆ ಪತ್ನಿಯ ಶಿಕ್ಷಣದ ದೃಷ್ಟಿಯಿಂದ ಹೋದರು. ಆನಂದೀಬಾಯಿಯನ್ನು ಕ್ರಿಶ್ಚನ್ ಸ್ಕೂಲಿಗೆ ಹಾಜರ ಮಾಡಿದರು. ಅಲ್ಲಿ ಶಿಕ್ಷಣದ ಸರಿಯಾದ ವ್ಯವಸ್ಥೆ ಆಗಲಿಲ್ಲ. ಆದ್ದರಿಂದ ಅವನೇ ಪತ್ನಿಗೆ ಕಲಿಸಲು ಪ್ರಾರಂಭಿಸಿದನು. ಆನಂದೀಬಾಯಿಗೆ ಇಗ್ಲೀಷಿಗಿಂತ ಸಂಸ್ಕೃತಜ್ಞಾನವು ಹೆಚ್ಚಾಯಿತು.ಅವಳು ಅಡಿಗೆಮಾಡುವುದನ್ನು ಕಲಿತಳು. ಎರಡನೆ ಸ್ತ್ರೀಯರಿಂದ ಸಿಲಾಯಿ ಮತ್ತು ಕಸೂತಿಯನ್ನು ಕಲಿತಳು. ಪೋಸ್ಟನಲ್ಲಿ ಇದೇವೇಳೆಗೆ ಪತ್ರವಿಭಾಗದಿಂದ ಸ್ತ್ರೀಯರನ್ನಿಡುವ ಕಾಯಿದೆಯು ಪಾಸಾಯಿತು. ಗೋಪಾಲರಾಯರು ತನ್ನ ಪತ್ನಿಗೆ ಈ ಭಾಗದಲ್ಲಿ ಸ್ಥಾನ ಕೊಡುವುದಕ್ಕಾಗಿ ಬದಲೀಮಾಡಿ ಕಲಕತ್ತೆಗೆ ಹೋಗಲು ನಿರ್ಧರಿಸಿದರು. ಆದರೆ ಅವಳು ಸಮ್ಮತಿಸಲಿಲ್ಲ. ಆದ್ದರಿಂದ ಅವರು ರಜೆತೆಗೆದುಕೊಂಡು ಇಬ್ಬರೂ ತೀರ್ಥಯಾತ್ರೆಗೆ ಹೊರಟರು.

ಒಂದುದಿವಸ ಅವರಿಗೆ ಹೀಗೆಹೊಳೆಯಿತು "ಪ್ರಪಂಚದಲ್ಲಿ ಸ್ತ್ರೀಯರು ಡಾಕ್ಟರಿಕೆ ಮಾಡುವದಿಲ್ಲ. ಅದರಿಂದ ಸ್ತ್ರೀಯರಿಗೆ ಯೋಗ್ಯವಾದ ಚಿಕಿತ್ಸೆ ಯಾಗುವದಿಲ್ಲ." ಹೀಗೆ ತಿಳಿದ ಅವರು ತನ್ನ ಪತ್ನಿಯನ್ನು ಅಮೇರಿಕೆಗೆ ಕರಕೊಂಡುಹೋಗಿ ಡಾಕ್ಟರಪರೀಕ್ಷೆ ಕೊಡಿಸುವ ನಿಶ್ಚಯ ಮಾಡಿದರು. ಆಗ ತೀರ್ಥಯಾತ್ರೆಯನ್ನು ನಿಲ್ಲಿಸಿ ಇಬ್ಬರೂ ಹೋಗುವ ಪ್ರಯತ್ನ ನಡಿಸಿದರು. ಆದರೆ ಆಗಲಿಲ್ಲ. ಆದ್ದರಿಂದ ಪತ್ನಿಯೊರ್ವಳನ್ನೆ ಕಳುಹಿಸಲು ನಿಶ್ಚಯಿಸಿದರು. ಅಂತು, ಆನಂದೀಬಾಯಿಯು ಗಂಡನ ಮನೆಗೆ ಬಂದಳು.

ಆನಂದೀಬಾಯಿಯು ಯಾತ್ರೆಮಾಡುವ ಮೊದಲೇ ಶ್ರೀಮತಿ ಕಾರ್ಪೆಂಟರಳಿಗೆ ಪತ್ರಬರೆದಿದ್ದಳು—"ನಾನು ಯಾವುದಾದರೊಂದು ಉದ್ದೇಶದಿಂದ ಅಮೇರಿಕೆಗೆ ಬರತಕ್ಕವಳು. ಒಂದುವೇಳೆ ಆದು ಸಿದ್ಧಿಯಾಗ ದಿದ್ದರೆ ಸ್ವದೇಶಕ್ಕೆ ಮೋರೆ ತೋರಿಸುವವಳಲ್ಲ. ನಾನು ನನ್ನವಂಶಕ್ಕೆ ಕಲಂಕ

ತರುವದಿಲ್ಲ. ನಾನು ಕರ್ತವ್ಯದ ಪಾಲನೆ ಮಾಡುವೆನು. ಇಷ್ಟ ಅಥವಾ ಅನಿಷ್ಟವು ಪರಮಾತ್ಮನ ಬಿಟ್ಟಿಲ್ಲ. ನನಗೆ ಯಾವದರ ಭಯವಿಲ್ಲ. ನಾನು ವಾಸಿಸುವ ಮನೆಯವರು ನನ್ನನ್ನು ಪುತ್ರಿಯಂತೆ ನೋಡಬೇಕು. ನಾನೇ ಸ್ವಂತ ಅಡಿಗೆ ಮಾಡಿಕೊಳ್ಳುವೆನು. ಇತ್ಯಾದಿ ಇತ್ಯಾದಿ." ಅವಳ ಪತ್ರಕ್ಕೆ ಪ್ರತಿಯಾಗಿ ಕಾರ್ಪೆಂಟರಳು ಬರೆದಿದ್ದೇನಂದರೆ—" ಇಂಥ ಬುದ್ಧಿಯುಳ್ಳ ಮತ್ತು ಸಂತೋಷ ಮುಖವುಳ್ಳ ಸ್ತ್ರೀಯರನ್ನು ನಾನು ಎಂದೂ ನೋಡಲಿಲ್ಲ. ಎಂದಲ್ಲಿ ಯಾವಾಗಲೂ ಹಂಬಲಿಸುತ್ತಿರುವೆನು." ಇತ್ಯಾದಿ.

ಒಬ್ಬ ಅಮೇರಿಕೆಯ ಮಹಿಳೆಯಾದ ಶ್ರೀಮತಿ ಜಾಂಸನಳು ಅವಳನ್ನು ತನ್ನ ಸಂಗಡ ಅಮೇರಿಕೆಗೆ ಕರಕೊಂಡುಹೋಗುವ ಮಾತುಕೊಟ್ಟಳು. ಎಪ್ರೇಲ್ ೭ ಸನ್ ೧೮೮೩ನೇ ದಿವಸಆನಂದೀಬಾಯಿಯು ಹೊರಟಳು. ಅವಳು ಮೂರು ವರ್ಷಕ್ಕೆ ಬೇಕಾಗುವಸೀರೆ, ಕಾಜಿನ ಬಳೆ, ಮೊದಲಾದವುಗಳನ್ನು ತೆಗೆದುಕೊಂಡು ಹೊರಟಳು. ಅವಳ ಹತ್ತರ ಉಣ್ಣೆಯ ಕಂಬುಳಿಯಿತ್ತು.

ಹಡಗವು ಹದಿನಾರು ದಿವಸಗಳಲ್ಲಿ ಲಿವರಪುರದ ಮೇಲಿಂದ ಅಮೇರಿಕೆಗೆ ಮುಟ್ಟಿತು. ಶ್ರೀಮತಿ ಜಾಂಸನ್ನಳು ಆನಂದೀಬಾಯಿಗೆ ನೀನು ನನ್ನ ಸಂಗಡ ಇರಬೇಕಾಗುವದೆಂದು ತಿಳಿಸಿದ್ದಳು. ಬಂದರದಲ್ಲಿಯೇ ಶ್ರೀಮತಿ ಕಾರ್ಪೆಂಟರಳು ಭೆಟ್ಟಿಯಾದಳು. ಆನಂದೀಬಾಯಿಯನ್ನು ಕರೆದುಕೊಂಡು ತಾನು ನಿವಾಸಮಾಡುವ ನ್ಯೂ ಜರಸಿಗೆ ಹೋದಳು.

ನ್ಯೂ ಜರಸಿ ಪಟ್ಟಣದಲ್ಲಿ ಆನಂದೀಬಾಯಿಯು ನಾಲ್ಕು ತಿಂಗಳು ವಾಸಿಸಿದಳು. ಇಲ್ಲಿ ಅವಳು ಬಂದಮರುದಿವಸವೇ ಅಡಿಗೀ ಕೆಲಸ ಕೈಕೊಂಡಳು. ಅಮೇರಿಕೆಯ ಶೀತದಿಂದ ಗುಜರಾಥೀರೀತಿಯಂತೆ ಕಾಲು ಮುಚ್ಚುವಷ್ಟು ಉದ್ದವಾದ ಸೀರೆಯನ್ನುಡಲು ಪ್ರಾರಂಭಿಸಿದಳು. ಅವಳ ಪ್ರಭಾವದಿಂದ ಶ್ರೀಮತಿ ಕಾರ್ಪೆಂಟರ ಮನೆಯ ಹೆಸರು. **ಶಾಂತಿಭವನ** ವೆಂದಾಯಿತು. ಹುಡುಗಿಯರು ತಮ್ಮ ಹೆಸರುಗಳನ್ನು ತಾರಾ, ಪ್ರಮೀಳಾ ಮತ್ತು ಸುಗುಣಾ ಇಂಥವನ್ನು ಇಟ್ಟುಕೊಳ್ಳಲಾರಂಭಿಸಿದರು. ಅವರೆಲ್ಲರು ಸೀರೆ

ಯನ್ನುಡಲು ತೊಡಗಿದರು. ಮಹಾರಾಷ್ಟ್ರದ ರೀತಿಯಂತೆ ಕೂದಲಗಳನ್ನು ಉದ್ದ ಬೆಳೆಸಿ ಜಡೆ ಕಟ್ಟುವುದು ಮತ್ತು ಹಣೆಯಲ್ಲಿ ಕುಂಕುಮ ಮೊದಲಾದವನ್ನು ಇಡುವುದು ಮುಂತಾದ ಹಿಂದೂಪದ್ಧತಿಯನ್ನು ಪ್ರಾರಂಭಿಸಿದರು. ಈ ಶಿಸ್ತು ಕೆಲವು ದಿನಗಳವರೆಗೆ ನಡೆಯಬೇಕಾಯಿತು. ಅವಳು ಯಾವಾಗಲೂ ಆನಂದದಲ್ಲಿಯೇ ಇರುತ್ತಿದ್ದಳು.ಎಲ್ಲರೂ ಇವಳ ಮೇಲೆ ಸ್ನೇಹವನ್ನಿಟ್ಟಿದ್ದರು. ಪತಿಯ ಪತ್ರವು ಕೈಗೆ ಸಿಗಲು ಸ್ವಲ್ಪ ತಡವಾದರೆ ಚಿಂತಾಕ್ರಾಂತಳಾಗುತ್ತಿದ್ದಳು. ತನ್ನ ಚಿಂತೆಯನ್ನು ಎರಡನೆಯವರಿಗೆ ತಿಳಿಸುತ್ತಿರಲಿಲ್ಲ.

ನ್ಯೂ ಜರಸೀ ಪಟ್ಟಣವನ್ನು ಬಿಡುವಾಗ ಆನಂದೀಬಾಯಿಯು ಪರಿಚಿತರಿಗೆ ತನ್ನ ಅಡ್ರೆಸ್‌ಕೊಟ್ಟಳು. ಅಮೇರಿಕದಿಂದ ಶ್ರೀಮತಿ ಕಾರ್ಪೆಂಟರ ಸಂಗಡ ಡಿಶಂಬರ ೨೭ ಸನ್ ೧೮೮೩ರಕ್ಕೆ ಫಿಲಾಡೇಲ್ಫಿಯಾಕ್ಕೆ ಹೊರಟಳು. ಇಲ್ಲಿ ಒಂದು ಚಿತಾಕಾಲೇಜ ಇತ್ತು. ಅಲ್ಲಿಯ ಅಧಿಕಾರಿಗಳು ಆನಂದೀಬಾಯಿಯ ಅಭಿನಂದನೆ ಮಾಡಿದರು ಮತ್ತು ಕಾಲೇಜಿನಲ್ಲಿ ಸೇರಿಸಿಕೊಂಡರು. ಅವಳಿಗೆ ವಾಸಿಸಲು ಮನೆಯ ವ್ಯವಸ್ಥೆಮಾಡಿ ಶ್ರೀಮತಿ ಕಾರ್ಪೆಂಟರಳು ಮನೆಗೆಬಂದಳು. ಈ ಮನೆಯಲ್ಲಿ ಬಹಳ ಕಷ್ಟಸಹಿಸಬೇಕಾಯಿತು. ೧೦-೧೧ಗಂಟೆಯವರೆಗೆ ಓದುವುದು ನಂತರ ಊಟ-ಅಡಿಗೆ ಮಾಡುತ್ತಿದ್ದಳು. ಅವಳ ದೇಹದಾರ್ಢ್ಯವು ಬೀಳಲು ಹತ್ತಿತು. ಕುತ್ತಿಗೆಯಮೇಲೆ ಡಿಪ್ಥಿರಿಯಾ ರೋಗವಾಯಿತು. ಈ ರೋಗದಿಂದ ಜೀವಂತಳಾಗಿ ಉಳಿಯುವ ಆಶೆ ಇರಲಿಲ್ಲ. ಆದರೆ ಕೆಲವು ಜೊತೆಗಾರರ ಸೇವೆಯಿಂದ ಆರೋಗ್ಯ ಹೊಂದಿದಳು. ಈ ಕಾಲೇಜಿನಲ್ಲಿ ಆನಂದೀ ಬಾಯಿಯು ವನಸ್ಪತೀ ಶಾಸ್ತ್ರವನ್ನು ಪೂರ್ಣ ಅಭ್ಯಾಸಮಾಡಿದಳು. ಫ್ರೇಂಚ ಮತ್ತು ಜರ್ಮನಭಾಷೆ ಕಲಿಯಲು ಪ್ರಯತ್ನ ನಡೆಸಿದಳು. ಸಭೆಗಳಲ್ಲಿ ಮಾತನಾಡುವಾಗ ಮತ್ತು ಇತರ ವೇಳೆಯಲ್ಲಿ ಮಾತನಾಡುವಾಗಸಹ ಭಾರತೀಯಸಂಸ್ಕೃತಿಯ ಪರವಾಗಿದ್ದ ಅಮೇರಿಕೆಯ ಭ್ರಮೆಯನ್ನು ದೂರಮಾಡಿಕೊಳ್ಳುತ್ತಿದ್ದಳು. ಗೋಪಾಲರಾಯರು ಕ್ರಿಶ್ಚನ್ನನಾಗಿ

ಅಮೇರಿಕೆಗೆ ಹೋಗಲು ನಿಶ್ಚೈಸಿದರು. ಅದುಗೊತ್ತಾದ ಆನಂದೀ ಬಾಯಿಯು ತಡೆದಳು.

ಪತಿಗೆ ಮನಿಯಾರ್ಡರ ಖರ್ಚುಸಹಿತ ತಿಂಗಳಿಗೆ ೫೦ರೂಪಾಯಿಗಳನ್ನು ಕಳುಹಿಸಿಕೊಡಬೇಕೆಂದು ಬರೆದಿದ್ದಳು. ಅಮೇರಿಕೆಯಂಥ ಪಟ್ಟಣಗಳಲ್ಲಿ ಇಷ್ಟು ಅಲ್ಪ ಹಣದಿಂದ ಜೀವನ ಸಾಗಿಸುವುದನ್ನು ನೋಡಿ ಆಶ್ಚರ್ಯ ಪಡುತ್ತಿದ್ದರವರು. ಅವಳು ಯಾವಾಗಲೂ ಓದುತ್ತಿದ್ದಳು. ಬೇರೆ ಕೆಲಸ ಮಾಡುತ್ತಿದ್ದಿಲ್ಲ.

ಒಬ್ಬ ಅಮೇರಿಕೆಯ ಪಾದರಿಯು "ಶ್ರೀಮತಿ ಜೋಶಿಯವರು ಇಲ್ಲಿ ಬಂದಾಗ ಇದ್ದ ಸ್ಥಿತಿಯಲ್ಲಿಯೇ ಈಗಲೂ ಇದ್ದಾರೆ. ಯಾವ ಪರಿವರ್ತನೆಯೂ ಆಗಲಿಲ್ಲವೆಂದು" ಗೋಪಾಳರಾಯರಿಗೆ ಪತ್ರ ಬರೆದಿದ್ದಳು.

ಸನ್ ೧೮೮೬ ರಲ್ಲಿ ಗೋಪಾಲರಾಯರು ನೌಕರಿ ಬಿಟ್ಟು ಅಮೇರಿಕೆಗೆ ಹೋದರು. ಹೋದವರೆ ಸೀದಾ ಪತ್ನಿಯ ಬಳಿಗೆ ಹೋಗಲಿಲ್ಲ. ಅಮೇರಿಕೆಯ ಪಟ್ಟಣಗಳಲ್ಲಿ ಅಲ್ಲಿ-ಇಲ್ಲಿ ತಿರುಗಾಡುತ್ತ ವ್ಯಾಖ್ಯಾನ ಮಾಡಹತ್ತಿದರು. ಒಂದು ದಿವಸ ಆನಂದೀಬಾಯಿಯು ಅಡ್ಡಾಡಿಬಂದು ಮನೆಯಲ್ಲಿ ಕುಳಿತಿರುವಾಗ ಗೋಪಾಲರಾಯರು ಬರುವ ಸೂಚನೆ ಕೊಡದೆ ಆಕಸ್ಮಾತ್ತಾಗಿ ಬಂದರು. ದೀರ್ಘಪ್ರವಾಸದಿಂದ ಗೋಪಾಲರಾಯರು ಜ್ವರದಲ್ಲಿ ಬಳಲುತ್ತಿದ್ದರು. ಆನಂದೀಬಾಯಿಯ ಸೇವೆಯಿಂದ ಸ್ವಾಸ್ಥ್ಯವನ್ನು ಹೊಂದಿದರು. ಅವರಲ್ಲಿ ಜನತೆಗೆ ಬೋಧ ಮಾಡುವ ಶಕ್ತಿಯಿತ್ತು.

ಆನಂದೀಬಾಯಿಗೆ ಮತ್ತೆ ಸನ್ ೧೮೮೫ ರಲ್ಲಿ ಕುತ್ತಿಗೆಯ ರೋಗ ವಾಯಿತು. ಬೇಗನೇ ಈ ರೋಗದಿಂದ ಬಿಡುಗಡೆಯಾದಳು. ಮಾರ್ಚವಲ್ಲಿ ಅವಳು ಕಾಲೇಜಿನ ಸರ್ವಶ್ರೇಷ್ಠ ಎಮ್. ಡಿ. ಉಪಾಧಿಯನ್ನು ತೆಗೆದು ಕೊಂಡಳು. ಆ ಕಾಲೇಜಿನಲ್ಲಿ ಈ ಉಪಾಧಿಯು ವಿಶ್ವದಲೇ ಶ್ರೇಷ್ಠತಮ ವಾಗಿತ್ತು. ಕಾಲೇಜಿನವರು ಈ ಉಪಾಧಿಯ ಸಮಾರೋಹಣಕ್ಕೆ ಲಂಡನದ

ಪಂಡಿತ ರಮಾಬಾಯಿಗೆ ಆಮಂತ್ರಣ ಮಾಡಿದ್ದರು. ಆನಂದೀಬಾಯಿಯು ಅಶಕ್ತತೆಯಿದ್ದಳು. ಅಷ್ಟಕ್ಕೆ ರಮಾಬಾಯಿಯ ಮಗಳು ಮನೋರಮಾ ಅತ್ಯಂತ ಶೀಕಿಗೆ ಬೀಳಲು ಅವಳ ಶುಶ್ರೂಷೆಗಾಗಿ ಅತ್ಯಧಿಕ ಶ್ರಮ ಪಟ್ಟಿದ್ದರಿಂದ ಅವಳೂ ಆ ತುತ್ತಿಗೀಡಾದಳು. ಸ್ವಲ್ಪ ಸ್ವಸ್ಥಳಾದ ಮೇಲೆ ಪೂರ್ವದಂತೆಯೆ ಚಿಕಿತ್ಸೆಯ ವ್ಯಾವಹಾರಿಕಜ್ಞಾನಕ್ಕಾಗಿ ನ್ಯೂಫಾಉಂಡ ಲಂಡಕ್ಕೆ ಹೋದಳು.

ಅಶಕ್ತತತೆಯಲ್ಲಿದ್ದ ಆನಂದೀಬಾಯಿಯವಳು ಅಲ್ಲಿಂದ ಕೆಲವಷ್ಟು ದಿವಸಗಳ ನಂತರ ಅದೇ ಆಶಕ್ತತೆಯಲ್ಲೇ ಸ್ವದೇಶಕ್ಕೆ ತಿರುಗಲು ಸಂಕಲ್ಪಿಸಿ, ಒಬ್ಬೊಂಟಿಗಳಾಗಿಯೇ ಹೋಗುವುದನ್ನೂ ನಿಶ್ಚಿಯಿಸಿ ಅಮೇರಿಕೆಯಿಂದ ಕಾಲುನಡೆಯಲ್ಲೇ ಬರುತ್ತಿದ್ದಳು.

ಒಂದು ಊರಲ್ಲಿ ಒಬ್ಬ ಬಡವಿ ಗರ್ಭಿಣಿಯಿದ್ದಳು. ಅವಳು ಬಹಳ ಸಂಕಟಕ್ಕೀಡಾದ ವರ್ತಮಾನಕೇಳಿ ಅಲ್ಲಿ ಹೋದಳು. ಅವಳ ಶ್ರಮದಿಂದ ಗರ್ಭಿಣಿಯ ಜೀವ ಉಳಿಯಿತು. ಮೊದಲೇ ಆಶಕ್ತಳಿದ್ದು ಆಶ್ರಮದಿಂದ ಆನಂದೀಬಾಯಿಯು ಅತ್ಯಧಿಕ ಜ್ವರಕ್ಕೀಡಾದಳು.

ಅಂತು, ಜಲಮಾರ್ಗಕ್ಕೆ ಬಂದು ಮುಟ್ಟಿದಳು.

ಮಾರ್ಗದಲ್ಲಿ ನಾನಾಪ್ರಕಾರದ ಕಷ್ಟಗಳು ಬಂದೊದಗಿದವು. ಕಷ್ಟಗಳನ್ನು ಸಹಿಸುತ್ತ ೧೬ಡಿಶಂಬರ ಸನ್ ೧೮೮೬ಕ್ಕೆ ಭಾರತದೇಶಕ್ಕೆ ಮುಟ್ಟಿದಳು. ದೇಶವಾಸಿಗರು ಮತ್ತು ಗೋಪಾಲರಾಯರ ಸ್ನೇಹಿತರೂ ಬಂದರದಲ್ಲಿಯೇ ಸ್ವಾಗತ ಮಾಡಿದರು. ಗೋಪಾಲರಾಯರು ಪತ್ನಿಯನ್ನು ಕರಕೊಂಡು ಪುಣೆಗೆ ಹೋದರು. ಡಾಕ್ಟರರಿಂದ ನಿರಾಶೆಯಾಗಿ ದೇಶೀ ದವಾ ಪ್ರಾರಂಭಿಸಿದಳು. ಕೊನೆಗೆ ೨೬ ಫೇಬ್ರುವರಿ ೧೮೮೭ರಲ್ಲಿ ಈ ಮಹಿಳೆಯು ಇಹಲೋಕದ ಯಾತ್ರೆಯನ್ನು ಮುಗಿಸಿದಳು!

ಪ್ರಶ್ನೆ ಮತ್ತು ಉತ್ತರದಿಂದ ಕೊಡಿದ "ಶ್ರೀಮತಿ ಕಾರ್ಪೆಂಟರ ಇವಳ ಚಿತ್ರ ಪುಸ್ತಕ ತಮಗೆ ಸೇರುವದೇನು ?" ಎಂಬ ಪುಸ್ತಕವನ್ನು ಡಾಕ್ಟರ ಆನಂದೀಬಾಯಿಯು ಬರೆದಿರುವಳು. ಈ ಉತ್ತರದಲ್ಲಿ ಆವಳ ಮಹತ್ವ ಮತ್ತು ಧರ್ಮ ಇವೆರಡೂ ಭಾವನೆಗಳು ಪ್ರಕಾಶವಾಗಿವೆ.

ಅವುಗಳವಿವರ:—

೧ ಒಳ್ಳೇ ಸೌಂದರ್ಯ ರಾಶಿ ಯಾವದು?=ಒಳ್ಳೆ ನಡತೆ ಮತ್ತು ಸದಾಚಾರ

೨ ರುಚಿಕರವಾದ ಹೆಸರು ಯಾವದು?=ರಮಾ, ಉಮಾ, ಕೃಷ್ಣ, ವಿಷ್ಣು.

೩ ಒಳ್ಳೆ ಕಾವ್ಯ ಯಾವದು?=ಮನುವಿನ ಕಾವ್ಯ.

೪ ಸ್ತ್ರೀಕವಿಗಳಲ್ಲಿ ಒಳ್ಳೆ ಕವಿಯಾರು? = ಮುಕ್ತಾಬಾಯಿ ಜನೂಬಾಯಿ (ಮರಾಠೀಭಕ್ತಕವಿ)

೫ ಮನೋರಂಜನವಾದ ಪುಸ್ತಕಯಾವದು?= ಭಗವದ್ಗೀತಾ

೬ ಪ್ರೀತಿಯ ಗುಣ ಯಾವದು ?=ಸತ್ಯ ಮತ್ತು ಶುದ್ಧಾಚಾರ.

೭ ತಿರಸ್ಕಾರ ಪಾತ್ರಯಾವದು?=ನಾಸ್ತಿಕ ಮತ್ತು ಮಿಥ್ಯಾಚಾರಿ.

೮ ನಿಜವಾದ ಸುಖವೆಲ್ಲಿದೆ?=ಪರಮಾತ್ಮನ ನಿಷ್ಠೆಯಲ್ಲಿ.

೯ ಶ್ರೇಷ್ಠ ಮನೋವೃತ್ತಿ ಯಾವದು?=ಪ್ರೀತಿ.

೧೦ ನಿನಗೆ ಪ್ರಿಯವಾದ ಶಬ್ದ ಯಾವದು?=ಪ್ರೇಮ, ದಯೆ, ಆಶೆ, ಸತ್ಯ.

೧೧ ನಿನಗೆ ಯಾವ ಶಬ್ದವು ಅಪ್ರಿಯವಾಗಿದೆ? = ನಾಶ ಮತ್ತು ಪರಿತ್ಯಕ್ತ.

೧೨ ನಿನ್ನ ಜೀವನದ ಉದ್ದೇಶವೇನು?=ಪರೋಪಕಾರ ಮಾಡುವದು.

೧೩ ನಿನ್ನ ಮನಸ್ಸಿನಲ್ಲಿ ಯಾವ ವಾಕ್ಯವಿದೆ?=ಶ್ರೀ ಹರಿಯು ಕೊಡುವನು.

ಶ್ರೀಮತಿ ಕಸ್ತೂರಾಬಾ

ಭೂಲೋಕಲ್ಲಿ ವೀರಾಂಗನೆಯಾದ ದುರ್ಗಾವತಿ ಮತ್ತು ಲಕ್ಷ್ಮೀಬಾಯಿ ಇವರ ಹಾಗೆ ಕಸ್ತೂರಾಬಾ ಇವಳು ಖಡ್ಗವನ್ನು ಎತ್ತಿ ಹಿಡಿಯದಿದ್ದರೂ, ಅಹಲ್ಯಾಬಾಯಿಯ ಹಾಗೆ ಸಿಂಹಾಸನದ ಮೇಲೆ ಕುಳಿತು ರಾಜ್ಯಕಾರಭಾರ ಮಾಡದಿದ್ದರೂ, ಅವಳಲ್ಲಿ ಅಪಾರ ಶೌರ್ಯ ಮತ್ತು ಸಾಹಸ ಇತ್ತು. ಅವಳು ರಾಷ್ಟ್ರದ ಸೇವಕಳಾಗಿದ್ದಳು. ಕೇವಲ ಭೂಮಿಯ ಮೇಲೇ ಅಲ್ಲ, ಜೀವ ಎತ್ತಿದ ಜಂತುಗಳ ಹೃದಯದಲ್ಲಿ ಅವಳ ರಾಜ್ಯವಿತ್ತು. ಅವಳ ಸತ್ತೆಯು ಅರಮನೆಯಿಂದ ಗುಡಿಸಲ ವರೆಗೆ ಒಂದೇ ಸವನೆ ನಡೆಯುತ್ತಿತ್ತು.

ಹತ್ತೊಂಬತ್ತನೆ ಶತಮಾನದಲ್ಲಿ ಕೊನೆಯ ಚರಣ ವಿದೇಶೀಯ ಗುಲಾಮಿಯ ಶಾಸನದಿಂದ ಬಂದಿಯಾಯಿತು. ಇದು ಭಾರತಕ್ಕೊಂದು ಸಂಕಟದ ಕಾಲ. ಇಂಥ ಸಮಯದಲ್ಲಿ ಭಾರತದ ಭಾಗ್ಯಗಗನದಲ್ಲಿ, ಧೀರೋದಾತ್ತ ನಕ್ಷತ್ರಗಳು ಮೂಡಿದವು! ಗಂಗಾನದಿಯ ದಡದಲ್ಲಿರುವ ಪ್ರಯಾಗದಲ್ಲಿ ಮಾಲವೀಯ ಜನ್ಮವಾಯಿತು.!

ಇಂಥ ಪರಿಸ್ಥಿತಿಯಲ್ಲಿ ಗಾಂಧಿ ಮತ್ತು ಧರ್ಮಪತ್ನಿಯಾದ ಕಸ್ತೂರಾಬಾ ಇವರಿಬ್ಬರೂ ಬೋರಾಬಂದರದಲ್ಲಿ ೧೮೬೯ನೇ ಇಸ್ವಿಯ ಮೂರು ನಾಲ್ಕುತಿಂಗಳು ಹೆಚ್ಚು-ಕಡಿಮೆ ಹುಟ್ಟಿದರು. ಇಬ್ಬರ ತಂದೆಯವರೂ ಸಂಪತ್ತಿನಲ್ಲಿ ಒಬ್ಬರಿಗಿಂತ ಒಬ್ಬರು ಸರಿಗಟ್ಟುತ್ತಿದ್ದರು. ಕಸ್ತೂರಾಬಾ ಇವಳ ತಂದೆಯು ಗೋಕುಲದಾಸ ಮನೆತನದ ಮಕನ ಎಂಬ ಪ್ರಸಿದ್ಧ ವ್ಯಾಪಾರಿಯಿದ್ದನು. ತಾಯಿಯ ಹೆಸರು ವ್ರಜಕುಂವರಿ. ಶ್ರೀಮಂತ ತಂದೆಯ ಮಗಳಾದದ್ದರಿಂದ ಅವಳ ಪಾಲನವು ಒಳ್ಳೇರೀತಿಯಿಂದ ಸಾಗಿತ್ತು. ಅವರು

ವೈಷ್ಣವಮತದವರು. ಹದಿಮೂರುವರ್ಷದ ವಯಸ್ಸಿನಲ್ಲಿ ಕಸ್ತೂರಾಬಾ ಇಳನ್ನು ಗಾಂಧಿಯವರಿಗೆ ಮದುವೆಮಾಡಿ ಕೊಟ್ಟರು. ಗಾಂಧಿಯವರು ಏಕಪತ್ನೀವ್ರತದವರು. ಕಸ್ತೂರಾಬಾ ಇವಳಿಗೆ ಹದಿನೆಂಟನೆ ವರ್ಷದಲ್ಲಿ ತಾಯಿಯೆಂದುಕರೆಯಿಸಿಕೊಳ್ಳುವಸೌಭಾಗ್ಯಒದಗಿತು. ಅವಳಿಗೆಗಾಂಧಿಯವರು ತನ್ನ ಪತ್ನಿಯು ಆದರ್ಶವ್ಯಕ್ತಿಯೆಂದು ಹೇಳುತ್ತಿದ್ದರು. ಬಾಲ್ಯಾವಸ್ಥೆಯಲ್ಲಿ ಕಸ್ತೂರಾಬಾ ಇವಳಿಗೆ ತಕ್ಕಾದ ಶಿಕ್ಷಣ ದೊರೆಯಲಿಲ್ಲ. ಗಾಂಧಿಯವರಿಂದ ಅವಳು ಗುಜರಾಥೀಭಾಷೆಯನ್ನು ಅಲ್ಪ–ಸಲ್ಪ ಪ್ರಾಪ್ತಮಾಡಿಕೊಂಡಳು. ಗಾಂಧಿಯವರು ಪತಿವ್ರತಾಧರ್ಮವನ್ನು ಬೋಧೆ ಮಾಡುತ್ತಿದ್ದರು. ಅವರು ತನ್ನ ಪತ್ನಿಯು ಧರ್ಮ–ಶಾಸ್ತ್ರದೊಳಪಟ್ಟಿರಬೇಕೆಂದು ಇಚ್ಛಿಸುತ್ತಿದ್ದರು. ವಿವಾಹವಾಗಿ ಎಷ್ಟೋವರ್ಷಗಳ ವರೆಗೆ ಕಾಲೇಜದಲ್ಲಿ ಓದುತ್ತಿದ್ದರು. ಅವರು ಪತ್ನಿಯಸಂಗಡ ಮನೆಯಲ್ಲಿ ಸುಖದಿಂದ ಜೀವನ ಕಳೆಯುವ ಅಭ್ಯಾಸದಲ್ಲಿಯೆ ಮನಸ್ಸನ್ನಿಟ್ಟಿದ್ದರು. ಗಾಂಧಿಯವರು ಬ್ಯಾರಿಸ್ಟರಿಯನ್ನು ಕಲಿಯುವುದಕ್ಕೆ ವಿಲಾಯತಿಗೆ ಹೋಗಬೇಕಾಯಿತು. ಹೋಗುವಾಗ ದಕ್ಷಿಣ ಆಫ್ರಿಕಾಯಾತ್ರೆಗೆ ಪತ್ನಿಯನ್ನು ಜೊತೆಗೆ ಕರಕೊಂಡು ಹೋದರು. ಅವಳಿಗೆ ಗೃಹಜೀವನದ ಆನಂದ ಮತ್ತು ಸುಖ, ಆಫ್ರಿಕದಲ್ಲಿಯೂ ಆಯಿತು.

ಕಸ್ತೂರಾಬಾ ಅತ್ಯಂತ ಘನವಾದ ರೋಗಕ್ಕೆ ಗುರಿಯಾದಳು. ಡಾಕ್ಟರರೆಲ್ಲರೂ ಪರೀಕ್ಷೆಮಾಡಿ ಮಾಂಸದರಸ ಕೊಟ್ಟರೆ ಈ ರೋಗ ಹಿಂದಿರುಗುವುದೆಂದು ನಿಶ್ಚೈಸಿದರು. ಆದರೆ ಅವಳು ಸನಾತನೀಯ ಳಿರುವುದರಿಂದ ಮಾಂಸದ ರಸವನ್ನು ಸ್ವೀಕರಿಸಲು ಒಪ್ಪಲಿಲ್ಲ. ಇದೇವೇಳೆಗೆ ರಜಿಸ್ಟರಿ ಮದುವೆಯ ಕಾನೂನು ಹೊರಟಿತು. ಈ ಕಾನೂನು ಭಾರತೀಯರ ವಿವಾಹದ ರೀತಿ–ನಡೆ–ನುಡಿಗಳನ್ನು ಕೆಡಿಸಿತು. ಸರಕಾರದವರು ಈ ಪ್ರಕಾರ ಭಾರತೀಯರ ಸಂಪತ್ತಿಯಮೇಲೆ ಕೈಹಾಕಲು ಇಚ್ಛಿಸುತ್ತಿದ್ದರು. ಇದರ ಮೇಲೆ ಗಾಂಧಿಯವರು ಮುಂದಾಳಾಗಿ ಚಳುವಳಿ ನಡೆಸಿದರು.

ಈ ಚಳುವಳಿಯದೆಸೆಯಿಂದ ಅವರು ಮತ್ತು ಹಲವು ಸಂಗಡಿಗರೊಡಗೂಡಿ ಜೇಲಿಗೂ ಹೋಗಬೇಕಾಯಿತು. ಪತಿಯ ಆಜ್ಞೆಗನುಸಾರವಾಗಿ ಕಸ್ತೂರಾಬಾ ಇವಳು ಸ್ತ್ರೀಯರ ಮನೆಗೆಹೋಗಿ ಸತ್ಯಾಗ್ರಹದ ಶಂಖಬಾರಿಸಿದಳು. ಶಂಖಧ್ವನಿಯು ರಾಜವಾಡೆಯವರೆಗೂ ಮುಟ್ಟಿ ಅವಳೂ ಜೇಲಿಗೆಹೋದಳು. ಜೀವನ ಪುರಾಣದ ಒಂದು ಅಧ್ಯಾಯವು ಆಫ್ರಿಕೆಯಲ್ಲಿ ಪೂರ್ಣವಾಯಿತು.

ಕಸ್ತೂರಾಬಾ ಇವಳ ನಡೆ–ನುಡಿಗಳ ಪ್ರಭಾವದಿಂದ ಗಾಂಧಿಯವರ ಹೃದಯದಲ್ಲಿ ಬೆಳಕು ಮೂಡಿತು. ಗಾಂಧಿದಂಪತಿಯ ಜೀವನವು ಅತ್ಯಂತ ಪವಿತ್ರ ಮತ್ತು ಪ್ರೇಮದಾಯಕವಾಗಿತ್ತು. ಕೆಲವು ವರ್ಷದನಂತರ ಮಹಾತ್ಮರು ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿದರು. ಈ ಕಾಲಕ್ಕೆ ಅವರ ಪತ್ನಿಯ ವಯಸ್ಸು ೫೦ ವರ್ಷವಿತ್ತು. ಗಾಂಧಿಯವರು ಒಂದೊಮ್ಮೆ ಹೀಗೆ ಹೇಳಿದ್ದಾರೆ:— **“ಬ್ರಹ್ಮಚರ್ಯವು ಎಂದಿನಿಂದ ಪ್ರಾರಂಭವಾಯಿತೊ ಅಂದಿನಿಂದಲೆ ನನ್ನ ಸ್ವಾತಂತ್ರ್ಯವು ಪ್ರಾರಂಭವಾಗಿದೆ. ನನ್ನ ಪತ್ನಿಯು ಪತಿಯ ನಿಯಂತ್ರಣದಿಂದ ಬಿಡುಗಡೆಯಾದಳು. ನಾನು ಸಹ ಅವಳ ದಾಸ್ಯತ್ವದಿಂದ ಬಿಡುಗಡೆಹೊಂದಿದೆ. ಇದನ್ನು ಶಾಂತಮಾಡುವದಕ್ಕೆ ಅವಳು ವಿವಶಳಾಗಿರುವಳು. ನನ್ನನ್ನು ಎಳಕೊಳ್ಳುವ ಶಕ್ತಿ ಕಸ್ತೂರಾಬಾ ಇವಳಲ್ಲಿ ಇದ್ದಷ್ಟು ಇನ್ನೋರ್ವರಲ್ಲಿಲ್ಲ.”** ಹೀಗೆ ಹೇಳಿದ ಮಹಾತ್ಮರಿಗೆ ಜೀವಕ್ಕಿಂತಲೂ ಹೆಚ್ಚಿನ ಪ್ರೇಮವಸ್ತುಆಗಿದ್ದಳು.

ಒಂದೊಮ್ಮೆ ಗಾಂಧಿಯವರನ್ನು ಹಿಡಿದು ಜೇಲಿಗೆ ಹಾಕಿದಾಗ ಅವರ ಪತ್ನಿಯಾದ ಕಸ್ತೂರಾಬಾ ಮೂರು ಮಾತುಗಳನ್ನು ಹೇಳಿದ್ದಾಳೆ:— (೧) ಪ್ರತಿಯೊಬ್ಬ ಸ್ತ್ರೀ–ಪುರುಷನೂ ಸಹ ವಿದೇಶಿ ವಸ್ತ್ರವನ್ನು ಧರಿಸಬಾರದು. (೨) ಎಲ್ಲ ಹೆಂಗಳೆಯರೂ ಚರಕದಿಂದ ನೂಲು ತೆಗೆಯುವದು ರಾಷ್ಟ್ರದ ಕರ್ತವ್ಯವೆಂದು ತಿಳಿಯತಕ್ಕದ್ದು. (೩) ವ್ಯಾಪಾರಿಯವರು ವಿದೇಶೀ ವಸ್ತ್ರವನ್ನು ಕೊಳ್ಳಬಾರದು.

ಮಹಾತ್ಮಾ ಗಾಂಧಿಯವರಂತೆ ಕಸ್ತೂರಾಬಾ ಇವಳೂ ಭಾರತೀಯ ಚಳುವಳಿಯಲ್ಲಿ ಎಷ್ಟೋಸಲ ಸೇರಿದಳು. ೧೯೧೨ ರಲ್ಲಿ ಸತ್ಯಾಗ್ರಹ ಮತ್ತು ಅಸಹಯೋಗಯುದ್ಧದ ತರುವಾಯ ಜೇಲಿಗೆ ಹೋಗಲಿಲ್ಲ. ಆದರೂಸಹ ಚಳುವಳಿಯನ್ನು ಸಫಲ ಮಾಡುವುದಕ್ಕೆ ಸ್ತ್ರೀಸಮಾಜದಲ್ಲಿ ಎಲ್ಲರಿಗಿಂತ ಮುಂದಿದ್ದಳು.

ಸನ್ ೧೯೩೩ ರಿಂದ ೪೩ರ ವರೆಗೆ ಕಸ್ತೂರಾಬಾ ಇವಳ ಜೀವನವು ಸೇವಾಗ್ರಾಮದಲ್ಲಿ ಆಯಿತು. ಸನ್ ೧೯೩೬ ರಲ್ಲಿ ದ್ವಿತೀಯ ವಿಶ್ವಮಹಾ ಯುದ್ಧ ಮುಗಿದ ನಂತರ ಗಾಂಧಿಯವರು ವಿದೇಶಿಯವರಿಂದ ಸ್ವಾತಂತ್ರ್ಯತೆ ಯನ್ನು ಬೇಡಿದರು. ಗಾಂಧಿಯವರು ಸತ್ಯಾಗ್ರಹ ಚಳುವಳಿಯಲ್ಲಿ ಮತ್ತೆ ಮುಂದಾಳಾದರು. ಅವರ ಪತ್ನಿಯುಸಹ ಈ ಶುಭಕಾರ್ಯದಲ್ಲಿ ಸಾಕಷ್ಟು ಸಹಾಯ ಮಾಡಿದಳು. ಸನ್ ೧೯೪೨ ಅಗಸ್ಟ ೯ ಕ್ಕೆ ಮಹಾತ್ಮಾ ಗಾಂಧಿ ಮತ್ತು ಅವರ ಅನುಯಾಯಿಗಳನ್ನು ಹಿಡಿದುಕೊಂಡು ಹೋಗಿ ಜೇಲಿಗೆ ಹಾಕಿದರು. ಇಂಥ ಪರಿಸಿತ್ಥಿಯಲ್ಲಿ ಕಸ್ತೂರಾಬಾ ಅದೇ ದಿವಸ ಶಿವಾಜಿಪಾರ್ಕದಲ್ಲಿ ವ್ಯಾಖ್ಯಾನ ಮಾಡಬೇಕೆಂದು ನಿಶ್ಚೈಸಿದ್ದಳು. ಆದರೆ ಅವಳನ್ನು ಹಿಡಿದು 'ಆಗಾಖಾ' ಎಂಬ ಮನೆಯಲ್ಲಿ ಇಟ್ಟರು. ಈ ಬಾರಿ ಜೇಲು ಬದಲು ಮನೆಯಲ್ಲಿ ಇರಬೇಕಾಯಿತು. ಕಾಲಕ್ಕನುಸಾರವಾಗಿ ಗಾಂಧಿಯವರ ಸಹೋದರನಾದ ಮಹಾದೇವನ ಮೃತ್ಯು ಮತ್ತು ೨೧ ದಿವಸ ಉಪವಾಸದಿಂದ ಅವರ ಶರೀರವು ಒಣಗಿ ಹೋಯಿತು.

೨೨ ಫೆಬ್ರುವರಿ ೧೯೪೪ ನೇ ದಿವಸ ಕಸ್ತೂರಾಬಾ ಅಂತಿಮ ದಿನವು. ಆ ದಿವಸ ಪವಿತ್ರ ಶಿವತಿಥಿಯಿತ್ತು. ತಾವರೆಯು ತನ್ನ ಮಿತ್ರನಾದ ದಿನಕರನು ಅಸ್ತವಾಗಿಹೋದನೆಂದು ದುಃಖ ಪಟ್ಟುಪಟ್ಟು ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಪ್ರಯೋಜನವಿಲ್ಲ ಎಂಬ ಮಾತಿನ ಕಡೆಗೆ ಲಕ್ಷ್ಯಕೊಟ್ಟು ದುಃಖವನ್ನು ಶಾಂತ ಮಾಡಿದಳು. ಈ ವೇಳೆಗೆ ಸರಿಯಾಗಿ ೭॥ ಗಂಟೆ

ಯಾಗಿತ್ತು. ಕಸ್ತೂರಾಬಾ ಗಾಂಧಿಯವರ ತೊಡೆಯ ಮೇಲೆ ವಿಶ್ರಾಂತಿ ಮಾಡಿದಲ್ಲೆ ದಿವಂಗತಳಾದಳು.

ಮರುದಿವಸ ಅಂತಿಮಸಂಸ್ಕಾರಪೂರ್ವದಲ್ಲಿ ಆ ಶ್ರವಕ್ಕೆ ಸ್ನಾನ ಮಾಡಿಸಿದರು. ಗಾಂಧಿಯವರು ಕತ್ತದ ಸೀರೆಯನ್ನು ಸುತ್ತಿದರು. ತುಲಸೀ ಹಾರವನ್ನು ಕೊರಳಿಗೆ ಹಾಕಿದರು. ಹಣೆಯಮೇಲೆ ಗಂಧ ಮತ್ತು ಕುಂಕುಮವನ್ನು ಹಚ್ಚಿದರು. ಶ್ರವದ ಸಮೀಪ 'ಓಂ' ಎಂದು ಗುರುತು ಮಾಡಿದರು, ಮತ್ತು "ಪತ್ನಿ! ನೀನು ಬಡವನ ಹೆಂಡತಿಯಾಗಿರುವೆ! ಬಡವರು ಗಂಧದ ಕಟ್ಟಿಗೆಯನ್ನು ಎಲ್ಲಿಂದ ತರುತ್ತಾರೆ!? ಎಂದು ಬಾಪೂಜಿಯವರು ಉದ್ಗಾರ ತೆಗೆದರು. ಈ ಮಾತು ಕೇಳಿ ಜೈಲಿನ ಅಧ್ಯಕ್ಷನು ನಾನು ಕೊಡುತ್ತೇನೆಂದು ಹೇಳಿದನು. ಆದರೆ ಗಾಂಧಿಯವರು " ಸರಕಾರದ ವಸ್ತುವನ್ನು ತೆಗೆದು ಕೊಳ್ಳಲು ನನಗೆ ಅಧಿಕಾರವಿಲ್ಲ" ಅಂದರು. ಅಗ್ನಿ ಸಂಸ್ಕಾರದ ವೇಳೆಗೆ ಎರಡೂವರೆನೂರು ಸೆರಗು ಸಂಬಂಧಿಗಳು ನೆರೆದಿದ್ದರು. ಗಾಂಧಿಯವರು ಮಗನಾದ ದೇವದಾಸನಿಂದ ದಹನಸಂಸ್ಕಾರ ಮಾಡಿಸಿದರು. ಗೋವಿಂದ ಗೋವಿಂದ ಎಂಬ ಧ್ವನಿಯಿಂದ ಅಗ್ನಿಯನ್ನು ಪ್ರಜ್ವಲಿತ ಮಾಡಿದರು. ಗಾಂಧಿಯವರು ಕಣ್ಣೀರನ್ನು ತಡೆಯಲಾಗದೆ ಶಾಲಿನಿಂದ ಒರೆಸುತ್ತ ಕುಳಿತರು. ಎಲ್ಲ ಜನರೂ ಹೋದ ನಂತರ ಗಾಂಧಿಯವರು ಮಂಚದ ಮೇಲೆ ಮಲಗಿಕೊಂಡು " ಕಸ್ತೂರಾಬಾ ಇವಳಮೇಲಿನ ಪ್ರೇಮವು ಇಂದಿಗೆ ತೊರೆಯಿತು. ನನ್ನ ಪತ್ನಿಯು ನನ್ನೆದುರಿ ನಲ್ಲಿಯೇ ಸಾಯಬೇಕೆಂದು ಇಚ್ಛಿಸುತ್ತಿದ್ದೆನು. ನನ್ನ ಇಚ್ಛೆಗೆ ಯಾವ ತೊಂದರೆ-ತೊಡಕುಗಳು ಬಂದೊದಗಲಿಲ್ಲ." ಎಂದು ಹೇಳಿದರು.

ಮಾಲವೀಯನು ಸಾಮವೇದವನ್ನು ಪ್ರಕಟಿಸುವಾಗ ಹೇಳಿದ್ದೆಂದರೆ- "ಕಸ್ತೂರಾಬಾ ಸೌಭಾಗ್ಯವತಿಯಾಗಿ ಈ ದೇಹತ್ಯಾಗ ಮಾಡಿದ್ದಲ್ಲದೆ, ಇನ್ನುಳಿದ ಗರತಿಯರು ಸಹ ಇದೇ ಪಥವನ್ನು ಹೊಂದ ಬೇಕಾಗಿ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ."

ಮಾಲವದ ಕುಂದನದೇವಿ.

ಒಂದು ಕಾಲದಲ್ಲಿ ಸಂಯುಕ್ತಪ್ರಾಂತದ ರಾಜಧಾನಿ ಪ್ರಯಾಗದಲ್ಲಿತ್ತು. ಇಲ್ಲಿ ಮಾಲವ ದೇಶದ ಬ್ರಾಹ್ಮಣ ಪಂಡಿತರಾದ ವ್ರಜನಾಥವ್ಯಾಸರು ವಾಸವಾಗಿದ್ದರು. ಇವರು ತಮ್ಮ ಕರ್ತವ್ಯದಂತೆ ವ್ಯಾಪಾರಕ್ಕಾಗಿ ಮಿರ್ಜಾಪುರಕ್ಕೆ ಹೋಗಿದ್ದರು. ವ್ರಜನಾಥರವರ ಕುಟುಂಬದ ಮೇಲೆ ಸರಸ್ವತಿದೇವಿಯ ಕೃಪೆಯಿತ್ತು. ಈ ಕೃಪೆಯಿಂದ ಆ ಎಲ್ಲರೂ ಸುಖದಲ್ಲಿದ್ದರು. ಅವಳ ಕೃಪೆಯ ದೆಸೆಯಿಂದ ಮಣ್ಣು ಹಿಡಿದರೂ ಹೊನ್ನಾಗುತ್ತಿತ್ತು. ವ್ರಜನಾಥರಿಗೆ ಮದನಮೋಹನನೆಂಬ ಮಗನಿದ್ದನು. ಮದನ ಮೋಹನನು ವಿಶ್ವನಾಥಪುರಿಯಲ್ಲಿ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವನೆಂದು ಯಾರುಬಲ್ಲರು ? ಒಂದೊಮ್ಮೆ ಮದನಮೋಹನನು ಚಿಕ್ಕಪ್ಪನಾದ ಗದಾಧರನ ಮನೆಗೆ ಹೋಗಬೇಕಾಯಿತು. ಅವನು ಮಿರ್ಜಾಪುರದಲ್ಲಿ ವಾಸಿಸುತ್ತಿದ್ದನು. ಮಿರ್ಜಾಕ್ಕೆ ಹೋದಾಗ ಅಲ್ಲಿರುವ ಪಂಡಿತರೆಲ್ಲರು ನೆರೆದು ಈ ಹುಡುಗನಿಂದ ವ್ಯಾಖ್ಯಾನ ಮಾಡಿಸಿದರು. ಈ ಸಭೆಗೆ ಆ ಪುರದ ಪಂಡಿತರಾದ ನಂದರಾಮರು ಬಂದಿದ್ದರು. ಅವರು ಕೇವಲ ಹದಿನಾಲ್ಕು ವರ್ಷದ ಹುಡಗನ ಭಾಷಣದ ಹೊಸಶೈಲಿ, ಕೋಮಲವಾದ ವಾಣಿ ಮೊದಲಾದವನ್ನು ನೋಡಿ ಅವರಿಗೆ ಬಹಳ ಆನಂದವಾಯಿತು. ಅವರು ತನ್ನ ಮೂರನೆಯ ಮಗಳಾದ ಕುಂದನ ದೇವಿಯನ್ನು ಮದನಮೋಹನನಿಗೆ ೧೮೮೧ನೇ ಇಸ್ವಿಯಲ್ಲಿ ಲಗ್ನಮಾಡಿ ಕೊಟ್ಟರು.

ಮದನದಂಪತಿಯು ಗೃಹದಲ್ಲಿ ನಿತ್ಯಕರ್ಮವನ್ನು ಸಾಗಿಸುತ್ತ ಮದನಮೋಹನನು ಕಾಲೇಜಿನಲ್ಲಿ ಓದುತ್ತಿದ್ದನು. ಮನೆಯವರೆಲ್ಲರು ಸೊಸೆಯ ಸಂಯಮವ್ರತವನ್ನು ನೋಡಿ ಬಹಳ ಸಂತೋಷ ಹೊಂದಿದ್ದರು. ಗೃಹವು ಇಂದ್ರಲೋಕದ ಅಮರಾವತಿಯಾಗಿತ್ತು. ಆದ್ದರಿಂದ ಭೂಸ್ವರ್ಗ

ವೆಂದರು ತಪ್ಪಾಗಲಾರದು. ಹೀಗಿರುವಾಗ ಮಾಲವೀಯನು ಕಾಲಾ ಕಾಂಕರದ ರಾಜನಾದ ರಾಮಪಾಲಸಿಂಹನಲ್ಲಿ ಇರುತ್ತಿದ್ದನು. ಪ್ರತಿ ರವಿವಾರ ದಿವಸ ಡೋಣಿಯ ಮೇಲಿಂದ ತನ್ನ ಮನೆಗೆ ಬರುತ್ತಿದ್ದನು. ಈ ಸಮಯಕ್ಕೆ ಹಿಂದೂಜಾತಿಯಮೇಲೆ ಘನವಾದ ಸಂಕಟಬಂದೊದಗಿತು. ಈ ಸ್ಥಿತಿಯನ್ನು ನೋಡಿದ ಮಾಲವಿಯು ಕರಗಿದನು. ಮತ್ತು ಹಿಂದುಗಳ ಉತ್ಥಾನ ಕಾರ್ಯದಲ್ಲಿ ಮನಸ್ಸನ್ನು ಪೋಣಿಸಿ ಚತುರರಾದ, ದಕ್ಷರಾದ, ಚಿಕ್ಕ ಪಾಳಯವನ್ನು ತರಬೇತುಮಾಡಿ, ಮಾನವ ಸಂಸ್ಕೃತಿಯ ಸನಾತನಧರ್ಮದ ಪರಂಪರೆಗೇ ಭವಿತವ್ಯದ ಹೊಸ ಭರ್ತೃಹರಿಯಾಗಿ ಊರೂರು ಮನೆಮನೆಗಳಿಗೆ ತಿರಳಿ **"ಭವತಿ ಭಿಕ್ಷಾಂದೇಹಿ"** ಎಂದನು. ಇದನ್ನೇ ತನ್ನ ತಪಸ್ಸನ್ನಾಗಿಟ್ಟುಕೊಂಡು ಧಾರ್ಮಿಕ ಜೀವನವನ್ನು ಸಾಗಿಸುತ್ತ ವಿಶ್ವದ ರಾಜಧಾನಿಯಾದ ಶ್ರೀಕಾಶೀಪಟ್ಟಣದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದನು.

ಅವನ ಕೀರ್ತಿಯ ಧವಳಪತಾಕೆಯು ಒಳ್ಳೆ ಗರ್ವದಿಂದ ಎಂದಿಗೂ ಹಾರಾಡುವಂತಾಗಿದೆ !

ಜಗಜ್ಜನನಿಯಾದ ಕುಂದನದೇವಿಯು ಸತ್ಯದ ಮರ್ಯಾದೆಯಲ್ಲಿ ಗೃಹಿಣಿಯಾಗಿದ್ದು, ಆಕೆಯ ಪಾತಿವ್ರತ್ಯ, ಇಂದ್ರಿಯ ನಿಗ್ರಹಾದಿ ತಪೋಮಯ ಜೀವನವು, ಮಾಲವೀಯನ ಜನಸೇವಾಕ್ಷೇತ್ರದಲ್ಲಿ ದುಡಿಯಲು ಸಹಜ ಸಹಕಾರವನ್ನಿತ್ತಿತ್ತು. ಪತಿಯ ಸುಖವೇ ಸುಖವೆಂದುಭಾವಿಸಿ ನಡಕೊಳ್ಳುವುದೇ ಆರ್ಯನಾರಿಯರ ಜೀವನತಳಹದಿಯು. ಈ ನೀತಿಗೆ ಅನುಸರಿಸಿ ಅವಳು ತನ್ನ ಮುಡಿಯಿಂದ ಅಡಿಯವರೆಗೆ **ದೂಧೇಂ ನಹಾವೋ ಪೋತೋಂ ಫಲೋ'** ಎಂಬ ನಾಡ್ನುಡಿಯಂತೆ ನೈಯುಣಿಸಿ ಕೊಂಡಿದ್ದಳು. ಅವಳಿಗೆ ಏಳು ಮಂದಿ ಮಕ್ಕಳಿದ್ದರು. ಅವಳು ಯಾವಾಗಲೂ

ಸ್ತ್ರೀಯರಲ್ಲಿ ಧೈರ್ಯ, ಒಳ್ಳೆನಡತೆ, ಬ್ರಹ್ಮಚರ್ಯ ಮತ್ತು ಶಾಂತಿ ಇರಬೇಕೆಂದು ಇಚ್ಛಿಸುತ್ತಿದ್ದಳು. ಅವಳ ಪಣವೆಂದರೆ:— ತನ್ನ ರುಂಡ ಹೋದರೂ ಧರ್ಮವನ್ನು ಬಿಡಲಾರೆನೆಂದು ಹೇಳುತ್ತಿದ್ದಳು. ಕುಂದನದೇವಿಯು ಗೋವುಗಳ ಸಂರಕ್ಷಣೆ ಮಾಡುತ್ತಿದ್ದಳು. ಮತ್ತು ಗೋಕರುಗಳೂ ಸಂತಾನ ವೆಂದು ತಿಳಿಯುತ್ತಿದ್ದಳು. ಆವಳು ತನು–ಮನ–ವಚನಗಳಿಂದ ಪತಿಗೆ ಅನುಸರಿಸಿ ಇದ್ದಳು. ಹಿಂದುಗಳ ಸೇವೆಗಾಗಿ ಆವಳು ಯಾವಾಗಲು ಹುರುಪಿನಿಂದ ಇದ್ದಳು. ಒಂದೊಮ್ಮೆ ಶ್ರೀ ವಿಜಯರಾಘವಾಚಾರಿಯು ಮಾಲವಿಯ ಹತ್ತರ ನಿಮಗೆ ಮಕ್ಕಳೆಷ್ಟು ಎಂದು ಕೇಳಿದನು. ಈ ಪ್ರಶ್ನೆಗೆ ನಗುತ್ತ "ನನಗೆ ನೀವು ಕೆಲವು ವೇಳೆಯನ್ನು ಕೊಡಿರಿ, ನನ್ನ ಕುಟುಂಬ ದೊಡ್ಡದು" ಎಂದು ಮಾಲವೀಯನು ಉತ್ತರ ಹೇಳಿದನು. ಹೀಗೆ ಹೇಳುವ ಕಾರಣವೇನಂದರೆ:– ಕುಂದನದೇವಿಯ ತಪಸ್ಸಿನಲ್ಲಿ ಸ್ವಾರ್ಥ ತ್ಯಾಗವಿರುವುದರಿಂದ ಈ ಸಂಸಾರಯಾತ್ರೆಯೊಳಗೆ ಮಾಲವಿಯು ಪ್ರಸಿದ್ಧ ನಾಗಿದ್ದನು.

ಧರ್ಮಪಾಲನೆಯೇ ಅವಳ ಜೀವನದ ಕರ್ತವ್ಯವಾಗಿತ್ತು. ಅವಳು ದೇವರಲ್ಲಿ ಪರಮ ಪೂಜ್ಯತೆಯನ್ನಿಟ್ಟಿದ್ದಳು. ಸಂಸ್ಕೃತ ಮತ್ತು ಹಿಂದಿಯ ಶಿಕ್ಷಣವು ಅಲ್ಪ-ಸ್ವಲ್ಪವಾದರೂ ರಾಮಾಯಣ, ಗೀತೆ, ಮೊದಲಾದವನ್ನು ಚನ್ನಾಗಿ ಓದುತ್ತಿದ್ದಳು. ಆವಳಿಗೆ ಗಂಗಾನದಿಯಮೇಲೆ ಬಹಳ ಶ್ರದ್ಧೆ ಯಿತ್ತು. ಆದ್ದರಿಂದ ಆವಳು ದಿನಾಲೂ ಮೂರು ಗಂಟೆಗೆ ನೆರೆ–ಹೊರೆಯ ಹೆಂಗಳೆಯರನ್ನು ಜೊತೆಗೆ ಕರಕೊಂಡು ಗಂಗಾನದಿಗೆ ಹೋಗಿ ಸ್ನಾನ ಮಾಡುತ್ತಿದ್ದಳು. ಅವಳ ಅಂತ್ಯಕಾಲದ ವರೆಗೂ ಗಂಗಾಸ್ನಾನದ ನಿಯಮವು ನಡೆಯುತ್ತಲೆ ಇತ್ತು. ಆವಳು ಯಾವಾಗಲೂ ಎರಡನೆಯವರು ಮಾಡಿದ ಅಡಿಗೆಯನ್ನು ಊಟಮಾಡುತ್ತಿರಲಿಲ್ಲ. ಅವಳ ಅರವತ್ತು ವಯಸ್ಸಿನಲ್ಲಿಸಹ ಧರ್ಮಪಾಲನೆ ಬಿಡಲಿಲ್ಲ. ಕೊನೆಗೂ ಪಾತಿವ್ರತ್ಯದಲ್ಲಿಯೇ ಈ ದೇಹವನ್ನು ತ್ಯಾಗ ಮಾಡಿದಳು.

ಫ್ಲಾರೆನ್ಸ ನಾಇಟಿಂಗೇಲ

ಫ್ಲಾರೆನ್ಸ ನಾಇಟಿಂಗೇಲ ಇವಳು ಜೀವನದ ಆಯುಷ್ಯವನ್ನೆಲ್ಲ ಪರೋಪಕಾರದಲ್ಲಿ ಕಳೆದವಳು. ಇವಳ ಅಮರ ಕೀರ್ತಿಯು ಎಂದಿಗೂ ಅಳಿಯಲಾರದು. ಈ ಅಮರಕೀರ್ತಿಯನ್ನು ಸಂಪಾದಿಸಲು ಒಂದು ಕಾರಣವಿದೆ. ಕ್ರಿಮಿಯಾ ಯುದ್ಧದಲ್ಲಿ ಘಾಯಹೊಂದಿದ ಸೈನಿಕರಿಗೆ ಶುಶ್ರೂಷಣೆ ಮಾಡಿದಳು. ಕೇವಲ ಈ ಶುಶ್ರೂಷಣೆಯಿಂದಲೆ ಆವಳ ನಾಮವು ಅಮರವಾಗಲು ಶಕ್ಯವಿಲ್ಲ. ಆವಳು ಎರಡನೆಯವರ ಸುಖ ಮತ್ತು ಕಲ್ಯಾಣಕ್ಕಾಗಿ ದೊಡ್ಡ ದೊಡ್ಡ ಸ್ವಾರ್ಥತ್ಯಾಗಕ್ಕಾದರೂ ಯಾವಾಗಲೂ ತಯಾರಿ ಇದ್ದಳು. ಈ ಗುಣದಿಂದಲೇ ಆವಳ ಕೀರ್ತಿಯ ಧವಳ ಬಾವುಟವು ಅಮರವಾಗಿ ಹಾರಾಡುತ್ತಿದೆಯೆಂದೆನ್ನಲು ಸಂದೇಹವಿಲ್ಲ.!

ಹೀಗೆ ಜನಸೇವಾ ಮಾಡುವ ಸ್ತ್ರೀಜನ್ಮವು ಸನ್ ೧೮೨೦ ರಲ್ಲಿ ಪ್ಲಾರೆನ್ಸ ಪಟ್ಟಣದಲ್ಲಿ ಜನ್ಮವೆತ್ತಿದ್ದರಿಂದ ಇವಳಿಗೆ ಪ್ಲಾರೆನ್ಸ ನಾಇಟಿಂಗೇಲ ಎಂದು ಅನ್ನುತ್ತಾರೆ. ಆಕೆಯು ಸಂಭ್ರಾಂತ ಕುಲದವಳು. ಇವಳ ತಾಯಿ–ತಂದೆಗಳು, ಬಂಧು–ಬಳಗಗಳು, ರಾಜಭವನದಲ್ಲಿ ವಾಸಿಸುತ್ತಿದ್ದರು. ರಾಜಭವನದಲ್ಲಿ ಸುಖಭೋಗಿಸಲು ಕೊರತೆಯೆ? ಆದರೆ ಪ್ಲಾರೆನ್ಸಳ ಮನಸ್ಸು ಈ ಸುಖದ ಕಡೆಗೆ ಎಳ್ಳಷ್ಟೂ ಧ್ಯಾನ ಕೊಡುತ್ತಿರಲಿಲ್ಲ. ಈಕೆಯು ತನಗೆ ಆರನೇ ವರುಷ ತುಂಬಿದೊಡನೆಯೆ ಸೇವಾವೃತ್ತಿಯನ್ನು ಕೈಗೊಂಡಳು. "ರೋಗಿಗಳ ಆರೈಕೆಯೇ ನನಗೆ ಪ್ರಿಯ" ವೆಂದು ತನ್ನ ದಿನವಹಿಯಲ್ಲಿ ಬರೆದಿದ್ದಳು. ತಾನು ಸೇವೆಗಾಗಿ ಜನ್ಮವೆತ್ತಿರುವೆನೆಂದು ಪದೇಪದೆ ಹೇಳುತ್ತಿದ್ದಳು. ಆಕೆಯು ಜೀವನದ ಕೊನೆಯವರೆಗೂ ಒಂದು ಕ್ಷಣಸಹ ಸುಖವನ್ನುಣ್ಣಲಿಲ್ಲ. ಈ ಜನಸೇವೆಯ ಅಬ್ಬರದಲ್ಲಿ ವಿವಾಹ ಭೋಗದ ಸುಖವನ್ನೂ ತ್ಯಾಗ ಮಾಡಿದಳು. ತನ್ನ ೨೫ ನೇ ವರ್ಷದಲ್ಲಿ ಸೇಲಿಸಬರಿ

ಆಸ್ಪತ್ರೆಯಲ್ಲಿ "ನರ್ಸ" ಶಿಕ್ಷಣವನ್ನು ಹೊಂದಲು ತಾಯಿ-ತಂದೆಗಳಿಂದ ಅಪ್ಪಣೆ ಬೇಡಿದಳು. ಆದರೆ ಅವರು ಒಪ್ಪದಿರಲು ತನ್ನ ಮನೆಯಲ್ಲಿಯೆ ಅದಕ್ಕೆ ಸಂಬಂಧ ಪಟ್ಟ ಪುಸ್ತಕಗಳನ್ನು ಓದಲು ಪ್ರಾರಂಭಿಸಿದಳು. ಗುಪ್ತ ರೀತಿಯಿಂದ ರೋಗಿಗಳ ಚಿಕಿತ್ಸೆ ಕಲಿಯಲು ದವಾಖಾನೆಗೆ ಹೋಗುತ್ತಿದ್ದಳು. ಒಂದೊಮ್ಮೆ ತಾಯಿ-ತಂದೆಗಳು, ಬಂಧು-ಬಳಗಗಳು, ಮನೆಬಿಟ್ಟು ಎರಡನೇ ಊರಿಗೆ ಹೋಗಿದ್ದರು. ಈ ಕಾಲಕ್ಕೆ ಸರವರ್ಥ ಆಸ್ಪತ್ರೆಯಲ್ಲಿ ಮೂರು ತಿಂಗಳ ಘಾಯದ ಮೇಲಿನ ಚಿಕಿತ್ಸೆಯನ್ನು ಕಲಿತಳು. ಮನೆಯವರು ಅವಳ ೩೩ ನೇ ವರ್ಷಕ್ಕೆ 'ನರ್ಸು' ತನವನ್ನು ಅಭ್ಯಸಿಸಲು ಅನುಮತಿ ಕೊಟ್ಟರು. ಆಗ ಹಾರಿಲೆಸ್ಟ್ರೀಟದಲ್ಲಿರುವ ಉದಾರಾಶ್ರಯ ಆಸ್ಪತ್ರೆಗೆ ಹೋದಳು. ಆ ಸಮಯವೆಂದರೆ ಕ್ರಿಮಿಯಾ ಯುದ್ಧದ ಪ್ರಾರಂಭವು. ಅತ್ತ ಸ್ಕೂತರಿಯಲ್ಲಿ ನರ್ಸತನದ ಕೆಲಸವು ಸರಿಯಾಗಿ ನಡೆಯುತ್ತಿದ್ದಿಲ್ಲ. ಇಂಥ ಸ್ಥಿತಿಯಲ್ಲಿ ಪ್ಲಾರೆನ್ಸಳು ಸ್ಕೂತರಿಗೆ ಹೋಗುವ ಇಚ್ಛೆಮಾಡಿ ಸರಕಾರದಿಂದ ಅನುಮತಿ ಪತ್ರ ಪಡೆದು, ಅಲ್ಲಿ ಬೇಕಾಗುವ ಅವಶ್ಯಕ ವಸ್ತುಗಳನ್ನು ಸಂಗ್ರಹಿಸಿಕೊಂಡು ಇನ್ನುಳಿದ ೩೮ ನರ್ಸುಗಳ ಜೊತೆಗೂಡಿ ಹೋದಳು.

ಮರುದಿವಸ ಯುರ್ಕಮೇನ ಯುದ್ಧವು ಸುರುವಾಯಿತು. ಅಲ್ಲಿಯ ಆಸ್ಪತ್ರೆಯಲ್ಲಿ ಎಲ್ಲವರಂತೆ ತಾನೂ ಭಾಗವಹಿಸಿದಳು. ಅಲ್ಲಿ ಔಷಧ ಮತ್ತು ಇನ್ನಿತರ ಸಾಮಾನುಗಳ ಕೊರತೆಯಿಂದ ಎದೆಯೊಡೆಯುವ ಪರಿಸ್ಥಿತಿ ಇದ್ದರೂ ಪ್ರತಿನಿತ್ಯವು ೨೭೦೦೦ ಘಾಯಾಳುಗಳಿಗೆ ಉಪಚಾರವನ್ನು ನಡೆಸುವ ಸಾಹಸದಿಂದ ಅಲ್ಲಿಯವರಿಗೆ ತನ್ನ ಪರಿಚಯವನ್ನು ಮಾಡಿ ಕೊಟ್ಟಳು. ಇದನ್ನು ನೋಡಿದ ಅಲ್ಲಿಯ ಜನರು ಇವಳಿಗಾಗಿ ಪ್ರೇಮಾದರ ವನ್ನು ನೀಡಹತ್ತಿದರು. ಇದನ್ನೆಲ್ಲ ನೋಡುತ್ತಿದ್ದ ಮೇಲಾಧಿಕಾರಿಗಳಾದ ಡಾಕ್ಟರರ ಅಸೂಯೋತ್ಪಾದಕ ಕಣ್ಣಿಚ್ಚಿಗೆ ಬಲಿಯಾಗಲೂ ಬೇಕಾಯಿತು. ಇಂಥ ಸಮಯದಲ್ಲಿಸಹ ಅವಳ ಅವಿಚಲವಾದ ಸೇವಾವೃತ್ತಿಯು ನರಕ ಭೂಮಿಯನ್ನು ಸ್ವರ್ಗಲೋಕವನ್ನಾಗಿ ಮಾಡಿತು! ಈ ಮೊದಲು ಅಶಾಂತಿಯ

ಉಗೆಯಿಂದ ಸುತ್ತಿಕೊಂಡಿದ್ದ ಸ್ಥಾನದಲ್ಲಿ ಶಾಂತಿಯ ಬುಗ್ಗೆಯನ್ನೆಬ್ಬಿಸಿದಳು. ಹೊಲಸಿನ ಹೆಸರೇ ಇಲ್ಲದಂತಾಯಿತು! ಜನತೆಯು ಸುಖ ಮತ್ತು ಸಂತೋಷದ ಆಗರವನ್ನೇ ಆಳಿತು. ಅಲ್ಲಿಯ ಮೊದಲು ನೂರಕ್ಕೆ ೪೨ ರಷ್ಟು ಮರಣ ಹೊಂದುತ್ತಿದ್ದು, ಅಲ್ಲಿಂದ ಸಾವಿರಕ್ಕೆ ೨೨ ರಷ್ಟು ಸಾಯಹತ್ತಿದರು! ಈ ಬಗೆಯ ಆಕೆಯ ಏಳ್ಗೆಯನ್ನು ನೋಡುತ್ತಿದ್ದ ಸಹವಾಸಿಗರೂ ಹೊಟ್ಟೇಕಿಚ್ಚು ಪಡುತ್ತಿದ್ದರು.

೧೮೫೬ರಲ್ಲಿ ಕ್ರಿಮಿಯಾಯುದ್ಧವು ಸಮಾಪ್ತಿಯಾಯಿತು. ಅವಳು ಇಂಗ್ಲಂಡಕ್ಕೆ ಬಂದಳು. ಇಂಗ್ಲೀಷರು ಅವಳ ಸ್ವಾಗತ–ಸತ್ಕಾರ ಮಾಡಿದರು. ಅವಳು ಕೆಲಸಮಾಡಿ ದುರ್ಬಲಹೊಂದಿದ್ದಳು. ನಿಃಶಕ್ತಿಯಿಂದ ಒಮ್ಮೊಮ್ಮೆ ಮೂರ್ಛಿತಳಾಗಿ ಬೀಳುತ್ತಿದ್ದಳು. ಅಲ್ಲಿಯ ಡಾಕ್ಟರರೆಲ್ಲರು ಆರಾಮು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರು. ಅವರಿಗೆ ಪ್ರಾಣಬಿಡುವಳೆಂಬ ಬಹುದೊಡ್ಡ ಹೆದರಿಕೆಯಿತ್ತು.

ಅವಳು ಸಾಉಥ ಸ್ಟ್ರೀಟ ಪಾರ್ಕಲೇನ ಲಂಡನದಲ್ಲಿ ವಾಸಿಸುತ್ತಿದ್ದಳು. ರೋಗಿಗಳಿಗೆ ಮತ್ತು ಜನರಿಗೆ ಭೆಟ್ಟಿಯಾಗುವುದು ಬಂದುಮಾಡಿ, ಹಗಲಿರುಳು ಬರೆಯುವುದು, ಓದುವುದು, ಪತ್ರ ಬರೆಯುವುದು ಮತ್ತು ಅಲ್ಲಿಯ ದವಾಖಾನೆಗೆ ಬರುವ ಸರಕಾರಿಯ ದೊಡ್ಡದೊಡ್ಡ ನೌಕರಿಗಳ ಪರಿಚಯ ಮಾಡುವುದೇ ಮೊದಲಾದ ಕಾರ್ಯವನ್ನು ಮಾಡುತ್ತಿದ್ದಳು. ಈ ಕಾರ್ಯದಲ್ಲಿ ತೊಡಗಿದ ಅವಳ ಲೆಕ್ಕಣಿಕೆಯು ಔಷಧಾಲಯದ ಶಿಸ್ತು ಸ್ವಚ್ಛತೆ ಮೊದಲಾದ ವ್ಯವಸ್ಥೆಯ ವಿಷಯವಾಗಿ ದೊಡ್ಡದೊಡ್ಡ ಆದರ್ಶ ಪುಸ್ತಕವನ್ನು ಬರೆಯಿತು. ಆ ಪುಸ್ತಕಗಳು ಇಂದಿಗೂ ಜೀವಂತವಾಗಿವೆ! ಎರಡನೆಯವರ ಕಲ್ಯಾಣಕ್ಕಾಗಿ ತನ್ನ ಶರೀರವನ್ನೇ ಸವೆಸುತ್ತ ತನ್ನ ಕೀರ್ತಿ ಕಾಯವನ್ನು ಅಮರವಾಗಿ ಮಾಡಿದ ಈ ರಮಣೀರತ್ನಳ ಸ್ಮರಣೆಯನ್ನು ಸದಾ ಸ್ಮರಿಸುವಂತಿದೆ!

ಎಲಿಜಾಬೇಥ ಫ್ರಾಈ

ಒಂದೊಮ್ಮೆ ಯುರೋಪೀಸಮಾಜವು ಅವನತಿಯ ಸ್ಥಿತಿಗೆ ಬಂದೊದಗಿತ್ತು. ಆ ಸಮಯಕ್ಕೆ ಇಚ್ಛೆಯ ನವಜ್ಯೋತಿಯ ಕಿಡಿಯು ಉದಯವಾಯಿತು. **ಎಲಿಜಾಬೇಥ ಫ್ರಾಈ** ಇವಳು ತನ್ನ ಸಮಾಜ ಮತ್ತು ದೇಶದ ಉದ್ಧಾರ ಮಾಡಿದವಳು. ಇತಃ ಪೂರ್ವದಲ್ಲಿ ಇಂಗ್ಲೀಷ ಹುಡುಗಿಯರು ಥಿಯೇಟರಿನಲ್ಲಿ ನಾಚುಮಾಡುವುದು, ಗಾಯನಹಾಡುವುದು, ಹೆಚ್ಚಾಗಿ ಇವುಗಳಲ್ಲಿ ತಮ್ಮ ಆಯುಷ್ಯವನ್ನು ಹಾಳು ಮಾಡುತ್ತಿದ್ದರು. ಇದು ಎಲಿಜಾಬೇಥಳಿಗೆ ಸೇರುತ್ತಿರಲಿಲ್ಲ. ಈ ಸಂಸಾರದ ಯಾವುದೆ ಒಂದು ವಸ್ತುವಿನ ಸುಖಭೋಗಿಸಲು ಅವಳ ಮನಸ್ಸುಒಪ್ಪುತ್ತಿರಲಿಲ್ಲ. ಅವಳ ತಂದೆಯು ಬಹಳ ಚತುರನಿದ್ದನು. ಈ ಚತುರತೆಯಿಂದ ಅವನು ತನ್ನ ಮಗಳು ಸಂಸಾರಮೋಹ ತ್ಯಜಿಸಿಹೋಗುವಳೆಂದು ಮನಗಂಡಿದ್ದನು.

ಅವಳು ತನ್ನ ಜನ್ಮದೇಶವನ್ನು ಬಿಟ್ಟು ಲಂಡನಕ್ಕೆ ಹೋದಳು. ಅಲ್ಲಿ ಸುಖದಿಂದ ಜೀವಿಸಲು ಬೇಕಾದಷ್ಟು ಸಾಮುಗ್ರಿಗಳಿದ್ದವು. ಅಲ್ಲಿ ಆಧುನಿಕ ಸಮಾಜದ ಜನರನ್ನೆಲ್ಲ ಪರಿಚಯ ಮಾಡಿಕೊಂಡಳು. ಪ್ರತಿ ದಿವಸ ಪಾರ್ಕದಲ್ಲಿ ಅಡ್ಡಾಡಲು ಹೋಗುತ್ತಿದ್ದಳು. ಒಮ್ಮೊಮ್ಮೆ ಅವಳ ಸಖಿಯರು ಥಿಯೇಟರಿಗೆ, ನಾಚಿನ ಭವನಕ್ಕೆ, ಆಮಂತ್ರಣ ಮಾಡುತ್ತಿದ್ದರು. ಆ ಆಮಂತ್ರಣವು ತಿರಸ್ಕಾರಭಾಗಿಯಾಗಿತ್ತು.

ಅವಳು ತನ್ನ ಹತ್ತೊಂಭತ್ತನೆ ವರುಷದಲ್ಲಿ ಲಂಡನದಿಂದ ಮನೆಗೆ ಬಂದು ಬಡಮಕ್ಕಳಿಗಾಗಿ ಪಾಠಶಾಲೆ ತೆರೆದಳು. ವಿದ್ಯೆ ಕಲಿಯುವುದು ಸರ್ವಸಾಧಾರಣ ಎಲ್ಲರಿಗೂ ಅಧಿಕಾರವಿದೆಯೆಂದು ಹೇಳುತ್ತಿದ್ದಳು. ಅವಳ ಇಪ್ಪತ್ತನೆ ವರುಷದಲ್ಲಿ ಲಂಡನದ ಜೋಸಫನೆಂಬ ಸೌದಾಗಾರನಿಗೆ ಮದುವೆ ಮಾಡಿಕೊಟ್ಟರು. , ಲಗ್ನವಾದಮೇಲೆ ಸಹ ಬಡವರ ಸೇವೆ ಮಾಡುವೆನೆಂಬ

ಬರವಸೆ ಚನ್ನಾಗಿ ಇತ್ತು. ಒಮ್ಮೊಮ್ಮೆ ಬಂಧು—ಬಳಗಗಳೊಡನೆ ಲಂಡನ್ನಕ್ಕೆ ಬರುತ್ತಿದ್ದಳು. ಅವಳು ಕ್ವೇಕರ ಸಂಗಡ ಭೆಟ್ಟಿಯಾಗುವುದರಿಂದ ಅವಳ ಸೇವಾವೃತ್ತಿಗೆ ಪ್ರೋತ್ಸಾಹ ಸಿಗುತಿತ್ತು. ಒಂದೊಮ್ಮೆ ಕ್ವೇಕರನು ನ್ಯೂಗೇಟದಿಂದ ಬಂದವನು ಎಲಿಜಾಬೇಥ ಫ್ರಾಈ ಹತ್ತರ 'ನ್ಯೂಗೇಟದಲ್ಲಿ ಕೈದಿಗಳನ್ನು ಅನುಚಿತ ಸ್ಥಿತಿಯಲ್ಲಿಟ್ಟಿದ್ದಾರೆ' ಅಂದನು. ಈ ಮಾತನ್ನು ಕೇಳಿದೊಡನೆಯೆ ಅವಳು, ೧೮೧೩ ರಲ್ಲಿ ನ್ಯೂಗೇಟಕ್ಕೆ ಹೋದಳು. ಅಲ್ಲಿ ಯಥಾಶಕ್ತಿ ಸೇವೆಯಲ್ಲಿ ತೊಡಗಿದಳು. ಈ ಸಮಯ ಅವಳ ಐದು ವರುಷದ ಹುಡುಗಿಯೊಬ್ಬಳು ಮೃತಪಟ್ಟಳು.

ಈ ವೇಳೆಯೆಂದರೆ ಇಂಗ್ಲೀಷರ ಕಾನೂನು ಬಹಳ ಬಿಕ್ಕಟ್ಟಿನಲ್ಲಿತ್ತು. ಸಂಭ್ರಾಂತ ಕುಲದವರು ಸಾಧಾರಣ ಅಪರಾಧ ಮಾಡಿದರೆಂದರೆ ಅವರನ್ನು ಸೆರೆಹಿಡಿದು ಜೇಲಿನಲ್ಲಿ ಹಾಕುತ್ತಿದ್ದರು. ಜೇಲಿನ ಖೋಲಿಗಳು ಹೊಲಸಿನಿಂದ ನಾರುತ್ತಿದ್ದವು. ಆ ಖೋಲಿಗಳಿಗೆ ಖಿಡಕಿಯನ್ನು ಅರಸುತ್ತ ಹೋದರೂ ಸಿಗುವಂತಿದ್ದಿಲ್ಲ. ಅಂಥ ಕಗ್ಗತ್ತಲೆಯ ಕೋಣೆಗಳಲ್ಲಿ ಕೈದಿಗಳು ನೆಲದಮೇಲೆ ಬರಿನೆಲೆಯಲ್ಲಿ ಮಲಗಬೇಕಿತ್ತು. ಕೇವಲ ಛಿಂದಿಯನ್ನು ಉಟ್ಟಿರಬೇಕಿತ್ತು. ಒಟ್ಟಾರೆ, ಆಗಿನ ಜೇಲೆಂದರೆ ನರಕಯಾತನೆ! ಸ್ತ್ರೀಯರಿಗೆ ಫಾಶೀಶಿಕ್ಷೆಯ ಬದಲು ಹೆಚ್ಚಾಗಿ ಕಾಳಾಪಾಣಿಗೆ ಸಾಗಿಸುತ್ತಿದ್ದರು. ಪುರುಷರಿಗೆ ಇದಕ್ಕಿಂತ ಹೆಚ್ಚು ಕಠಿಣ ಶಿಕ್ಷೆ ಕೊಡುತ್ತಿದ್ದರು.

ಎಲಿಜಾಬೇಥಳು ಬಹಳ ಶಾಂತಿಪ್ರಿಯಳು. ಸ್ತ್ರೀಕೈದಿಯರ ಸಣ್ಣಸಣ್ಣ ಮಕ್ಕಳ ದೇಖರೇಖೆ ಮಾಡುತ್ತಿದ್ದಳು. ಆ ಕೈದಿಗಳಿಗೆ ಬರೆಹಕಲಿಸಲು ಪ್ರಾರಂಭಿಸಿದಳು. ಕೈದೀಸ್ತ್ರೀಯರು ಹಾಳುಹರಟೆ ಮಾತನಾಡುವುದು ಬಿಟ್ಟು, ಧಾರ್ಮಿಕಗ್ರಂಥಗಳ ಅವಲೋಕನ ಮಾಡಲಾರಂಭಿಸಿದರು. ಹೊಲಿಯುವುದನ್ನೂ ನೇಯುವುದನ್ನೂ ಫ್ರಾಈಯ ಸಹಯೋಗದಿಂದ ಕಲಿತರು. ತಾನು ಕೊಟ್ಟ ಶಿಕ್ಷಣದಿಂದ ಜೇಲಿನಲ್ಲಿ ಈ ಪ್ರಕಾರದ ಸುಧಾರಣೆ

ಯಾದುದನ್ನು ನೋಡಿ ಪ್ರಾಈಗೆ ಬಹಳ ಆನಂದವಾಯಿತು. ಪ್ರಾಈಯು ಜೇಲೆಂಬ ನರಕವನ್ನು ಸ್ವರ್ಗವಾಗಿ ಮಾಡಿದ್ದನ್ನು ಅಧಿಕಾರಿಗಳು ನೋಡಿ ಬಹಳ ಆನಂದಪಟ್ಟರು. ಜೇಲಜೀವನವೇ ಪವಿತ್ರವಾಯಿತು. ಆವಳು ತನ್ನ ರಾಷ್ಟ್ರದ ಸೇವೆಮಾಡಿ, ಪ್ರಾಣಿಮಾತ್ರದ ಎದುರಿನಲ್ಲಿ ಆದರ್ಶವಾಗಿ ಇಟ್ಟಳು. ಜೇಲಿನಲ್ಲಿ ಹೊಲಸು ಇಡುವುದು ಮತ್ತು ಕೈದಿಗಳ ಮೇಲೆ ಅತ್ಯಾಚಾರ ನಡೆಸುವುದು ಅಶೋಭೆ ಮತ್ತು ಲಜ್ಜಾದಾಯಕವೆಂದು ಅಧಿಕಾರಿಗಳು ಮನಗಂಡರು. ವಿಪ್ಶೈಗಲಿಸಲು ಒಂದು ಓರಿಯನ್ನು ಆಕೆಗೆ ಬಿಟ್ಟುಕೊಟ್ಟರು.

ಎಲಿಜಾಬೇಥಪ್ರಾಈಯು ಕೈದಿಗಳಿಗೆ ರುಚಿಕಟ್ಟಾದ ಭೋಜನ ಮಾಡಿಸಬೇಕು, ಧರಿಸಲಿಕ್ಕೆ ಸ್ವಚ್ಛವಾದ ವಸ್ತ್ರ ಕೊಡಿಸಬೇಕು, ಇರಲಿಕ್ಕೆ ಹವೆ ತುಂಬಿದಂಥ ಮಂದಿರವನ್ನು ಕೊಡಿಸಬೇಕೆಂದು ಹೇಳುತ್ತಿದ್ದಳು. ವಿಕ್ಟೋರಿಯಾ ಮಹಾರಾಣಿ ಮತ್ತು ಪಲಬರ್ಟನರ ಹತ್ತಿರ "ಯಾವ ದೇಶದಲ್ಲಿ ಕೈದಿಗಳಿಗೆ ಅವ್ಯವಸ್ಥೆಯಾಗುವದೊ ಆ ದೇಶದ ಉನ್ನತಿಯು ಎಂದಿಗೂ ಆಗಲಾರದು. ಅವರ ಮೇಲೆ ಅತ್ಯಾಚಾರ ಮಾಡುವದರಿಂದಲೆ ಅಪರಾಧ, ಕಳ್ಳರ ಹಾವಳಿ, ದರೋಡೆ, ಖೂನು ಇವೆಲ್ಲ ಎಂದಿಗೂ ಕಡಿಮೆಯಾಗುವದಿಲ್ಲ." ಎಂದು ಹೇಳುತ್ತಿದ್ದಳು.

ಅವರು ಒಂದುಸಲ ಸ್ಕಾಟಿಶ್ ಜೇಲಿಗೆ ಹೋಗಿದ್ದಳು. ಅಲ್ಲಿ ಕೈದಿಗಳಿಗೆ ಹೊಡೆಯುವುದನ್ನು ನೋಡಿ, ಹೃದಯದೊಳಗಿನ ಕರುಳನ್ನು ತೆಗೆದು ಬೆನ್ನಮೇಲೆ ಇಟ್ಟ ಹಾಗಾಯಿತು, ಅವಳಿಗೆ. "ಜೇಲರರೇ ನೀವು ಯಾಕೆ ಈ ಕೈದಿಗಳಿಗೆ ಈ ತರದ ಕಷ್ಟ ಕೊಡುತ್ತೀರಿ?" ಎಂಮ ಕೇಳಿದಳು. ಇದೇ ಪ್ರಕಾರದ ಫ್ರಾನ್ಸ, ಜರ್ಮನಿ, ಹಾಲಂಡ, ಡೆನ್ಮಾರ್ಕ ಮೊದಲಾದ ದೇಶಗಳಲ್ಲಿ ತಿರುಗಾಡಿದಳು. ಸಾರ್ವಜನಿಕ ಸಂಸ್ಥೆಯಲ್ಲಿ ಯಥಾಶಕ್ತಿ ಸಹಾಯಮಾಡುತ್ತಿದ್ದಳು. ಒಮ್ಮೊಮ್ಮೆ ಸಂಸ್ಥೆಯಲ್ಲಿ ಸೇರಿಕೊಂಡು ಕಾರ್ಯಕರ್ತರುಗಳಿಗೆ ಪ್ರೋತ್ಸಾಹಕೊಡುತ್ತಿದ್ದಳು.

ಅವಳು ಒಬ್ಬ ವೀರಾಂಗನೆಯಂತೆ ಸನ್ ೧೮೪೫ ಆಕ್ಟೋಬರ ೫ಕ್ಕೆ ಈ ಜಡದೇಹವನ್ನು ತ್ಯಾಗ ಮಾಡಿದಳು.

ಸತ್ಯ, ಸೇವೆ ಮತ್ತು ಶಾಂತಿ ಅವಳಿಗಾಗಿ ಭಗವಂತನು ಮೀಸಲಾಗಿ ಇಟ್ಟಿದ್ದನು!

ಜಾರ್ಜ ವಾಶಿಂಗ್ಟನ್ನನ ತಾಯಿ

ಜಾರ್ಜ ವಾಶಿಂಗ್ಟನ್ನನು ಇಂಗ್ಲಂಡದಿಂದ ಬಂದು ಅಮೇರಿಕೆಯ ವರ್ಜಿನಿಯಾ ಪಟ್ಟಣದಲ್ಲಿ ಉಳಿದನು. ಆಗಸ್ಟನ ಎರಡನೆ ಪತ್ನಿಯಿಂದ ವಾಶಿಂಗ್ಟನ್ನನು ಜನ್ಮವೆತ್ತಿದನು. ವಾಶಿಂಗ್ಟನ್ನನು ಹತ್ತನೆ ವರುಷದಲ್ಲಿರುವಾಗ ಅವನ ತಂದೆಯು ಪರಲೋಕವಾಸಿಯಾದನು. ಗೃಹದ ಎಲ್ಲ ಭಾರವು ವಾಶಿಂಗ್ಟನ್ನನ ತಾಯಿಯ ಮೇಲೆ ಬಂತು. ಅವಳು ಶರೀರವನ್ನು ಯಂತ್ರದಂತೆ ಉಪಯೋಗಿಸಿ, ಬೇರೆ ಬೇರೆ ಕೆಲಸಗಳನ್ನು ನಿಯಮಿತ ವೇಳೆಗನುಸಾರವಾಗಿ ನಿಯಮಿತ ಪದ್ಧತಿಯಲ್ಲಿ ಶಾಂತಳಾಗಿ ಮಾಡುತ್ತಿದ್ದಳು. ಅವಳ ಮನೆಯಲ್ಲಿ ಸುವ್ಯವಸ್ಥೆಯಿತ್ತು. ಒಂದೊಂದು ವಸ್ತುವಿಗೆ ಒಂದೊಂದು ಸ್ಥಳವನ್ನು ನಿರ್ಮಿತ ಮಾಡಿಟ್ಟಿದ್ದಳು. ಒಂದು ವಸ್ತುವಿನ ಸ್ಥಳದಲ್ಲಿ ಮತ್ತೊಂದು ವಸ್ತು ಇಡುವುದು ಅವಳಿಗೆ ಸೇರುತ್ತಿರಲಿಲ್ಲ. ಯಾವುದಾದರೊಂದು ಉತ್ಸವ-ಪರ್ವಗಳು ಬಂದರೆ ಯೋಗ್ಯರೀತಿಯಿಂದ ಸಾಗಬೇಕಾಗಿತ್ತು. ಅತಿಥಿಗಳಿಗೆ ಯೋಗ್ಯ ಮನ್ನಣೆಯ ಮಣೆಯನ್ನು ಕೊಡುತ್ತಿದ್ದಳು. ವಾಶಿಂಗ್ಟನ್ನನು ಅಮೇರಿಕದ ಪ್ರೆಸಿಡೆಂಟನಾದಮೇಲೆ ಸಹ ಅವಳ ನಡೆ-ನುಡಿಗಳು ಮೊದಲಿನಂತೆ ನಡೆಯುತ್ತಿತ್ತು. ಹೊರಗಿನ ವ್ಯವಹಾರದಲ್ಲಿಯೂ ನ್ಯಾಯದ ರಸ್ತೆಯಲ್ಲಿಯೆ ನಡೆಯುತ್ತಿದ್ದಳು. ವಾಶಿಂಗ್ಟನ್ನನ

ಮನೆಯು ಸಂತೋಷಭವನವಾಗಿತ್ತು. ಮಕ್ಕಳು ಸ್ವತಂತ್ರತೆಯಿಂದ ಆಡಿ ನಲಿದಾಡುತ್ತಿದ್ದರು. ಆದರೆ ಆಟವಾಡುವಾಗ ಸುವ್ಯವಸ್ಥೆಯೆಂಬ ಸೂಜಿಯೊಳಗೆ ಮನಸ್ಸೆಂಬ ದಾರವನ್ನು ಪೋಣಿಸಬೇಕಾಗುತ್ತಿತ್ತು. ನೆರೆ-ಹೊರೆಯವರ ಮಕ್ಕಳು ಆಟವಾಡಲು ಬಂದರೆ, ಅವರೂ ಸಹ ಮನೆಯ ಮಕ್ಕಳಂತೆ ವರ್ತಿಸಬೇಕಾಗುತ್ತಿತ್ತು. ವಾಶಿಂಗ್ಟನ್ನನು ಶೈಶವದಲ್ಲಿರುವಾಗಲೂ ತಾಯಿಯ ನಿಯಂತ್ರಣದಲ್ಲಿ ಒಳಪಟ್ಟು ಇರುತ್ತಿದ್ದನು. ವಾಶಿಂಗ್ಟನ್ನನು ಮಾತೆಯ ಆಜ್ಞೆಯನ್ನು ಶಿರೋಧಾರ್ಯ ಮಾಡಿರುವುದರಿಂದಲೆ ಅಮೇರಿಕದ ಯೋಗ್ಯ ಪ್ರಥಮ ಪ್ರಸಿಡೆಂಟ ಪದವಿಯು ದೊರಕಲು ಹೆದ್ದಾರಿಯಾಯಿತು. ವಾಶಿಂಗ್ಟನ್ನನು ತರುಣನಾದಮೇಲೆ ಹಡಗು ನಡೆಸುವ ಕೆಲಸ ಮಾಡಲು ಇಚ್ಛಿಸುತ್ತಿದ್ದನು. ಆದರೆ ತಾಯಿಯು ಈ ಕೆಲಸ ಮಾಡಲು ಅಪ್ಪಣೆ ಕೊಡಲಿಲ್ಲ. ತಾಯಿಯು ಅವನನ್ನು ಪಾಳಯದೊಳಗೆ ಸೇರಿಸಿದಳು. ಇಂಗ್ಲೀಷರ ಸಹಾಯದಿಂದ ಅವನು ಸೈನಿಕಶಿಕ್ಷಣವನ್ನು ಕಲಿತನು.

ಆ ಶಿಕ್ಷಣದ ಪ್ರೌಢತೆಯನ್ನು ಅಂಗ್ರೇಜ—ಫ್ರಾನ್ಸಯುದ್ಧದಲ್ಲಿ ಇಂಗ್ಲೀಷರೊಡನೆ ಯುದ್ಧ ಮಾಡಿತೋರಿಸಿದನು. ಈ ಯುದ್ಧದ ತರುವಾಯ ಸೇನೆಯನ್ನು ಬಿಟ್ಟು ಮನೆಗೆ ಬಂದನು. ಮನೆಯಲ್ಲಿ ಕೃಷಿಕಾರ್ಯದಲ್ಲಿ ತೊಡಗಿದನು. ಇಂಗ್ಲೀಷ ಮತ್ತು ಅಮೇರಿಕದವರಲ್ಲಿ ಸ್ವಾಧೀನಕ್ಕಾಗಿ ವಾದ ಉಂಟಾಯಿತು. ಕೊನೆಗೆ ವಾದ ಹೋಗಿ ಯುದ್ಧ ಉಂಟಾಯಿತು. ವಾಶಿಂಗ್ಟನ್ನನು ಅಮೇರಿಕಾಪಕ್ಷದ ಅಧ್ಯಕ್ಷನಾಗಿದ್ದನು. ಯುದ್ಧದಲ್ಲಿ ಸೇರುವ ಮೊದಲು ತಾಯಿಯ ಆಶೀರ್ವಾದ ಸಂಪಾದಿಸಲು ಹೋಗಿದ್ದನು. ತಾಯಿಯು ಮಗನ ಶಿರದ ಮೇಲೆ ಕರವನ್ನಿಟ್ಟು, 'ಮಗನೆ! ಸ್ವದೇಶದ ಈ ಮುಕ್ತಿಸಂಗ್ರಾಮದಲ್ಲಿ ವಿಜಯ ಹೊಂದಿ ಹಿಂದುರುಗು!' ಎಂದು ಆಶೀರ್ವಾದ ವನ್ನಿತ್ತಿದ್ದಳು. ಈ ಸುಮಂಗಲಆಶೀರ್ವಾದದಿಂದ ಅವನು ವಿಜಯ ಹೊಂದಿದನು. ಅಮೇರಿಕಕ್ಕೆ ಸ್ವಾಧೀನತೆ ಬಂತು ಜಾರ್ಜ

ಶೈವವ=ಬಾಲ್ಯ

ವಾಶಿಂಗ್ಟನ್ನನನ್ನು ಅಮೇರಿಕದ ಪ್ರಥಮ ಪ್ರಸಿಡೆಂಟನನ್ನಾಗಿ ಆರಿಸಿಕೊಳ್ಳಲಾಯಿತು.

ಈ ಯುದ್ಧಕ್ಕೆ ಹೋಗುವಾಗ ವಾಶಿಂಗ್ಟನ್ನನು ತಾಯಿಯನ್ನು ವರ್ಜಿನಿಯಾದಿಂದ ಫ್ರೇಡರಿಕಬರ್ಗ ಊರಲ್ಲಿ ಬಿಟ್ಟಿದ್ದನು. ಪುತ್ರನು ವಿಜಯ ಹೊಂದಿದ್ದಾನೆ, ಅಮೇರಿಕದ ಪ್ರಥಮ ಪ್ರಸಿಡೆಂಟ ನಾಗಿದ್ದಾನೆ, ಈ ಹೊತ್ತು ತಾಯಿಯ ದರ್ಶನಕ್ಕೆ ಬರುತ್ತಾನೆ, ಎಂಬ ವರ್ತಮಾನವು ಅವಳಿಗೆ ಮೊದಲೇ ಗೊತ್ತಿತ್ತು. ಆದರೂ ಸಹ ಅವಳ ಮನೆಯಲ್ಲಿ ಮಗನ ಸ್ವಾಗತಕ್ಕಾಗಿ ಉತ್ಸವವಿಲ್ಲ, ಶೃಂಗಾರವಿಲ್ಲ, ಪೂರ್ಣ ನಗರವೂ ಶೃಂಗಾರದಿಂದ ಸಜ್ಜಾಗಿತ್ತು. ಪಟ್ಟಣದ ಜನರೆಲ್ಲರು ಸೇನೆಯ ಸ್ವಾಗತಕ್ಕಾಗಿ ಹುರುಪಿನಿಂದ ಕುಣಿದಾಡುತ್ತಿದ್ದರು. ಅವನು ಯಾರಲ್ಲಿ ಬಂದು ಇಳಿಯುತ್ತಾನೋ ಅವಳು ಮಾತ್ರ ದಿನದಂತೆ ತನ್ನ ಕೆಲಸದಲ್ಲಿ ತಲ್ಲೀನಳಾಗಿದ್ದಳು.

ಜಾರ್ಜವಾಶಿಂಗ್ಟನ್ನನು ಬಂದು ಗೃಹದೊಳಗೆ ಪ್ರವೇಶ ಮಾಡಿ ನೋಡುವಾಗ, ಮಾತೆಯು ಗೃಹಕೃತ್ಯದಲ್ಲಿ ತೊಡಗಿದ್ದಾಳೆ. ಅವನು ತಾಯಿಯನ್ನು ಮಾತನಾಡಿಸಿ ನಮಸ್ಕಾರ ಮಾಡಿದನು. ತಾಯಿಯು ಮಗನ ಕಡೆಗೆ ನೋಡಿ "ಮಗನೆ! ಇಂದಿಗೆ ನಿನ್ನ ಮೇಲೆ ವಿಶ್ವದ ಭಾರ ಬಂದಿದೆ ನೀನು ಅನೇಕ ಪರೀಕ್ಷೆಗಳಲ್ಲಿ ಪಾಸಾಗಿರುವೆ. ನಿನ್ನ ಸುಯೋಗ ಬಹಳ ದೊಡ್ಡದು. ಈಗ ನನಗೆ ನಿನ್ನ ತಂದೆಯ ನೆನಪು ಬರುತ್ತಿದೆ" ಎಂದು ನುಡಿದಳು. ಆ ನಾರಿಯು ಕೇವಲ ಎರಡು ಮಾತಿನಲ್ಲಿ ಎಲ್ಲ ವರ್ತಮಾನದ ಮಂಗಲ ಮಾಡಿದಳು. ಅಮೇರಿಕದ ಸಹಾಯಾರ್ಥವಾಗಿ ಫ್ರಾನ್ಸದ ಸೈನಿಕರು ಬಂದಿದ್ದರು. ಅವರು ತಿರುಗಿ ಹೊರಡುವಾಗ ವಾಶಿಂಗ್ಟನ್ನನ ಮಾತೆಯ ದರ್ಶನಕ್ಕಾಗಿ ಬಂದರು. ಅವಳು ನಿತ್ಯದಂತೆ ಕೆಲಸ ಮಾಡುತ್ತ ಇದ್ದಳು. ಅವಳ ಸಮ್ಮುಖಕ್ಕೆ ಹೋದೊಡನೆ, ಸೈನಿಕರ ಹತ್ತರ, "ಸೈನಿಕರೆ! ನೀವು ಈ ವೃದ್ಧನಾರಿಯ ದರ್ಶನಕ್ಕೆಂದು ಬಂದವರಲ್ಲವೆ? ಒಳಗೆ ಬನ್ನಿರಿ. ನಾನು

ಈ ದರಿದ್ರ ಗೃಹದಲ್ಲಿ ನಿಮ್ಮ ಅಭ್ಯರ್ಥನೆ ಮಾಡುವೆನು. ನನ್ನ ಮಗನಾದ ವಾಶಿಂಗ್ಟನ್ನನು ದಾಸಿಯರನ್ನು ಇಡಲಿಲ್ಲ. ಅವನು ದೇಶದ ಅಧ್ಯಕ್ಷನಿರುವನು. ಆದ್ದರಿಂದ ದೇಶದ ದ್ರವ್ಯವನ್ನು ತನ್ನ ಕೆಲಸದಲ್ಲಿ ಉಪಯೋಗಿಸಲು ಅವನ ಮನಸ್ಸು ಒಪ್ಪುವದಿಲ್ಲ" ಅಂದಳು. ಅವಳು ತನ್ನ ಗೃಹಕೃತ್ಯವನ್ನು ತಾನೇ ಮಾಡುತ್ತಿದ್ದಳು. ಅತ್ಯಲ್ಪವ್ಯಯದಿಂದ ಇಡೀ ಕುಟುಂಬದ ಜೀವನವನ್ನು ಸಾಗಿಸುತ್ತಿದ್ದಳು. ತನ್ನ ಕೈಯಿಂದ ನಾನಾ ತರದ ವಸ್ತುಗಳನ್ನು ತಯಾರಿಸಿ ಮಾರುತ್ತಿದ್ದಳು. ಈ ಪ್ರಕಾರ ಕುಟುಂಬದ ಸಂರಕ್ಷಣೆಮಾಡಿ ಉಳಿದ ಹಣವನ್ನು ಬಡವರಿಗೆ ಸಹಾಯ ಮಾಡುತ್ತಿದ್ದಳು.

ವಾಶಿಂಗ್ಟನ್ನನು ೬೭ನೇ ವರ್ಷದಲ್ಲಿ ಮರಣ ಹೊಂದಿದನು. ಫ್ರೇಡರಿಕ ಬರ್ಗದಲ್ಲಿ ಅವನ ಸಮಾಧಿ ಇದೆ. ವರ್ಜಿನಿಯಾ ಪಟ್ಟಣದ ವಾಸಿಗರು ಅವನ ನೆನುಪಿಗಾಗಿ ಒಂದು ಮಂದಿರ ಕಟ್ಟಿಸಿರುವರು.

ಜಾರ್ಜವಾಶಿಂಗ್ಟನ್ನನು ಯುದ್ಧಕ್ಕೆ ಹೋಗುವಾಗ ತಾಯಿಯ ಆಶೀರ್ವಾದ ಪಡೆಯಲು ಹೋದಾಗ ಅವಳ ಆಶೀರ್ವಾದದಲ್ಲಿ **"ಮಗನೇ! ನೀನು ಹಸ್ತದಲ್ಲಿ ವಿಜಯದ ಖಡ್ಗವನ್ನು ಹಿಡಿದು ಹಿಂದಿರುಗು ಅಥವಾ ಇದು ಆಗದಿದ್ದರೆ ಖಡ್ಗದ ಮೇಲೆಯೇ ಏರಿ ಹೋಗು!** ಎನ್ನುವ ಅರ್ಥವಿತ್ತು.

ಹರಿಜನ ಸತಿ

ಮಧ್ಯಭಾರತಾಂತರ್ಗತ ರೀವಾಸಂಸ್ಥಾನದ ತಹಸೀಲ ರಘುರಾಜನಗರದಲ್ಲಿ ಒಬ್ಬ ಹಿಂದೂನಾರಿಯು 'ಸತಿ' ಎಂಬ ಬಿರುದನ್ನು ಪಡೆದು ಆಗಿ ಹೋಗಿದ್ದಾಳೆ. ಅವಳ ದಾಂಪತ್ಯಜೀವನ ನಡೆಯುತ್ತಿರುತ್ತಿರುತ್ತ ಕೆಲವೇ ವರುಷಗಳಲ್ಲಿ ಸತಿಯ ಪತಿದೇವನು

ಒಮ್ಮಿಂದೊಮ್ಮೆಲೇ ದೇಹಾಂತವಾಸಿಯಾದನು. ಸತಿಯು ಆ ಕಾಲಕ್ಕೆ ತಾಯಿಯ ಮನೆಯಲ್ಲಿದ್ದಳು. ಈ ವರ್ತಮಾನ ಕೇಳಿ ತನ್ನ ಮನೆಗೆ ಬಂದಳು. ನೋರೆಯ ದುಃಖದ ಸ್ಥಳದಲ್ಲಿ ಸಂತೋಷವು ದೃಷ್ಟಿಗೆ ಗೋಚರವಾಗುತ್ತಿತ್ತು. ಮರುದಿವಸ ಪ್ರಾತಃಕಾಲ ಶ್ರವವನ್ನು ಸ್ಮಶಾನಕ್ಕೆ ಒಯ್ಯುವಾಗ ತಾನು ಸತಿಯಾಗುವೆನೆಂಬ ಮಾತನ್ನು ಎಲ್ಲರಲ್ಲೂ ತಿಳಿಸಿದಳು. 'ಸತಿ' ಎಂಬ ಶಬ್ದವನ್ನು ಕೇಳಿ ಆವರೆಲ್ಲರೂ ಹೆದರಿದರು. ಅವರಲ್ಲಿ ಕೆಲವು ಹಿರಿಯರು ಅವಳಿಗೆ ನಾನಾ ರೀತಿಯಿಂದ ಬುದ್ಧಿ ಹೇಳಿದರು. ಆದರೆ ಅವಳ ನಿಶ್ಚಯವನ್ನು ಯಾರೂ ತಡೆಯಲು ಸಮರ್ಥರಾಗಲಿಲ್ಲ. ಕೊನೆಗೆ ಅವಳನ್ನು ಹಿಡಿದುಕೊಂಡು ಹೋಗಿ ಕೋಣೆಯೊಳಗೆ ಹಾಕಿದರು. ಆದರೆ ಅವಳ ಪಾತಿವ್ರತ್ಯ ಪ್ರಭಾವದಿಂದ ಕೋಣೆಯ ಬಾಗಿಲವು ತಾನಾಗಿ ತೆರೆದು ನಿಂತಿತು. ಈ ಸುದ್ದಿಯು ಕಿವಿಯಿಂದ ಕಿವಿಗೆ ಇಡೀ ಪಟ್ಟಣದಲೆಲ್ಲರಿಗೂ ಮುಟ್ಟಿತು. ಕೊತವಾಲನು ಕಾಯದೆಯ ಆಜ್ಞೆಯಂತೆ ಅವಳನ್ನು ಜೇಲಖಾನೆಯಲ್ಲಿ ಹಾಕಿ ಮಜಬೂತುಳ್ಳ ಬೀಗವನ್ನು ಹಾಕಿದನು. ಆದರೆ ಅವಳ ಸತೀತ್ವದ ಪ್ರತಾಪದಿಂದ ಬೀಗವು ತಾನಾಗಿ ಕಟಕಟನೆ ಒಡೆದು ಬಿತ್ತು. ಆವಳು ಸಂತೋಷ ಮುಖದಿಂದ ಹೊರಗೆ ನಡೆದಳು. ಜನರೂ ಅಧಿಕಾರಿಗಳೂ, ಇದನ್ನು ನೋಡಿ ಆಶ್ಚರ್ಯಚಕಿತರಾದರು. ಈ ಸ್ಥಿತಿಯಿಂದಾಗಿ ಅವಳಿಗೆ ಸತೀತ್ವದ ಮೇಲೆ ಪೂರ್ಣಶ್ರದ್ಧೆಯಿದೆಯೆಂದು ಮನಗಂಡರು. ಅವಳನ್ನು ಶೃಂಗಾರಮಾಡಿ ನಗರದಲ್ಲಿ ಅತಿ ವಿಜೃಂಭಣೆಯಿಂದ ಸ್ಮಶಾನಕ್ಕೆ ಕರೆದೊಯ್ದರು. ಆವಳು ಕೈಯಿಂದ ಅಗ್ನಿಯನ್ನು ತಯಾರಿಸಿ, ಪತಿಯ ಶ್ರವವನ್ನು ದಫನ ಮಾಡಿದ ಚಿತೆಯಲ್ಲಿ ಕುಳಿತಳು. ಆದರೆ ಅಗ್ನಿಯು ಪ್ರಜ್ವಲಿಸಲಿಲ್ಲ. ಒಂದು ತೆಂಗಿನಕಾಯಿ ತೆಗೆದುಕೊಂಡು ಎರಡು ಬಾರಿ ಮೇಲೆ ಹಾರಿಸಿದಳು. ಮೂರನೇ ಸಲ ಹಾರಿಸಿ ನೆಲಕ್ಕೆ ಬೀಳುವಾಗ ಅಗ್ನಿಯು ಆದರೊಳಗೆ ಸೇರಿ ದೇವಿಯ ಪ್ರಚಂಡರೂಪು ತಾಳಿದನು. ಒಂದು ಕ್ಷಣದಲ್ಲಿ '**ಪತಿದೇವಕೀ ಜೈ**' ಹೇಳುತ್ತ ಅವಳನ್ನು ಸ್ವಾಹಾ ಮಾಡಿದನು.

ಸತಿಯ ಜನ್ಮವು ಕೇವಲ ಹರಿಜನ ಕುಟುಂಬದಲ್ಲಿ ಆಗಿತ್ತು. ಆದರೇನು! ? ಅವಳು ಮಾಡಿದ ಕೆಲಸ ದೊಡ್ಡದು. ಅವಳು; ಸತೀತ್ವವು ಯಾವುದೇ ಒಂದು ಕುಲ ಅಥವಾ ಜಾತಿಯ ಕೈಯೊಳಗೆ ಕಟ್ಟಿಟ್ಟದ್ದಲ್ಲವೆಂದು ಸ್ಪಷ್ಟಮಾಡಿದಳು. ಆದ್ದರಿಂದ ಪ್ರತಿಯೊಬ್ಬ ಸ್ತ್ರೀಯು ಪತಿವ್ರತಾಧರ್ಮವನ್ನು ಕೈಕೊಳ್ಳಬೇಕು.

ಪವಿತ್ರ ಗಣಿಕಾ

ಪ್ರಾಚೀನ ಕಾಲದ ಮಾತು. ಒಂದು ಪಟ್ಟಣದಲ್ಲಿ ಜೀವಂತಿ ಎಂಬ ಸೂಳೆಯು ವಾಸಿಸುತ್ತಿದ್ದಳು.

ಒಂದು ದಿವಸ ಸೂಳೆಯು ಪೇಠೆಗೆ ಹೋಗಿದ್ದಳು. ಅಲ್ಲಿ ಒಬ್ಬ ವ್ಯಾಪಾರಿಯು ಒಂದು ಗಿಳಿಯನ್ನು ವ್ಯಾಪಾರಕ್ಕಾಗಿ ಇಟ್ಟುಕೊಂಡಿದ್ದನು. ಆ ಗಿಳಿಯನ್ನು ಅವಳು ಕ್ರಯಕ್ಕೆ ಕೊಂಡು ಮನೆಗೆ ಒಯ್ದಳು. ಮನೆಯೊಳಗೆ ಮನಸ್ಸಿನ ಸಂತೋಷಕ್ಕಾಗಿ ಗಿಳಿಗೆ '**ರಾಮರಾಮ**' ಎಂಬ ಎರಡು ಅಕ್ಷರಗಳನ್ನು ಕಲಿಸಲು ಪ್ರಾರಂಭಿಸಿದಳು. ನಾಮವು ಸಮಸ್ತ ಪಾಪಗಳನ್ನು ನಾಶಮಾಡುವಂಥಾದ್ದು. ಸೂಳೆಯುಸಹ ಹೆಚ್ಚಾಗಿ ರಾಮಭಜನೆಯನ್ನೆ ಮಾಡುತ್ತಿದ್ದಳು. ಅವಳಿಗೆ ವೇಳೆ ಸಿಕ್ಕಾಗ ಗಿಳಿಯ ಹತ್ತರ ಬಂದು ಕುಳಿತುಕೊಳ್ಳುತ್ತಿದ್ದಳು. ಗಿಳಿಯು ರಾಮರಾಮ ಎಂದು ನುಡಿಯುತ್ತಿತ್ತು. ಸೂಳೆಯು ಸುಂದರವಾದ ಸ್ವರದ ಅಭ್ಯಾಸ ಮಾಡಿಸುತಿದ್ದಳು. ಒಮ್ಮೊಮ್ಮೆ ಗಿಳಿಯ ಸ್ವರದ ಜೊತೆಗೆ ತಾನೂ ಸ್ವರವನ್ನಿತ್ತು ಮಧುರದಿಂದ ಹಾಡುತ್ತಿದ್ದಳು.

ಮರಣ ಕಾಲವು ಜೀವಿಯ ಹಿಂದೆ ಸಿಂಹನಂತೆ ಓಡಿ ಬರುತ್ತದೆ ಎನ್ನುವುದು ಆಶ್ಚರ್ಯದಮಾತಲ್ಲ. ಸೂಳೆ ಮತ್ತು ಗಿಳಿ ಒಂದೇ ಸವನೆ ರಾಮ ರಾಮ ಹೇಳುತ್ತಲೇ **ಪ್ರಾಣ** ಬಿಟ್ಟರು.

ಈ ಸಮಯ ಒಂದು ವಿಚಿತ್ರವಾದ ಸಂಗತಿಯಾಯಿತು. ಇಬ್ಬರ ಪ್ರಾಣವನ್ನೂ ಒಯ್ಯಲು ಯಮದೂತ ಮತ್ತು ವಿಷ್ಣುದೂತ ಬಂದರು. ಯಮದೂತನು ಹೆದರಿ ಯಮರಾಜನ ಸಮೀಪ ಬಂದು, ಸೂಳೆ ಮತ್ತು ಗಿಳಿಯ ಪೂರ್ಣಕಥೆಯನ್ನು ತಿಳಿಸಿದನು. ಯಮರಾಜನು ಗದ್ದರಿಸಿ ದೂತನಿಗೆ ಹೇಳಿದ್ದೆಂದರೆ " ಅವಳು ವ್ಯಭಿಚಾರಿಯಾದರೂ ಸಾಯುವಾಗ ' ರಾಮ ' ಎಂಬ ಎರಡು ಅಕ್ಷರದ ಮಾತ್ರೆಯನ್ನು ಉಚ್ಚಾರ ಮಾಡಿದ್ದರಿಂದ ಅವಳು ನನ್ನ ಶಿಕ್ಷೆಯ ಒಳಪಟ್ಟಿಲ್ಲ. ರಾಮನಾಮದಿಂದ ಪರಮಾತ್ಮನಾದ ನಾರಾಯಣನು ಅವಳ ಪ್ರಭುವಾದನು. ಸೂಳೆಯು ಪವಿತ್ರಳಾದಳು.

ದೂತೌ ಯದಿ ಸ್ಮರಂತೌ ತೌ ರಾಮನಾಮಾಕ್ಷರದ್ವಯಂ ।

ತದಾ ನಮೋ ವಂದನೀಯೌ ತಯೋರ್ನಾರಾಯಣಃಪ್ರಭುಃ॥

ಹೀಗಿರುವದರಿಂದ ಸೂಳೆಯು ದಿವ್ಯಲೋಕವನ್ನು ಹೊಂದಿದಳು " ಅಂದನು.

ಸುಮಧ್ಯಾ ಸೂಳೆ

॥ ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃಶತಮುಖಃ ॥

ದುಃಸಂಗದಿಂದ ಸುಂದರಿ ಸುಮಧ್ಯಾಪತನವಾಗುತ್ತ ಬಂದಳು. ಕೊನೆಗೆ ಅವಳು ಸೂಳೆಯಾದಳು. ತಂದೆ-ತಾಯಿಯ ರಕ್ಷಣೆಯಲ್ಲಿರುವಾಗ ಶಾಸ್ತ್ರವನ್ನು ಅಧ್ಯಯನ ಮಾಡಿದಳು. ಬಾಲ್ಯದಲ್ಲೆ ಧರ್ಮದ ತಿರುಳನ್ನು ತಿಳಿದವಳಾದುದರಿಂದ ತನ್ನ ಪತನದ ಮೇಲೆ ಅತ್ಯಂತ ಪಶ್ಚಾತ್ತಾಪ ಪಡುತ್ತಿದ್ದಳು. ಹಿಡಿದ ಮಾರ್ಗವನ್ನು ಬಿಡಲಾಗದೆ ಮನಸ್ಸಿನಲ್ಲೆ ಖಿನ್ನವಾಗಿದ್ದಳು. ಇದು ಅವಳ ಜೀವನದ ಸೂಕ್ಷ್ಮ ಪರಿಚಯ.

ಪುರುಷೋತ್ತಮ ಪುರದಲ್ಲಿ ಒಬ್ಬ ಬ್ರಾಹ್ಮಣ ತರುಣನಾದ ಭದ್ರತನು ಎಂಬವನು ವಾಸವಾಗಿದ್ದನು. ಅವನು ಬಾಲ್ಯದಲ್ಲಿ ಹೆಚ್ಚಾಗಿ ಧಾರ್ಮಿಕ ಕೃತ್ಯಗಳಲ್ಲಿಯೆ ತೊಡಗಿರುತ್ತಿದ್ದನು. ಮುಂದೆ ಸಂಗದೋಷದಿಂದ ಧಾರ್ಮಿಕ ಕೃತ್ಯಗಳನ್ನು ಬಿಟ್ಟನು. ಮದ್ಯಪಾನ, ಕಳ್ಳತನ, ದ್ಯೂತವಾಡುವುದು, ಮೊದಲಾದ ಎಲ್ಲ ದುರ್ಗುಣಗಳೂ ಅವನಲ್ಲಿ ಮನೆ ಮಾಡಿದವು. ದುರ್ಗುಣದ ಸ್ವಭಾವಗಳಲ್ಲಿ ಒಂದನ್ನು "ಕರೆದೊಡನೆಯೆ ಎಲ್ಲವೂ ಬರುತ್ತವೆ. ಈಗ ಭದ್ರತನುವು ಅನಾಚಾರದಲ್ಲಿ ಬಿದ್ದು ಧರ್ಮದ ನಿಂದೆಮಾಡಲು ಪ್ರಾರಂಭಿಸಿದನು.

ಭದ್ರತನುವು ಹಾದರದ ವ್ಯಸನದಲ್ಲಿ ತೊಡಗಿ ಸುಮಧ್ಯಾ ಸಮೀಪ ಬಂದನು. ಅವಳ ಸುಂದರರೂಪು ಅವನನ್ನು ಆಕರ್ಷಿಸಿತು. ಅವನು ನಿತ್ಯ ಅವಳ ಮನೆಗೆ ಬರುತ್ತಿದ್ದನು. ಅವಳುಸಹ ಅವನಮೇಲೆ ಪ್ರೀತಿ ಮಾಡಿದಳು. ಎರಡನೇ ಪುರುಷರು ಬರದಹಾಗೆ ಆಜ್ಞೆ ಮಾಡಿದಳು. ಸುಮಧ್ಯೆಯುಬ್ರಾಹ್ಮಣ ಪುರುಷನಿಗೆ ಸರಾಯಿ, ದ್ಯೂತ, ಮಾಂಸಾಹಾರ ಮತ್ತು ಕಳ್ಳತನಬಿಡಲು ಆಗ್ರಹ ಮಾಡುತ್ತಿದ್ದಳು. ಯಾರೆ ಇರಲಿ ಯಾರ ಸಹವಾಸ ಮಾಡುವರೋ ಅವರ ಮಾತು ಸಹವಾಸಿಗರಿಗೆ ಚನ್ನಾಗಿ ನಟ್ಟುತ್ತದೆ. ಆದರಲ್ಲಂತೂ ಸ್ತ್ರೀಸಂಗ. ಸ್ತ್ರೀ ಒತ್ತಾಯದಿಂದ ಭದ್ರತನುವು ವ್ಯಸನವನ್ನು ಬಿಟ್ಟನು. ಅವಳಿಗೆ ಬ್ರಾಹ್ಮಣ ಕುಮಾರನು ಪತನವಾದದ್ದಕ್ಕೆ ಬಹಳ ದುಃಖವಾಗುತ್ತಿತ್ತು. ಅವಳು ಅವನನ್ನು ಅಷ್ಟು ಷ್ಟಾಗಿ ತನ್ನ ಸಮೀಪ ಬರಗೊಡುತ್ತಿರಲಿಲ್ಲ.

ಮಧ್ಯರಾತ್ರಿಯ ಸಮಯ, ಮಳೆ ಚನ್ನಾಗಿ ಬೀಳುತ್ತಿತ್ತು, ಭದ್ರತನುವು ಸುಮಧ್ಯಾಮನೆಯ ಬಾಗಿಲವನ್ನು ಸಪ್ಪು ಮಾಡಿದನು. ಸುಮಧ್ಯಾ ಬಾಗಿಲು ತೆರೆದಳು. ಅವನ ಎಲ್ಲ ವಸ್ತ್ರವು ತೋದಿದ್ದವು. ಅವನು ಜೇರೆ ವಸ್ತ್ರವನ್ನು ಧರಿಸುತ್ತ "ಕ್ಷಮಿಸಬೇಕು! ಈ ಹೊತ್ತು ತಂದೆಯ ಶ್ರಾದ್ಧವಿತ್ತು. ಶ್ರಾದ್ಧದಲ್ಲಿ

ನನಗೆ ಎಷ್ಟುಕ್ಕೂ ಶ್ರದ್ಧೆಯಿಲ್ಲ. ಆದರೆ ಮಾಡುವದೇನು? ಜನರ ಹೆದರಿಕೆಗಾಗಿ ಮಾಡಬೇಕಾಯಿತು. ನಾನು ಅದನ್ನು ಹೇಗೆ ಮಾಡಿದೆನೊ ದೇವರೇಬಲ್ಲ. ಆದಷ್ಟು ಶೀಘ್ರದಿಂದ ಮಾಡಿದರೂ ತಡವಾಯಿತು. ಮನಸ್ಸಿಲ್ಲದ ಮನವಾರ್ತೆ ಎಂದ ಹಾಗೆ ನನ್ನ ಮನಸ್ಸೆಲ್ಲ ನಿನ್ನಲ್ಲಿಯೇ ಇತ್ತು. ನಾನು ಮಾಡುವ ಪೂಜಾ-ಶ್ರಾದ್ಧಗಳ ಕಾಲದಲ್ಲಿ ನಿನ್ನ ಹಂಬಲವೇ ಹಂಬಲವು. ಪ್ರಪಂಚದಲ್ಲಿ ನಿನ್ನನ್ನು ಬಿಟ್ಟರೆ ನನಗೆ ಎರಡನೆ ವಸ್ತುವೇ ಇಲ್ಲ" ಅಂದನು.

ಸುಮಧ್ಯಾ ಕೇಳುತ್ತ ಕುಳಿತಿದ್ದಳು. "ಎಷ್ಟು ಮೋಹ! ಎಷ್ಟು ಅಜ್ಞಾನ! ಬ್ರಾಹ್ಮಣ! ನಿನ್ನನ್ನು ತಿರಸ್ಕರಿಸಿದ್ದೇನೆ! ತಂದೆಗೆ ನಿನ್ನಂಥ ಮಗನಿದ್ದರೇನುಫಲ. ಈ ಹೊತ್ತು ತಂದೆಯ ಶ್ರಾದ್ಧಮಾಡಿ ಈ ನರಕ ಕುಂಡದಲ್ಲಿ ಬೀಳಲು ಬಂದಿರುವೆಯೇನು? ನೀನು ಶಾಸ್ತ್ರವನ್ನು ಓದಲಿಲ್ಲವೆ? ಶ್ರಾದ್ಧದ ದಿವಸ ಸ್ತ್ರೀಸಹವಾಸ ಮಾಡಿದರೆ, ಅವನ ಪಿತೃಗಳು ಪರಲೋಕದಲ್ಲಿ ವೀರ್ಯಪಾನ ಮಾಡಬೇಕಾಗುತ್ತದೆ. ಈ ನನ್ನ ಎಲುಬು, ಮಾಂಸ, ಚರ್ಮದ ಶರೀರದಲ್ಲಿ ಇರುವದೇನು? ಇದಕ್ಕೆ ನೀನು ಮರುಳಾಗಿರುವೆ!

ದುರ್ಮತೇ ಮೈಥುನಂ ಯಸ್ತು ಕುರುತೇ ಪಿತೃವಾಸರೇ।

ಯಮದಂಡೋತ್ತರ ಸ್ಥಾಯಿ ಜೀವಿತಂ ಚ ಶರೀರಿಣಾಮ್॥

ಹೆ ! ಮೂರ್ಖ! ಪ್ರಾಣಿಗಳ ಜೀವವು ಯಮನ ಶಿಕ್ಷೆಯೊಳಗಿವೆ. ಈ ಜಡದೇಹವು ನೀರಮೇಲಿನ ಗುಳ್ಳೆಯಂತೆ ನಿಮಿಷ ನಿಮಿಷಕ್ಕೆ ಮಾಯವಾಗಿ ಹೋಗುವದು. ಪಿತೃವಾಸರದಲ್ಲಿ ಮೈಥುನಾಪೇಕ್ಷೆ ಮಾಡಿದವರಿಗೆ ಘೋರತರವಾದ ಯಮದಂಡನೆಯು ತಪ್ಪಿದ್ದಲ್ಲ. ಇದನ್ನರಿಯದೆ ಬಾಯಿ ನೀರು ಕರೆಯುತ್ತ ನಿರ್ಭಯನಾಗಿ ಪಾಪ ಕುಂಡದಲ್ಲಿ ಬೀಳಲು ಬಂದಿರುವೆ! ಇನ್ನಾದರೂ ಜಾಗ್ರತನಾಗು. ನಿನ್ನ ಶರೀರದಲ್ಲಿ ಪಾಪಕ್ಕೆ ಸ್ಥಾನ ಕೊಡಬೇಡ.

ಏಕಂದರೆ ಅಗ್ನಿಯು ಒಂದು ವಸ್ತುವನ್ನು ಸ್ವಾಹಾ ಮಾಡುತ್ತಿರುವಾಗ ಸುತ್ತು ಮುತ್ತಲಿನ ವಸ್ತುವನ್ನೂ ತನ್ನ ಆಕರ್ಷಣೆಯಿಂದ ಭಸ್ಮ ಮಾಡುತ್ತದೆ. ಅಂತೆಯೆ ಪಾಪವುಸಹ ತನ್ನ ಛಾಯೆಯೊಳಗೆ ಸಿಲುಕಿದ ವಸ್ತುಗಳನ್ನೆಲ್ಲ ಭಸ್ಮ ಮಾಡುತ್ತದೆ.

ಅಣ್ಣ ! ವಿಚಾರ ಮಾಡು, ನನ್ನಲ್ಲಿಟ್ಟ ನಿನ್ನ ಮನಸ್ಸನ್ನು ಹಿಂತೆಗೆದು ಪರಮಾತ್ಮನಲ್ಲಿಡು. **ಯಾವನು ದೇವರ ಭಕ್ತನಾಗಿ ಭಜಿಸುವನೋ ಅವನು ಭಗವಂತನ ದುಸ್ತರವಾದ ಮಾಯೆಯಿಂದ ಸಹಜವಾಗಿ ಪಾರಾಗುವನು.** ಆ ದೇವನು ಮಹಾ ದಯಾಳುವಾಗಿರುವನು. ಅವನನ್ನು ಹೊಂದಿದವರಿಗೆ ಆಶ್ರಯವನ್ನೀಯುವನು." ಹೀಗೆ ನುಡಿದು ಸುಮಧ್ಯಾ ಸುಮ್ಮನಾದಳು.

ಅವನ ಹೃದಯವು ಕರಗಿತು. ವೈರಾಗ್ಯದಿಂದ ಪೂರ್ಣವಾಯಿತು. ಪರಮಾತ್ಮನ ಕಡೆಗೆ ಎಚ್ಚರವಾಯಿತು. "ನಾನು ಶಾಸ್ತ್ರಜ್ಞನು. ಬ್ರಾಹ್ಮಣನು. ಆದರುಸಹ ಈ ಸೂಳೆಗಿಂತಲೂ ಕೀಳನಾದೆನು. ಎಂದು ತನ್ನೊಳಗೇ ನೊಂದುಕೊಂಡು ಕೆಲ ಹೊತ್ತಿನ ವರೆಗೆ ಕಂಬದಂತೆ ನಿಂತುಬಿಟ್ಟನು. ಅವನಿಗೆ ತನ್ನಪೂರ್ವದ ಜಪ ತಪಾದಿಗಳ ಸ್ಮರಣೆಯಾಯಿತು. ಕ್ರಮವಾಗಿ ತನ್ನ ಪತನದ ವಿಚಾರವು ಒಡಮೂಡಿತು. ನೇತ್ರಗಳಿಂದ ಅಶ್ರುವು ಧಾರಿಟ್ಟಿತು. ಕೈ ಜೋಡಿಸಿ ಅವಳಿಗೆ ನಮಸ್ಕರಿಸಿ "ದೇವಿ! ನೀನು ನನಗೆ ಒಳ್ಳೇ ಮಾರ್ಗ ತೋರಿದೀ, ಈ ಪತನದಿಂದ ಉದ್ಧರಿಸಿದಿ." ಹೇಳಿ ಆಕೆಗೆ ನಮಸ್ಕಾರವನ್ನು ಮಾಡಿ ಹೀಗೆ ಅಲ್ಲಿಂದ ಹಿಂದಿರುಗಿ ಮಾರ್ಕಾಂಡೇಯ ಮುನಿಯ ಬಳಿಗೆ ಹೋದನು. ಅವನ ಅಪ್ಪಣೆಯಿಂದ ದಾಂತಮುನಿಯ ಆಶ್ರಮಕ್ಕೆ ಹೋಗಿ,ಅವನಿಂದ ದೀಕ್ಷೆಯನ್ನು ಗ್ರಹಣ ಮಾಡಿದನು. ಅವನು ಕಠಿಣ ನಿಯಮಗಳ ಪಾಲನೆಯಿಂದ ತನ್ನ ಉಳಿದಾಯುಷ್ಯವನ್ನು ಪವಿತ್ರ ಮಾಡಿಕೊಂಡನು. ಅವನ ಭಕ್ತಿಗೆ ಮೆಚ್ಚಿ ಪರಮಾತ್ಮನು ಪ್ರತ್ಯಕ್ಷದರ್ಶನ ಕೊಟ್ಟನು.

ಭದ್ರತನುವು ಮನೆಯಹೊರಗೆ ಹೋದ ನಂತರ ಸುಮಧ್ಯಾ ತನ ಬೆಲೆಯುಳ್ಳ ವಸ್ತುಗಳನ್ನು ಮಾರಿ, ತನ್ನ ಮನೆಯನ್ನು ಬಿಟ್ಟು ಒಂದು ಜೋಪಡಿಯನ್ನು ಕಟ್ಟಿಕೊಂಡು ಪರಮಾತ್ಮನನ್ನುಸ್ಮರಿಸಿ ತನ್ನ ಜೀವನವನ್ನೂ ಸಫಲ ಮಾಡಿಕೊಂಡಳು.

ಜಗಜ್ಜ್ಯೋತಿ ಅಕ್ಕಮಹಾದೇವಿ

ಅಕ್ಕಮಹಾದೇವಿಯು, ಮೈಸೂರ ದೇಶದ ಶಿವಮೊಗ್ಗೆ ಜಿಲ್ಹೆಯಲ್ಲಿ ಈಗ ಶಿಕಾರೀಪುರ ಎಂದು ಹೆಸರುಗೊಂಡ ಒಂದು ತಾಲೂಕಿನಲ್ಲಿರುವ ಉಡುತಡಿ ಎನುವ ಒಂದು ಊರಿನಲ್ಲಿ ಇಂದಿಗೆ ಸುಮಾರು ಎಂಟುನೂರು ವರುಷಗಳತಳಗೆ ಅವತರಿಸಿದ ಪುಣ್ಯಾಂಬೆಯವಳು. ಈಗ ಆ ಊರು ಹಳ್ಳಿಯಾಗಿದ್ದರು ಆ ಕಾಲಕ್ಕೆ ತಕ್ಕಮಟ್ಟಿಗೆ ದೊಡ್ಡ ಊರೇ ಆಗಿತ್ತು. ಆವಾಗ ಅಲ್ಲಿ ಅನೇಕ ಶಿವಭಕ್ತರು ವಾಸಿಸುತ್ತಿದ್ದರು. ಅವರಲ್ಲಿ ನಿರ್ಮಲನೆಂಬ ಒಬ್ಬನು ಅಲ್ಲಿರುವ ಶಿವಭಕ್ತರಲ್ಲಿ ಪ್ರಸಿದ್ಧನಾಗಿದ್ದನು. ಈತನಿಗೆ ಸುಮತಿ ಎನುವವಳು ಹೆಂಡತಿಯಾಗಿದ್ದಳು. ಆವಳಾದರು ಹೆಸರಿಗೆ ತಕ್ಕಂತೆ ಬುದ್ಧಿವಂತಳೇ ಇದ್ದಳು. ಹೀಗೆ ಒಬ್ಬರಿಗೊಬ್ಬರು ಅಚ್ಚುಮೆಚ್ಚಾಗಿದ್ದ ಆ ದಂಪತಿಗಳು, ಎಷ್ಟೋ ಕಾಲಪರಿಮಿತ ಮಕ್ಕಳಿಲ್ಲದೆ ವ್ಯಥೆಯಿಂದ ಈಶ್ವರನಲ್ಲಿ ಪ್ರಾರ್ಥಿಸುತ್ತಿದ್ದರು. ಶಿವನಾದರು ಇವರ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ "**ನಿಮಗೆ ಒಂದು ಹೆಣ್ಣು ಮಗುವನ್ನು ಕೊಡುವೆನು**" ಎಂದು ನುಡಿದು ಅದೃಶ್ಯನಾದನು. ಸ್ವಲ್ಪ ದಿವಸಗಳಲ್ಲಿ ಗರ್ಭಧಾರಣ ಗೈದ ಆ ನಾರೀಮಣಿಯು, ನವಮಾಸಾಂತ್ಯದಲ್ಲಿ ಒಂದು ಶಿಶುವನ್ನು ಹೆತ್ತಳು. ಹಡೆದ ಕೂಸು ಮುದ್ದಾಗಿತ್ತು. ಕಾಣುವವರ ಕಣ್ಣಿಗೂ ಮನಸ್ಸಿಗೂ ಹಬ್ಬವಾಗುವಹಾಗೆ ಸುಲಕ್ಷಣಗಳಿಂದ ಕೂಡಿತ್ತು. ಈ ಸಮಯವೆಂದರೆ, ಆ ತಾಯಿ–ತಂದೆಗಳ

ಸಂತೋಷವನ್ನು ವರ್ಣಿಸಿ ಕೊನೆಯುಂಟೆ! ? ಊರವರಾದರೂ ನಿರ್ಮಲನಿಗೆ ಮಗಳು ಹುಟ್ಟಿದ ವಾರ್ತೆಯನ್ನು ಕೇಳಿ ನೋಡಲೋಸುಗ ಬರಹತ್ತಿದರು. ಉಡುಗರೆ– ಉತ್ಸವಗಳು ಜರುಗಿತು, ಬಂದವರಿಗೆಲ್ಲ ತಾರತಮ್ಯವನ್ನರಿತು ಉಪಚಾರಗಳೂ ನಡೆಯಿತು.

ದಿನಕಳೆದಹಾಗೆಲ್ಲ ಹುಣ್ಣಿಮೆಯ ಶಶಿಯಂತೆ, ಮಗುವು ಮೈಕೈ ತುಂಬಿಕೊಂಡು ದುಂಡುದುಂಡಾಗಿ ಬೆಳೆಯಿತು! ಕೂಸಿನ ಬೆಳವಣಿಗೆಯನ್ನೂ ಬೆಳೆದ ಮಗಳ ಆಟಪಾಟಗಳನೂ ತೊದಲ್ನುಡಿ–ಸರಳ್ನುಡಿ–ಮುಗುಳ್ನಗುವೇ ಮುಂತಾದ ಆ ಮಗುವಿನ ಸರಸ ಗಾಂಭೀರ್ಯಗಳನ್ನು ನೋಡಿದ ಆ ಜನನಿ ಜನಕರಿಗೆ ಈ ವೇಳೆಯಲ್ಲಿ ಹಿಡಿಸಲಾರದಷ್ಟು ಆನಂದ! ಬಲಿಯದ ಬುದ್ಧಿಯ ಆ ಹುಡುಗಿಯು, ದಿನಾಲು ಈಶ್ವರದೇವಾಲಯಕ್ಕೆ ಹೋಗುವುದೂ ಶಿವ ದರ್ಶನ ಮಾಡುವುದೂ ಓರಿಗೆಯವರೊಡನೆ ಶಿವಾರ್ಚನೆಯ ಆಟ ವಾಡುವುದೂ, ಕಣ್ಣು ಮುಚ್ಚಿ ಕುಳಿತಳೆಂದರೆ, ಗಂಟೆಗಂಟೆಯವರೆಗೂ ಅದರದೆ–ಕದಲದೆ ಕೂಡ್ರುವುದು ಈ ಮುಂತಾದ ರೀತಿ–ನೀತಿಗಳಲ್ಲಿ ಅವಳ ಬಾಲ್ಯಾವಸ್ಥೆಯು ಕಳೆಯಹತ್ತಿತು. ಆವಳ ಇವೆಲ್ಲವನ್ನು ನೋಡಿದ ಮಾತಾಪಿತರುಗಳು ಆಕೆಗೆ **"ಮಹಾದೇವಿ"** ಎಂದು ನಾಮಕರಣ ಮಾಡಿದರು. ತನ್ನ ಜೊತೆಯವರಲ್ಲಿ ಮಾದರಿಯಾಗಿ ನಡೆದುಕೊಳ್ಳುತಿದ್ದುದರಿಂದ **'ಅಕ್ಕ'** ನೆಂದೂ ಕರೆಯತೊಡಗಿದರು. ಬರಬರುತ್ತ ಆವಳಿಗೆ **'ಅಕ್ಕಮಹಾದೇವಿ'** ಎನ್ನುವ ಅಭಿಧಾನವು ಪ್ರಸಿದ್ಧವಾಯಿತು.

ಅಕ್ಕಮಹಾದೇವಿಯು ಹರೆಯದ ಹೊಸ್ತಿಲದಲ್ಲಿ ಹೆಜ್ಜೆಯನ್ನಿಟ್ಟಳು! ಗುಣ-ರೂಪು-ಸೌಂದರ್ಯಗಳಲ್ಲಿ ಇವಳು ಆ ಊರೊಳಗೆ ಮೀಸಲಾಗಿದ್ದಳು. ಆಕೆಯ ಹೆತ್ತವರಿಗೆ ಬರಬರುತ್ತ ಒಂದು ಯೋಚನೆ ಸುರುವಾಯಿತು! ನಮ್ಮ ಮಗಳಿಗೆ ತಕ್ಕಾದ ಗಂಡನನ್ನು ಎಲ್ಲಿ ಹುಡುಕುವುದು? ಎಂದು. ಹೆಣ್ಣು ಹಡೆದವರಿಗೆಲ್ಲ ಒಂದು ಕಾಲದಲ್ಲಿ ಬರುವ ಯೋಚನೆಯಿದು.

ಆ ಊರನ್ನಾಳುವ 'ಕೌಶಿಕ' ನೆಂಬ ದೊರೆಯು ಒಂದುಸಲ ತನ್ನ ಸಪರಿವಾರ ಸಮೇತನಾಗಿ ಬೇಟೆಗೆ ಹೋಗಿದ್ದು, ಸಾಯಂಕಾಲ ಸಮಯಕ್ಕೆ ತಿರುಗಿ ಬರುವಾಗ ರಾಜಮರ್ಯಾದೆಯಂತೆ ಮೆರವಣಿಗೆಯಿಂದ ಪುರ ಪ್ರವೇಶ ಮಾಡಿದನು. ರಾಜಬೀದಿಯಲ್ಲಿ ಆ ವಿಜ್ರುಂಭಣೆಯು ಜರುಗುತ್ತ ಜರುಗುತ್ತ ಈ ಅಕ್ಕಮಹಾದೇವಿಯ ಮನೆಯ ಎದುರಿನಲ್ಲೂ ಬಂತು. ಅದನ್ನು ನೋಡಲು ಎಲ್ಲವರಂತೆ ಅಕ್ಕನೂ ಹೊರಗೆ ಬಂದಿದ್ದಳು. ಸಂಭ್ರಮಿಸಿ ತೆರಳುತ್ತಿದ್ದ ಅರಸಿನ ದೃಷ್ಟಿಗೆ ಸೌಂದರ್ಯದ ರಾಶಿಯೇ ಬಿದ್ದಿತು, ಆ ವೇಳೆ. ಪ್ರಭುವಿನ ಮೆರವಣಿಗೆಯ ಸಂಭ್ರಮದ ಬೆಳಕನ್ನೆಲ್ಲ ಜಗುಳಿದಳೋ ಎನ್ನುವಂತೆ ಆಯಿತು, ಆ ಸಮಯ. ಹೀಗಾಗಿ ಆ ಮೆರವಣಿಗೆ ಅರಮನೆಗೆ ತೆರಳಿತಾದರೂ ಆತನ ಮನಸ್ಸು ಅರಮನೆಯನ್ನು ಸೇರಲಿಲ್ಲ! ಅದು ಮಹಾದೇವಿಯ ಮನೆಯ ಹೆಬ್ಬಾಗಿಲವನ್ನು ಬಿಟ್ಟು ಒಂದು ಹೆಜ್ಜೆಯೂ ಮುಂದರಿಯಲಿಲ್ಲ. ಹೀಗೆ, ಆಕೆಯ ಮನೆಯ ಬಾಗಿಲದ ಬಂಟನಾದ ಅರಸನ ಮನೋನಾಯಕನು, ಅಕ್ಕನನ್ನು ಮದುವೆಯಾಗಲು ನಿಶ್ಚೈಸಿದನು. ಆಳರಸನ ನಿಶ್ಚಯಕ್ಕೆ ತಡೆಯುಂಟೆ? ಕೂಡಲೇ ಪ್ರಧಾನರೂ ಪರಿವಾರದವರೂ ರಾಣಿವಾಸದ ರಾಜೀವನುಖಿಯರೂ ಸಹಿತ ಅಕ್ಕಮಹಾದೇವಿಯ ತಂದೆಯ ಮನೆಗೆ ಎಡತಾಕಿದರು! ಈ ವಾರ್ತೆಯನ್ನು ಕೇಳಿದ ಆ ತಂದೆ-ತಾಯಿಗಳಿಗೆ ಸಂತೋಷದ ಬದಲು, ದುಃಖವೇ ಆಯಿತು! "ನಾವು ಈಶ್ವರಭಕ್ತರು, ಅರಸನಾದರೋ ಹಾಗಿಲ್ಲ. ಈಶ್ವರನ ಭಕ್ತರಾದವರು, ಈಶ್ವರನ ಭಕ್ತರಲ್ಲದವರಿಗೆ ಹೆಣ್ಣು ಕೊಡುವ ಪದ್ಧತಿಯು ಇದುವರೆಗೂ ಬರಲಿಲ್ಲ. ಹಾಗೆಂದು ಮಹಾರಾಜನಿಗೆ ಹೇಳುವಷ್ಟು ಧೈರ್ಯವು ನಮಗಿಲ್ಲ. ಈ ಸಂದರ್ಭದಲ್ಲಿ ಮಗಳೆ ಅಭಿಪ್ರಾಯವನ್ನು ತಿಳಿಯಬೇಕು" ಎಂದು ಆಕೆಯನ್ನು ಕೇಳಿದರು.

ಅಕ್ಕವ್ವನ ಚಿಕ್ಕಂದಿನ ಆಟಪಾಟಗಳೆಂದರೇ ಶಿವಪೂಜೆಯಾಗಿತ್ತು. ಪ್ರಾಯದ ಪರಿಮಳವನ್ನುಣ್ಣಲುಪಕ್ರಮಿಸಿದ ಮೇಲಂತು, ' ಈಶ್ವರನೇ ನನ್ನ ಗಂಡ"

ನೆಂದು ಚಿತ್ತದಲ್ಲಿ ನಟ್ಟಿಸಿಬಿಟ್ಟಿದ್ದಳು! ಅಂಥವಳು, ಈಗ, ಈಶ್ವರಭಕ್ತ ನಲ್ಲದವನನ್ನು ಲಗ್ನವಾಗುವೆಯೋ ಎನ್ನುವ ವಾಕ್ಯವನ್ನು ಕೇಳಿದಾಗ, ಕೋಪದಿಂದ ಉರಿಮನಸ್ಸುಳ್ಳವಳಾಗಿ "ಭೂಪಾಲನಾಗಲೀ ಸಾಮ್ರಾಟ್ ಪದವೀಧರನೇ ಆಗಲಿ, ಅವನು ಹುಲ್ಲುಕಡ್ಡಿಗೆ ಸಮಾನನು. ಯಾರಿಗೆ ಸಾವು-ಹುಟ್ಟುಗಳಿಲ್ಲವೊ,ಯಾರಿಗೆ ಜಾತಿ-ಕುಲಗಳಿಲ್ಲವೊ,ಯಾರಿಗೆ ರುಜೆ-ದಾರಿದ್ರ್ಯ ಗಳಿಲ್ಲವೋ ಅಂತಹ ಮೂಜಗದ ಸಾಮ್ರಾಟ್ ಚಕ್ರವರ್ತಿಯಾದ ಪಶುಪತಿಯೇ ತನ್ನ ಪತಿ. ಹುಟ್ಟಿ-ಸತ್ತು-ಕೆಟ್ಟು-ಹೋಗುವ ಗಂಡಂದಿರು ಎಷ್ಟು ಗರುವಿತರಾದರೂ ನಾನೊಲ್ಲೆ." ಅಂದಳು.

ಈ ಸುದ್ದಿ ಕೇಳಿ ತಿಳಿದ ದೊರೆಯು, " ನನ್ನ ಆಜ್ಞಾ ಧಿಃಕರಿಸಿದಲ್ಲಿ ಜೀವದ ಎಚ್ಚರಿಕೆ!" ಎನುವ ಬೆದರು ಗುಂಡನ್ನು ಅಕ್ಕವ್ವನ ಮನೆಯವರೆಗೂ ಮಂತ್ರಿಗಳ ದ್ವಾರಾ ಹಾರಿಸಿದನು. ಅದಕ್ಕೆ ಸೊಪ್ಪು ಹಾಕುವವಳೇ, ಅಕ್ಕ. ಆ ವಾರ್ತೆ ತಂದವರಿಗೆ " ನಾನು ನಿಮ್ಮರಸನ ಪಾಣಿಗ್ರಹಣ ಮಾಡಿ ಕೊಳ್ಳುತ್ತೇನೆ. ಆ-ದ-ರೆ! ನನ್ನ ಶಿವಪೂಜೆಗೂ ಗುರು-ಜಂಗಮರ ಪೂಜೆಗೂ ಅತಿಥಿ ಸತ್ಕಾರಕ್ಕೂ ಆತನಿಂದ ಅಡ್ಡಿ ಬರಬಾರದು. ಎಂದು ಅಡ್ಡಿ ಮಾಡುವನೋ ಅಂದು ಅದು ಒಂದು ತಪ್ಪನ್ನಾಗಿ ಎಣಿಸುತ್ತೇನೆ. ಇಂತಹ ತಪ್ಪು ಮೂರು ನಡೆದರೆ, ಅಂತಹ ಕಾಲದಲ್ಲಿ ಆತನನ್ನು ತೊರೆದು ಹೋಗುತ್ತೇನೆ. ಈ ಶರ್ತುಗಳಿಗೆ ನಿಮ್ಮ ದೊರೆಯು ಒಪ್ಪಿದಲ್ಲಿ ನಾನು ಅವನನ್ನು ಪರಿಣಯವಾಗುವೆನು." ಎಂದಳು.

ಎಷ್ಟಾದರು, ದೈವೀಭಕ್ತಿಯುಳ್ಳವರು ಬುದ್ಧಿವಂತರಲ್ಲವೇ? ಹಾಗಿರುವ ಅಕ್ಕನು, " ಈ ಕರಾರಿಗೆ ಬಹುಶಃ ಆತನು ಅಂಜಿ ಒಪ್ಪಲಿಕ್ಕಿಲ್ಲೆಂದೂ ಒಮ್ಮೆ ಒಪ್ಪಿ ಲಗ್ನವೇ ಆದರೆ, ತನ್ನಂತೇ ಆತನೂ ಈಶ್ವರನಲ್ಲಿ ಭಕ್ತಿ ಮಾಡುವ ನೆಂದೂ ಆತನೂ ಭಕ್ತಿಮಾಡುವಾಗ, ಪ್ರಜಾಪರಿವಾರಗಳಿಗೆಲ್ಲ ಭಕ್ತಿ ನಿರೂಪಣೆಯನ್ನು ಸತ್ತೆಯಿಂದಲಾದರೂ ಮಾಡಿಸಲನುಕೂಲಿಸುವದೆಂದೂ ಹಾಗಾಗಿದ್ದೇ ಆದರೆ ಜಗತ್ತಿನ ಹಿತವಾಗುವದೆಂದೂ ತಂದೆ-ತಾಯಿಗಳನ್ನು

ಈ ಸಂಕಟದಿಂದ ಪಾರು ಮಾಡಿದಂತಾಗುವುದೆಂದೂ ಬಗೆದಿದ್ದಳು. ಜನ್ಮಕೊಟ್ಟವರಿಗೂ ಮಗಳ ಜಾಣತನವನ್ನು ಕೇಳಿ ಸಂತೋಷವಾಯಿತು! ಮುಂದೆ ಈ ಕರಾರಿಗೆ ಒಪ್ಪಿಕೊಳ್ಳಲು; ಒಂದು ಶುಭ ದಿನ–ಗಳಿಗೆಯಲ್ಲಿ, ಮಹಾದೇವಿ–ಕೌಶಿಕದೊರೆಯರ ಕಲ್ಯಾಣ ಸಮಾರಂಭವಾಗಿ, ಆವನ ರಾಣೀವಾಸದ ಅರಗಿಣಿಯಾದಳು, ಮಹದೇವಕ್ಕ.

ಅರಮನೆಯ ಅರಸಿಯಾದ ಅಕ್ಕನ ಈ ಹಿಂದಿನ ಈಶ್ವರಭಕ್ತಿಯು ಬಲಿಯುತ್ತ ಬಂದಿತು. ದಿನಾಲು ಬ್ರಾಹ್ಮೀಮುಹೂರ್ತದಲ್ಲಿ ಎದ್ದವಳೆ, ಮುಖಮಜ್ಜನಾದಿ ತೀರಿಸಿ ಮಡಿಯಾಗಿಬಂದು ಜಾಜಿ, ಜೂಜಿ, ಮಲ್ಲಿಕಾದೀ ಹೂಗಳ ದಂಡೆ ಕಟಿತಂದ ದಾಸೀಜನರಿಂದ ಹೆಳಲು ಹಾಕಿಸಿಕೊಂಡು, ನೆಸಲಲ್ಲಿ ತಿಲಕವನ್ನಿಟ್ಟು, ವಸ್ತ್ರಾಲಂಕಾರ ಭೂಷಿತೆಯಾಗಿ ಮುತ್ತು–ರತ್ನಾದಿ ಆಭರಣಗಳ ತೊಟ್ಟು, ಭಂಗಾರದ ಹಾವಿಗೆಯನ್ನು ಮೆಟ್ಟಿ ಪೂಜಾಸಾಮಗ್ರಿಯಗಳನ್ನು ಸಂಗ್ರಹಿಸಿಕೊಂಡು ಸಖೀ ಜನರೊಂದಿಗೆ ಶಿವಾಲಯಕ್ಕೆ ತೆರಳುವಳು. ಅಲ್ಲಿ ಆನಂದಮಯಳಾಗಿ ಈಶ್ವರ ಪೂಜಾ ಸಾಗಿಸುವಳು, ಪ್ರಾರ್ಥಿಸುವಳು, ಧ್ಯಾನಾಸಕ್ತಳಾಗಿ ಮೈಮರೆತು ಅನಿಯಮಿತ ವೇಳೆಯವರೆಗೂ ಕೂತುಬಿಡುವಳು. ಅವಳು ಹಾಡಿದ್ದೇ ಹಾಡು. ಅವಳು ಯಾವಾಗಲೂ ನುಡಿಯುವ ನುಡಿಯಲ್ಲಾ ಹಾಡಿನ ರೂಪದಲ್ಲೆ.ಹೀಗಾಗಿ ದೇವರ ಪೂಜೆಯನ್ನೂ ಹಾಡಿನಿಂದಲೇ ಮಾಡುತಿದ್ದಳು. ಆಕೆಯು ಈಶ್ವರನ ಧ್ಯಾನ ಮಾಡುವ ಕಾಲದಲ್ಲಿ ಆನಂದಾಶ್ರುವು ನೇತ್ರದಲ್ಲಿ ತೊಟ್ಟಿಕುತ್ತಿತ್ತು. ಮೈಯಲ್ಲಿ ರೋಮಾಂಚವಾಗುತ್ತಿತ್ತು. ಕಂಠದಲ್ಲಿ ಗದ್ಗದ ಸ್ವರವು ಉಕ್ಕುತ್ತಿತ್ತು. ಹೀಗೆ ಪರಾಭಕ್ತಿಯ ಉದ್ರೇಕದಲ್ಲಿ ಹರನ ಅರ್ಚನೆಯನ್ನು ಮಾಡುತ್ತ ಬಗೆಬಗೆಯ ಪಕ್ವಾನ್ನಗಳ ನಿವೇದಿಸಿ, **ಹರ ಹರ ಮಹಾದೇವ'** ಎಂದು ಕರವೆತ್ತಿ ಮಂಗಳಾರತಿಯನ್ನು ಬೆಳಗುವಕಾಲದಲ್ಲಿ ಬಗೆಬಗೆಯ ವಾದ್ಯಗಳು ನಿನಾದಿಸುವವು. ಶಿವಪೂಜಾಸಮರ್ಪಣೆಯಾದನಂತರ ಅಲ್ಲಿ ಸೇರಿದ ಜಂಗಮರಿಗೂ ಶಿವಶರಣರಿಗೂ ಅತಿಥಿಪೂಜೆ

ಮಾಡಿ ಆರೋಗಣೆ ಗೈಸುವಳು. ಇದು ಅರಮನೆಯಲ್ಲಿ ಅಕ್ಕವ್ವನ ದಿನಚರಿಯಾಗಿತ್ತು.

ಹೀಗೆ ಯಾವಾಗಲೂ ಶಿವಪೂಜೆ, ಗುರುಸೇವೆ,ಜಂಗಮರ ಸತ್ಕಾರ, ಈ ತ್ರಿವಿಧ ದಾಸೋಹದಲ್ಲಿ ನಿರತಳಾಗಿದ್ದ ಅಕ್ಕನನ್ನು ನೋಡಿದ ಕೌಶಿಕಮಹಾರಾಜನು ಬೇಸರಗೊಂಡನು. ತನ್ನ ಬೊಕ್ಕಸದ ದ್ರವ್ಯಗಳೆಲ್ಲ ಈ ವಿನಿಯೋಗಕ್ಕೇ ವೆಚ್ಚವಾಗುತಿದ್ದುದಕ್ಕಾಗಿ ಬೇಗುದಿಗೊಂಡನು. ತಾನು ಅಕ್ಕನನ್ನು ಮದುವೆಯಾದುದು ಅವಳು ತಾನು ನಡೆಸುವ ತ್ರಿವಿಧ ದಾಸೋಹವನ್ನು ಈಕ್ಷಿಸಲಿಕ್ಕಲ್ಲ, ಅವಳೊಡನೆ ಸರಸಸಲ್ಲಾಪಾದಿ ಸಂಸಾರಸುಖವನ್ನನುಭವಿಸಲಿಕ್ಕೆ ಎಂದು ಒಳಗೊಳಗೇ ಕುದಿದನು!

ಹಾಗೆಯೆ ಕೆಲಕಾಲಾತಿಕ್ರಮವಾಗಿಹತ್ತಿತು. ಒಂದು ದಿನ ರಾಜನು ಸಮಯವನ್ನು ಸಾಧಿಸಿ, ಆಕೆಯ ಬಳಿಗೆ ಹೋಗಿ, "ತನಗಾಗಿ ವಿಷಯದಲ್ಲಿ ಸಲುಗೆ, ಪ್ರೇಮ, ತೋರಿಸಬೇಕು" ಎಂದು ಮೋಹದ ಮುದ್ರೆಯಿಂದ ಹೇಳಿದನು. ಆ ಮಾತಿಗೆ ಅಕ್ಕನು "**ಹೆಣ್ಣು–ಗಂಡುಗಳ ಮೋಹ ಒಂದು ಮಾಯೆ,ಈ ಮಾಯೆಯ ಕಟ್ಟಿಗೆ ಸಿಲುಕಿದ ನಾವುಗಳು ಮೋಸ ಹೋಗಬಾರದು**" ಹೀಗೆ ತತ್ವನೀತಿವಾದವಾಗಿ ಹಾಡಿನರೂಪದಿಂದ ಹಾಡಿ ಉತ್ತರ ಕೊಟ್ಟಳು. ತತ್ವದ ನಾದವೆ ಇಲ್ಲದ ಕೌಶಿಕರಾಜನಿಗೆ ಅವಳ ಈ ಬಗೆಯ ಬೋಧೆಯು ಕಿವಿಗೆ ಹೊಳುವುದೇ? ಆತನಿಗೆ ಆವಳ ಪ್ರೇಮಕೂಟದ ಆಶೆ.ಏನೇನೋ ಯತ್ನನಡೆಸಿದನು. ಅಕ್ಕನ ಮನಸ್ಸು ತನ್ನಕಡೆಗೆ ತಿರುಗಿಸಲು ಆಕೆಯ ಸಹಚರ್ಯ ಸಖೀಜನರನ್ನು ರಾಯಭಾರಿಗಳನ್ನಾಗಿ ಮಾಡಿದನು. ಚಿಕ್ಕಂದಿನಿಂದಲೂ ಶಿವನೇ ತನ್ನ ಪತಿಯೆಂದು ನಂಬಿದ ಈ ಅಕ್ಕನಿಗೆ ಆ ಸಖಿಯರು ಮಾಡುವ ವಶ್ಯಾಕರ್ಷಣಬೋಧೆಯು ತಲೆಭಾರವಾಯಿತು. ಮನಸ್ಸಿಗೆ ಚಿಟ್ಟುಹಿಡಿಯಿತು. ಆಗ ಆ ಸಖಿಯರುಗಳಿಗೆ ಈ ಕೆಳಗಿನ ಅರ್ಥ ಗರ್ಭಿತ ಪದ್ಯವನ್ನು ಹೇಳಿ ಉತ್ತರಕೊಟ್ಟಳು.

"ನವಿಲು ದೊಡ್ಡ ಬೆಟ್ಟದಮೇಲಲ್ಲದೆ ಸಣ್ಣ ಕೊರಕಲಿನಲ್ಲಿ ಕುಣಿಯುವದಿಲ್ಲ. ಹಂಸವು ಸರೋವರದಲ್ಲಲ್ಲದೆ ಹಳ್ಳದಲ್ಲಿರಲು ಆಶಿಸುವದಿಲ್ಲ. ಕೋಗಿಲೆಯು ಚೂತವೃಕ್ಷ ಚಿಗುರಿದಾಗಲ್ಲದೆ ಬೇರೆ ಕಾಲದಲ್ಲಿ ಹಾಡುವದಿಲ್ಲ. ತುಂಬಿಯು ಸುವಾಸಿಕ ಸುಮಕ್ಕಲ್ಲದೆ ನಿರ್ವಾಸಿಕ-ದುರ್ವಾಸಿಕ ಕುಸುಮಕ್ಕೆ ಹೋಗುವುದಿಲ್ಲ. ಅಂತೆಯೆ; ನನ್ನ ಮನಸ್ಸು, ನನ್ನ ದೇವನಾದ ಮಲ್ಲಿಕಾರ್ಜುನ ಸ್ವಾಮಿಯನ್ನಲ್ಲದೆ ಬೇರೆಯವರನ್ನು ಬಯಸುವದಿಲ್ಲ."

ಆ ಸಖೀಜನರು ಬೋಧಿಸಿದಾಗಲೆಲ್ಲ ಹೀಗೆ ಬಗೆಬಗೆಯಾದ ಉದಾಹರಣೆ ಕೊಟ್ಟು ಈ ಪ್ರಪಂಚವನ್ನು ಅಲ್ಲಗಳೆಯುತಲೂ ಮಲ್ಲಿಕಾರ್ಜುನ ಸ್ವಾಮಿಯೇ ತನ್ನ ಸರ್ವಾರ್ಥಪ್ರದನೆನುತಲೂ ಉತ್ತರವನ್ನೀಯುತಿದ್ದಳು.

ಅತ್ತ ಕೌಶಿಕಮಹಾರಾಜನು ಈ ಸಖೀಜನರುಗಳಿಂದ ತನ್ನ ಪ್ರಯೋಜನವಾಗಲಿಲ್ಲೆಂದರಿದು ತಾನೇ ಮಹಾದೇವಿಯನ್ನು ಪುನಃಪುನಃ ಮಾತನಾಡಿಸಹತ್ತಿದ. ಆಕೆಯನ್ನು ಸಂಸಾರದ ಬಲೆಗೆ ಶಿಲುಕುವಂತೆ ಮೋಹವನ್ನು ಒಡ್ಡಿದ. ಅವಳು ಅದಾವುದಕ್ಕೂ ತಲೆಬಾಗುವ ಬದಲಾಗಿ ಇಮ್ಮಡಿಯಾದ ಭಕ್ತಿಯನ್ನು ಮಾಡುತ್ತ ಬಂದಳು. ಆತನು ಈಕೆಯ ಮನಸ್ಸಿಗೆ ಹೆಚ್ಚು ತಾಪವನ್ನಿತ್ತಾಗ, ದೇವರಲ್ಲಿ ಮೊರೆಯಿಡುತ್ತಿದ್ದಳು. ಇದು ದೊಡ್ಡವರ ಲಕ್ಷಣ.

ಕೌಶಿಕನ ಅರಮನೆಯ ಮುಳ್ಳುಬೇಲಿಯ ಒಳಗೆ ಎಕ್ಕೆಯ ಕಾಯನ್ನು ತಿನ್ನುತ್ತ, ಬಂದ ಕಷ್ಟಗಳನ್ನೆಲ್ಲ ಶಾಂತರೀತಿಯಿಂದ ಕಳೆಯುತ್ತಿದ್ದಳು. ಹೀಗೆ ಎಷ್ಟೊ ದಿವಸವುತ್ತರಿಸುತಿರಲು ಒಂದುದಿನ ಶಿವಪೂಜೆಯಲ್ಲಿ ತೊಡಗಿದ್ದ ಅಕ್ಕನನ್ನು ಕೌಶಿಕರಾಜನು ಕೆಣಕಿದನು. ಆಗ ಅಕ್ಕನು "ನನ್ನ–ನಿಮ್ಮ ಕರಾರಿನ ಪ್ರಕಾರ, ಈಗ ನೀವು ಮಾಡಿರುವುದು ಮೊದಲನೆಯ ತಪ್ಪು." ಎಂದು ಎಚ್ಚರಿಸಿದಳು. ಆತನು ವಿಮುಖನಾದನು. ಇನ್ನೊಂದು ದಿವಸ ಅಕ್ಕನು ಗುರುಪೂಜೆಮಾಡುತಿರುವಾಗ ಅದಕ್ಕೆ ರಾಜನು ಅಡ್ಡಿಮಾಡಿದನು.

ಆವಾಗ ಅಕ್ಕನು 'ಇದು ನನ್ನಲ್ಲಿ ನಿಮ್ಮದು ಎರಡನೇ ಸಲದ ತಪ್ಪು, ಆರಿಗೂ ಹೀಗೆ ಮಾಡಬಾರದು' ಎಂದು ಬುದ್ಧಿ ಹೇಳಿದಳು. ಆ ಮಾತು ಕೇಳಿದ ದೊರೆಯು ನಿರ್ವಾಹವಿಲ್ಲದೆ ಹಿಂದಿರುಗಿದನು. ಮತ್ತೊಂದು ದಿನ ಮಾಹೇಶ್ವರ (ಜಂಗಮ)ರ ತಂಡವೊಂದು ಅಕ್ಕನ ದರ್ಶನಕ್ಕೆ ಬಂದಾಗ, ಕೌಶಿಕದೊರೆಯು ಅವರನ್ನು ಗದ್ದರಿಸಿದನು. ಈವಾಗ ಅಕ್ಕನು ಆತನಿಗೆ "ಇದು ನಿಮ್ಮ ಮೂರನೆಯ ತಪ್ಪು. ನನ್ನ ನಿಮ್ಮ ಲಗ್ನದ ಕರಾರಿನಂತೆ, ನನಗೂ ನಿಮಗೂ ಋಣಾನುಬಂಧವು ಇಲ್ಲಿಗೆ ಹರಿಯಿತು. ಇನ್ನು ನಾನು ಹೊರಡುತ್ತೇನೆ. ನಿಮಗೆ ನಮಸ್ಕಾರ." ಎಂದವಳು ಅಲ್ಲಿಂದಲ್ಲೇ ಹೊರಹೊರಟು ಏಕಾಂಗಿಯಾಗಿ ಹೋಗಿಬಿಟ್ಟಳು.

ಅರಮನೆಯಿಂದ ಹೊರಟು ಬರುವಾಗ ನಿಜವಾಗಿಯೂ ಅವಳು ಯೋಗಿನಿಯಾಗಿದ್ದಳು. ವಿರಾಗಿಣಿಯಾಗಿದ್ದಳು. ಅವಳಿಗೆ ಆವಾಗ ಅನ್ನ–ವಸತಿ–ಉಡಿಗೆ–ತೊಡಿಗೆ–ಮುಂತಾದ ಹಂಬಲವೇ ಇತ್ತಿಲ್ಲ. ಆವಾಗಿನ ತನ್ನ ಮನೋಭೂಮಿಕೆಯನ್ನು ಈ ಕೆಳಗಿನ ಅರ್ಥಗರ್ಭಿತ ಹಾಡಿನ ರೂಪದಲ್ಲಿ ಹಾಡಿ ತೋರಿಸಿರುವಳು. "ಹೇ ಮನುಸ್ಸೇ! ಜೊತೆಗೆ ಯಾರೂ ಇಲ್ಲವೆಂದು ಚಿಂತಿಸಬೇಡ. ಏನನ್ನು ಮಾಡಿದರೂ ಅಂಜುವದಿಲ್ಲ. ಹಸಿವೆಗೆ ತೆರಗೆಲೆಯ ತಿಂದಿರಬಲ್ಲೆನು. ಕತ್ತಿಯನ್ನೇ ಹಾಸಿಗೆ ಮಾಡಿ ಮಲುಗ ಬಲ್ಲೆನು.ದೇಹವನ್ನೂ ಜೀವವನ್ನೂ ಚನ್ನಮಲ್ಲಿಕಾರ್ಜುನನಿಗೆ ಅರ್ಪಿಸಿ ಶುದ್ಧಳಾಗುತ್ತೇನೆ." ಈ ಮುಂತಾದ ವಾಕ್ಯಗಳನ್ನು ಹಾಡಿರುವಳು.

ನಾವೆಲ್ಲ ಸಂಕಟಬಂದಾಗ ವೆಂಕಟರಮಣ ಎನ್ನುತ್ತೇವೆ. ಆಕೆಯ ಮುಖೋದ್ಗೀತ ಇಷ್ಟೊಂದು ನಿಶ್ಚಯಾತ್ಮಕ ವಾಣಿಯು ಹೊರಡಬೇಕಾದರೆ ಆ ಹೃದಯದಲ್ಲಿ ಎಂತಹ ಧೈರ್ಯ, ಎಂತಹ ಶಕ್ತಿ,ಎಂತಹ ವೈರಾಗ್ಯ,ಎಂತಹ ತ್ಯಾಗಬುದ್ಧಿ, ಇರಬೇಕು ಎನುವುದನ್ನು ವಿಚಾರ ಮಾಡಿದಾಗ, ಅಕ್ಕನ ಸಂಕಲ್ಪ, ಈಶ್ವರಪ್ರೇಮ, ಎಷ್ಟು ಮಹತ್ತಾದುದು ಎನ್ನುವುದು ಒಡೆದು ಕಾಣುತ್ತದೆ!

ಆ ಕಾಲವೆಂದರೆ, ಅಕ್ಕನಿಗೆ ಒಳ್ಳೇಯೌವನಕಾಲವಿತ್ತು. ಚಲುವಿತ್ತು–ರೂಪವಿತ್ತು–ಸಮಸ್ತವೈಭವವಿತ್ತು. ಕೌಶಿಕನಂತಹ ದೊಡ್ಡ ದೊರೆಯ ಸಹವಾಸವಿತು. ಆ ಆರಸನ ಅರಮನೆಯೆಂಬುವ ಭಂಗಾರದ ಪಂಜರದಲ್ಲಿ ಪಂಚವರ್ಣದ ಅರಗಿಳಿಯಾಗಿ ತಾನು ಸುಖ ಪಡಬಹುದಿತ್ತು. ಇನ್ನಾವ ಹೆಣ್ಣಿಗಾದರೂ ಇವೆಲ್ಲವುಗಳಿಂದ ಅತಿಯಾದ ಆನಂದವೂ ತೃಪ್ತಿಯೂ ಉಂಟಾಗದಿರುವುದೆ!? ಆದರೆ, ಆಕೆಯು ಇವೆಲ್ಲ ನಶ್ವರವೆಂದೂ ಪರಮಾತ್ಮಸುಖವೇ ಶಾಶ್ವತವೆಂದೂ ಅರತಿದ್ದಳು. ಆದುದರಿಂದ ಈ ಎಲ್ಲವನ್ನೂ ಅಲ್ಲಗಳೆದು ಈಶ್ವರಪ್ರಾಪ್ತಿಗಾಗಿ ಅರಣ್ಯವಾಸಿಯಾದಳು!

ಅಕ್ಕನು ಪರಮಾತ್ಮನನ್ನು ಹೇಗೆ ಒಲಿಸಿಕೊಂಡಳೆಂಬುವುದು ಬಹು ದೊಡ್ಡಕತೆ. ಆತನನ್ನು ಬಹು ಬಗೆಯಾಗಿ ವರ್ಣಿಸಿ ಹಾಡಿರುವಳು. ಆತನು ತನ್ನನ್ನು"ಇತ್ತ ಬಾ"ಎಂದು ಕರೆಯ ಬೇಕೆಂಬ ಹಂಬಲ. ಹೀಗೇ ಆ ತನ್ನಲ್ಲಿ ಮೊರೆಯಿಡುತಿದ್ದ ಅಕ್ಕನಿಗೆ ಬಿಸಿಲು–ಮಳೆ–ಚಳಿಗಳೂ ಹಸಿವೆ–ನೀರಡಿಕೆ–ಶ್ರಮಗಳೂ ಎಷ್ಟೋಕಳೆದವು. ಹೀಗೆ ಕನವರಿಸುವ ಅಕ್ಕನ ಮೊರೆಯು ಅಂತೂ ಆ ದೊರೆಗೆ ಮುಟ್ಟಿತು. ಒಂದುದಿವಸ ಶ್ರೀದೇವನು ಆಕೆಯ ಕನಸಿನಲ್ಲಿ ಕಾಣಿಸಿಕೊಂಡನು. ಅಕ್ಕನ ಆವಾಗಿನ ಸಂತೋಷಕ್ಕೆ ತಡೆಯುಂಟೆ! ? ಅಲ್ಲಿಂದ ಮುಂದೆ, ಹೆಚ್ಚಿನ ತತ್ವಸಾಧಿಸುವುದಕ್ಕಾಗಿ ಅಕ್ಕನು ಉತ್ತರ ಕರ್ನಾಟಕದ ಕಲ್ಯಾಣ ಮಂಟಪಕ್ಕೆ ಹೋದಳು. ಅಲ್ಲಿ; ಬಸವ, ಅಲ್ಲಮ, ಸಿದ್ಧರಾಮ, ಮುಂತಾದ ಮಹನೀಯರು ಶಿವಾನುಭವ ಮಂಟಪ ದಲ್ಲಿ ಧರ್ಮಬೋಧೆ ಮಾಡುತ್ತಿದ್ದರು. ಈಕೆಯು ಆ ಧರ್ಮಗೋಷ್ಠಿಯಲ್ಲಿ ತಾನೂಸೇರಿ, ಬಸವಣ್ಣನವರಿಂದ ಭಕ್ತಿಮಾರ್ಗವನ್ನೂ ಅಲ್ಲಮ ಪ್ರಭುಗಳಿಂದ ಜ್ಞಾನಮಾರ್ಗವನ್ನೂ ಅರಿತುಕೊಂಡಳು. ಕೆಲವು ಕಾಲಾನಂತರ ಕಲ್ಯಾಣ ವನ್ನೂ ಬಿಟ್ಟು ಶ್ರೀಶೈಲದಲ್ಲಿರುವ ಚನ್ನಮಲ್ಲಿಕಾರ್ಜುನನನ್ನು ಸೇರುವ ಆಶೆಯಿಂದ ದಕ್ಷಿಣಕ್ಕೆ ಬಂದಳು. ಶ್ರೀಶೈಲವೆಂದರೆ, ಸುಂದರಕ್ಷೇತ್ರ. ಇಂತಹ ಸುಂದರವಾದ ಸೃಷ್ಟಿಯ ನಡುವೆ ಬಂದುನಿಂತ ಅಕ್ಕನಿಗೆ;

ಹಕ್ಕಿಯಲ್ಲಿ–ಹೂವಿನಲ್ಲಿ–ಹಣ್ಣಿನಲ್ಲಿ–ಮರದಲ್ಲಿ–ಗಿಡದಲ್ಲಿ–ಹುಲ್ಲಿನಲ್ಲಿ-ನೆಲದಲ್ಲಿ-ನೀರಿನಲ್ಲಿ–ಆಕಾಶದಲ್ಲಿ ಎಲ್ಲಕಡೆಯಲ್ಲಿಯೂ ಮಲ್ಲಿಕಾರ್ಜುನ ದೇವರು ನಿಂತಿರುವಂತೆ ಕಂಡಿತು. ಆಗ ಅಕ್ಕನು;

“ಮನವೆಲ್ಲಾ ನೀವೆ ಮಲ್ಲಿಕಾರ್ಜುನ, ಸರ್ವಭರಿತನಾಗಿ ಎನಗೆ ಮುಖದೋರೋ”

ಎಂದು ರಾಗ ಎತ್ತಿಹಾಡಿದಳು. ಆನಂದದ ಆಗರದಲ್ಲಿ ಪುಳಕಿತಳಾಗಿ–ಕೂಗಿ–ಕೊರಳೆತ್ತಿ ನೋಡಿದಳು, ಮೇಲೆ ಶ್ರೀಶೈಲ ಕಾಣಿಸಿತು. ಚನ್ನಮಲ್ಲಿಕಾರ್ಜುನನು ಅಲ್ಲಿ ಕಾಣಿಸಿದ. ಬೇಗಬೇಗ ಗಿರಿಯನ್ನಡರುತ್ತ ಗಿಣಿ, ಕೋಗಿಲೆ, ಮುಂತಾದ ಮೃಗ–ಪಕ್ಷಿಗಳನ್ನು ಮಾತನ್ನಾಡಿಸುತ್ತ ಬೆಟ್ಟದಮೇಲೆ ಸೇರಿದಳು. ಕೆಂಜರಗೂದಲುಗಳಿಂದ ಹೊಳೆವ ರತ್ನಖಚಿತ ಜಡೆ, ಕಿರೀಟ, ಸುಲಿಪಲ್ಲು (ಬೆಳ್ಳನ್ನ ಬೆಳಗುವ ಹಲ್ಲು) ಈ ಮುಂತಾದ ಅವನ ಶೃಂಗಾರವನ್ನುಕಂಡು ವರ್ಣಿಸಿದಳು. **ಕಣ್ಣಿನಆಶೆ ತೀರಿತಿಂದು** ಎಂದಳು. ಹೀಗೆ ಸ್ತುತಿ ಮಾಡುತ್ತಮಾಡುತ್ತ ಇರುವಾಗಲೇ ಈ ಅಕ್ಕನ ಆತ್ಮದ ಸೊಡರಕುಡಿಯು ಆ ನಿರುಪಮಜ್ಯೋತಿಯಲ್ಲಿ ಸೇರಿ ಜಗಜ್ಯೋತಿಯೇ ಆದಳು ! ! !

ಈ ಪುಣ್ಯಾಂಬೆಯನ್ನು ಇಂದಿಗೂ ಸ್ಮರಿಸುವವರಿಗೆ ಅಪಾರ ಪುಣ್ಯವುಂಟು. ಸರ್ವರಿಂದಲೂ ಗೌರವಕ್ಕೆ ಪಾತ್ರಳಾದ ಇಂತಹ ಧಾರ್ಮಿಕ ಸ್ತ್ರೀರತ್ನವನ್ನು ಪಡೆದ ನಮ್ಮನಾಡಿನ ಭಾಗ್ಯ ನಿಜವಾಗಿಯೂ, ದೊಡ್ಡದು!

ಉಪಸಂಹಾರ

ಸನಾತನ ಧರ್ಮದನೆಲಗಟ್ಟಿನಮೇಲೆ ಸ್ತ್ರೀ ಸುಧಾರಣೆಯ ಗುಡಿಗಟ್ಟುವ ಯೋಜನೆಯಿಂದ ಹಿಂದೂಧರ್ಮದ ಕೆಲವಷ್ಟು ಪಾಯಾಹಾಕಿ, ತೊಲೆ–ಜಂತಿಗಳನ್ನೇರಿಸಿ, ಕಟ್ಟಡವೇನೂ ತಯಾರಿಯಾಯಿತು. ಇತಃ ಪೂರ್ವದಲ್ಲಿ ಇಂತಹ ನಿಕೇತನದಲ್ಲೇ ನಿವಸಿಸಿ, ಸ್ವಯಂಶೂರರಾಗಿ, ಸಮಾಜಸೇವೆ ಸಲ್ಲಿಸಿ, ಮಾರ್ತಾಂಡ ತೇಜದಿಂದ ಬೆಳಗಿದ ದೇಶೀ ವಿದೇಶೀ ವೀರಾಂಗನೆಯರ ಜೀವನೇತಿಹಾಸಗಳನ್ನೂ; ಆಧ್ಯಾತ್ಮಿಕ–ಧಾರ್ಮಿಕ–ಜೀವರತ್ನಮಣಿಗಳ ಒಂದಿಷ್ಟು ಪರಿಚಯವನ್ನೂ ಇಲ್ಲಿಯವರೆಗೆ ವಿವೇಚಿಸಿಯೂ ಆಯಿತು. ಇದರಂತೆ ಇದೇ ಸದನದಲ್ಲಿದ್ದು ಗೃಹರಾಣಿಯೆನಿಸಿ ಧರ್ಮ ಸಂತಾನವನ್ನು ಜಗತ್ತಿಗೆ ಅರ್ಪಿಸಿದ; ಕೌಸಲ್ಯಾ, ಸುಮಿತ್ರಾ, ಕುಂತಿ, ವಿದುಲಾದಿ ಇನ್ನೂ ಎಷ್ಟೋ ವೀರಮಾತೆಯರಿರುವರು. ಪಾರಮಾರ್ಥಿಕ ವಿಕಾಸಿಗಳೂ ದೇಶಭಕ್ತಿ ಸಲ್ಲಿಸಿದವರೂ ಮತ್ತೂ ಎಷ್ಟೆಷ್ಟೋ ಇರುವರು. ಅವರೆಲ್ಲವರ ಚರಿತೆಗಳನ್ನಾಗಲೀ ನಾಮಾವಳಿಗಳನ್ನಾಗಲೀ ಈ ಚಿಕ್ಕ ಹೊತ್ತಿಗೆಯಲ್ಲಿ ಅಡಕಮಾಡಲು ಸಾಧ್ಯವೆ! ?

ಒಟ್ಟಾರೆ; ಆ ಪುಣ್ಯಾಂಬೆಯರುಗಳನ್ನೂ ಸಹ ನೆನಪಿಗೆ ತಂದುಕೊಂಡು ನಮ್ಮೀ ಭಾರತದ ನವಯುವತಿಯರುಗಳು; ದೈನಂದಿನ ಜೀವನದಲ್ಲೂ, ಭಾವೀಪೀಳಿಗೆಯ ಏಳಿಗೆಯಲ್ಲೂ, ದಿಗ್ದರ್ಶನವಾಗಿರುವ ಆ ಎರಡು ಹೆದ್ದಾರಿಗಳಲ್ಲಿ ಅವರವರ ಶಕ್ತ್ಯಾನುಸಾರ ಆವುದಾದರೊಂದನ್ನು ಹಿಡಿದು ಮುಂದರಿದು ಕರ್ಮಭೂಮಿಯ ಸುಖವನ್ನುಣ್ಣಲಿ! ಅನ್ಯ ಜೀವಿಗಳನ್ನೂ ಪುಣ್ಯಜೀವಿಗಳನ್ನಾಗಿ ಮಾಡಲಿ !! ಜೀವನ್ಮುಕ್ತಿಯ ಹೆಬ್ಬೆಳೆಯನ್ನು ಬೆಳೆಸಲಿ !!! ಈ ಕಾರ್ಯಗೈಯಲು ಶಕ್ತಿತ್ರಯವನ್ನು ದಯಪಾಲಿಸೆಂದು ಸದ್ಗುರುವಿನಲ್ಲಿ ಪ್ರಾರ್ಥನೆ.

ಸಮಾಪ್ತವು

ಅರ್ಪಣ ಪತ್ರಿಕೆ



ಲೋಕ ಕಲ್ಯಾಣಕ್ಕಾಗಿ ಸ್ವಾರ್ಥ ತ್ಯಜಿಸಿ; ನಿರ್ವಹಿಸುವ ಕಾರ್ಯ, ನಿರೂಪಿಸುವ ವಿಷಯಗಳಲ್ಲಿ ನಿಷ್ಣಾತನೆನಿಸಿ, ಅಪ್ರತಿಹತಾಜ್ಞಾ ಸಂವರ್ಧಕನಾಗಿ, ನಿರುಪದ್ರವದಲ್ಲಿ ತನ್ನ ಜನ್ಮಕುಂಡಲಿಯನ್ನು ಆವಾತನು ಸವೆಸುವನೊ ಅವನೇ ಮಾನವತೆಯನ್ನು ಮುಕ್ತದ್ವಾರವಾಗಿ ಕಾಯ್ದುಕೊಂಡಿರುವವನು. ಅವನೇ ಜೀವಕೋಟಿಗು ಪೋಷಕನು. ಅಂತಹ ಐಶ್ವರ್ಯ ಧಾರಣಮಾಡಿ 'ಶ್ರೀಧರ' ಎನುವ ಅಂಕಿತನಾಮದಿಂದಲೂ ತನ್ನ ಭೂಮಿಕೆಗೆ ಅನುಗುಣವಾದ ಪರಮಹಂಸೇತ್ಯಾದಿ ಬಿರಿದಿನ ರೂಢನಾಮಗಳಿಂದಲೂ ಮೂರ್ತಿಮತ್ತಾದ ಜ್ಞಾನದ ಏರಕವೆ ಆಗಿದ್ದು, ನನ್ನ ಆಗು-ಹೋಗುಗಳ ಹೊರೆಯನ್ನು ತಲೆಬಿರಿ ಹೊತ್ತುಕೊಂಡ; ಉತ್ತರ ಕನ್ನಡದ ಸೀಗೆಹಳ್ಳಿ ಎನುವಲ್ಲಿರುವ ಪರಮಾನಂದ ಮಠದ ದ್ವಿತೀಯ ಪೀಠಸ್ಥ ಆ ನನ್ನ ಜನಕ ತಂದೆಗೆ, ಆ ನನ್ನ ಸ್ವಾಮಿಗೆ, ಆ ನನ್ನ ಪರಾದೇವತೆಗೆ ಪ್ರೀತಿಯಾಗಲೆಂದು "ಗರತಿ" ಎನುವ ಈ ನನ್ನ ಮುದ್ದು ಮಗುವನ್ನು ಸಮರ್ಪಿಸಿರುವೆನು.

ಶ್ರೀಶಾಲಿವಾಹನ }
೧೮೭೩ }

ಗ್ರಂಥಕರ್ತ

ಸಂಸ್ಕಾರ ಪತ್ರ

ಪುಟ	ಅಶುದ್ಧ	ಶುದ್ಧ	ಪಂಕ್ತಿ
೧	ನಾರೀಶಾಬ್ದೋತ್ಪತ್ತಿ	ನಾರೀಶಬ್ದೋತ್ಪತ್ತಿ	೭
೨	ಪರಿಯಾಯ	ಪರ್ಯಾಯ	೬
೨	ಬಂದಿದೆ	ಬಂದಿವೆ	೨೦
೪	ಸ್ತನಕೇಶವತಿಸ್ತ್ರೀ ಸ್ಯಾಲ್ಲೋ ವೇಶಃ ಪುರುಷಃ ಸ್ಮೃತಃ	ಸ್ತನ ಕೇಶವತಿಸ್ತ್ರೀ ಸ್ಯಾಲ್ಲೋ ಮೇಶಃ ಪುರುಷಃ ಸ್ಮೃತಃ	೮
೪	ಯಾಕ್ತಪಡಿಸಿದ್ದಾನೆ	ವ್ಯಕ್ತ ಪಡಿಸಿದ್ದಾನೆ	೨೨
೪	ಶ್ಪರ್ಶ	ಸ್ಪರ್ಶ	೨೪
೭	ಆಘಾ ಯೋಷೆವ ಸೂನ ಯುರ್ಷಾ	ಆಘಾಯೋಷೇವ ಸೂನು ಯುರ್ಷಾ	೧೦
೭	ದುಹಿತ	ದುಹಿತಾ	೨೦
೮	ಇಲಿಯದ	ಇಲಿಯಡ್	೧೪
೯	ಅನ್ಯನ್ಯವಾದ	ಅನನ್ಯವಾದ	೧೪
೧೦	ಲೋಕೆಷು	ಲೋಕೇಷು	೨೫
೧೨	ಎಲ್ಲ ಸ್ತ್ರೀಯಳು ಪತಿಗೆ ಸಂಪೂರ್ಣ ಆಧೀನ ಳಾಗಿರುತ್ತಾಳೆ.	ಎಲ್ಲ ಸ್ತ್ರೀಯರೂ ಪತಿಗೆ ಸಂಪೂರ್ಣ ಅಧೀನ ರಾಗಿರುತ್ತಾರೆ.	೧೫
೧೩	ಭಾತ್ರಾ	ಭ್ರಾತಾ	೧೦
೧೪	ಸಾದಾರಣ	ಸಾಧಾರಣ	೪
೧೮	ಪೇಶನೇಬಲ್	ಫ್ಯಾಶನೇಬಲ್	೨
೨೫	"ಎಮ್ಮೆ	ಎಂ. ಏ.	೧೨
೨೬	ಇದೆ	ಇವೆ	೯
೨೬	ಪ್ಯಾಶನ್ನಿನ	ಫ್ಯಾಶನ್ನಿನ	೯
೩೦	(ಸರವಾಂಟೀಸ್)	(ಸರವಾಂಟಿಸ್)	೩
೩೧	ಪಾವಿತ್ಯ	ಪಾವಿತ್ರ್ಯ	೧
೩೪	ಪಲಾಯನ	ಫಲಾಯನ	೧೪
೩೫	ಪಾಶೀ	ಫಾಶೀ	೨೩

ಸಂಸ್ಕಾರ ಪತ್ರ

ಪುಟ	ಅಶುದ್ಧ	ಶುದ್ಧ	ಪಂಕ್ತಿ
೩೭	ಕೊಪ್ಪುವುದಾಗಿದೆ	ಕೊಪ್ಪುವುದಾಗಿವೆ	೧೧
೪೧	ಸ್ವಚ್ಛವಾದ. ಪಾತ್ರೆ	ಸ್ವಚ್ಛವಾದ ಪಾತ್ರೆ	೧೧
೫೬	ಸ್ತ್ರಿಯಳಿಗೆ	ಸ್ತ್ರೀಯಳಿಗೆ	೧೯
೭೧	ಕೊಡಾ	ಕೂಡಾ	೩
೮೦	ಪಿತೃಣಾ	ಪಿತೃಣಾ	೧೧
೯೩	ನನ್ನ ತೊಜೆಗೆ	ನನ್ನ ಜೊತೆಗೆ	೪
೧೦೪	ಕಾವ್ಯ್ಯಾನಂ	ಕಾವ್ಯ್ಯಾನಾಂ	೧೪
೧೦೫	ಪ್ರಥೀವೊ	ಪ್ರಥವೋ	೧
೧೦೭	ಅಂದಾಂಗ	ಅಂದಾಗ	೬
೧೦೭	ಭವಏಕೀವಿಸಿದ್ದು	ಏಕೀಭವಿಸಿದ್ದು	೧೮
೧೦೯	ಯಾವ ಕರಣದಿಂದಲೂ	ಯಾವ ಕಾರಣದಿಂದಲೂ	೧೫
೧೦೯	ದಾಪಸ್ತ್ರೃತೀಯಾಂಶಮ್ ದ್ರವ್ಯೋ ಭರಣಂ ಸ್ತ್ರಿಯಃ॥ (ಯಾಜ್ಞವಲ್ಕ್ಯ)	ದಾಪ್ಯಸ್ತ್ರೃತೀಯಾಂಶಮ ದ್ರವ್ಯೋ ಭರಣ ಸ್ತ್ರಿಯಾಃ॥ (ಯಾಜ್ಞವಲ್ಕ್ಯ, ಆ. ೭೩)	೨
೧೧೦	ದದ್ಯಾದ್ಯಥಾವಿಧಿಃ॥	ದದ್ಯಾದ್ಯಥಾವಿಧಿ॥	೫
೧೧೦	(ಮನು. ೧।೮೪–೮೯)	(ಮನು. ೯।೮೮)	೬
೧೧೩	ದೇ ದೇಶದೊಳಗುಳ್ಳ	ದೇಶದೇಶ ದೊಳಗುಳ್ಳ	೮
೧೨೦	ನನ್ನ ಆತ್ತೆಯ ಮನೆಗೆ	ತನ್ನ ಅತ್ತೆಯ ಮನೆಗೆ	೮
೧೨೧	ತಾಯಿ ಇವು	ಇವು ತಾಯಿ	೯
೧೨೧	ಯಶೋಧೆಯು	ಯಶೋದೆಯು	೯
೧೩೪	ಹರಿಯುತ್ತಿತು	ಹರಿಯುತ್ತಿತ್ತು	೨೧
೧೪೫	ಆಶ್ರಮದಿಂದ	ಆ ಶ್ರಮದಿಂದ	೧೩
೧೪೭	ಭೂಲೋಕಲ್ಲಿ	ಭೂಲೋಕದಲ್ಲಿ	೨
೧೪೮	ಇಳನ್ನು	ಇವಳನ್ನು	೨
೧೫೬	ಬಲೆಯಾಗಲೂ	ಬಲಿಯಾಗಲೂ	೨೨
೧೬೦	ಕಾರ್ಯ್ಯ ಕರ್ತ್ಯುಗಳಿಗೆ	ಕಾರ್ಯ್ಯ ಕರ್ತೃಗಳಿಗೆ	೨೪

ಸದ್ಗುರು ಸೇವಾ ಸಾಹಿತ್ಯ ಮಾಲೆಯಲ್ಲಿ

ಸಿಗುವ ಪುಸ್ತಕಗಳು

ಪ್ರಥಮ ಮುದ್ರಣದವು

- ಸಟೀಕಾ ವಿವೇಕ ವಿಜಯ — ಯಕ್ಷನಾಟಕ
- ರುಕ್ಮಾಂಗದ ಚರಿತ್ರೆ — ,,
- ಸತೀ ಶಕ್ತಿ — ,,
- ಏಕಾಂಕ ಸತೀ ಶಕ್ತಿ — ,,
- ಗರತಿ — ಮಹಿಳಾದಿಗ್ದರ್ಶನ
- ಶ್ರೀ ಗುರುಗೀತಾ — ತಾತ್ವಿಕ

ದ್ವಿತೀಯ ಮುದ್ರಣದವು

- ಸದ್ಗುರು ಪಂಚಾಯತನ ಪದ್ಯಮಾಲಾ (ಭಾಗ ೧–೨) — ಹಾಡು-ಪದ್ಯಗಳು
- ಶುಭ–ಶೋಭನ ಗೀತಾಮಂಜರಿ — ಮದುವೆ-ಮುಂಜಿಯ ಹಾಡುಗಳು

ತೃತೀಯ ಮುದ್ರಣದವು

- ವನಿತಾ ಗೀತ ಭಾಂಡಾರ — ಮದುವೆ-ಮುಂಜಿಯ ಹಾಡುಗಳು

ಅಚ್ಚಿನಲ್ಲಿರುವವು

- ನನ್ನ ಬಾಳು — ನೀಳ್ಗತೆ (ಸಾಮಾಜಿಕ, ಚಾರಿತ್ರಿಕ.)
- ಅಮರ ಪ್ರಭೆ — ಭಾರತದ ಕೆಲವಷ್ಟು ಲೇಖಕರ ಲೇಖನ ಸಂಕಲನ
- ಕವನ ಮಾಲಿಕೆ — ಹಾಡು-ಪದ್ಯಗಳು

ನಮ್ಮ ಪುಸ್ತಕಗಳ ಅಧಿಕೃತ ವ್ಯಾಪಾರಿಗಳು

ಸಾಹಿತ್ಯಭಾಂಡಾರ, ಹುಬ್ಬಳ್ಳಿ
ಭಾರತ ಬುಕ್ ಡಿಪೋ, ಶಿರಸಿ (ಉ. ಕ.)
ಜಿ. ಡಿ. ಕುಲಕರ್ಣಿ, ಬುಕ್ ಡಿಪೋ ಮಾರ್ಕೆಟ್, ಶಿರಸಿ (ಉ. ಕ.)
ರಾ. ನಾ. ಭಟ್ಕಳಕರ; ಬುಕ್ ಸೇಲರ, ಸಿದ್ದಾಪುರ (ಉ. ಕ.)
ಖಾದರಸಾಬ ದಾವಲಸಾಬ ಕಾರ್ಡಗಿ, ಯಲ್ಲಾಪುರ (ಉ. ಕ.)
ಮನೋಹರ ಗ್ರಂಥ ಭಾಂಡಾರ, ಧಾರವಾಡ